ಸಂವಾದ

ಮೇ ೨೦೧೨ ರೂ. ೨೦

ಒಂದಾಗಬೇಕಿರುವುದು ಚಿಂತನೆಗಳು; ಸಂಘಟನೆಗಳಲ್ಲ

ನರೇಂದ್ರ ಮೋದಿಗೊಂದು ಬಹಿರಂಗ ಪತ್ರ

PRISTINE BREAKFAST
HEALTHY ORGANIC BREAKFAST CEREAL RANGE
Wheat
Net wt : 300g
Rs.150.00
Mixed Millet
Net wt : 300g
Rs.150.00
Corn
Net wt : 300g
Rs.150.00
Ragi
Net wt : 300g
Rs.150.00
Organic Cereal Flakes
~ CORN ~
Customer Care
1800 425 2216
Certified Organic
Rich in Vitamins and Minerals
Pristine Organics Pvt. Ltd. #44/2A, Kodigehalli Gate, Sahakarnagar Post, NH-7, Bengaluru - 560092.
info@pristineorganics.com | www.pristineorganics.com

ಒಳಪುಟಗಳಲ್ಲಿ

ಸಂವಾದ
ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 7
ಮೇ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

- ❑ ಪತ್ರಗಳು ೦೪
- ❑ ಸಂಪಾದಕರೊಂದಿಗೆ ಸಂವಾದ:
  - ○ ಡಾ॥ ಎಂ.ವಿ ರವಿ ೦೫
  - ○ ದಾಸನೂರು ಕೂಸಣ್ಣ ೦೬
  - ○ ಬಿ ಶ್ರೀಪಾದ ಭಟ್ ೦೭
  - ○ ಹೆಚ್ ಮಾರುತಿ ೦೮
- ❑ ಹೊಸ ಪುಸ್ತಕ ೦೯
- ❑ ಅಲೆಮಾರಿ ಬುಡ್ಗಜಂಗಮರು ಬಹಿರಂಗ ಚರ್ಚೆಗೆ ಆಹ್ವಾನ
  - ○ ಡಾ॥ ಬಾಲಗುರುಮೂರ್ತಿ ೧೦

- ❑ ಒಂದಾಗಬೇಕಿರುವುದು ಚಿಂತನೆಗಳು
  - ○ ನಾ. ದಿವಾಕರ್ ೧೨
- ❑ ಬೌದ್ಧ ದರ್ಶನದ ಪ್ರಸ್ತುತತೆ
  - ○ ಡಾ॥ ಬಸವರಾಜ ಸಬರದ ೧೬
- ❑ ತತ್ವಜ್ಞಾನ ಮತ್ತು ವ್ಯವಹಾರ
  - ○ ಹಸನ್ ನಯೀಂ ಸುರಕೋಡ ೧೮
- ❑ ನರೇಂದ್ರ ಮೋದಿಗೊಂದು ಬಹಿರಂಗ ಪತ್ರ
  - ○ ಮೂಲ: ಸಂಜೀವ ಭಟ್ ೨೨
    ಅನು: ದು. ಸರಸ್ವತಿ
- ❑ ಶೋಷಿತರ ಆತ್ಮಗೌರವ ಮತ್ತು ಪ್ರಜಾವಾಣಿ
  - ○ ಕೆ.ಎಲ್ ಚಂದ್ರಶೇಖರ್ ಐಜೂರ್ ೨೬
- ❑ ಇನ್ನು ಮುಟ್ಟಿಸಿಕೊಳ್ಳದ ಭಾರತೀಯ ಮಾಧ್ಯಮಗಳು...
  - ○ ಮೂಲ: ರಾಬಿನ್ ಜೆಫ್ರಿ
    ಅನು: ಕೆ.ಎಲ್ ಚಂದ್ರಶೇಖರ್ ಐಜೂರ್ ೨೮
- ❑ ನಮ್ಮ ಕಾಲದ ಬ್ರಹ್ಮ ರಾಕ್ಷಸ: ಅಮೇರಿಕಾ
  - ○ ರಘು ೩೦



- ❑ ಬತ್ತದ ಬಯಲು –೫
  - ○ ಡಾ॥ ಬಿ.ಎಂ ಪುಟ್ಟಯ್ಯ ೩೨
- ❑ ಕಾಲಮಾನ–೨೦
  - ○ ಡಾ॥ ಮುಜಾಫ್ಫರ್ ಅಸ್ಸಾದಿ ೩೬
- ❑ ನೋಯುವ ಹಲ್ಲಿಗೆ ಹೊರಳುವ ನಾಲಿಗೆ–೬
  - ○ ಡಾ. ಎಚ್.ಎಸ್. ಅನುಪಮಾ ೪೦
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೪
- ❑ ಮುಲ್ಲಾ ನಸ್ರುದ್ದೀನ್ ಕಥೆಗಳು ೪೮
- ❑ ಕವನ: ಬುದ್ಧನೆಂದರೆ... ೧೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ನಂಬಿಕೆಯನ್ನು ನಗದು ಮಾಡಿಕೊಳ್ಳುವ ದೇವರು

ಮಾನ್ಯ ಸಂಪಾದಕರೇ,

ಮಡೆಸ್ನಾನ ವಿವಾದ ತಣ್ಣಗಾಗುತ್ತಿದ್ದಂತೆ ದಾವಣಗೆರೆಯಲ್ಲಿ ಅರೆ ಬೆತ್ತಲೆ ಸೇವೆ ಮಾಡಿದ ಮತ್ತು ಕೋಣನ ಬಲಿಕೊಟ್ಟ ವರದಿ ವಿಚಾರವಾದಿಗಳು ಮತ್ತು ಪ್ರಗತಿಪರರನ್ನು ಕೆರಳಿಸುವಂತೆ ಮಾಡಿತು. ಸಂತಾನ ಪ್ರಾಪ್ತಿಗಾಗಿ ಬೇವಿನ ಸೊಪ್ಪನ್ನು ಮೈಯಿಗೆ ಕಟ್ಟಿಕೊಂಡು ಹರಕೆ ತೀರಿಸಿದರೆ ಇಷ್ಟಾರ್ಥ ಸಿದ್ಧಿಯಾಗುತ್ತದೆ ಎಂಬ ನಂಬಿಕೆಯಿಂದ ಇಂತಹ ಆಚರಣೆಯನ್ನು ತಲೆತಲಾಂತರದಿಂದ ಅನುಸರಿಸಿಕೊಂಡು ಬರಲಾಗುತ್ತಿದೆ. ಇಂತಹ ಆಚರಣೆ ಸಾಮಾಜಿಕ ಮೌಢ್ಯತೆಯನ್ನು ಬೆಳೆಸುತ್ತದೆ ಎಂದು ಒಂದು ಕಡೆ ನಾವು ಅಂದುಕೊಂಡರೂ ಅದಕ್ಕಿಂತ ಅಸಹ್ಯಕರವಾದ ರೀತಿಯಲ್ಲಿ ಅಶ್ಲೀಲತೆಯನ್ನು ಮತ್ತು ಕ್ರೌರ್ಯವನ್ನು ಇಂದಿನ ಚಲನ ಚಿತ್ರಗಳು ಬಿಂಬಿಸುತ್ತಿವೆ. ಅವುಗಳು ಈ ಸಮಾಜದ ಮೇಲೆ ಮಾಡುತ್ತಿರುವ ದುಷ್ಪರಿಣಾಮದ ಬಗ್ಗೆ ವಿಚಾರಿಸಬೇಕಾಗಿದೆ ಮತ್ತು ಅವನ್ನು ನಿರ್ಬಂಧಿಸಬೇಕಾಗಿದೆ. ಒಂದು ವಿಚಾರದ ಪ್ರಕಾರ ಕೆಲವು ಹಿಂದೂ ಸಾಂಪ್ರದಾಯಿಕ ಆಚರಣೆಗಳಲ್ಲಿ ವೈಜ್ಞಾನಿಕ ಅರ್ಥವಿದೆ ಎಂದು ವಾದಿಸಲಾಗುತ್ತಿದೆ. ಬೇವಿನ ಸೊಪ್ಪು ಔಷಧಿಯ ಗುಣಗಳನ್ನು ಹೊಂದಿದೆ ಅದನ್ನು ಮೈಯಿಗೆ ಕಟ್ಟಿಕೊಳ್ಳುವದರಿಂದ ಕಾಯಿಲೆಗಳು ವಾಸಿಯಾಗುತ್ತವೆ. ಮಾಂಸಾಹಾರಿಗಳು ತಮ್ಮ ಆಹಾರಕ್ಕಾಗಿ ಪ್ರಾಣಿ ವಧೆ ಮಾಡಲೇಬೇಕು. ಕಸಾಯಿಖಾನೆಯಲ್ಲಿ ಮಾಡುವ ಹತ್ಯೆಗೂ ಮತ್ತು ದೇವಸ್ಥಾನದಲ್ಲಿ ಮಾಡುವ ಹತ್ಯೆಗೂ ಯಾಕೆ ವ್ಯತ್ಯಾಸ ಮಾಡಬೇಕು ಎಂದು ವಾದ ಮಾಡಲಾಗುತ್ತಿದೆ. ಅದೇನೆ ಇದ್ದರೂ ಜನರ ಕಷ್ಟಗಳನ್ನು, ನಂಬಿಕೆ ಹಾಗೂ ಮುಗ್ಧತೆಯನ್ನು ದೇವರು, ಹರಕೆ ಮತ್ತು ಆಚರಣೆ ಎಂಬ ಹೆಸರಿನಲ್ಲಿ ಶೋಷಣೆ ಮಾಡುತ್ತಿರುವುದು ಹೆಚ್ಚಾಗುತ್ತಿದೆ.

ಆಸ್ತಿಕನ ಪಾಲಿಗೆ ಕಲ್ಲು ಕೂಡಾ ದೇವರಾಗಿ ಕಾಣಿಸುತ್ತದೆ. ನಾಸ್ತಿಕನ ಪಾಲಿಗೆ ಅದು ಕೇವಲ ಕಲ್ಲು ಮಾತ್ರ. ದೇವರು ಎಂದು ನಂಬಿಕೊಂಡು ಸ್ಥಾವರಗಳ ಮುಂದೆ ಸಾಲುಗಟ್ಟಿ ನಿಂತ ಜನರನ್ನು ಭಕ್ತಿಯ ಹೆಸರಿನಲ್ಲಿ ಸುಲಿಗೆ ಮಾಡುವದು ದೇವರ ಕಾಯಕವೇ? ದೇವರು ಎಲ್ಲಿದ್ದಾನೆ? ಹೇಗಿದ್ದಾನೆ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕ ಹೊರಟರೆ ಅದೊಂದು ದೊಡ್ಡ ತರ್ಕವೇ ಆದೀತು. ಅಂತಹ ತರ್ಕದಿಂದಲೇ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಎಂಬ ತತ್ವಗಳು ಹುಟ್ಟಿಕೊಂಡವು. ಇಂದು ದ್ವೈತ ತತ್ವವನ್ನು ಆಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಬಹಿರಂಗದಲ್ಲಿ ಎಲ್ಲೆಲ್ಲೂ ದೇವರನ್ನು ಹುಡುಕುತ್ತೇವೆ. ನಮ್ಮ ಕಷ್ಟಗಳಿಗೆ ಪರಿಹಾರ ಕೊಡೆಂದು ಗೋಗರೆಯುತ್ತೇವೆ.



ಪತ್ರಗಳು

ಕಾಲಾನಂತರದಲ್ಲಿ ಇಂತಹ ಭಕ್ತಿ, ಶ್ರದ್ಧೆ ಮತ್ತು ನಂಬಿಕೆಗಳಿಗೆ ಭೌತಿಕ ರೂಪವನ್ನು ಕೊಟ್ಟು ಸ್ಮಾರಕಗಳನ್ನಾಗಿ ಮಾಡಲಾಯಿತು. ಅವುಗಳು ಇಂದು ದೇವರು ಎಂಬ ನಂಬಿಕೆಯ ನೆಲೆಗಟ್ಟನ್ನೇ ಅಲುಗಾಡಿಸುತ್ತಿವೆ.

ನಮ್ಮ ಭಯ, ಭಕ್ತಿಯನ್ನು ಬಂಡವಾಳ ಮಾಡಿಕೊಳ್ಳಲು ಗರ್ಭಗುಡಿಯಲ್ಲಿ ಪೂಜಾರಿಗಳು ಕಾದು ಕುಳಿತಿರುತ್ತಾರೆ. ಆರತಿ ತಟ್ಟೆಯಲ್ಲಿ ನೂರರ, ಐವತ್ತರ ಗರಿಗರಿ ನೋಟುಗಳನ್ನು ಪೇರಿಸಿ ನಾಣ್ಯಗಳನ್ನು ತೆಗೆದು ಇಡುತ್ತಾರೆ, ಅದನ್ನು ನೋಡಿ ಎಲ್ಲ ಭಕ್ತರು ಆರತಿ ತಟ್ಟೆಯಲ್ಲಿ ದೊಡ್ಡ ದೊಡ್ಡ ನೋಟುಗಳನ್ನು ಹಾಕಲಿ ಎಂಬ ಆಸೆ ಅವರದು. ದ್ವಾರ ಬಾಗಿಲಿನಲ್ಲಿ ಟ್ರಸ್ಟ್ ಕಮಿಟಿಗಳು ಪ್ರವೇಶ ಫೀ, ಅರ್ಚನೆ, ಅಭಿಷೇಕ ಎಂದು ಕೈಯಲ್ಲಿ ಟಿಕೇಟ್ ಹಿಡಿದುಕೊಂಡು ಕಾಯುತ್ತಿರುತ್ತವೆ. ದೇವರ ದರ್ಶನದಲ್ಲೂ ನಾನಾ ವಿಧಗಳು. ವಿ.ಐ.ಪಿ.ಗಳಿಗೆ, ಹಣ ಹೆಚ್ಚು ಕೊಟ್ಟವರಿಗೆ ಡೈರೆಕ್ಟ್ ದರ್ಶನ. ಸಾಮಾನ್ಯನ ಪಾಲಿಗೆ ಉದ್ದದ ಸರತಿ ಸಾಲೇ ಗತಿ. ಇನ್ನು ಹಣ್ಣು ಕಾಯಿ ಹಾಗೂ ಇತರ ಪೂಜಾ ಹಾಗೂ ಹರಕೆಯ ಪರಿಕರಗಳನ್ನು ಮಾರುವವರು ನಿಮ್ಮನ್ನು ಮತ್ತು ನಿಮ್ಮ ಮೌಢ್ಯವನ್ನು ಬೆನ್ನಟ್ಟಿಕೊಂಡು ಬರುತ್ತಾರೆ. ದೇವಾಲಯದ ಆವರಣದಲ್ಲಿ ದೇವರ ದರ್ಶನಕ್ಕಿಂತ ಬಿಕ್ಷುಕರ ದರ್ಶನವೇ ನಿಮಗೆ ಮೊದಲು ಸಿಗುತ್ತದೆ. ಇನ್ನು ದೇವಸ್ಥಾನದಿಂದ ಆಚೆ ಬರುತ್ತಿದ್ದಂತೆ ಹೊರಗೆ ಬಿಟ್ಟ ನಿಮ್ಮ ಚಪ್ಪಲಿಗಳು ಮಂಗಮಾಯವಾಗಿರುತ್ತವೆ. ನೆಮ್ಮದಿಯನ್ನು ಅರಸಿ ಬಂದ ನಿಮ್ಮ ನೆಮ್ಮದಿ ಚಪ್ಪಲಿ ಕಳೆದು ಹೋದದ್ದಕ್ಕಾಗಿ ಅಲ್ಲಿಯೇ ಹಾಳಾಗಿ ಹೋಗುತ್ತದೆ.

ಈ ಲೋಕದ ಚರಾಚರ ವಸ್ತುಗಳ ಸೃಷ್ಟಿಕರ್ತನಾದ ಆ ದೇವರು ಭಕ್ತರ ಮುಂದೆ ಭಿಕ್ಷುಕನಾಗುತ್ತಾನೆಯೇ? ದೇವರ ಹೆಸರಿನಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂದು ಮಾಂಸ ಭಕ್ಷಣೆಯ ಆಸೆಯಿಂದ ಪ್ರಾಣಿ ಬಲಿ ಕೊಡಲಾಗುತ್ತಿದೆ. ತಳಸಮುದಾಯದ ನೆರೆತ ಕನ್ಯೆಯನ್ನು 'ದೇವರಿಗೆ ಬಿಟ್ಟು' ವೇಶ್ಯಾವೃತ್ತಿಗೆ ದೂಡುವುದು ನಡೆಯುತ್ತಿದೆ. ಇತ್ತೀಚೆಗೆ ಕೊಪ್ಪಳ ಜಿಲ್ಲೆಯ ಹುಲಗಿಯ ಹತ್ತಿರ ಇರುವ ತುಂಗಭದ್ರ ದಡದಲ್ಲಿ 'ಮುತ್ತು ಕಟ್ಟುವ' ಅನಿಷ್ಟ ಪದ್ಧತಿ ನಡೆದ ಬಗ್ಗೆ ವರದಿಯಾಗಿದೆ. ಬೆತ್ತಲೆ ಸೇವೆ ಸಲ್ಲಿಸುವ, ಮುಡಿಕೊಡುವ, ಜಡೆ ಬೀಡುವ ಕಂದಾಚಾರಗಳನ್ನು ಬೆಳೆಸುವ, ಮೈಮೇಲೆ ದೇವರು ಬಂದಿದ್ದಾನೆ ಎಂದು ಜನರನ್ನು ಮೋಸಗೊಳಿಸುವುದು, ಪವಾಡಗಳನ್ನು ಸೃಷ್ಟಿಸಿ ಜನರನ್ನು ಮರುಳುಗೊಳಿಸುವುದು ಸಣ್ಣ ಸಣ್ಣ ದೇವಸ್ಥಾಗಳಿಂದ ಹಿಡಿದು ದೊಡ್ಡ ದೊಡ್ಡ ದೇವಾಲಯಗಳಲ್ಲು ನಡೆಯುತ್ತವೆ. ಹರಕೆ ತೀರಿಸದಿದ್ದರೆ ದೇವರು ಶಾಪ ಹಾಕುತ್ತಾನೆ, ಕಾದಾಟ ಶುರುವಾಗುತ್ತದೆ ಎಂದು ಮುಗ್ಧರನ್ನು ಮೂಢರನ್ನಾಗಿಸಲಾಗುತ್ತಿದೆ.

ಶಬರಿ ಮಲೈಯಲ್ಲಿ ಮಕರ ಸಂಕ್ರಾತಿಯಂದು ಕಾಣುವ 'ಮಕರ ಜ್ಯೋತಿ' ದೇವ ನಿರ್ಮಿತವಲ್ಲ ಅದು ಕಾಡಿನಲ್ಲಿರುವ ಬುಡಕಟ್ಟು ಜನರು ಹೊತ್ತಿಸುವ ಬೆಂಕಿ ಎಂಬುದು ಈಗ ಬಯಲಾಗಿದೆ. ರಾಜಕಾರಣಿಗಳನ್ನು, ಚಿತ್ರತಾರೆಯರನ್ನು, ಕ್ರಿಕೆಟ್ ಆಟಗಾರರನ್ನು ತಮ್ಮ ದೇವಾಲಯಕ್ಕೆ ಕರೆಸಿಕೊಂಡು, ಅವರು ನಮ್ಮ ದೇವಾಲಯದ ದರ್ಶನ ಪಡೆದು ತಮ್ಮ ಕಷ್ಟಗಳನ್ನು ಪರಿಹರಿಸಿಕೊಂಡಿದ್ದಾರೆ ಎಂದು ಪ್ರಚಾರ ಮಾಡುವದು ಸಹ ನಡೆಯುತ್ತಿದೆ. ಒಂದೊಂದು ಕಷ್ಟ, ಒಂದೊಂದು ಸಮಸ್ಯೆಯ ಪರಿಹಾರಕ್ಕೆ ಒಂದೊಂದು ದೇವಸ್ಥಾನಗಳು ಪ್ರಸಿದ್ಧಿಯಾಗಿವೆ. ಹೀಗಾಗಿ ಮುಕ್ಕೋಟಿ ದೇವರಗಳನ್ನು ನಾವು ಸೃಷ್ಟಿಸಿಕೊಂಡಿದ್ದೇವೆ. ಆದರೂ ಬಡತನ, ಹಸಿವು, ರೋಗ ಮತ್ತು ಯಾತನೆಗಳು ಇನ್ನೂ ನಮ್ಮ ಸಮಾಜದಿಂದ ಹೋಗಿಲ್ಲ. ಹಾಗಾದರೆ ದೇವರು ಎಲ್ಲಿದ್ದಾನೆ?

ಮಲ್ಲಿಕಾರ್ಜುನ ಗುಮ್ಮಗೋಳ
ಧಾರವಾಡ

ಚಂದಾ ವಿವರ ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/–
ಪೋಷಕ ಚಂದಾ ರೂ.10,000/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:

A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಸಂಪಾದಕರೊಡನೆ ಸಂವಾದ

ಜನಪದ ಸಂಸ್ಕೃತಿ ನಶಿಸುತ್ತಿದೆಯೇ?

ಡಾ|| ಎಂ.ವಿ ರವಿ

ಮಾನ್ಯ ಸಂಪಾದಕರೇ,

ಜಾನಪದವೆಂದರೆ ಮನುಷ್ಯ ಬದುಕಿನ ಅಭ್ಯಾಸವಾಗಿರುವುದರಿಂದ ಅದಕ್ಕೆ ಒಂದು ಸೀಮಿತ ಪ್ರದೇಶ, ಸೀಮಿತ ಜನಾಂಗ ಇವುಗಳ ಮಿತಿ ಇಲ್ಲ. ಈ ನಿಟ್ಟಿನಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿರುವುದು ಅತ್ಯಂತ ಯುಕ್ತ. ನಮ್ಮ ಬದುಕು ವಿಜ್ಞಾನದ ದವಡೆಗೆ ಸಿಕ್ಕಿ ತೀವ್ರವಾಗಿ ಬಲಿಯಾಗುತ್ತಿದೆ. ಬದುಕು ಮೌಲ್ಯಹೀನವಾಗಿದೆ. ಭೂಮಿಯ ಪರಿಸರ ಕಲುಷಿತವಾಗಿದೆ, ಇದು ವಿಶ್ವಮಟ್ಟದ ಚರ್ಚೆ. ಇದರಿಂದ ಮಾನವಕುಲದ ಆರೋಗ್ಯವೇ ಹಾಳಾಗಿದೆ. ಇಂತಹ ಸಮಯದಲ್ಲಿ ನಮ್ಮ ಪೂರ್ವಜರ ಬದುಕಿನ ಮಾದರಿಗಳು, ಚಿಂತನೆಗಳು ನಮ್ಮ ಸಹಾಯಕ್ಕೆ ಬರುತ್ತವೆ. ಹಳ್ಳಿಯ ಬದುಕಿನ ಪರಿಗಳನ್ನು ಅರಿಯುವ ಉದ್ದೇಶ ಮುಖ್ಯವೆನಿಸಿದೆ. ಪರಂಪರೆಯ ಜ್ಞಾನ ಮುಂದುವರಿಯಬೇಕಿದೆ. ಪದವಿ ಪೂರ್ವ ಕಾಲೇಜುಗಳು, ಪದವಿ ಸ್ನಾತಕೋತ್ತರ ತರಗತಿಗಳಲ್ಲಿ ಜಾನಪದ ಕಡ್ಡಾಯ ಕಲಿಕೆಯ ವಿಷಯವಾಗಬೇಕು, ಇದನ್ನು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಒಂದು ವಿಷಯವಾಗಿ ಪಠ್ಯಕ್ರಮವನ್ನು ಸಿದ್ಧಪಡಿಸಬೇಕು. ಈ ಎಲ್ಲ ಯೋಜನೆಗಳು ಜಾನಪದ ವಿಶ್ವವಿದ್ಯಾನಿಲಯಕ್ಕೆ ಬೇಕಾಗಿದೆ. ಈ ಹೊಸ ವಿಶ್ವವಿದ್ಯಾನಿಲಯ ಸೀಮಿತವಾಗದೆ, ವಿಸ್ತೃತವಾಗಬೇಕು.

ನಮ್ಮ ಹಿರಿಯ ತಲೆಮಾರಿನ ಆಚಾರ-ವಿಚಾರಗಳಿಗೆ ಸಾಕ್ಷಿ ಜಾನಪದ. ಇದು ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು. ಬಾಯಿಂದ ಬಾಯಿಗೆ, ಊರಿಂದ ಊರಿಗೆ, ಯುಗದಿಂದ ಯುಗಕ್ಕೆ ಹರಿದು ಬರುತ್ತಿದೆ. ಇದರಲ್ಲಿ ಜೀವನದ ಸಮಸ್ತ ವ್ಯವಹಾರವೂ ಸೇರಿದೆ. ವಿಶೇಷವಾಗಿ ಮಹಿಳೆಯರ ನಡುವೆ ಅದೊಂದು ರೀತಿಯಲ್ಲಿ ಅವಿನಾಭಾವ ಸಂಬಂಧ ಬೆಳೆಸಿದೆ. ಅಷ್ಟಕ್ಕೂ ಮಹಿಳೆಯ ಸಾಮಾಜಿಕ ಕೌಟುಂಬಿಕ ಪರಿಸರವೇ ಜನಪದ ಸಾಹಿತ್ಯದ ಹೂರಣ. ಹಾಗಂತ ಜನಪದ ಸಂಸ್ಕೃತಿ ನಶಿಸುತ್ತಿದೆ ಎನ್ನುವ ಮಾತಿನಲ್ಲಿ ಹುರುಳಿಲ್ಲ. ಜನಪದ ಮಹಿಳೆಯು ಪಟ್ಟ ಪಾಡೇ ಹಾಡಾಗಿದೆ, ಆಕೆಯ ವ್ಯಥೆಯೇ ಕಥೆಯಾಗಿ, ಮಹಿಳೆಯ ನೋವು, ನಲಿವು, ಭಾವನೆ ಹಾಗೂ ನಂಬಿಕೆಗೆ ಜಾನಪದ ವೇದಿಕೆಯಂತಿದೆ. ಇಂತಹ ಪರಂಪರೆಯಿಂದಲೇ ಅನೇಕ ಸಂಗತಿಗಳು ಮಣ್ಣಿನ ಸತ್ವ ಹೀರಿ ಬೆಳೆದಿರುವುದು. ಹೀಗಾಗಿ ಜನಪದ ಸಾಹಿತ್ಯದೊಂದಿಗೆ ಕ್ರೀಡೆ, ಕಲೆ, ನೃತ್ಯ, ನಾಟಕ, ಅಡುಗೆ, ತೊಡುಗೆ, ಧಾರ್ಮಿಕ ಕ್ರಿಯೆ ವಿಶಾಲಾರ್ಥದಲ್ಲಿ ಜಾನಪದ ಎನ್ನುವ ಶೈಕ್ಷಣಿಕ ಅಧ್ಯಯನದ ಶಿಸ್ತಾಗಿ ರೂಪತಳೆದಿದೆ.

ನಾಡಿನ ಸಾಂಸ್ಕೃತಿಕ ಚರಿತ್ರೆಯ ಹೊಸ ನಿರ್ಮಾಣಕ್ಕೆ ಅದೆಷ್ಟೋ ಅಂಶಗಳು ಜಾನಪದದಲ್ಲಿ ದೊರೆಯುತ್ತದೆ. ಆದಿವಾಸಿಗಳು, ಗಿರಿಜನರು, ಗ್ರಾಮೀಣರು, ಮಹಿಳೆಯರನ್ನು ಕಡೆಗಣಿಸದಂತಹ ಅರಿವನ್ನು ಜಾನಪದ ತಿಳಿಸುತ್ತದೆ. ಅಕ್ಷರ ಸಂಸ್ಕೃತಿಯ ಹಲವು ಪ್ರೇರಣೆಗೆ ಜಾನಪದ ಕಾರಣವಾಗಿದೆ. ಇಲ್ಲಿನ ಸಾಹಿತ್ಯ ಸಂಸ್ಕೃತಿ, ಕಲೆಗೆ ನಾಶದ ಗುಣವೇ ಇಲ್ಲ. ಇದು ಅವಿನಾಶಿಯಾದುದು, ಸಮೂಹದಲ್ಲಿ ಪುನರ್ ಸೃಷ್ಟಿ ಪಡೆದು, ಸಮೂಹದಲ್ಲಿ ಸಂವಹನಗೊಳ್ಳುವಂತಹದ್ದು. ಪಾಶ್ಚಾತ್ಯ ಆರ್ಥಿಕ ತತ್ವಗಳಿಂದ ದೇಶಿ ಸೊಗಡಿನ ಜಾನಪದದ ಅಸ್ತಿತ್ವಕ್ಕೆ ಧಕ್ಕೆ ಬಂದಿಲ್ಲ. ಮರಳಿನಡಿಯ ಜೀವ ಜಲದಂತೆ ಅದರ ಸೆಲೆಯಿದೆ. ದೇಸಿಯ ಸೊಗಡಿನ ಹಿತವಾದ ಅನುಭವ ಅದರ ರಕ್ಷಾ ಕವಚವೇ ಸರಿ. ವಿದ್ಯಾವಂತನಾಗದ ಅಕ್ಷರ ಕಲಿತವರು ನಾಶದ ಮಾತನ್ನಾಡುತ್ತಾರೆ ಅಷ್ಟೆ! ಜನಪದದ ಅನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ. ಅಲ್ಲಿ ದುಡಿಮೆಯ ಬೆವರಿನ ಗುಣವಿದೆ. ಬದುಕು ಪರಿಣಾಮಕಾರಿಯಾಗಿ ವ್ಯಕ್ತವಾಗುತ್ತದೆ. ಭೂಮಿ ಮತ್ತು ಬೆವರಿನ ಸಂಸ್ಕೃತಿಯಾಗಿ ಬೆಳೆದು ಮನುಕುಲಕ್ಕೆ ಶಕ್ತಿ ನೀಡುವಂತಹ ವಿಶಿಷ್ಟ ಪರಿಕಲ್ಪನೆ ಹೊಂದಿರುವ ಜನಪದ ಕಲೆಗೆ ನಶಿಸುತ್ತಿದೆ ಎಂದು ಆತಂಕ ಪಡುವ ಅಗತ್ಯವಿಲ್ಲ. ಅಲ್ಲಿ ಅನುಸರಿಸುವ ಮಾರ್ಗದರ್ಶನ ಪಡೆಯುವ ಮನೋಭಾವ ಬೇಕು ಅಷ್ಟೆ!

ಬದುಕನ್ನು ಪ್ರೀತಿಸುವ ಜನಪದ ಕಲಾವಿದರು ತಮ್ಮ ನೋವಿನ ನಡುವೆಯೂ ಸಮಾಜದ ಜೀವನಾಡಿಗಳಾಗಿದ್ದಾರೆ. ನಿಜವಾದ ಜನಪದ ಕಲಾವಿದರಿಗೆ ಬೆಲೆ, ನೆಲೆ ಬೇಕು. ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಸರ್ಕಾರದಿಂದ ಮತ್ತು ಸಮಾಜದಿಂದ ನಡೆಯಬೇಕು. ಆಧುನಿಕತೆಯ ದಬ್ಬಾಳಿಕೆಯಲ್ಲಿಯೂ ಜನಪದ ಕಲೆ ತನ್ನ ಸತ್ವವನ್ನು ಉಳಿಸಿಕೊಂಡಿದೆ. ಇದು ಸಹಜ ನೆಲೆಯಿಂದ ಸಾಧ್ಯವಾಗಿದೆ. ಮನುಷ್ಯ ಮತ್ತು ಬದುಕಿನ ಸಂಬಂಧದ ಜೊತೆಗೆ ದೇವರನ್ನೇ ಪ್ರಶ್ನಿಸುವ ಶಕ್ತಿ ಜನಪದರಿಗಿದೆ. ಪಾಂಡಿತ್ಯ ಪ್ರದರ್ಶನವಷ್ಟೆ ಇಲ್ಲಿನ ಗುರಿಯಲ್ಲ, ಸಾಮಾಜಿಕ ಪ್ರಜ್ಞೆ ಮತ್ತು ಪರಿವರ್ತನೆಯೇ ಇಲ್ಲಿನ ಮೂಲ ಉದ್ದೇಶ. ಕಾಯಕದ ಗುಣದ ಈ ಪ್ರಕಾರಕ್ಕೆ ಯಾವುದೇ ವರ್ಗ, ವರ್ಣಕ್ಕೆ ಸೀಮಿತವಾದದ್ದಲ್ಲ. ಹಾಗಾಗಿ ಮಾನವ ಸಂಬಂಧಗಳನ್ನು ಬಲಗೊಳಿಸುತ್ತಾ ಜನರ ಬದುಕಿನ ಮಾರ್ಗಸೂತ್ರವಾಗಿ ಇಂದಿಗೂ ಉಳಿದಿದೆ.

ಜನಪದದಲ್ಲಿ ಬದುಕು ಮತ್ತು ಸಾಹಿತ್ಯವನ್ನು ಬೇರೆಯಾಗಿ ನೋಡುವಂತಿಲ್ಲ. ಅವೆರೆಡು ಒಂದಕ್ಕೊಂದು ಬೆಸೆದುಕೊಂಡಿವೆ. ಸಮಾನತೆಯೇ ಜನಪದ ಸಾಹಿತ್ಯದ ಪ್ರಮುಖ ಅಸ್ತ್ರ. ಜಾನಪದ ಅಂದರೆ ಕೇವಲ ಹಾಡು, ಕುಣಿತ, ವಾದ್ಯ ಮತ್ತು ಸಂಗೀತವಷ್ಟೆ ಅಲ್ಲ. ಪರಂಪರೆಯಿಂದ ರೂಢಿಸಿಕೊಂಡು ಬಂದ ಜ್ಞಾನವಾಹಿನಿ ಅದಕ್ಕೊಂದು ನಿರಂತರತೆ ಇರುತ್ತದೆ. ಆಯಾಕಾಲದ ಒಪ್ಪಿತ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಚಲನಶೀಲತೆಯೂ ಇರುತ್ತದೆ. ತಲೆಮಾರುಗಳಿಂದ ಬಂದ ಮೌಖಿಕ ಸಾಹಿತ್ಯ, ಕಲೆಗಳಂತೆಯೇ ಒಂದು ನಾಡು ಕಟ್ಟಿಕೊಂಡು ಬಂದ ವಿವೇಕ, ರೂಢಿಸಿಕೊಂಡು ಬಂದ ಮೌಲ್ಯ, ಸೃಷ್ಟಿಸಿ ಕೊಂಡು ಬಂದ ಲೋಕದೃಷ್ಟಿಗಳನ್ನು ಜಾನಪದದಲ್ಲಿ ಕಾಣಲು ಸಾಧ್ಯ. ಕಾಲಾಂತರದಿಂದ ಮಡುಗಟ್ಟಿ ಬಂದ ಸಮುದಾಯಗಳ ಗಾಢ ಅನುಭವ ಅವರ ಬದುಕ್ನು ರೂಪಿಸಿರುತ್ತದೆ. ಆ ಅನುಭವವೇ ಅನೇಕ ಜ್ಞಾನ ಪರಂಪರೆಗಳ ರೂಪದಲ್ಲಿ ದೇಸಿ ವಿಜ್ಞಾನವೊಂದನ್ನು ನಿರ್ಮಾಣ ಮಾಡಿದೆ.

ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಸಂಬಂಧವಿದೆ. ಈ ಮಾತನ್ನು ಗಮನದಲ್ಲಿಟ್ಟುಕೊಂಡೇ ನಮ್ಮ ಜನಪದ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಕಲೆಗಳ ಶೋಧನೆಯಿಂದ ಬಹುತೇಕ ದುಡಿಯುವ ವರ್ಗದ ಜನರ ಮೌಖಿಕ ಇತಿಹಾಸವನ್ನು ನಿಜಸ್ವರೂಪದಲ್ಲಿ ಅರ್ಥೈಸಲು ಸಾಧ್ಯ. ಈ ಮೂಲಕ ಇತಿಹಾಸವನ್ನು ಕೂಡ ಸತ್ಯದ ಒರೆಗಲ್ಲಿಗೆ ಹಚ್ಚಿ ಪುನರ್ ರೂಪಿಸಬಹುದಾಗಿದೆ. ಗ್ರಾಮ ದೇವತೆಗಳ ಹಬ್ಬಗಳೆಂದರೆ ಕೇವಲ ಮನರಂಜನೆಯಲ್ಲ, ಬದಲಾಗಿ ಹೊಸ ಇತಿಹಾಸ ತೆರೆದಿಡುವ ಸಾಂಸ್ಕೃತಿಕ ಸತ್ಯಗಳು. ಇಂತಹ ಅಪಾರ ಜ್ಞಾನ ಸಂಪತ್ತಿನ ದೇಶಿ ಪ್ರಪಂಚಕ್ಕೆ ಮನುಷ್ಯನ ದುರಾಸೆ ಮತ್ತು ಆತುರದ ನಿರ್ಧಾರಗಳಿಂದಾಗಿ, ವಿವೇಚನೆಯಿಲ್ಲದ ಯೋಜನೆ ಗಳಿಂದಾಗಿ ಏನೆಲ್ಲ ಅನಾಹುತವಾಗುತ್ತಿದೆ ಎನ್ನುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾಡಿನ ದಟ್ಟಕಾಡುಗಳು ನಾಶವಾಗುತ್ತಿವೆ, ಕಾಂಕ್ರೀಟ್ ಕಾಡು ಸೃಷ್ಟಿಯಾಗುತ್ತಿದೆ. ಸಂಪತ್ತು ಏಕಮುಖ ಪ್ರವಾಹದಲ್ಲಿ ನಗರದಲ್ಲಿ ಕೇಂದ್ರೀಕೃತವಾಗುತ್ತಿದೆ. ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಇರುವ ಇಲಾಖೆ ಅಥವಾ ಸಂಸ್ಥೆಗಳೂ ಕೂಡ ಸರ್ಕಾರಿ ಪ್ರಾಯೋಜಿತ ಉತ್ಸವಗಳಿಗೆ ಹಾಗೂ ರಾಜಕೀಯ ನಾಯಕರನ್ನು ಮೆಚ್ಚಿಸುವುದಕ್ಕೆ ಮೀಸಲಾಗಿವೆ. ಈ ಹಿನ್ನೆಲೆಯಲ್ಲೆ ನಮ್ಮ ಸ್ಥಳೀಯ ಜ್ಞಾನ ಪರಂಪರೆ ಹಾಗೂ ಬಹುಮುಖಿ ಸಂಸ್ಕೃತಿಗಳ ನೈಜ ತತ್ವಗಳನ್ನು ಅರ್ಥ ಮಾಡಿಕೊಳ್ಳುವ, ಪುನರ್ ಸ್ಥಾಪಿಸುವ, ಪ್ರಸಾರ ಮಾಡುವ ಮೂಲಕ ನಮಗೆ ಕವಿದಿರುವ, ಹಣ ಆಧಾರಿತ ವಿಸ್ಮೃತಿಯಿಂದ ಹೊರಬರಬೇಕಿದೆ.

■

ಸಂಪಾದಕರೊಡನೆ ಸಂವಾದ

ಅಲೆಮಾರಿಗಳ ಸಬಲೀಕರಣ: ಕೆಲವು ಅನುಮಾನಗಳು

ದಾಸನೂರು ಕೂಸಣ್ಣ

ಮಾನ್ಯ ಸಂಪಾದಕರೇ,

ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅಲೆಮಾರಿಗಳ ಸಬಲೀಕರಣಕ್ಕಾಗಿ ಆಗ್ರಹಗಳು ಕೇಳಿಬರುತ್ತಿವೆ. ಆದರೆ, ಅಲೆಮಾರಿಗಳ ವಿಚಾರಗಳಲ್ಲಿ ಸಾಮಾಜಿಕ ವಿರೋಧವಿದೆ ಎಂಬರ್ಥದಲ್ಲಿ ಅವರ ಪರವಾಗಿ ಮಾತನಾಡುತ್ತಿರುವ ಸಂಘಟಕರು ಅಪಸ್ವರವೆತ್ತುತ್ತಿರುವವರ ನಡವಳಿಕೆ ಅನೇಕ ಅನುಮಾನಗಳಿಗೆ ಆಸ್ಪದ ನೀಡುತ್ತಿವೆ. ಈ ದೇಶದ ಜಾತಿ ತೀರ್ಮಾನಗಳು ಅಷ್ಟೊಂದು ಸರಳವಾಗಿ ಬಗೆಹರಿಯುವ ಅಂಶಗಳೇನಲ್ಲ. ಆದರೂ, 1950ರ ಸಂವಿಧಾನ ಆದೇಶ ಜಾತಿಸೂತಕಕ್ಕೆ ಬಲಿಯಾದ ಅಸ್ಪೃಶ್ಯರಿಗೆ, ಆದಿವಾಸಿಗಳಿಗೆ ಮತ್ತು ಆದಿಮಾ ಬುಡಕಟ್ಟುಗಳಿಗೆ ಮೀಸಲಾತಿಯನ್ನು ಕಲ್ಪಿಸಿದೆ. ಈ ಆದೇಶ ಹೊರಡಿಸುವಾಗ 1935ರ ಕೇಂದ್ರೀಯ ಕಾಯಿದೆಯಲ್ಲಿ ಸೇರಿಸಿದ್ದವರನ್ನು ಯಥಾವತ್ತಾಗಿ ಒಪ್ಪಲಾಯಿತು. 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಮೀಸಲಾತಿ ನೀಡುವಾಗ ಸಮಸ್ಯೆ ಉದ್ಭವಿಸಿತ್ತು. ಆದುದರಿಂದ ದೇಶಾದ್ಯಂತ ಮೊದಲ ಪರಿಷ್ಕರಣೆಯಾಯಿತು.

1931ರ ಜನಗಣತಿ ಮೇರೆಗೆ ನಿಮ್ನ ವರ್ಗಗಳ ಉಪಜಾತಿಗಳು ಅಥವಾ ಅವುಗಳಿಂದ ಸೀಳೊಡೆದ ಮರಿ ಉಪಜಾತಿಗಳ ಪೈಕಿ ನೆರೆಹೊರೆ ರಾಜ್ಯಗಳಲ್ಲಿದ್ದವರನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳೆಂದು ಗುರುತಿಸಿ 1956ರ ಆದೇಶದನ್ವಯ ಮಾನ್ಯಗೊಂಡವು. ಆವಾಗ ಅವುಗಳಿಗೆ ಸೀಮಿತ ಭೌಗೋಳಿಕ ನಿಬಂಧನೆ ವಿಧಿಸಲಾಗಿತ್ತು. ಇದನ್ನು ಸಹ 1979–80ರಲ್ಲಿ ಸಡಿಲಿಸಲಾಯಿತು. ಪರಿಶಿಷ್ಟರ ಮೀಸಲಾತಿ ಸಮಸ್ಯೆ ಆರಂಭವಾದುದು ಇಲ್ಲಿಂದಲೆ. ಇದು ದೇಶಕ್ಕೆ ತಿಳಿದಿರುವ ಸಾಮಾಜಿಕ ಸತ್ಯವಾಗಿದೆ. ಈ ರೀತಿ ಸೇರಲ್ಪಟ್ಟ ಕೆಲವು ಜಾತಿ/ಪಂಗಡಗಳ ಮೇಲೆ 1961ರಲ್ಲಿ ಆಯ್ದು ಮಾನವಶಾಸ್ತ್ರೀಯ ಅಧ್ಯಯನಗಳಾಗಿವೆ. ಅವುಗಳಲ್ಲಿರುವ ಚೆನ್ನದಾಸರು ಅಲೆಮಾರಿ ಎಂದು ಜನಗಣತಿ ಹೇಳಿದರೂ ಈ ಅಧ್ಯಯನ ಅದನ್ನು ಹೊಲೆಯರ ಉಪಜಾತಿ ಎಂದು ಅತ್ಯಂತ ನಿಖರವಾಗಿ ಹೇಳಿದೆ. ಹಾಗೆಯೇ ದಕ್ಕಲಿಗರು ಮತ್ತು ಸಿಂಧೋಳ್ಳು (ಸಿಂಧು ಮಾದಿಗರು) ಸಹ ಮಾದಿಗರ ಉಪಜಾತಿ ಅನ್ನುವುದು ನೈಜ ಲೋಕ ಸತ್ಯವಾಗಿದೆ. ಆದರೆ, ರಾಜ್ಯದೊಳಗೆ ಹೊಲೆಯರು ಮತ್ತು ಮಾದಿಗರು ಇಂತಹ ಸಣ್ಣಮಟ್ಟ ಜಾತಿಗಳ ಸಬಲೀಕರಣದಲ್ಲಿ ಅಸಡ್ಡೆ ತೋರುತ್ತಿವೆ ಅನ್ನುವುದು ಸಂಜಸವಾದ ಮಾತಲ್ಲ. ಅಲೆಮಾರಿ ಸಂಘಟಕರು ಅಲ್ಲಲ್ಲಿ ಇಂತಹ ಅವಹೇಳನ ಮಾಡುತ್ತಿರುವುದು ಅವರಿಗಿರುವ ಸಂಕುಚಿತ ಸಾಮಾಜಿಕ ಸ್ವಾಭಾವಗಳು ಕಾರಣವೆಂದರೆ ತಪ್ಪಾಗದು. ರಾಜ್ಯದೊಳಗೆ ಮೀಸಲಾತಿ ಉಳುವಿಗಾಗಿ ಹೊಲೆಯರು ಮತ್ತು ಮಾದಿಗರು ದುಡಿದಿರುವಷ್ಟು ಬೇರಾವ ಸಮಾಜಗಳು ದುಡಿದಿಲ್ಲ. ಆದರೆ, ಇತ್ತೀಚೆಗೆ ಕರ್ನಾಟಕದಲ್ಲಿ ಕೆಲವರು ಅಲೆಮಾರಿ ಸಬಲೀಕರಣದ ಗುಂಗಿನಲ್ಲಿ ಅವುಗಳನ್ನು ದಾರಿತಪ್ಪಿಸುವ ಕೆಲಸವನ್ನು ರಾಜ್ಯದೊಳಗೆ ಬಹಿರಂಗವಾಗಿ ಆರಂಭಿಸಿರುವುದು ವಿಷಾಧನೀಯ.

ಚೆನ್ನದಾಸರ ಮೀಸಲಾತಿಯು ಚೆನ್ನದಾಸರಲ್ಲದವರಿಂದ ಅಲೆಮಾರಿ ಹೆಸರಿನಡಿ ಬೆಂಗಳೂರು, ಕೋಲಾರ ಮತ್ತು ಗುಲ್ಬರ್ಗಾ ಪ್ರಾಂತ್ಯದಲ್ಲಿ ದುರ್ಬಳಕೆಯಾಗುತ್ತಿದೆ. ಇದಕ್ಕೆ ಅಲೆಮಾರಿ ಸಂಘದವರಿಂದ ಪರಿಹಾರಗಳಿವೆಯೇ? ಮೊದಲು ತಿಳಿಸಲಿ. ಆಂಧ್ರಪ್ರದೇಶದ 56 ಪರಿಶಿಷ್ಟ ಜಾತಿಗಳ ಪೈಕಿ ಸುಮಾರು 40ಕ್ಕೂ ಅಧಿಕ ಉಪಜಾತಿಗಳು ಹೊಲೆಯ(ಮಾಲ) ಮತ್ತು ಮಾದಿಗರ ಉಪಜಾತಿಗಳೆಂದು ತೀರ್ಮಾನವಾಗಿವೆ. ಅವುಗಳಲ್ಲಿರುವ ಮಾಲ ಜಂಗಮರು ಹೊಲೆಯರ ಉಪಜಾತಿ ಎಂತಲು; ಬೇಡ/ಬುಡ್ಗ ಜಂಗಮರು ಮಾದಿಗರ ಉಪ ಜಾತಿಗಳೆಂದು ಮಾನ್ಯವಾಗಿವೆ. ಆದರೆ, ಬಾಲಗುರುಮೂರ್ತಿ ಮಾತ್ರ ಅವರನ್ನು ಸುಡುಗಾಡುಸಿದ್ದರೆಂದು ಹೇಳುತ್ತಿದ್ದಾರೆ; ಹಾಗೆಯೇ ಮ್ಯಾಸ ಬೇಡರ ವೇಷಗಾರರು ನಾವೇ ಬುಡ್ಗ ಜಂಗಮರೆನ್ನುತ್ತಿದ್ದಾರೆ. ಹಾಗಾದರೆ, ಆಂಧ್ರದ ಸುಡುಗಾಡುಸಿದ್ದರು ಇಂದಿಗೂ ಅತಿ ಹಿಂದುಳಿದ ಜಾತಿಗಳಾಗಿರಲು ಕಾರಣಗಳೇನು? ಅದಕ್ಕೆ ಅವರಿಂದ ಬರುವ ಉತ್ತರ ಬೇರೆಯಿದೆ. ಕರ್ನಾಟಕ ಸುಡುಗಾಡ ಸಿದ್ಧರ ಸಂಘ ಸಹ ವಿರೋಧಿಸುತ್ತಿದೆ. ಕರ್ನಾಟಕದಲ್ಲಿಯೂ ಮಾಲಾಸಾಲೆ ಎಂಬ ಹೊಲೆಯರ ಉಪಜಾತಿಯೊಂದಿದೆ. ಇವರನ್ನು ಲೋಕ ರೂಢಿಯಲ್ಲಿ ಮಗ್ಗದ ಹೊಲೆಯರೆನ್ನುವುದು ಜನಜನಿತವಾಗಿದೆ. ಆಗಂತ ಎಲ್ಲಾ ನೇಕಾರರನ್ನು ಪರಿಶಿಷ್ಟರೆಂದು ಒಪ್ಪಲು ಸಮಾಜ ಮುಂದಾಗಿಲ್ಲ. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಲಿಂಗದೇರ್ ಎಂಬ ಜಾತಿಯಿದೆ, ಅವರನ್ನು ಲಿಂಗಧಾರಿಗಳೆಂದು ಸಂಬೋಧಿಸಿ ವೀರಶೈವರೆಲ್ಲರೂ ಮೀಸಲಾತಿ ಕೇಳಿದಾಗ ಗತಿಯೇನು? ಇಂತಹ ಸಾಮಾಜಿಕ ಸತ್ಯಗಳನ್ನು ಅಲೆಮಾರಿ ಸಂಘಟಕರು ಮೊದಲು ಅರಿಯಬೇಕಿದೆ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ/ ಪಂಗಡಗಳ ಪೈಕಿ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿ ಜಿಲ್ಲೆಗಳಿಂದ ಗುರುತಿಸಲ್ಪಟ್ಟಿರುವ 50 ಪರಿಶಿಷ್ಟ ಜಾತಿ ಮತ್ತು 25 ಬುಡಕಟ್ಟುಗಳ ಮೀಸಲಾತಿ ರಾಜಾರೋಷವಾಗಿ ಹೇಳ ಹೆಸರಿಲ್ಲದೆ ಮೇಲ್ವರ್ಗದವರು ಮತ್ತು ಹಿಂದುಳಿದವರಿಂದ ಮಂಗಮಾಯವಾಗುತ್ತಿದೆ.

ಅಲೆಮಾರಿಗಳ ಸಬಲೀಕರಣಕ್ಕೆ ರಾಜ್ಯದಲ್ಲಿ ಯಾವುದೇ ವಿರೋಧಗಳಿಲ್ಲ; ಆದರೆ ಅಲೆಮಾರಿಗಳ ನಾಮಬಲದ ಮೂಲಕ ಕೆಲವು ನಕಲಿ ಜಾತಿ/ ಪಂಗಡಗಳು ಅದರ ಸಾಮಾಜಿಕ ವಿಸ್ತರಣೆಗೆ ಕೈಹಾಕುತ್ತಿರುವುದಕ್ಕೆ ಪ್ರಬಲ ವಿರೋಧವಿದೆ. ಅಲೆಮಾರಿಗಳ ಬಗ್ಗೆ ಅನುಕಂಪ ವ್ಯಕ್ತಪಡಿಸುವವರು ಮಂಡಿಸುತ್ತಿರುವ ಸಾಮಾಜಿಕವಾದಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭಾರತೀಯರೆಲ್ಲರನ್ನು ಅಲೆಮಾರಿಗಳೆಂದು ತೀರ್ಮಾನಿಸಬಹುದು (ಹೇಗೆಂದರೆ, ಬಾಲ ಗುರುಮೂರ್ತಿ ಪ್ರಕಾರ 12 ಕೋಟಿ; ಗೋವಿಂದಸ್ವಾಮಿ ಪ್ರಕಾರ 20 ಕೋಟಿ). ಸಾಮ್ಹಾಜಿಕ ಸತ್ಯಗಳು ಮಾತ್ರ ಭಿನ್ನವಾಗಿವೆ. ಉದಾಹರಣೆಗೆ, ಅಲೆಮಾರಿಗಳೆಂದು ಹೇಳಿಕೊಳ್ಳುತ್ತಿರುವ ಗೋಸಾಯಿ ಮತ್ತು ಗೋಸಂಗಿ ಸಾಮಾಜಿಕ ಸ್ವಭಾವ ಸಮಾನವಾಗಿ ಕಂಡರೂ ಇವರೊಳಗೆ ಭಾರಿ ಸಾಮಾಜಿಕ ವೈರುಧ್ಯ ಮತ್ತು ವ್ಯಾತ್ಯಾಸಗಳಿವೆ. ಹಾಗೆಯೇ ಗೊಂಡ, ಕಾಡುಕುರುಬ, ಜೇನುಕುರುಬರನ್ನು ಅತಿ ಹಿಂದುಳಿದ ವರ್ಗದಲ್ಲಿರುವ ಕುರುಬ ಸಮಾಜದೊಂದಿಗೆ ಸಮೀಕರಿಸಲು ಹೇಗೆ ಸಾಧ್ಯವಿಲ್ಲವೊ ಹಾಗೆಯೇ ಅಲೆಮಾರಿ ಸಬಲೀಕರಣದ ಹೆಸರಿನಲ್ಲಿ ರಾಜ್ಯದಲ್ಲಿರುವ ಪರಿಶಿಷ್ಟಜಾತಿ ಮತ್ತು ಪಂಗಡದೊಳಗಿರುವ ವಿರಳ ಜನಸಂಖ್ಯೆಯುಳ್ಳ ಸಣ್ಣಮಟ್ಟ ಜಾತಿಗಳನ್ನು ಬಲಿಷ್ಠರ ಮೀಸಲಾತಿ ದಾಹಕ್ಕೆ ಬಲಿಗೊಡುವುದು ಸಾಮಾಜಿಕ ಮಹಾ ಅಪರಾಧವಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಸೃಷ್ಟಿಯಾಗಿರುವ ಲಕ್ಷಾಂತರ ಸುಳ್ಳು ಜಾತಿ ಪತ್ರಗಳೊಂದಿಗೆ ಇನ್ನಷ್ಟು ಸೇರ್ಪಡೆಯಾಗುತ್ತವೆ.

ಅಲೆಮಾರಿ ಸಮಾಜದ ಉದ್ಧಾರಕ್ಕೆ ಹೊಲೆಯ/ ಮಾದಿಗ ಅಥವಾ ಇತರೆ ಅಸ್ಪೃಶ್ಯರಿಂದ ಪ್ರತಿರೋಧಗಳಿಲ್ಲ. ಇವರಿಗೆ ಸಾಮಾಜಿಕ ನ್ಯಾಯ ದಕ್ಕಿಸಲು ಈ ಸಮಾಜಗಳು ಸದಾ ಜಾಗೃತವಾಗಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರಬಲ ಜಾತಿಗಳಿಂದ ಅನ್ಯಾಯಗಳಾಗುತ್ತಿವೆ ಅನ್ನುವ ಖಾತರಿಯಿದ್ದರೆ, ಅಲೆಮಾರಿ ಸಂಘಟಕರು ಈ ಪಟ್ಟಿಗಳ ವಿಸರ್ಜನೆಗೆ ಮೊದಲು ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಲಿ, ಅದನ್ನು ಮೂಲ ಅಸ್ಪೃಶ್ಯರು ಪ್ರಾಮಾಣಿಕವಾಗಿ ಬೆಂಬಲಿಸುತ್ತಾರೆ. ಆವಾಗ, ನೈಜ ಅಲೆಮಾರಿಗಳನ್ನು ರಾಜ್ಯದಲ್ಲಿ ಗುರುತಿಸಿ ಅವರಿಗೆ ಪ್ರತ್ಯೇಕ ಅವಕಾಶ ನೀಡಬಹುದು. ನೈಜ ಅಲೆಮಾರಿಗಳ ಉದ್ಧಾರಕ್ಕೆ ಸರ್ಕಾರ ಅಥವಾ ಜನಪ್ರತಿನಿಧಿಗಳಿಂದ ವಿರೋಧಗಳಿಲ್ಲ. ಸರ್ಕಾರಕ್ಕೆ ಭಯವಿರುವುದು ನಕಲಿ ಅಲೆಮಾರಿಗಳ ಬಗ್ಗೆ ಅನ್ನುವುದನ್ನು ಸಂಘಟಕರು ತಿಳಿದರೆ ಸಾಕು. ಆದರೆ, ಸಾರ್ವಜನಿಕರಿಂದ ಅಲೆಮಾರಿಗಳ ಶ್ರೇಯೋಭಿವೃದ್ಧಿ ಹೆಸರಿನಡಿ ರಾಜ್ಯಾದ್ಯಂತ ಆಗುತ್ತಿರುವ ದುರುಪಯೋಗಗಳ ವಿರುದ್ಧ ಇವರ ಟೀಕೆ–ಟಿಪ್ಪಣಿಗಳಿವೆ ಅಷ್ಟೇ.

ಸಂಪಾದಕರೊಡನೆ ಸಂವಾದ

ಮೌಢ್ಯವನ್ನು ಸಮರ್ಥಿಸುವ ಜಾತಿವಾದಿಗಳು

ಬಿ. ಶ್ರೀಪಾದ ಭಟ್

ಮಾನ್ಯ ಸಂಪಾದಕರೇ,

ರಾಮ ಮನೋಹರ ಲೋಹಿಯಾ ಅವರ "ವಸಿಷ್ಠರು ಮತ್ತು ವಾಲ್ಮೀಕಿಯರು" ಎನ್ನುವ ಅದ್ಭುತ ಲೇಖನದ ಸಾರಾಂಶ (ಅನುವಾದ: ಹಸನ ನಯೀಂ ಸುರಕೋಡ).

"ಭೂಮಿಕನ್ಯಾ ಸೀತೆಯಲ್ಲಿ ಕಾಣಬೇಕಿರುವ ನಿಜ ಸಂಗತಿಯೆಂದರೆ " ಗಡೀಪಾರು", ಶಿರಚ್ಛೇದನ"ಗಳಂತಹ ತುಂಬಿ ತುಳುಕುವ ವಸಿಷ್ಠನ ಸಂಭಾಷಣೆ. ರಾಮನ ಮಾತುಗಳಲ್ಲಿ ಅಲ್ಲಿ-ಇಲ್ಲಿ ಸ್ವಲ್ಪ ಸಂಯಮ ಕಂಡುಬರುತ್ತಿದ್ದರೂ ಮೂಲದಲ್ಲಿ ಅಧಿಕಾರವಾಣಿಯಿಂದ ವಸಿಷ್ಠನೇ ಮಾತನಾಡುತ್ತಾನೆ. ಅರಸು ಹಾಗು ಪ್ರಮುಖ ಪುರೋಹಿತ ಇವರಿಬ್ಬರನ್ನೂ ಒಂದೇ ವ್ಯಕ್ತಿಯಲ್ಲಿ ಮೇಳವಿಸಲಾಗಿದೆ. ಇಂದು ಆಳುವವನ ಮಾತು ಕೂಡ "ಗಡೀಪಾರು", ಶಿರಚ್ಛೇದನ"ಗಳಂತಹವುಗಳಿಂದ ತುಂಬಿ ತುಳುಕುತ್ತದೆ. ವಸಿಷ್ಠನ ಅಸಹನೆಗೆ ಕಾರಣವಾದ ಪರಂಪರೆಗೆ ಈತನೂ ಗುಲಾಮನಾಗಿದ್ದಾನೆ. ಜನಿವಾರ, ಜುಟ್ಟುಗಳಂತಹ ಸಂಕೇತಗಳ ನಿರ್ಮೂಲನೆ ಪ್ರಶಂಸನಾರ್ಹ. ಅದೇನೆ ಇರಲಿ ಇಲ್ಲಿ ಆಳುವವರು ಏನು ಮಾಡುತ್ತಿದ್ದಾರೆ?? ಅಸಹಿಷ್ಣು ಶಂಭುಕನಿಗೆ ಯುದ್ಧಪ್ರಿಯ ಧಾಟಿಯಲ್ಲಿಯೇ ಇವರು ಉತ್ತರಿಸುತ್ತಿದ್ದಾರೆ. ಭಾರತ ತನ್ನೆಲ್ಲ ಮಕ್ಕಳಿಗೆ ತಾಯಿ. ಬಂಡುಕೋರರಿಗೂ ಸಹ. ಸ್ವಾರ್ಥ ಹಿತ, ಗುಂಪಿನ ಹಿತದಲ್ಲಿಯೇ ಮುಳುಗಿದ ಮನಸ್ಸು ವಸಿಷ್ಠ ಪರಂಪರೆಯ ಬ್ರಾಹ್ಮಣ ಮನಸ್ಸು. ಒಂದು ಸಂಪ್ರದಾಯಕ್ಕಾಗಿ ಹೇಗೆ ಸಾಯಬೇಕು, ಹೇಗೆ ಕೊಲ್ಲಬೇಕು ಎಂದು ಆತನಿಗೆ ಗೊತ್ತು. ತನಗೆ ಬೇಕೆನಿಸಿದ ವಿದೇಶಿ ಸಂಪ್ರದಾಯಗಳನ್ನು ಆತ ಅಂಗೀಕರಿಸುತ್ತಾನೆ. ಆತನ ಮೌಲ್ಯಗಳಿಗೆ ಧಕ್ಕೆಯುಂಟಾಗುವ ಸಮಯದಲ್ಲಿಯೂ ಸಹ ಹಾವಿನಂತೆ ಮುದುಡಿಕೊಂಡಿರುತ್ತಾನೆ. ಸಮಯೋಚಿತ ದಾಳಿಗೆ ಹೊಂಚು ಹಾಕುತ್ತಿರುತ್ತಾನೆ. ಜಾತಿಗಳನ್ನು ನಿರ್ಮೂಲನೆಗೊಳಿಸಲೇಬೇಕು. ಅವುಗಳ ನಾಮಾಂಕಿತ ಕೂಡ ಇಲ್ಲವಾಗಬೇಕು.

5000 ವರ್ಷಗಳ ಹಿಂದಿನ ವಸಿಷ್ಠ ಸೀತೆಗೆ ಕಟ್ಟಳೆಗಳನ್ನು ವಿಧಿಸಿದ್ದ. ವಸಿಷ್ಠ ಸಂಪ್ರದಾಯ ಮಾತ್ರ ಕುಟಿಲತೆ ಮನೋಭಾವದಿಂದ ತುಂಬಿರುವಂತದ್ದು. ಇವರ ತತ್ವಗಳಲ್ಲಿ ಆಷಾಢಭೂತಿತನ ಹಬ್ಬಿಕೊಳ್ಳುತ್ತದೆ. ತಮ್ಮ ಬಡತನದಿಂದಾಗಿ ಹನಿ ಹನಿ ಹಾಲಿಗೆ ಜನ ಹಾತೊರೆಯುತ್ತಿರುವಾಗ ತಾನು ಹಾಲೇ ಸೇವಿಸುತ್ತಿಲ್ಲವೆಂದು ವಸಿಷ್ಠ ಮಾಡುವ ಅಬ್ಬರದ ಘೋಷಣೆಗಳಲ್ಲಿ ಆ ಬಡವರ ಅಳಲನ್ನು ಹೂಳಲಾಗುತ್ತದೆ. ಧಾರ್ಮಿಕ ಆಡಂಬರದ ಕಪಟವಿಲ್ಲದೆ ವಸಿಷ್ಠ ಬದುಕಲಾರ. ಬಲದಲ್ಲಿ ತನಗಿಂತ ಶ್ರೇಷ್ಠವಾಗಿರುವವರೊಂದಿಗೆ ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಹಾಗೂ ಸಹಜೀವನದ ಬಗ್ಗೆ ಮಾತನಾಡಿದರೆ ದುರ್ಬಲರನ್ನು ನ್ಯಾಯಾಲಯಕ್ಕೆ ಎಳೆದು ನ್ಯಾಯದ ಮನೆಯನ್ನು ಯಾತನಾ ಗೃಹವಾಗುವಂತೆ ಮಾಡುತ್ತಾನೆ".

15ನೇ ಶತಮಾನದಿಂದಲೂ ಮಹಾರಾಷ್ಟ್ರ ರಾಜ್ಯದಲ್ಲಿ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಅಲ್ಲದೇ ಮಹಿಳಾ ಹೋರಾಟಕ್ಕೆ ಒಂದು ಪರಂಪರೆಯನ್ನೇ ಹುಟ್ಟು ಹಾಕಿದರು. ಅದೇ ಕಾಲಘಟ್ಟದಲ್ಲಿ ಬದಲಾವಣೆಯ ಆಶಾಕಿರಣವಾಗಿ ಮೂಡಿದ ಭಕ್ತಿ ಪಂಥ ಚಳುವಳಿ ಕೂಡ ಮರಾಠಿ ಮಹಿಳೆಯರಿಗೆ ತಮ್ಮಲ್ಲಿನ ನೋವುಗಳನ್ನು ಹೊರಹಾಕಲು ಪ್ರೇರಣೆಯನ್ನು ನೀಡಿತು. ಅದು ಇಂದೂ ಕೂಡ ಸಮಾಜದ ಶೂದ್ರ, ತಳಸಮುದಾಯಗಳ ಹೋರಾಟದ ಬದುಕಿನಲ್ಲಿ ತನ್ನನ್ನು ನಿಸ್ವಾರ್ಥವಾಗಿ ಒಳಗೊಳ್ಳುತ್ತಾ ಬಂದಿದೆ. 1830ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ಜನಿಸಿದ ತಾರಾಬಾಯಿ ಶಿಂಧೆ ಎನ್ನುವ ಸಮಾಜ ಸುಧಾರಕಿ ಎಲೆಮರೆಯ ಕಾಯಿಯಂತೆ ಬದುಕಿ ಅಂದಿನ ಸಮಾಜದ ಮೂಢ ನಂಬಿಕೆಗಳ ವಿರುದ್ಧ, ಮಹಿಳೆಯರ ಸಬಲೀಕರಣದ ಪರವಾಗಿ, ಪುರುಷರ ಜೊತೆ ಜೊತೆಗೇ ಮಹಿಳೆಯರಿಗೂ ಸಮವಾಗಿ ಅಧಿಕಾರ ನೀಡಬೇಕು ಎಂದು 150 ವರ್ಷಗಳ ಹಿಂದೆಯೇ ತಾರಾಬಾಯಿ ಶಿಂಧೆಯವರು ಆಗ್ರಹಪಡಿಸಿದ್ದರು.

ಅದೇ ಕಾಲಘಟ್ಟದಲ್ಲಿ ಬದುಕಿದ ಸಾವಿತ್ರೀಬಾಯಿ ಪುಲೆಯವರು ತಮ್ಮ ಪತಿ ಜ್ಯೋತಿರಾವ ಪುಲೆ ಅವರೊಂದಿಗೆ ಜೊತೆಜೊತೆಯಾಗಿ ಸಮಾಜ ಪರಿವರ್ತನ ಕಾರ್ಯಕ್ಕೆ ಕೈ ಹಾಕಿದ್ದರು. ಜಾತೀಯತೆಯ ವಿರುದ್ಧ, ಸಾಮಾಜಿಕ ನ್ಯಾಯ, ಮೂಢನಂಬಿಕೆಗಳ ವಿರುದ್ಧ, ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟ ಮೌಢ್ಯ ಆಚರಣೆಗಳ ವಿರುದ್ಧ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಇದಕ್ಕಾಗಿಯೇ ಪತಿಯೊಂದಿಗೆ ಸೇರಿ "ಸತ್ಯಶೋಧನಾ ಸಮಾಜ"ವನ್ನು ಸ್ಥಾಪಿಸಿದರು ಹಾಗೂ ಈ ಸತ್ಯಶೋಧನಾ ಸಮಾಜದ ಮೂಲಕ ಸಾಮಾಜಿಕ ನ್ಯಾಯ, ಸಾಮಾಜಿಕ ಪ್ರಜಾಪ್ರಭುತ್ವಕ್ಕಾಗಿ ಬೀದಿಗೆ ಇಳಿದಿದ್ದರು. ಇದು ಒಂದು ಹೃದಯಂಗಮ ಕಥೆ. ಇತಿಹಾಸ. ನಂತರ ಇವರ ಈ ಹೋರಾಟ ಮುಂದೆ ಅಂಬೇಡ್ಕರ್ ಅವರಿಗೆ ಬಲು ದೊಡ್ಡ ಪ್ರೇರಣೆ ನೀಡಿತು. ಇದೇ ರೀತಿ ಪಂಡಿತ ರಮಾಬಾಯಿ ಅವರನ್ನೂ ಕೂಡ ನೆನಪಿಸಿಕೊಳ್ಳಬಹುದು. ಇದೇ ರೀತಿ ಭಾರತದ ಅನೇಕ ಭಾಗಗಳಲ್ಲಿಯೂ ಆ ಕಾಲದ ನಿಸ್ವಾರ್ಥ ಹೋರಾಟಗಾರರ ಒಂದು ಪರಂಪರೆಯನ್ನು ನಾವು ನೋಡಬಹುದು.

ಇಷ್ಟೊಂದು ಪ್ರಗತಿಪರ ಹಿನ್ನೆಲೆ ಉಳ್ಳ ನಮ್ಮ ದೇಶ ಇಂದು 21ನೇ ಶತಮಾನದಲ್ಲೂ ಮತ್ತೆ ಮತ್ತೆ ನೂರಾರು ವರ್ಷಗಳ ಹಿಂದಿನ ಮೌಢ್ಯಕ್ಕೆ, ಜಾತೀಯ ಕುಟಿಲ ಹುನ್ನಾರಗಳಿಗೆ ಬಲಿಯಾಗುತ್ತದೆ ಎಂದರೆ ನಾವೆಲ್ಲಾ ಎಂತಹ ದುರಂತದಲ್ಲಿ ಬದುಕುತ್ತಿದ್ದೇವೆ ಎನ್ನುವ ಅಪಮಾನ, ನೋವು, ಹತಾಶೆಗಳು ನಮ್ಮನ್ನು ಕಾಡುತ್ತವೆ. ಇಷ್ಟೊಂದು ಪ್ರಗತಿಪರ ಸಂಘಟನೆಗಳು ಇದ್ದುಕೊಂಡೂ ಕುಕ್ಕೆ ಸುಬ್ರಮಣ್ಯದಲ್ಲಿ ಬ್ರಾಹ್ಮಣರು ಉಂಡ ಎಲೆ ಮೇಲೆ ಮಡೆ ಸ್ನಾನದಂತಹ ಅಮಾನುಷ ಆಚರಣೆ ನಡೆಯುತ್ತದೆ ಎನ್ನುವ ವರದಿಯೇ ನಮಗೆಲ್ಲ ಅಪಮಾನಕರ. ಈ ಪುರೋಹಿತಶಾಹಿ ವರ್ಗಗಳ ಕುಟಿಲ ನೀತಿಗಳಿಗೆ ಮತ್ತೆ ಮತ್ತೆ ಶೂದ್ರ, ತಳಸಮುದಾಯಗಳು ಬಲಿಯಾಗುತ್ತಿರುವುದು, ಇದನ್ನು ನಾವೆಲ್ಲ ಅಸಹಾಯಕತೆಯಿಂದ ನೋಡುತ್ತ ಕುಳಿತಿರುವುದು ಪ್ರಜಾಪ್ರಭುತ್ವದ ಸೋಲೇ ಸರಿ. ಇಂತಹ ಹೇಯ ಕೃತ್ಯಗಳಿಗೆ ನಾವೆಲ್ಲ ಮೂಕ ಪ್ರೇಕ್ಷಕರಾಗಿದ್ದೆವು ಎನ್ನುವುದೇ ಅತ್ಯಂತ ನಾಚಿಕೆಯ ಸಂಗತಿ. ಇಷ್ಟೆಲ್ಲ ಓದಿಕೊಂಡವರಿಗೆ, ಈ ಓದಿಕೊಂಡವರು ಇಂತಹ ದುಷ್ಟ ಘಟನೆಗಳು ನಡೆಯುತ್ತಿದ್ದರೂ ಏನೂ ಅಗಿಲ್ಲವೆಂಬಂತೆ ಮೌನವಾಗಿರುವುದು, ನಾವು ಸಮಾಜದಲ್ಲಿ ಪಾಲಿಸಬೇಕಾಗಿರುವ ಸಮಾನತೆಯ ಬಗ್ಗೆ, ಅನಿಷ್ಟ ಸಂಪ್ರದಾಯಗಳ ಅರ್ಥಹೀನತೆಗಳ ಬಗ್ಗೆ ಪುಟಗಟ್ಟಲೆ ಬರೆಯಬೇಕಾಗಿರುವುದು ಒಟ್ಟಿನಲ್ಲಿ ಇಲ್ಲಿನ ಅಕ್ಷರ ಸಂಸ್ಕೃತಿ ಸತ್ತಿದೆ ಅಷ್ಟೇ.

ಜಾತೀವಾದಿಗಳು ಪಂರಂಪರೆಯ ನೆಪದಲ್ಲಿ ಈ ಮೌಢ್ಯವನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ, ಅಲ್ಲಿನ ಜಿಲ್ಲಾ ಮಂತ್ರಿಯ ಪತ್ತೆಯೇ ಇರುವುದಿಲ್ಲ. ಇದೇ ಜಿಲ್ಲೆಗೆ ಸೇರಿದ ರಾಜ್ಯದ ಮುಖ್ಯಮಂತ್ರಿಗಳು ತಪ್ಪಿತಸ್ಥರ ವಿರುದ್ಧ ಅಧಿಕಾರಯುತವಾಗಿ ಮಾತನ್ನೂ ಕೂಡ ಆಡದೆ ಮರೆ ಮೋಸವನ್ನು ತೋರಿಸಿಕೊಳ್ಳುತ್ತಾರೆ. ಎಂದಿನಂತೆ ನಮ್ಮ ಕಾಂಗ್ರೆಸ್ ರಾಜಕಾರಣಿಗಳ ಜಾಣ ಮೌನ. ಇಂದು ರಾಜ್ಯದಲ್ಲಿ ಒಬ್ಬ ಪ್ರಗತಿಪರ ರಾಜಕಾರಣಿ ಇಲ್ಲವೆನ್ನುವುದು ಬೌದ್ಧಿಕವಾಗಿ, ವೈಚಾರಿಕವಾಗಿ ನಮ್ಮ ಈ ಸಮಾಜ ತಲುಪಿರುವ ಅಧಃಪತನಕ್ಕೆ ಸಾಕ್ಷಿ.

ಇದರಲ್ಲೇನು ಆಶ್ಚರ್ಯವಿಲ್ಲ ಬಿಡಿ. ಏಕೆಂದರೆ 2008ರಿಂದ ಇಲ್ಲಿವರೆಗಿನ ತಮ್ಮ 3 ವರ್ಷಗಳ ಆಡಳಿತದಲ್ಲಿ ಬಳ್ಳಾರಿಯನ್ನು ಗಣಿಚೋರರಾದ ರೆಡ್ಡಿಗಳ ಕೈಗೆ ಒಪ್ಪಿಸಿ, ಅಲ್ಲಿ ರಾಜ್ಯದ ಮುಖ್ಯಮಂತ್ರಿ ಹೋಗಬೇಕೆಂದರೂ ಆ "ರಿಪಬ್ಲಿಕನ್ ಬಳ್ಳಾರಿ" ಸರ್ವಾಧಿಕಾರಿಗಳಾಗಿದ್ದ ಗಣಿಚೋರ ರೆಡ್ಡಿಗಳ ಅಪ್ಪಣೆ ತೆಗೆದುಕೊಳ್ಳಬೇಕು ಎನ್ನುವ ಸ್ಥಿತಿ ನಿರ್ಮಾಣವಾಗಿದ್ದಂತಹ ಕಾಲದಲ್ಲಿ, ಇದೇ ಗಣಿಚೋರರು ರಾಜ್ಯದ ಗಣಿ ಸಂಪತ್ತನ್ನು ಲೂಟಿ ಮಾಡಿದ ರೊಕ್ಕದಿಂದ ಭ್ರಷ್ಟಾಚಾರದ ಚುನಾವಣೆ, ಆಡಳಿತ ನಡೆಸಿದ, ರಾಜ್ಯವನ್ನೇ ಕಂಡರಿಯದಂತಹ ಭ್ರಷ್ಟಾಚಾರದ ಕೂಪಕ್ಕೆ ತಳ್ಳಿದ ಈ ಸಂಘಪರಿವಾರ ಈಗ ಅದೇ ರೆಡ್ಡಿಗಳನ್ನು ಉಂಡ ನಂತರ

(25ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಕನ್ನಡ ಶಾಲೆ ಉಳಿಸಲು ಚಳವಳಿ ಅಗತ್ಯ

ಹೆಚ್ ಮಾರುತಿ

ಮಾನ್ಯ ಸಂಪಾದಕರೇ,

ವಿದ್ಯಾರ್ಥಿಗಳ ಕೊರತೆಯ ನೆಪ ಮಾಡಿ ವಿಲೀನದ ಹೆಸರಿನಲ್ಲಿ ಸರ್ಕಾರದ 3,174 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಬಾಗಿಲನ್ನು ಹಂತ ಹಂತವಾಗಿ ಮುಚ್ಚಲು ಹೊರಟಿರುವ ಹುನ್ನಾರವು ಖಂಡನೀಯವಾಗಿದೆ. ತಮ್ಮ ಊರುಗಳಲ್ಲಿ ಸರ್ಕಾರಿ ಶಾಲೆಗಳಿದ್ದರೂ, ಹಳ್ಳಿಗಾಡಿನ ಮಕ್ಕಳು ಶಿಕ್ಷಣದಿಂದ ವಂಚಿತವಾಗಿರುವ ಉದಾಹರಣೆಗಳು ಸಾಕಷ್ಟಿದ್ದರೂ, ಸರ್ಕಾರ ಈಗ ಯೋಜಿಸಿರುವಂತೆ (ಶಾಲೆಗಳ ವಿಲೀನ) 2ರಿಂದ 3 ಕಿಲೋ ಮೀಟರ್ ದೂರದ ಶಾಲೆಗೆ ಮಕ್ಕಳನ್ನು ದಾಖಲು ಮಾಡಲು ಹೊರಟಿರುವುದು ಅರ್ಥಹೀನ. ಒಂದು ಊರಿಗೂ ಮತ್ತೊಂದು ಊರುಗಳ ನಡುವೆ ಸಂಚಾರ ವ್ಯವಸ್ಥೆಯು ಒಳಗೊಂಡಂತೆ ಮೂಲ ಸೌಕರ್ಯಗಳೇ ಇಲ್ಲದಿದ್ದಾಗ, ಒಂದು ಊರಿನ ಮಕ್ಕಳು ಪಕ್ಕದ ಊರಿನ ಶಾಲೆಗಳಿಗೆ ಹೋಗಿ ಕಲಿಯುತ್ತಾರೆ ಎನ್ನುವ ಅಂಶದಲ್ಲಿ ಸತ್ಯವಿದೆಯೇ?

ಆಂಗ್ಲರ ವಸಾಹತು ನೀತಿಯಾಧಾರಿತ ಮೆಕಾಲೆಯ ಆಂಗ್ಲ ಶಿಕ್ಷಣ ನೀತಿಯಿಂದ ಹಿಡಿದು ಇಂದಿನವರೆಗೂ ಶಿಕ್ಷಣ ವಲಯ ಹೆಚ್ಚು ಕಡಿಮೆ ತಾರತಮ್ಯ ಮತ್ತು ಅಸಮಾನತೆ ಪೋಷಣೆಯ ಗೂಡಾಗಿ ಮಾರ್ಪಟ್ಟಿದೆ. ಸ್ವಾತಂತ್ರ್ಯ ನಂತರ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಲವಾರು ಸುಧಾರಣಾ ಆಯೋಗಗಳು ವರದಿಗಳನ್ನು ನೀಡಿದರೂ ಅವುಗಳ ಅನುಷ್ಠಾನ ಮತ್ತು ಕಾರ್ಯರೂಪ ಆಯೋಗಗಳು ನೀಡಿದ್ದ ಸಲಹೆಗಳಿಗೆ ತದ್ವಿರುದ್ಧವಾಗಿಯೇ ಇದೆ. ಕ್ರಿ.ಶ.1964 ಡಾ॥ ಡಿ.ಎಸ್.ಕೊಠಾರಿ, ಶಿಕ್ಷಣ ಆಯೋಗ ಸೂಚಿಸಿದ್ದ ಜಾತಿ ತಾರತಮ್ಯ ರಹಿತವಾದ ಸಮಾನ ಶಿಕ್ಷಣವನ್ನಾಗಲಿ, ಇಲ್ಲವೇ ಏಕ ಶಿಕ್ಷಣ ರೂಪ ವ್ಯವಸ್ಥೆಯನ್ನಾಗಲೀ, ಜಾತ್ಯಾತೀತ ಶಿಕ್ಷಣ ವ್ಯವಸ್ಥೆಯನ್ನಾಗಲೀ ರೂಪಿಸಲು ನಮ್ಮನ್ನು ಆಳಿದ ಯಾವ ಸರ್ಕಾರಗಳಿಂದಲೂ ಆಗಿಲ್ಲ ಎಂಬುವುದೆ ಬಹುಮುಖ್ಯ ವಿಚಾರ.

1991ರ ನಂತರ ಆಳುವ ಎಲ್ಲಾ ಪಕ್ಷಗಳು ಶಿಕ್ಷಣ ರಂಗದ ಸುಧಾರಣೆಗಳತ್ತ ಗಮನ ನೀಡದೆ, ಶಿಕ್ಷಣ ಕ್ಷೇತ್ರವನ್ನು ಖಾಸಗೀಕರಣ ಮುಖ್ಯವಾಗಿ ವ್ಯಾಪಾರೀಕರಣಕ್ಕೆ ಒತ್ತೆ ಇಟ್ಟು ಪರವಾನಗಿ ನೀಡಿದ್ದೆ ಬಂತು. ಈ ಸದಾವಕಾಶಕ್ಕಾಗಿ ಬಕಪಕ್ಷಿಯಂತೆ ಕಾಯುತ್ತಿದ್ದ ಮಠಾಧೀಶರು, ಕೈಗಾರಿಕೋದ್ಯಮಿಗಳು, ಮಾರ್ವಾಡಿಗಳು, ರಾಜಕಾರಣಿಗಳು, ಕ್ರೈಸ್ತ ಮಿಷನರಿಗಳು, ಧಾರ್ಮಿಕ ದತ್ತಿ ಸಂಸ್ಥೆಗಳು ತಾಮುಂದು, ನೀಮುಂದು ಎಂಬಂತೆ ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಿ ಲಗ್ಗೆ ಇಟ್ಟಿವೆ. ಈ ಸಂಸ್ಥೆಗಳು ಒಂದೆಡೆ ಸರ್ಕಾರಗಳಿಂದ ಉದಾರವಾದ ವಿಫುಲವಾದ ಭೂಮಿ, ಅನುದಾನ ಸವಲತ್ತುಗಳನ್ನು ಪಡೆದರೆ, ಮತ್ತೊಂದೆಡೆ ಪೋಷಕರಿಂದ ಶುಲ್ಕ, ದೇಣಿಗೆ ಮತ್ತು ಅಪಾರ ವಂತಿಕೆಗಳನ್ನು ಸುಲಿಗೆ ಮಾಡುತ್ತಿವೆ.

90ರ ದಶಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನೀಡುವ ನೆಪದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆಯಿಟ್ಟ ಐ.ಸಿ.ಎಸ್.ಇ (ಇಂಡಿಯನ್ ಕೌನ್ಸಿಲ್ ಫಾರ್ ಸೆಕೆಂಡರಿ ಎಜುಕೇಷನ್) ಮತ್ತು ಸಿ.ಬಿ.ಎಸ್.ಇ (ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್) ಗಳು ಸಾಮಾನ್ಯ ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಮಾನ್ಯತೆ ಪಡೆದ (ಕನ್ನಡ ಮಾಧ್ಯಮ) ಶಾಲೆಗಳ ಪಠ್ಯಕ್ರಮ ಓದುವ ಪರಿಸರ ತಿಳುವಳಿಕೆ ಜ್ಞಾನದ ವಿಸ್ತಾರ, ವಿದ್ವತ್ ಸ್ಥಾನಮಾನ ತಂದು ಕೊಡುವಲ್ಲಿ ಸಾಕಷ್ಟು ಅಂತರಗಳನ್ನು ಸೃಷ್ಟಿಸಿದೆ. ಐ.ಸಿ.ಎಸ್.ಇ ಮತ್ತು ಸಿ.ಬಿ.ಎಸ್.ಇ ಗಳಲ್ಲಿ ಓದುತ್ತಿರುವ ಮಕ್ಕಳಾದರೂ ಯಾವ ಆರ್ಥಿಕ ವರ್ಗದ ಶ್ರೇಣಿಯಲ್ಲಿರುವವರೂ ಎಂಬುದು ಬಹುಮುಖ್ಯ ವಿಚಾರ. ಕೈಗಾರಿಕೋದ್ಯಮಿಗಳು, ರಾಜಕಾರಣಿಗಳು ಮತ್ತು ಅವರ ಸಂಬಂಧಿಕರು ಸರ್ಕಾರಿ ಸೇವೆಯಲ್ಲಿರುವ ಆಯುಕ್ತರುಗಳು, ಪ್ರಥಮ ದರ್ಜೆ ನೌಕರರುಗಳ ಮಕ್ಕಳೇ ಆಗಿದ್ದಾರೆ. ಸ್ಟೇಟ್ ಬೋರ್ಡ್‌ನಿಂದ ಪರವಾನಗಿ ಪಡೆದು ಖಾಸಗಿ ಆಂಗ್ಲ ಮಾಧ್ಯಮಗಳಲ್ಲಿ ಮಧ್ಯಮ ವರ್ಗ ಮತ್ತು ಅದರ ಆಸುಪಾಸಿನ ಜನರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದರೆ, ಬಹುಸಂಖ್ಯಾತ ಆರ್ಥಿಕವಾಗಿ ದುರ್ಬಲರಾದ ಹಳ್ಳಿಗಾಡಿನ ರೈತಾಪಿ ಜನ, ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಪಂಗಡಗಳನ್ನು ಒಳಗೊಂಡ ಹಿಂದುಳಿದ ಜಾತಿಗೆ ಸೇರಿದ ಮಕ್ಕಳು ಈ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಹಿನ್ನೆಲೆಯಲ್ಲಿ ಇಡೀ ಶಿಕ್ಷಣ ಕ್ಷೇತ್ರವೆ ಪ್ರಾಥಮಿಕ ಹಂತದಿಂದಲೆ ಅಸಮಾನತೆ ಮತ್ತು ತಾರತಮ್ಯದ ಆರ್ಥಿಕ ಲೆಕ್ಕಾಚಾರದಲ್ಲಿ ಅಡಗಿದೆ.

ಒಂದು ಕಡೆ ಸುಪ್ರೀಂಕೋರ್ಟ್ 2011 ಆಕ್ಟೋಬರ್ 30ರ ಒಳಗೆ ಎಲ್ಲಾ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯಗಳ ವ್ಯವಸ್ಥೆ ಒದಗಿಸಬೇಕೆಂದು ಆಜ್ಞೆ ಹೊರಡಿಸಿದರೆ ಇತ್ತ ಸರ್ಕಾರ ವಿಲೀನಿಕರಣದ ನೆಪದಲ್ಲಿ ಶಾಲೆಗಳನ್ನು ಮುಚ್ಚ ಹೊರಟಿದೆ. ದಿನ ಪತ್ರಿಕೆಯೊಂದರ ಅಂಕಿ ಅಂಶದ ಪ್ರಕಾರ ರಾಜ್ಯದ ಒಟ್ಟು 46,288 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 13,098 ರಷ್ಟು ಶಾಲೆಗಳು ಕುಡಿಯುವ ನೀರಿನಿಂದ ಹಾಗೂ 8,389 ಶಾಲೆಗಳು ಶೌಚಾಲಯ ವ್ಯವಸ್ಥೆಗಳಿಂದ ವಂಚಿತವಾಗಿವೆ. ಸರ್ಕಾರಿ ವಿಲೀನಿಕರಣದ ಹೆಸರಿನಲ್ಲಿ ಶಾಲೆಗಳನ್ನು ಮುಚ್ಚ ಹೊರಟಿದೆಯೇ ವಿನಃ ಅದಕ್ಕೆ ಬದಲಾಗಿ ಮುಚ್ಚಿದ ಅಷ್ಟೆ ಸಂಖ್ಯೆ ಶಾಲೆಗಳನ್ನು ಬೇರೆಡೆ ತೆರೆಯುತ್ತಿಲ್ಲ ಎಂಬುದೆ ವಾಸ್ತವ.

ಸರ್ಕಾರದ ಪಾಲಿಸಿಗಳು ಕಣ್ಣೊರೆಸುವ ತಂತ್ರಗಳಂತೆ ಕಂಡರೂ ಕಾರ್ಯ ರೂಪದಲ್ಲಿ ಕುತಂತ್ರವೇ ಆಗಿರುತ್ತವೆ. ಏಕೆಂದರೆ ಕಾನೂನು ಕಾಯ್ದೆಗಳೇನಿದ್ದರೂ ಶಾಲೆಗಳನ್ನು ಮುಚ್ಚುತ್ತಾ, ಶಿಕ್ಷಣ ನೀಡುವ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸರ್ಕಾರ ಇತ್ತ ಶಿಕ್ಷಣ ತರಬೇತಿ ಸಂಸ್ಥೆಗಳಾದ ಡಿ.ಇಡಿ, ಬಿ.ಇಡಿಗಳನ್ನು ವಿಫುಲವಾಗಿ ಸ್ಥಾಪಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ ಬೆಂಗಳೂರು ನಗರ ಒಂದರಲ್ಲಿಯೇ ಸುಮಾರು 138 ಬಿ.ಇಡಿ ಕಾಲೇಜುಗಳು, 100ಕ್ಕೂ ಹೆಚ್ಚು ಡಿ.ಇಡಿಗಳು ಇವೆ.

ಇಂತಹ ಗಂಭೀರ ವಿಚಾರಗಳಿಗೆ ಪ್ರತಿರೋಧ ಚಳವಳಿ ರೂಪಿಸಬೇಕಾದ ನಮ್ಮ ಸಾಹಿತಿ ವರ್ಗ ಕೇವಲ ಪ್ರಶಸ್ತಿ ಪುರಸ್ಕಾರದ ಸಂತೃಪ್ತಿಯಲ್ಲೇ ಮೈಮರೆತಿದೆ ವಿನಾಃ ಭವಿಷ್ಯದಲ್ಲಿ ಎದುರಾಗುವ ದೊಡ್ಡ ಅನಾಹುತವನ್ನು ಮರೆಯುತ್ತಿದೆ. ಇತ್ತೀಚೆಗೆ ಜ್ಞಾನಪೀಠ ವಿಜೇತರು ಹೈಕೋರ್ಟ್‌ನಲ್ಲಿ ಸರ್ಕಾರಿ ಶಾಲೆ ಮುಚ್ಚುವ ಕ್ರಮದ ವಿರುದ್ಧ ಪಿ.ಐ.ಎಲ್ ಸಾರ್ವಜನಿಕ ಹಿತಾಸಕ್ತಿ ಸಲ್ಲಿಸಿರುವುದು ಸ್ವಾಗತಾರ್ಹ. ವೇದಿಕೆ ಮತ್ತು ಮಾಧ್ಯಮಗಳ ಮುಂದೆ ಕನ್ನಡಕ್ಕೆ ಕುತ್ತು ಬಂದರೆ, ಸೆಟೆದು ನಿಲ್ಲುವ ಹೇಳಿಕೆ ನೀಡುವ ಡೋಂಗಿ ನಾಯಕರುಗಳು, ಉಪವಾಸ ತಜ್ಞರುಗಳು ವಾಸ್ತವದಲ್ಲಿ ಅವರ ಮಕ್ಕಳು, ಮೊಮ್ಮಕ್ಕಳುಗಳಿಗೆ ಕನ್ನಡ ಮಾಧ್ಯಮದಿಂದ ದೂರವಿರಿಸಿರುವುದು ಕಟು ಸತ್ಯ. ಅಲ್ಲದೆ ಯಾರೂ ಮಾದರಿ ಹೋರಾಟಗಾರರು ಇಲ್ಲದ ಈ ದಿನಗಳಲ್ಲಿ ಕನ್ನಡ ಉಳಿಸಿಕೊಳ್ಳುವುದು ದುಸ್ಸಾಹಸವೇ ಸರಿ. ಶಿಕ್ಷಣ ಕ್ಷೇತ್ರವನ್ನು ಗುತ್ತಿಗೆ ಪಡೆದವರಂತೆ ಸದಾ ಬೀದಿಗಳಿಯುತ್ತಿದ್ದ ಎ.ಬಿ.ವಿ.ಪಿ ಗಳು, ಧಿಡೀರನೇ ಮೌನ ವಹಿಸಿರುವುದು ಕೌತುಕ ವಿಚಾರವಾಗಿದೆ.

ಕನ್ನಡ ಉಳಿವಿಗಾಗಿ ರೂಪಿತವಾದ ಗೋಕಾಕ್ ವರದಿ (1980) ಮತ್ತು ಸರೋಜಿನಿ ಮಹಿಷಿ ವರದಿ (1986) ಗಳು ಭಾಷೆ, ಶಿಕ್ಷಣ ಮಾಧ್ಯಮ, ಉದ್ಯೋಗ, ಗಡಿರೇಖೆ ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಉನ್ನತ ವರದಿ ನೀಡಿದ್ದರೂ ಜಾಗತೀಕರಣ ಈ ವರದಿಗಳನ್ನು ಸವಕಲನ್ನಾಗಿಸಿದೆ. ಕನ್ನಡ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಅದೇ ವೇಳೆಗೆ ಆಂಗ್ಲಭಾಷೆಯನ್ನು ಒಂದು ಭಾಷೆಯನ್ನಾಗಿ ಪ್ರಾಥಮಿಕ ಹಂತದಿಂದಲೇ ಪ್ರಾರಂಭಿಸುವುದು ಐ.ಸಿ.ಎಸ್.ಇ ಮತ್ತು ಸಿ.ಬಿ.ಎಸ್.ಇ ಪಠ್ಯಕ್ರಮ ಓದುವಿನ ವಾತಾವರಣ ವಿಸ್ತರಿಸುವುದು ರಾಜ್ಯಾದ್ಯಂತ ಏಕರೂಪಿ ಶಿಕ್ಷಣದ ಹಿನ್ನೆಲೆಯಲ್ಲಿ ಕನಿಷ್ಠ 12ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ನೀಡುವುದು. ಅದೇ ವೇಳೆಗೆ ಖಾಸಗಿಯವರಿಗೆ ಇನ್ನು ಮುಂದೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆ ತೆರೆಯಲು ಪರವಾನಗಿ ನಿರಾಕರಿಸುವುದು ಅಗತ್ಯವಾದ ಕ್ರಮವಾಗಿದೆ. ಇಲ್ಲವಾದಲ್ಲಿ ಇಂದು ಪ್ರಾಥಮಿಕ ಶಾಲೆಗೆ ಬಂದಿರುವ ಕುತ್ತು, ನಾಳೆ ಪ್ರೌಢಶಾಲೆಯನ್ನೊಳಗೊಂಡ ಉನ್ನತ ಶಿಕ್ಷಣವೆಲ್ಲವೂ ಸಂಪೂರ್ಣವಾಗಿ ಖಾಸಗಿಯವರ ಕೈ ಸೇರಿ ಕನ್ನಡವು ಕಣ್ಮರೆಯಾಗುವ ಕಾಲ ಬಹುದೂರವಿಲ್ಲ. ■

ಹೊಸ ಪುಸ್ತಕ

ಮುಸ್ಲಿಂ ಮಹಿಳಾ ಸಂವೇದನೆ

ಲೇ: ಡಾ॥ ಕೆ. ಷರೀಫಾ

ಬೆಲೆ: ರೂ. 150/-

ಇಸ್ಲಾಂ ಧರ್ಮ ಮೂಲದಲ್ಲಿ ಮಹಿಳೆಗೆ ಕೊಡುವ ಸ್ಥಾನವೇನು, ಆಳುವ ವರ್ಗ, ಧರ್ಮದ ತಪ್ಪು ವ್ಯಾಖ್ಯಾನಗಳು ಮಹಿಳಾ ಶೋಷಣೆಗೆ ಹೇಗೆ ಕಾರಣವಾಗಿವೆ ಎಂಬ ವಿಚಾರಗಳನ್ನು ಇಲ್ಲಿ ಒರೆಗೆ ಹಚ್ಚಲಾಗಿದೆ. ಅಲ್ಪಸಂಖ್ಯಾತ ಸಮುದಾಯದ ಲೇಖಕರ ಅಭಿವ್ಯಕ್ತಿ, ಸಾಧ್ಯತೆಗಳ ಹಿಂದಿರುವ ಒತ್ತಡ, ಆತಂಕ, ತಲ್ಲಣಗಳನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಐದು ಮುಸ್ಲಿಂ ಲೇಖಕರ ಚಿಂತನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೃತಿಯುದ್ದಕ್ಕೂ ಅಲ್ಪಸಂಖ್ಯಾತರ ಚಾರಿತ್ರಿಕ ಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸಿ ಒಂದು ಕಡೆ ದಾಖಲಿಸಿರುವುದು ಈ ಕೃತಿಯ ಹೆಗ್ಗಳಿಕೆಯಾಗಿದೆ.

ಪ್ರ: ಅಂಕಿತ ಪುಸ್ತಕ, ಬೆಂಗಳೂರು





ಗೂಡು ಕಟ್ಟಿದ ಹಕ್ಕಿ

ಲೇ: ಡಾ॥ ವೆಂ. ಶ್ರೀನಿವಾಸಮೂರ್ತಿ

ಬೆಲೆ: ರೂ.50/-

ಕನ್ನಡ ನಾಡು-ನುಡಿ, ಪ್ರೀತಿ-ಪ್ರೇಮ, ಒಲುಮೆ-ಕರುಣೆ, ಕಕ್ಕುಲತೆ, ಬಂಡಾಯ, ಹೋರಾಟ, ಚಿಂತನೆ- ಹೀಗೆ ನಾನಾ ವಿಷಯಗಳಿಂದ ಈ ಸಂಕಲನದಲ್ಲಿ ಅಡಕವಾಗಿರುವ ಕವಿತೆಗಳು ಸೃಜನಶೀಲತೆಯಿಂದ ಕೂಡಿವೆ. ವಸ್ತು ವೈವಿಧ್ಯದೊಂದಿಗೆ, ತಕ್ಕಭಾಷೆ ಹಾಗೂ ಛಂದದ ನುಡಿಗಳಲ್ಲಿ ಆಕಾರ ಪಡೆದಿರುವ ಈ ರಚನೆಗಳು ತಮ್ಮ ಗೇಯ ಗುಣದಿಂದ ಮನಮುಟ್ಟುವಂತಿವೆ. ಭಾವಗೀತಾ ಪ್ರಕಾರಕ್ಕೆ ಮತ್ತೆ ಹೊಸ ಹುಮ್ಮಸ್ಸನ್ನು, ನುಡಿಕಟ್ಟನ್ನು ಒದಗಿಸುವ ಒಂದು ಒಳ್ಳೆಯ ಪ್ರಯತ್ನ ಇಲ್ಲಿ ನಡೆದಿದೆ.

ಪ್ರ: ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.



ಕಡಲಾಚೆಯ ಚೆಲುವೆ

ಲೇ: ಕೇಶವ ಮಳಗಿ

ಬೆಲೆ: ರೂ. 120/-

ಫ್ರೆಂಚ್ ಕಥಾ ಸಾಹಿತ್ಯವನ್ನು ಪರಿಚಯಿಸುವ ಈ ಕೃತಿಯು ಇಪ್ಪತ್ತೆರಡು ಲೇಖಕರ, ವಿವಿಧ ಪ್ರಕಾರಗಳಿಗೆ ಸೇರಿದ ಇಪ್ಪತ್ತೇಳು ಮಾದರಿಗಳನ್ನು ಒಳಗೊಂಡಿದೆ. ಕಥೆ, ಕಾದಂಬರಿಯ ಆಯ್ದ ಭಾಗ, ಪ್ರಬಂಧ, ಆತ್ಮಕಥೆಯ ಭಾಗ-ಹೀಗೆ ಜೀವನ ದೃಷ್ಟಿಯನ್ನು ಅರಿಯಲು ಸಹಾಯಕವಾಗಬಲ್ಲ ಸಾಹಿತ್ಯ ಇಲ್ಲಿದೆ. ಈ ಸಂಕಲನದ ಮುಸ್ಲಿಂ ಲೇಖಕಿಯರ ಕಥೆಗಳು ಹೊಸ ಲೋಕವನ್ನೇ ತೆರೆದಿಡುತ್ತವೆ. ಕನ್ನಡ ಸಂವೇದನೆಗೆ ಹೊಸ ಸಂವೇದನೆಯನ್ನು ಸೇರಿಸುವುದರ ಜತೆಗೆ ಅರಿವಿರದ ಜನ ಮತ್ತು ಜಗತ್ತುಗಳನ್ನು ಪರಿಚಯಿಸುವುದರಲ್ಲಿ ಸಫಲವಾಗಿದೆ.

ಸಂಕಥನ

ಲೇ: ಕೇಶವ ಮಳಗಿ

ಬೆಲೆ: ರೂ. 120/-

ಕನ್ನಡ ನುಡಿಯ ಜ್ಞಾನವನ್ನು ವಿಸ್ತರಿಸುವಲ್ಲಿ, ಹೊಸ ಚಿಂತನೆಗೆ ಅವಕಾಶವನ್ನು ಕಲ್ಪಿಸುವಲ್ಲಿ ಫ್ರೆಂಚ್ ವಿಚಾರಧಾರೆಯ ಕಾಣ್ಕೆ ಅನನ್ಯವಾದದ್ದು. ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ್ದೆಂದು ಗುರುತಿಸುವ ಇಪ್ಪತ್ತೊಂದು ಲೇಖಕರ ಮೂವತ್ತು ಬರಹಗಳನ್ನು ಇಲ್ಲಿ ಸಮರ್ಥವಾಗಿ ಕನ್ನಡೀಕರಿಸಲಾಗಿದೆ. ಸಮಾಜ, ಸಂಸ್ಕೃತಿ, ಸಾಹಿತ್ಯ ಹಾಗೂ ಫ್ರೆಂಚ್ ಭಾಷೆಯ ವೈಚಾರಿಕತೆಯನ್ನು ಅಧ್ಯಯನ ಮಾಡಬಯಸುವವರಿಗೆ ಬೌದ್ಧಿಕ ಚೌಕಟ್ಟನ್ನು ಒದಗಿಸುವಲ್ಲಿ ಈ ಕೃತಿ ಮಾದರಿಯಾಗಿದೆ. ಈ ಎರಡೂ ಕೃತಿಗಳ ಅನುವಾದ ಕನ್ನಡದ ಜಾಯಮಾನಕ್ಕೆ ಒಗ್ಗುವಂತಿದ್ದು ಇನ್ನೊಂದು ಬಗೆಯ ಜೀವನ ದೃಷ್ಟಿಯನ್ನು ಅರಿಯಲು ಸಹಕಾರಿಯಾಗಿದೆ.

ಈ ಎರಡೂ ಪುಸ್ತಕಗಳ ಪ್ರಕಾಶಕರು: ಕಥನ, ಬೆಂಗಳೂರು.

ಇಗೋ ಅರಿವೆ

ಲೇ: ವಸಂತ ಬನ್ನಾಡಿ

ಬೆಲೆ: ರೂ. 100/-

ಇಲ್ಲಿನ ಪ್ರೇಮ ಕವಿತೆಗಳು ಸಂಕೀರ್ಣ ಬದುಕಿನಲ್ಲೂ ಅದಮ್ಯ ಜೀವನ ಪ್ರೇಮವನ್ನು ಹಾಗೂ ಚೈತನ್ಯವನ್ನು ಉಕ್ಕಿಸುವಲ್ಲಿ ಸಫಲವಾಗಿವೆ. ಕಾವ್ಯದ ಕುರಿತ ಎಂದಿನ ಕಲ್ಪನೆಗಳನ್ನು ಒಡೆದು ಕಟ್ಟಿದಂತಿರುವ ಈ ಕವನಗಳಲ್ಲಿ ಸೃಜನಶೀಲತೆ ಹಾಗೂ ವೈಚಾರಿಕತೆ ಎದ್ದು ಕಾಣುವ ಅಂಶವಾಗಿದೆ. ಪಾಶ್ಚಾತ್ಯ ಸಾಹಿತ್ಯದ ದಟ್ಟ ಪ್ರಭಾವದಿಂದ ಪರಿಣಾಮ ಕಾರಿಯಾಗಿ ಮೂಡಿ ಬಂದಿರುವ ಬರಹ ಭಾಷೆಯನ್ನು ಹೇಗೆ ದುಡಿಸಿಕೊಳ್ಳಬೇಕು ಎಂಬುದಕ್ಕೆ ಮಾದರಿಯಂತಿದೆ.

ಪ್ರ: ತಿಂಗಳ ಬೆಳಕು ಪ್ರಕಾಶನ, ಕುಂದಾಪುರ



ಕಳ್ಳೀಹಾಲು

ಲೇ: ಈರಪ್ಪ ಎಂ. ಕಂಬಳಿ

ಬೆಲೆ: ರೂ. 100/-

ಪ್ರಬಂಧಗಳ ಪ್ರಾಕಾರದ ಪರಂಪರೆಯನ್ನು ಶಕ್ತವಾಗಿ ಮುಂದುವರೆಸುವ ನಿಟ್ಟಿನಲ್ಲಿ ಇಲ್ಲಿನ ಬರಹಗಳು ಚೇತೋಹಾರಿಯಾಗಿವೆ. ಸಿನಿಮಾ ದೃಶ್ಯಗಳು, ಉರ್ದು ಶಾಯಿರಿಗಳು, ನಾಟಕದ ಪ್ರಸಂಗಗಳು, ಕನ್ನಡ ಕಾವ್ಯದ ಭಾಗಗಳು, ರೈತಾಪಿ ಬದುಕಿನ ವಿದ್ಯಮಾನಗಳು ಬದುಕನ್ನೂ ಹಾಗೂ ಮನುಷ್ಯರ ವರ್ತನೆಯನ್ನೂ ಸೂಕ್ಷ್ಮವಾಗಿ ಗ್ರಹಿಸಿ ರೂಪು ಪಡೆದ ವಿವರಗಳು ದಾರ್ಶನಿಕ ಆಯಾಮವನ್ನು ಪಡೆದಿವೆ. ಹೊಚ್ಚಹೊಸತಾದ ಉಪಮೆಗಳಿಂದಾಗಿ ಈ ಪ್ರಬಂಧಗಳು ಜೀವಂತಿಕೆಯಿಂದ ಕೂಡಿವೆ.

ಪ್ರ: ಚಾರ್ವಾಕ ಪ್ರಕಾಶನ, ಬೆಂಗಳೂರು

ಅಲೆಮಾರಿ ಬುಡ್ಗಜಂಗಮರು ಬಹಿರಂಗ ಚರ್ಚೆಗೆ ಆಹ್ವಾನ...

ಡಾ. ಬಾಲಗುರುಮೂರ್ತಿ

'ಅಲೆಮಾರಿಗಳು ಒಂದು ಭಿನ್ನವಾದ' ಲೇಖನ ಬರೆದ ಮಾನ್ಯ ಪಂಡಿತಾರಾಧ್ಯರ ಅಭಿಪ್ರಾಯಗಳು ಅವರೊಬ್ಬರದೇ ಅಲ್ಲ, ಕೆಲವು ದಶಕಗಳಿಂದ ಅಲೆಮಾರಿ ಬುಡ್ಗಜಂಗಮ(ಜಂಗಾಲರ) ಮೀಸಲಾತಿಯನ್ನು ವಂಚಿಸುತ್ತಾ ಮತ್ತು ಅದನ್ನು ಸಮರ್ಥಿಸಿಕೊಳ್ಳಲು ತಮ್ಮ ಸಮುದಾಯದ ಬದುಕು 'ದೀನ ಚರಿತ್ರೆ' ಎಂದು ದುಃಖಿಸುವ ಪಂಡಿತಾರಾಧ್ಯರಿಗೆ ಈ ದೇಶದ ದಲಿತರ, ಅಲೆಮಾರಿಗಳ ಬದುಕು ನೆನಪಿಗೂ ಬರುತ್ತಿಲ್ಲಾ.

ಅತ್ಯಂತ ವ್ಯವಸ್ಥಿತವಾಗಿ ರಾಜಕೀಯ ಷಡ್ಯಂತ್ರಗಳನ್ನು ಬಳಸುತ್ತಾ – ಹೂರಣವಿಲ್ಲದ ದಾಖಲೆಗಳನ್ನು ತೋರಿಸುತ್ತಾ ಈಗಾಗಲೇ ಖೊಟ್ಟಿ ಸಾವಿರಾರು ಜಾತಿಪತ್ರಗಳನ್ನು ಪಡೆದು ಸರ್ಕಾರಿ ಉದ್ಯೋಗದಲ್ಲಿರುವವರನ್ನು ರಕ್ಷಿಸಲು ಎಲ್ಲ ರೀತಿಯ ಒತ್ತಡಗಳನ್ನು ಸೃಷ್ಟಿಸುತ್ತಾ, ಅಲೆಮಾರಿಗಳ ಮೀಸಲಾತಿ ಜಂಗಮರಿಗೆ ಬೇಡ ಎನ್ನುವವರಿಗೆ ಬೆದರಿಸುತ್ತಾ ಎಲ್ಲ ಸಂಶೋಧಕರ ಅಭಿಪ್ರಾಯವನ್ನು ಲೇವಡಿ ಮಾಡುತ್ತಿರುವ ಒಂದು ಗುಂಪಿನ ಕಾನೂನು ತಗ್ನರಲ್ಲಿ ಒಬ್ಬರಾದ ಪಂಡಿತಾರಾಧ್ಯರ ಲೇಖನಕ್ಕೆ ಪ್ರತಿಕ್ರಿಯೆ ನೀಡುವುದು ಸಹ ಮಾನವೀಯವಾದುದಲ್ಲಾ.

ಗೇಣಿಕಾಯ್ದೆಯ ಸಂದರ್ಭದಲ್ಲಿ ದಲಿತನಿಗೆ ಭೂಮಿ ಬಿಟ್ಟುಕೊಡದೆ ಹೆದರಿಸುವ ಜಮೀನ್ದಾರನ ಕತೆ ನೆನಪಾಗುತ್ತದೆ. ಇದಕ್ಕೆ ಮುಖ್ಯಕಾರಣ ಸಾಮಾಜಿಕ ಶ್ರೇಣೀಕರಣದ ಇತಿಹಾಸ...

ಐಡೆಂಟಿಟಿಗಾಗಿ ಲೇಖನ ಬರೆದಿದ್ದಾರೆ' ಎಂದು ಹೇಳುವುದು ಅವರ ಮನಸ್ಸಿನ ಪಾಪಪ್ರಜ್ಞೆ ಇರಬೇಕು.

ತೆಲುಗು ಸಾಹಿತ್ಯದಲ್ಲಿ ಪ್ರೊ|| ಬಿ. ಭೀಮರಾಜುರವರು ಬುಡ್ಗಜಂಗಮರನ್ನು ವಿವರಿಸುತ್ತಾ.. " Those who tell stories with the help of Budiga (Leather Mounted pot) instruments are called Budgajagama or Jangaligas' ಮರಯೂರು ಕೋದಂಡರಾಮರೆಡ್ಡಿ ತಮ್ಮ ಕೃತಿ 'ಮಂಡಲಿದ ಪದಕೋಶ'ದಲ್ಲಿ ಬುಡ್ಗಜಂಗಾಲರೆಂದರೆ ಯಾರೆಂದು ದೀರ್ಘವಾಗಿ ವಿವರಿಸುತ್ತಾರೆ.

ಎಡ್ಗರ್‌ಥರ್ಸ್ಟನ್‌ನ ಅಭಿಪ್ರಾಯದಲ್ಲಿ BudgaJagama are 'A' class of Telugu beggars who put in disguises (VESHAM) while begging at the annual festival of Thirupathi in honour of the godess gangamma, These disguises include those of a Bairagi, sespent etc.

ಮಾನ್ಯ ಎಲ್.ಜಿ.ಹಾವನೂರ ರವರು ಹಗಲುವೇಷದ ಬುಡ್ಗಜಂಗಮರು ಅತ್ಯಂತ ಹಿಂದುಳಿದವರೆಂದು ದಾಖಲಿಸುತ್ತಾರೆ, ನಾಗನ ಗೌಡರ ಕಮಿಷನ್ ವರದಿ ಇದನ್ನು ಹೇಳುತ್ತದೆ.

ಬಹಳ ಮುಖ್ಯವಾಗಿ Anthropological survey of Indiaದ ನಿರ್ದೇಶಕರಾದ

ಶೇಕಡ ತೊಂಬತ್ತಕ್ಕೂ ಹೆಚ್ಚಿನ ಜಂಗಮರು ನಮ್ಮ ಮೀಸಲಾತಿಯನ್ನು ವಂಚಿಸುವ ಪ್ರಯತ್ನ ಮಾಡಿಲ್ಲ. ಆದ್ದರಿಂದ ಆ ಸಮುದಾಯದ ಬಗ್ಗೆ ಗೌರವವಿದೆ. ಆದರೆ ಒಂದು ಗುಂಪು ಇಂತಹ ಪ್ರಯತ್ನ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಒಂದು ಹಂತಕ್ಕೆ ತಮ್ಮ ಧಾರ್ಮಿಕ ಜಗದ್ಗುರುಗಳ ಪ್ರಭಾವದಿಂದ ರಾಷ್ಟ್ರಪತಿಯವರ ಬಳಿಗೆ ನಿಯೋಗ ಹೋಗಿ ಮೀಸಲಾತಿಗಾಗಿ ಹೋರಾಡುತ್ತಿರುವುದು ತಿಳಿದಿದೆ. ಇಂತಹ ಬಲಿಷ್ಠ ಗುಂಪಿನ ಪ್ರಭಾವದಲ್ಲಿ ಅಲೆಮಾರಿ ಬುಡ್ಗಜಂಗಮ, ಜಂಗಾಲರ ಕೈಹಿಡಿಯ ಬೇಕಾದವರು ಅಂಬೇಡ್ಕರ್ ಪ್ರಜ್ಞೆಯ ಸಾಮಾಜಿಕ ನ್ಯಾಯದ ವಾರಸುದಾರರು.

ಇವರಿಗೆ ಕ್ಷೇತ್ರ ಅಧ್ಯಯನ–ಮಾನವ ಶಾಸ್ತ್ರಜ್ಞರ ವರದಿಗಳು, ಸಾವಿರಾರು ದಾಖಲೆಗಳು, ಮಾನ್ಯ ನ್ಯಾಯಾಲಯಗಳ ಆದೇಶಗಳು ಗೌಣವಾಗಿ ಕಾಣುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ 1994ರಲ್ಲಿ ಆಂಧ್ರ ಹೈಕೋರ್ಟಿನ ದಾಖಲಾತಿ ಸಂಖ್ಯೆ No 19083 – 1994ರಲ್ಲಿ ಮಾನ್ಯ ಉಚ್ಚನ್ಯಾಯಾಲಯ ತೀರ್ಪಿನಲ್ಲಿ Jangamas are purely vegetarians like Brahmins and vysyas, They are gurus of saivitesácts, ಎಂದು ಜಂಗಮರನ್ನು ವಿವರಿಸುತ್ತಾ ಬೇಡ, ಬುಡ್ಗಜಂಗಮರೆಂದರೆ "To tell stories and recites some legends i.e. Burrakathalu known are Jangamkathalu. They use Thambura and Budga.

ಆದರೆ ಪಂಡಿತಾರಾಧ್ಯರು ಇಂತಹ ನ್ಯಾಯಾಲಯದ ತೀರ್ಪುಗಳನ್ನು ಕುರಿತು ತುಟಿಬಿಚ್ಚದೇ 'ಬಾಲಗುರುಮೂರ್ತಿಯವರು ತಪ್ಪು ಮುಚ್ಚಿಕೊಳ್ಳುವ – ವೈಯಕ್ತಿಕ

ಕೆ.ಎಸ್.ಸಿಂಗ್‌ರವರು ಬೇಡ, ಬುಡ್ಗಜಂಗಮರು ಯಾರೆಂದು ವಿವರಿಸುತ್ತಾ ಹೆಂಡ ಕುಡಿಯುವ ಮಾಂಸಹಾರಿಗಳಾದ ಬೇಡ, ಬುಡ್ಗಜಂಗಮರ ಬೆಡಗುಗಳನ್ನು ಸಹ ಹೆಸರಿಸುತ್ತಾರೆ. ಶೈವ ಅನುಯಾಯಿಗಳಾದ ನಮ್ಮ ಅಲೆಮಾರಿ ಬುಡ್ಗಜಂಗಮರ ಬೆಡಗುಗಳು ವೀಭೂತಿ, ರುದ್ರಾಕ್ಷಿ, ಘಂಟಿ, ಪತ್ರಿ, ಗಂಧಂ, ಧೂಪ, ಕೊಂಡಪಲ್ಲಿಯಂತಹ ನೂರಾರು ಬೆಡಗುಗಳಲ್ಲಿ ಕೆಲವನ್ನು ಮಾನವ ಸರ್ವೇಕ್ಷಣಾ ವರದಿಯಲ್ಲಿ ದಾಖಲಿಸಿದೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನಲ್ಲಿ VeerashivaJangamas are not Beda Jangama ಎಂದು 1996ರಲ್ಲಿ ದಾಖಲಾತಿ ಸಂಖ್ಯೆ 431, civil apparel No 4247 of 1995, derided on April 23–1996ರಲ್ಲಿ ತೀರ್ಪು ನೀಡಿದೆ.

ಇದರ ಜೊತೆಗೆ ಬೇಡ, ಬುಡ್ಗಜಂಗಮರ ಬಗ್ಗೆ ಹೊರಬಂದಿರುವ –

ದಾಖಲಿಸಿರುವ ಹಲವು ಸರ್ಕಾರಿ ದಾಖಲಾತಿಗಳು – ನ್ಯಾಯಾಲಯದ ತೀರ್ಪುಗಳು – ಸಂಶೋಧನಾ ಬರಹಗಳು ಪಂಡಿತಾರಾಧ್ಯರ ಅಭಿಪ್ರಾಯಗಳನ್ನು ತಿರಸ್ಕರಿಸುತ್ತವೆ. ಆಂಧ್ರದಲ್ಲಿ ಜಂಗಮ ವಿದ್ಯಾರ್ಥಿ ಬೇಡಜಂಗಮ ಜಾತಿ ಪತ್ರ ಪಡೆದು IAS ಅಧಿಕಾರಿಯಾಗಿ ಈಗ ವಜಾ ಆಗಿರುವ ನ್ಯಾಯಾಲಯದ ಆದೇಶ ಐತಿಹಾಸಿಕವಾಗಿದೆ.

ವಿಸ್ಮಯದ ಸಂಗತಿ ಎಂದರೆ 1995ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರಾದ ರಾಜೇಂದ್ರ ಬಾಬುರವರು ಜೆ.ಎಚ್.ಪಟೇಲ್ ಸರ್ಕಾರದಿಂದ ಲಿಂಗಾಯಿತ ಜಂಗಮರು ಪಡೆದ ಸುಳ್ಳು ಜಾತಿ ಪತ್ರದ ವಿರುದ್ಧ ಚಾಟಿ ಬೀಸಿದೆ ಮತ್ತು ಅದರ ತನಿಖೆಗೆ ತಡೆಯಾಜ್ಞೆ ನೀಡಿತು. ಆದರೆ ಅದೇ ತೀರ್ಪಿನ ಕೊನೆಯ ಪ್ಯಾರಾದಲ್ಲಿ ಯಾವುದೇ ಜಾತಿಪ್ರಮಾಣ ಪತ್ರದ ಸಿಂಧುತ್ವ 'ಜಾತಿ ಪರಿಶೀಲನ ಸಮಿತಿ'ಯ ತೀರ್ಮಾನವನ್ನು ಆಧರಿಸುತ್ತದೆ ಎಂದು ಹೇಳಿರುವುದನ್ನು ನಮ್ಮ ಪಂಡಿತಾರಾಧ್ಯರು ಹೇಳುವುದಿಲ್ಲ. ಮತ್ತು ವಿಸ್ಮಯದ ಸಂಗತಿ ಎಂದರೆ "ಸೂರ್ಯನಾಥ್ ಕಾಮತ್'ರ ಗೆಜೆಟಿಯರ್‌ನ ವರದಿ ಸರ್ಕಾರವನ್ನು ಮೂಕಗೊಳಿಸಿತು. ಜನ ಮೌನಕ್ಕೆ ಶರಣಾದರು, ಅಧಿಕಾರಿಗಳು ಅಪರಾಧಿ ಮನೋಭಾವದಿಂದ ತಣ್ಣಗಾದರು" ಎಂಬ ಪಂಡಿತಾರಾಧ್ಯರ ಉತ್ಪ್ರೇಕ್ಷೆಯ ಹೇಳಿಕೆ ಅತ್ಯಂತ ಬಾಲಿಶವಾದುದಾಗಿದೆ.

ಸೂರ್ಯನಾಥ್ ಕಾಮತ್‌ರ ಗೆಜೆಟಿಯರ್‌ನ ವರದಿ ಎಲ್ಲ ಸಂಶೋಧಕರ Anthropological ವರದಿಗಳನ್ನು ತಿರಸ್ಕರಿಸಲು ಸಾಧ್ಯವೆ? ಲಿಂಗಾಯಿತ ಜಂಗಮ ಸೋದರರು ಗಟ್ಟಿಯಾಗಿ ಹಿಡಿದಿರುವ ಆಗಾಗ್ಗೆ ಎಲ್ಲ ಕಡೆ ದಾಖಲಿಸುವ ವರದಿ 'ಸೂರ್ಯನಾಥ್ ಕಾಮತ್‌ರ ವರದಿ'. ಅದು ಲಿಂಗಾಯಿತ ಜಂಗಮರು, ಬೇಡಜಂಗಮರೆಂದು ಕೆಲವು ಕಡೆ ಕಂಡು ಬರುತ್ತಾರೆ. ಎಂದು ಹೇಳುತ್ತಾರೆ. ಆದರೆ ತೆಲುಗು ಮೂಲದ ಅಲೆಮಾರಿ ಬುಡ್ಗಜಂಗಮರು ಈ ಪ್ರವೇಶದಲ್ಲಿ ಕಂಡು ಬರುವುದಿಲ್ಲ ಎಂದು ತಮ್ಮದೇ ಗೆಜೆಟಿಯರ್‌ನ ವರದಿಯಲ್ಲಿ ದಾಖಲಿಸಿದ್ಯಾಕೆ? ಅಲ್ಲಿಗೆ ಈ ವರದಿ ಅಸಂಪೂರ್ಣ ಮತ್ತು ಅಡ್ಡಗೋಡೆಯ ಮೇಲಿನ ದೀಪವಾಯಿತು. ಆದರೆ ತೆಲುಗು ಮೂಲದ ಅಲೆಮಾರಿ ಬುಡ್ಗಜಂಗಮರು ಈ ಪ್ರದೇಶದಲ್ಲಿ ಕಂಡು ಬರುವುದಿಲ್ಲ ಎಂಬ ಕಾಮತ್‌ರ ಅಭಿಪ್ರಾಯವನ್ನು ನಮ್ಮ ಜಂಗಮ ವಕೀಲರು ಉದ್ದೇಶಪೂರ್ವಕವಾಗಿ ಹೇಳುವುದಿಲ್ಲ.

ಅದಿರಲಿ Antnropological Survey of India ಮತ್ತೆ ಬೇಡ, ಬುಡ್ಗಜಂಗಮರನ್ನು ಪುನರ್ ಅಧ್ಯಯನ ಮಾಡಿ ಬೇಡ ಎಂದರೆ ಬೇಟೆಗಾರನೆಂದು ಬುಡ್ಗ ಎಂದರೆ ಅಲೆಮಾರಿಗಳ ಸಂಗೀತ ಉಪಕರಣವೆಂದು–ಮಾಂಸಹಾರಿಗಳೆಂದು ತಮ್ಮ ಪುನರ್ ಅಧ್ಯಯನದಲ್ಲಿ ದಾಖಲಿಸಿರುವುದು ಜಂಗಮರಿಗೆ ನುಂಗಲಾರದ ತುತ್ತಾಗಿದೆ. ಜಂಬಲಮ್ಮ, ಸುಂಕಲಮ್ಮ, ಗಂಗಮ್ಮ, ಮಾರಮ್ಮ, ರಾಮಲಮ್ಮ, ಭೂತಪ್ಪ ಮುಂತಾದ ದೇವರುಗಳನ್ನು ಪೂಜಿಸುತ್ತಾ ಟೆಂಟುಗಳಲ್ಲಿ ಬದುಕುವ, ಬೇಟೆಯಾಡುವ, ಭಿಕ್ಷೆಗೆ ಖಾವಿ ಬಟ್ಟೆ ಉಡುವ ಆದರೆ ಲಿಂಗ ಧರಿಸದ, ಯಾರಿಗೂ ದೀಕ್ಷೆ ನೀಡದ, ಯಾವುದೇ ಪೀಠಗಳಿಲ್ಲದ ಅಸ್ಪೃಶ್ಯರಾದ ಅಲೆಮಾರಿ ಬುಡ್ಗಜಂಗಮ, ಜಂಗಾಲಿಗರಿಗೂ ಮತ್ತು ಸ್ಪೃಶ್ಯ, ಸಾಮಾಜಿಕವಾಗಿ ಲಿಂಗಾಯಿತರ ಪುರೋಹಿತರಾದ, ಗುರುಗಳಾದ ಜಂಗಮರು; ಸಸ್ಯಾಹಾರಿಗಳು, ಕಡ್ಡಾಯವಾಗಿ ಲಿಂಗದೀಕ್ಷೆ ಪಡೆಯುವವರು, ಉಜ್ಜಯಿನಿ, ಶ್ರೀಶೈಲ, ಕೇದಾರ, ಕಾಶಿಯಂತಹ ಪೀಠಗಳನ್ನು ಹೊಂದಿರುವವರು. ಕನ್ನಡ ಮಾತನಾಡುವ ಕೇವಲ ಸೋಮವಾರ ಮತ್ತು ಪವಿತ್ರ ದಿನಗಳಂದು ಧಾರ್ಮಿಕವಾಗಿ ಬೇಡುವ ಈ ಜಂಗಮರನ್ನು ಪಾದ ಪೂಜೆ ಮಾಡಲಾಗುತ್ತದೆ.

'ಮಾಂಸಾಹಾರಿ' ಒಂದು ಜಾತಿಯನ್ನು ನಿರ್ಧರಿಸುವುದಿಲ್ಲ ಎಂದು ನ್ಯಾಯಾಲಯದ ತೀರ್ಮಾನವನ್ನು ಪದೇ ಪದೇ ಉಲ್ಲೇಖಿಸುವ ಜಂಗಮ ಪಂಡಿತರು ತಿಳಿಯಬೇಕಾದ್ದು ಏನೆಂದರೆ ಇಡೀ ಪರಿಶಿಷ್ಟ ಜಾತಿ ವರ್ಗದ ಪಟ್ಟಿಯಲ್ಲಿ ಮಾಂಸಾಹಾರವನ್ನು ಸಂಪೂರ್ಣ ವರ್ಜಿಸಿ ಸಸ್ಯಾಹಾರವನ್ನು ಘೋಷಿಸಿಕೊಂಡ ಯಾವುದೇ ಜಾತಿ ಇಲ್ಲ. ಆಹಾರ ಒಬ್ಬ ವ್ಯಕ್ತಿಯ ಆಯ್ಕೆಯಾಗಬಹುದು ಆದರೆ ಇಡೀ ಸಮುದಾಯ ಮಾಂಸಾಹಾರವನ್ನು ತ್ಯಜಿಸುವುದು ಸಾಧ್ಯವಿಲ್ಲ. ಇಲ್ಲಿಯೇ ಸಾಮಾಜಿಕ ಬದುಕಿನ ಗೋಚರತೆ ಶ್ರೇಣೀಕರಣದ ತಳದಲ್ಲಿನ ಅಸ್ಪೃಶ್ಯ ಅಲೆಮಾರಿ ಬುಡ್ಗಜಂಗಮರು ಇಲಿ, ಅಳಿಲು, ಹಾವು, ಆಮೆ, ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಅವರದೇ ಸಾಂಸ್ಕೃತಿಕ ಚರಿತ್ರೆ ಇದೆ.

ಇನ್ನು ನನ್ನ ಮೇಲೆ ವೈಯಕ್ತಿಕವಾಗಿ ಮಾನ್ಯ ಕೊಳದಮಠದ ಶಾಂತವೀರ ಸ್ವಾಮೀಜಿ RE ಸೆಲ್‌ಗೆ ದೂರು ನೀಡಿರುವುದು ಎಲ್ಲ ಸಂಘಟನೆಗಳಿಗೆ ತಿಳಿಸಿದ್ದೇನೆ. ನಿಜ ನೂರಾರು ವರ್ಷ ಅಕ್ಷರ ತಿಳಿಯದೆ ಇಂದಿಗೂ ಅಲೆಮಾರಿತನದಲ್ಲಿ ಬದುಕುತ್ತಿರುವ ನನ್ನ ಅಲೆಮಾರಿ ಜಗತ್ತಿಗೆ 'ಜಾತಿ' ತಿಳಿದೇ ಇಲ್ಲ. ನಮ್ಮ ಅಪ್ಪಂದಿರು ಹಾಕುವ ವೇಷಗಳನ್ನು ಜೈರಾಗಿ, ಜಂಗಾಲ, ಬುರ್ರ ಕಥೆಯವರು, ಹಗಲು ವೇಷದವರು, ಬಹುರೂಪಿಗಳು, ಭಿಕ್ಷುಕರು, ಕೊಂಡಮಾವಗಳೆಂದು ಜನಪದರು ಕರೆದರು. ಈ ವೇಷಗಳೇ ನಮ್ಮ ಶಾಲಾ ದಾಖಲಾತಿಗಳಲ್ಲಿ ಸೇರಿಹೋದವು. ಇನ್ನು ಕೆಲವು ಕಡೆ ಆದಿಕರ್ನಾಟಕ, ಆದಿದ್ರಾವಿಡ ಎಂತಲೂ ಬರೆಸಿಕೊಂಡಿದ್ದಾರೆ.

ಈಗ ಪ್ರಶ್ನೆ ಇರುವುದು ಶಾಲಾ ದಾಖಲಾತಿ ಆಧರಿಸಿ ಅಲೆಮಾರಿಗಳನ್ನು ನೇಣಿಗೆ ಹಾಕುವುದಿಲ್ಲ ಸ್ವಾಮಿ. "It is one of the evidences it alone doesn't decide our caste". ಹಾಗೆ ನೋಡಿದರೆ ಶಿಳ್ಳೆಕ್ಯಾತರನ್ನು – ಕಿಳ್ಳೆಕ್ಯಾತ, ಗೊಂಬೆರಾಮ ಎಂದು ದಾಖಲಿಸಲಾಗಿದೆ. ಅಂತಹದೇ ಐಡೆಂಟಿಟಿ ಸಮಸ್ಯೆ ಹಲವು ಅಲೆಮಾರಿ ಬುಡಕಟ್ಟುಗಳಿಗಿದೆ ಇದನ್ನು ತಿಳಿಯದೆ ನಮ್ಮ ಐಡೆಂಟಿಟಿ ಪ್ರಶ್ನಿಸುವ ಜಂಗಮರ ವಾದ ಪೂರ್ವಾಗ್ರಹವಾದುದು.

ಈಗ ಬಹಳ ಮುಖ್ಯವಾಗಿ ಈ ಐಡೆಂಟಿಟಿ ಸಮಸ್ಯೆಯನ್ನು ಪರಿಹರಿಸುವುದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ, ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗ, ಸರ್ಕಾರ, ಸಂಶೋಧಕರು, ಸಾಮಾಜಿಕ ನ್ಯಾಯವನ್ನು ಅನುಸಂಧಾನಿಸುವ ಸಂಘಟನೆಗಳು. ಇವರೆಲ್ಲ ಮನಸ್ಸು ಮಾಡಿದರೆ ಶಾಶ್ವತವಾದ ಕಾನೂನು ಪರಿಹಾರ ದೊರಕುವುದು ಕಷ್ಟವೇನಲ್ಲ.

ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಾಗಿದ್ದ ಕೆ.ಶಿವರಾಂ ರ ವಿರುದ್ಧವೇ ಈ ಜಂಗಮರ ಸಂಘಟನೆಗಳು ದೂರು ನೀಡಿದವು. ಅಲೆಮಾರಿ ಬುಡ್ಗಜಂಗಮರನ್ನು ಅರ್ಥಮಾಡಿಕೊಂಡು ಆದೇಶ ಹೊರಡಿಸಿದ ಅಧಿಕಾರಿಗಳ ವಿರುದ್ಧ ನೀಡಿದ ದೂರುಗಳೂ ಇವೆ.

ಹದಿನೈದು ವರ್ಷಗಳ ಸಾಮಾಜಿಕ ಕಾರ್ಯಕರ್ತನಾಗಿ ಅಲೆಮಾರಿಗಳ ಕ್ಷೇತ್ರ ಅಧ್ಯಯನದ ಅನುಭವದಲ್ಲಿ ಆಂಧ್ರ ಪ್ರದೇಶದಲ್ಲಿ ನಮ್ಮ ಮಾಲಿಗ ಬುಡ್ಗಜಂಗಮರ ಕುರಿತ ನೂರಾರು ದಾಖಲಾತಿಗಳಿವೆ. ಇದಕ್ಕಾಗಿ ಕೇಂದ್ರ ಸರ್ಕಾರ ಸಂಶೋಧನ ಸಮಿತಿ ನೇಮಿಸಲಿ. ಕ್ಷೇತ್ರ ಅಧ್ಯಯನದ ಜೊತೆಗೆ ಎಲ್ಲ ಮಾಹಿತಿ ನಮ್ಮಿಂದ ಪಡೆಯಲಿ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು, ಓಟ್‌ಬ್ಯಾಂಕಿಲ್ಲದ ಕೆಲವೇ ಕೆಲವು ಸಾವಿರದ ಈ ಅಲೆಮಾರಿಗಳ ಧ್ವನಿಯಾಗುವವರ್ಯಾರು. ಈಗ ತುರ್ತಾಗಿ ಪಂಡಿತಾರಾಧ್ಯರನ್ನು ಬುಡ್ಗಜಂಗಮರನ್ನು ಕುರಿತ ಬಹಿರಂಗ ಚರ್ಚೆಗೆ ಬರಲು 'ಸಂವಾದ' ಪತ್ರಿಕೆಯ ಮೂಲಕ ಕೋರುತ್ತೇವೆ. ಈ ಸಭೆಗೆ ಸಾಮಾಜಿಕ ನ್ಯಾಯದ ಸಂಶೋಧಕರು, ಕಾನೂನು ಪಂಡಿತರನ್ನು, ಪತ್ರಕರ್ತರನ್ನು ಆಹ್ವಾನಿಸುತ್ತೇವೆ. ಅವರು ನೀಡುವ ಅಭಿಪ್ರಾಯಕ್ಕೆ ಅಲೆಮಾರಿಗಳು ತಲೆಬಾಗುತ್ತೇವೆ, ಆದರೆ ಪಂಡಿತಾರಾಧ್ಯರು ಮತ್ತು ಅವರ ಬಳಗ ಬರಲು ಸಿದ್ದವಿದೆಯೆ?

ಮಾನ್ಯ ಚಿದಾನಂದಮೂರ್ತಿಗಳು, ಎಂ.ಎಂ.ಕಲ್ಬುರ್ಗಿಯಂತಹ ಖ್ಯಾತ ಸಂಶೋಧಕರು ವೀರಶೈವ ಜಂಗಮರು ಬೇಡ, ಬುಡ್ಗಜಂಗಮರಲ್ಲ ಎಂದು ಹಲವೆಡೆ ದಾಖಲಿಸಿ ಮುಕ್ತವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ಡಾ.ಕಲ್ಬುರ್ಗಿಯವರು ನಮ್ಮ ಅಲೆಮಾರಿ ಸಮಾವೇಶದಲ್ಲಿ ಅಲೆಮಾರಿಗಳ ಮೀಸಲಾತಿ ವಂಚಿಸಿದ ತನ್ನ ಸಮುದಾಯದ ಬಗ್ಗೆ ಬಹಿರಂಗ ಕ್ಷಮೆ ಕೇಳಿದರು. ಚಂಪ, ನಿಡುಮಾಮಿಡಿ ಸ್ವಾಮೀಜಿ, ಕೆ.ಎಂ.ಎಸ್. ಮುಂತಾದ ಹಲವರು ಜಂಗಮರಿಗೂ, ಅಲೆಮಾರಿಗಳಿಗೂ ಸಂಬಂಧವಿಲ್ಲ ಎಂದಿದ್ದಾರೆ. ಹೀಗ ಅಲೆಮಾರಿಗಳು ಎಚ್ಚರವಾಗಿದ್ದಾರೆ. ಕಾನೂನು ಹೋರಾಟಕ್ಕೆ ಸಿದ್ದವಿದ್ದೇವೆ.

ರಾಜ್ಯದ–ರಾಷ್ಟ್ರದ ಹಲವು ಸಂಶೋಧಕರು ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ದುರಂತವೆಂದರೆ ನ್ಯಾಯಾಲಯಗಳಲ್ಲಿ ಬೇಡ, ಬುಡ್ಗಜಂಗಮರ ಚರ್ಚೆಗಳಲ್ಲಿ ಲಿಂಗಾಯಿತ ಜಂಗಮರು–ಬೇಡ, ಬುಡ್ಗಜಂಗಮರೆಂದು ಅಥವಾ ಇಲ್ಲವೆಂದು ವಾದ ನಡೆಯುತ್ತದೆಯೆ ವಿನಾ ಹೀಗೆ ಅಲೆಮಾರಿಗಳ ಬುಡಕಟ್ಟು ಇದೆ ಎಂದು ನ್ಯಾಯಾಲಯಗಳ ಗಮನಕ್ಕೆ ಬಂದೇ ಇಲ್ಲಾ. ಇಲ್ಲಿ ಪರ, ವಿರೋಧದ ಚರ್ಚೆಗಳಲ್ಲಿ 'ಜಾತಿ' ಪ್ರಜ್ಞೆಯೆ ಕೆಲಸಮಾಡುತ್ತದೆ. ಇಂದಿಗೂ ಗ್ರಾಮ ಪಂಚಾಯ್ತಿ ಸದಸ್ಯನನ್ನು ಸೃಷ್ಟಿಸಲಾರದ ಈ ಅಲೆಮಾರಿಗಳಿಗೆ ರಾಜಕೀಯ ಶಕ್ತಿ ಇಲ್ಲದ ಕಾರಣ ಈ ದೇಶದಲ್ಲಿ ಅಲೆಮಾರಿಗಳು ಕತ್ತಲಲ್ಲಿ ಇದ್ದಾರೆ.

ಅಂತಿಮವಾಗಿ ಹೇಳುವುದೇನೆಂದರೆ ಶೇಕಡ ತೊಂಬತ್ತಕ್ಕೂ ಹೆಚ್ಚಿನ ಜಂಗಮರು ನಮ್ಮ ಮೀಸಲಾತಿಯನ್ನು ವಂಚಿಸುವ ಪ್ರಯತ್ನ ಮಾಡಿಲ್ಲ. ಆದ್ದರಿಂದ ಆ ಸಮುದಾಯದ ಬಗ್ಗೆ ಗೌರವವಿದೆ. ಆದರೆ ಒಂದು ಗುಂಪು ಇಂತಹ ಪ್ರಯತ್ನ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಒಂದು ಹಂತಕ್ಕೆ ತಮ್ಮ ಧಾರ್ಮಿಕ ಜಗದ್ಗುರುಗಳ ಪ್ರಭಾವದಿಂದ ರಾಷ್ಟ್ರಪತಿಯವರ ಬಳಿಗೆ ನಿಯೋಗ ಹೋಗಿ ಮೀಸಲಾತಿಗಾಗಿ ಹೋರಾಡುತ್ತಿರುವುದು ತಿಳಿದಿದೆ. ಇಂತಹ ಬಲಿಷ್ಠ ಗುಂಪಿನ ಪ್ರಭಾವದಲ್ಲಿ ಅಲೆಮಾರಿ ಬುಡ್ಗಜಂಗಮ, ಜಂಗಾಲರ ಕೈಹಿಡಿಯ ಬೇಕಾದವರು ಅಂಬೇಡ್ಕರ್ ಪ್ರಜ್ಞೆಯ ಸಾಮಾಜಿಕ ನ್ಯಾಯದ ವಾರಸುದಾರರು. ಹಲವಾರು ವರ್ಷಗಳಿಂದ ಕೊಳಕು ವಾದವನ್ನು ಮಂಡಿಸುವ ಪಂಡಿತಾರಾಧ್ಯರ ಬಳಗಕ್ಕೆ ಬಸವಪ್ರಜ್ಞೆ ಮೂಡಲಿ ಎಂದು ಹಾರೈಸುತ್ತೇವೆ. ■

ಕರ್ನಾಟಕದ ದಲಿತ ಚಳುವಳಿಯ ನಾಲ್ಕು ದಶಕಗಳ ಇತಿಹಾಸವನ್ನು ನೋಡಿದಾಗ ಅನೇಕಾನೇಕ ಮಹತ್ತರ ಸಾಧನೆಗಳ ನಡುವೆಯೂ ಇಡೀ ಚಳುವಳಿ ಇಂದು ಕವಲೊಡೆದು ನಿಂತಿರುವುದನ್ನು ಸರಳವಾಗಿ ವೈಫಲ್ಯವೆಂದು ಪರಿಗಣಿಸಲಾಗುವುದಿಲ್ಲ. ಸಂಘಟನಾತ್ಮಕ ವೈಫಲ್ಯಗಳು ಎಷ್ಟೇ ಇದ್ದರೂ ಸೈದ್ಧಾಂತಿಕ ಯಶಸ್ಸು ಇರುವೆಡೆ ಜನಾಂದೋಲನಗಳು ತಮ್ಮ ಮೂಲ ನೆಲೆಯನ್ನು ಕಳೆದುಕೊಳ್ಳುವುದಿಲ್ಲ. ದಲಿತ ಚಳುವಳಿಯನ್ನು ಕಾಡುತ್ತಿರುವ ಪ್ರಶ್ನೆಯೂ ಇದೇ ಆಗಿದೆ.

ಒಂದಾಗಬೇಕಿರುವುದು ಚಿಂತನೆಗಳು; ಸಂಘಟನೆಗಳಲ್ಲ

ನಾ ದಿವಾಕರ್

ನಾಲ್ಕು ದಶಕಗಳ ಸುದೀರ್ಘ ಹೋರಾಟ ಮತ್ತು ಸಂಘರ್ಷದ ನಂತರವೂ ಕರ್ನಾಟಕದ ದಲಿತ ಚಳುವಳಿ ಒಂದು ಸ್ಪಷ್ಟ ಆಯಾಮವನ್ನು ಪಡೆದುಕೊಳ್ಳದಿರುವುದು ಸಂಘಟನಾತ್ಮಕ ವೈಫಲ್ಯಗಳ ಪರಿಣಾಮವೇ ಆಗಿದೆ. ಒಂದು ಚಳುವಳಿಯ ಸಾಫಲ್ಯ ವೈಫಲ್ಯಗಳು ನಿರ್ದಿಷ್ಟ ಕಾಲಘಟ್ಟದಲ್ಲಿ ಸಾಧಿಸಲಾದ ಕೆಲವು ಸಾಧನೆಗಳನ್ನು ಮಾತ್ರ ಆಧರಿಸಲಾಗುವುದಿಲ್ಲ. ಯಾವುದೇ ಒಂದು ಜನಸಮುದಾಯದ ಆಶೋತ್ತರಗಳನ್ನು ಪ್ರತಿನಿಧಿಸುವ ಚಳುವಳಿಗೆ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ ಇರುವಂತೆಯೇ ಭವಿಷ್ಯದ ದಿಕ್ಸೂಚಿಯೂ ಇರಬೇಕಾಗುತ್ತದೆ. ಒಂದು ಸಮಗ್ರ ದೃಷ್ಟಿಕೋನ ಇರಬೇಕಾಗುತ್ತದೆ. ಚಳುವಳಿಗಳು ಪ್ರತಿನಿಧಿಸುವ ಜನಸಮುದಾಯಗಳು ಮತ್ತು ಸಾಮಾಜಿಕ ಸಮಸ್ಯೆಗಳಿಗಿಂತಲೂ ಈ ಚಾರಿತ್ರಿಕ ಹಿನ್ನೆಲೆ ಸೃಷ್ಟಿಸಿರಬಹುದಾದ ಮೂಲ ನೆಲೆಗಳು ಹೆಚ್ಚು ಮಹತ್ವ ಪಡೆಯಬೇಕಾಗುತ್ತದೆ. ಇದನ್ನು ಸಿದ್ಧಾಂತ, ತತ್ವ, ನೀತಿ, ನಿಯಮ ಯಾವ ಹೆಸರಿನಿಂದ ಬೇಕಾದರೂ ಗುರುತಿಸಬಹುದು. ಆದರೆ ಮೂಲಭೂತವಾಗಿ ಈ ನೆಲೆಗಟ್ಟಿನ ಸುಭದ್ರ ತಳಹದಿಯೇ ಜನಾಂದೋಲನದ ಮೂಲ ಸ್ವರೂಪವನ್ನೂ ನಿರ್ಧರಿಸುತ್ತದೆ ಎನ್ನುವುದು ಸರ್ವವಿಧಿತ.

ಈ ದೃಷ್ಟಿಕೋನದಿಂದ ಕರ್ನಾಟಕದ ದಲಿತ ಚಳುವಳಿಯ ನಾಲ್ಕು ದಶಕಗಳ ಇತಿಹಾಸವನ್ನು ನೋಡಿದಾಗ ಅನೇಕಾನೇಕ ಮಹತ್ತರ ಸಾಧನೆಗಳ ನಡುವೆಯೂ ಇಡೀ ಚಳುವಳಿ ಇಂದು ಕವಲೊಡೆದು ನಿಂತಿರುವುದನ್ನು ಸರಳವಾಗಿ ವೈಫಲ್ಯವೆಂದು ಪರಿಗಣಿಸಲಾಗುವುದಿಲ್ಲ. ಸಂಘಟನಾತ್ಮಕ ವೈಫಲ್ಯಗಳು ಎಷ್ಟೇ ಇದ್ದರೂ ಸೈದ್ಧಾಂತಿಕ ಯಶಸ್ಸು ಇರುವೆಡೆ ಜನಾಂದೋಲನಗಳು ತಮ್ಮ ಮೂಲ ನೆಲೆಯನ್ನು ಕಳೆದುಕೊಳ್ಳುವುದಿಲ್ಲ. ದಲಿತ ಚಳುವಳಿಯನ್ನು ಕಾಡುತ್ತಿರುವ ಪ್ರಶ್ನೆಯೂ ಇದೇ ಆಗಿದೆ. ಜಾತಿ ತಾರತಮ್ಯ, ಮೇಲ್ಜಾತಿಯವರ ದೌರ್ಜನ್ಯ, ಬಡತನ, ನಿರುದ್ಯೋಗ, ಸಾಮಾಜಿಕ ಅಸ್ಥಿರತೆ, ಸಾಂಸ್ಕೃತಿಕ ಅಪಮಾನಗಳು, ಊಳಿಗಮಾನ್ಯ ಶಕ್ತಿಗಳ ದಬ್ಬಾಳಿಕೆ, ರಾಜಕೀಯ ನಿಷ್ಕ್ರಿಯತೆ, ಸಾಮುದಾಯಿಕ ಅಸ್ಮಿತೆಗಳ ರಕ್ಷಣೆ ಹೀಗೆ ಹತ್ತು ಹಲವಾರು ಆಯಾಮಗಳ ಸುತ್ತ ರೂಪುಗೊಂಡ ದಲಿತ ಚಳುವಳಿಯ ಮೂಲ ಆಶಯಗಳು ಇಂದು ಕವಲೊಡೆದ ಹಾದಿಗಳಲ್ಲಿ ಅನಾಥ ಪ್ರಜ್ಞೆಯಿಂದ ನಲುಗುತ್ತಿರುವುದು ಸ್ಪಷ್ಟ.

ಈ ಮೂಲ ಆಶಯಗಳು ಚಳುವಳಿಯ ಆರಂಭದಲ್ಲೇ ಒಂದು ಸ್ಪಷ್ಟ ಸ್ವರೂಪ ಹೊಂದಿದ್ದ ಪಕ್ಷದಲ್ಲಿ ಇಂದಿನ ಸಂದಿಗ್ಧತೆ ಎದುರಾಗುತ್ತಿರಲಿಲ್ಲ. ಭಾರತೀಯ ಸಮಾಜವನ್ನು ಕಾಡುತ್ತಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಮತ್ತು ಅದರ ಆಂತರಿಕ ವೈರುಧ್ಯಗಳನ್ನು ಗ್ರಹಿಸುವ ಸಂದರ್ಭದಲ್ಲಿ ಜನಸಮುದಾಯಗಳ ಜಾತಿ ಅಸ್ಮಿತೆಗಳನ್ನು ಮೀರಿದ ಕೆಲವು ಸೂಕ್ಷ್ಮ ತರಂಗಗಳನ್ನು ದಲಿತ ಚಳುವಳಿ ಗ್ರಹಿಸದೆ ಹೋದದ್ದು ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ. ಇಲ್ಲಿ ಭೂಮಿಯ ಪ್ರಶ್ನೆಯೊಂದೇ ಮುಖ್ಯವಾಗುವುದಿಲ್ಲ. ಈ ದೇಶದ ಶೇ. 80ಕ್ಕೂ ಹೆಚ್ಚು ದಲಿತರಿಗೆ ಜೀವನಾಧಾರ ಒದಗಿಸುವ ಭೂಮಿಯ ಪ್ರಶ್ನೆಯೊಂದಿಗೇ ದೇಶದ ಉತ್ಪಾದಕತೆಗೆ ತಮ್ಮದೇ ಆದ ಕೊಡುಗೆ ನೀಡಿರುವ ಶ್ರಮಜೀವಿಗಳ ಇತರ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಪರಾಮರ್ಶೆಗೊಳಪಡಿಸುವುದು ಎಪ್ಪತ್ತರ ದಶಕದಲ್ಲಿ ಅತ್ಯಗತ್ಯವಾಗಿತ್ತು. ಸ್ವಾತಂತ್ರ್ಯಾನಂತರದ ಮೊದಲ ಮೂರು ದಶಕಗಳಲ್ಲಿ ಈ ದೇಶದ ರಾಜಕಾರಣ ಮತ್ತು ಆರ್ಥಿಕ ಬೆಳವಣಿಗೆಗಳು ಹೇಗೆ ತನ್ನ ಒಡಲ ಕುಡಿಗಳನ್ನು ನಿರ್ಲಕ್ಷಿಸುತ್ತಾ ಬಂದಿತ್ತು ಎನ್ನುವುದನ್ನು ಅವಲೋಕನ ಮಾಡಿದ್ದಲ್ಲಿ , ಶ್ರಮಜೀವಿಗಳ ಮೂಲಭೂತ ಸಮಸ್ಯೆಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು.

ಆದರೆ ದಲಿತ ಚಳುವಳಿಗಳ ಮೂಲ ಆಶಯಗಳು ಭಿನ್ನ ಮಾರ್ಗ ಅನುಸರಿಸಿದ್ದವು. ಪ್ರಭುತ್ವ ನೀಡುವ ಕೆಲವು ಸಾಂವಿಧಾನಿಕ ಸೌಲಭ್ಯ, ಸವಲತ್ತುಗಳು ಮತ್ತು ಈ ದೇಶದ ಸಂವಿಧಾನ ದಯಪಾಲಿಸುವ ಕೆಲವು ಮೂಲಭೂತ ಸೌಕರ್ಯಗಳೇ ದಲಿತ ಸಮುದಾಯಗಳ ಏಳಿಗೆಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ ಎಂಬ ಭ್ರಮೆ ದಲಿತ ಚಳುವಳಿಗಳ ಒಂದು ವರ್ಗದ ಚಿಂತನೆಯಾಗಿತ್ತು. ಮತ್ತೊಂದು ವರ್ಗ ತನ್ನ ಸುದೀರ್ಘ ಹೋರಾಟಗಳ ಮೂಲಕ ಪ್ರಭುತ್ವವನ್ನು ಎದುರಿಸಿ ನಿಲ್ಲುವ ದಾರ್ಶನಿಕತೆ, ದಾರ್ಷ್ಟ್ಯವನ್ನೂ ತೋರಿದ್ದುದೂ ಹೌದು. ಆದರೆ ಈ ಎರಡೂ ವರ್ಗಗಳನ್ನು ಬಂಧಿಸಿದ್ದ ಸಮಾನ ಚಿಂತನೆ ಎಂದರೆ ಭಾರತದ ಆಳುವ ವರ್ಗಗಳ ಬಗ್ಗೆ ಇದ್ದ ಅಭಿಪ್ರಾಯ ಮತ್ತು ಪ್ರಭುತ್ವವನ್ನು ಕುರಿತಂತೆ ಇದ್ದ ನಿಲುವು. ಪ್ರಭುತ್ವದ ಲಕ್ಷಣಗಳನ್ನು ವಸ್ತುನಿಷ್ಠವಾಗಿ ಗ್ರಹಿಸದೆ ಆಳುವ ವರ್ಗಗಳ ಔದಾರ್ಯಗಳನ್ನೇ ವೈಭವೀಕರಿಸುವ ಪ್ರವೃತ್ತಿ ಹೆಚ್ಚಾಗತೊಡಗಿದ್ದು ಈ ಅಸ್ಪಷ್ಟ ನಿಲುವಿನ ಪರಿಣಾಮವೇ ಆಗಿತ್ತು.

ರಾಜಕೀಯ ಸಮ್ಮಿಲನದ ಪ್ರಭಾವ

ದಲಿತ ಚಳುವಳಿಯ ಈ ಅಸ್ಪಷ್ಟತೆ ಈ ದೇಶದ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿತ್ತೆಂದು ಹೇಳಬೇಕಿಲ್ಲ. 75 ವರ್ಷಗಳ ದಲಿತ ರಾಜಕಾರಣ ಎಂಬ ಅಸಂಬದ್ಧ ವಿಚಾರವನ್ನು ಜನತೆಯ ಮುಂದಿಡುತ್ತಿರುವ ಇಂದಿನ ಸಂದರ್ಭದಲ್ಲಿ ಈ ದೇಶದ ರಾಜಕೀಯ ವ್ಯವಸ್ಥೆ ದಲಿತ ಸಮುದಾಯಗಳ ರಾಜಕೀಯ ಭವಿಷ್ಯವನ್ನು ಹೇಗೆ ತನ್ನೊಳಗೆ ಆವಾಹಿಸಿಕೊಂಡಿದೆ ಎಂದು ಅವಲೋಕಿಸುವುದು ಅತ್ಯಗತ್ಯ. ಈ ದೇಶದ ಬಹುಸಂಖ್ಯಾತ ಜನಸಮುದಾಯಗಳ ಭವಿಷ್ಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಒಂದು ಐತಿಹಾಸಿಕ ತಿರುವು ನೀಡಿದ ಪೂನಾ ಒಪ್ಪಂದದ ಹಿನ್ನೆಲೆಯಲ್ಲಿ ನಾವಿಂದು 75 ವರ್ಷಗಳ ದಲಿತ ರಾಜಕಾರಣವನ್ನು ವಿಶ್ಲೇಷಿಸಲು ಹೊರಟರೆ ಎಲ್ಲೋ ಒಂದೆಡೆ ಪ್ರಭುತ್ವ ಪ್ರೇರಿತ ಆಶಯಗಳಲ್ಲಿ ಲೀನವಾಗಿಬಿಡಬಹುದಾದ ಸಾಧ್ಯತೆಗಳಿವೆ. ಇತ್ತೀಚೆಗೆ 75 ವರ್ಷಗಳ ದಲಿತ ರಾಜಕಾರಣ ಎಂಬ ವಿಚಾರ ಸಂಕಿರಣ ನಡೆದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಏಕೆಂದರೆ



ದಲಿತ ರಾಜಕಾರಣ ಎಂಬ ವಿದ್ಯಮಾನವೇ ಪ್ರಶ್ನಾರ್ಹವಾಗಿದೆ. ದಲಿತ ಸಮುದಾಯಗಳ ಆಶೋತ್ತರಗಳನ್ನು ಪ್ರತಿನಿಧಿಸುವ "ಬೂರ್ಷ್ವಾ ರಾಜಕಾರಣವನ್ನು ಒಂದೆಡೆ ಇರಿಸಿ, ರಾಜಕಾರಣದಲ್ಲಿ ಸಮಸ್ತ ದಲಿತ ಸಮುದಾಯಗಳ ಪಾತ್ರವನ್ನು ವಿಶ್ಲೇಷಿಸಲು ಹೊರಟಾಗ ಈ ಕಲ್ಪಿತ ವಿದ್ಯಮಾನದ ಆಂತರ್ಯವನ್ನು ಗ್ರಹಿಸಲು ಸಾಧ್ಯ.

ಈ ವಿಚಾರ ಸಂಕಿರಣದ ಮೂಲ ವಿಚಾರವೇ ದಾರಿ ತಪ್ಪಿಸುವಂತಿದೆ. ಭಾರತೀಯ ರಾಜಕಾರಣದಲ್ಲಿ ದಲಿತರ ಸಕ್ರಿಯ ಪಾತ್ರವಿದೆ, ನಿಜ. ಆದರೆ ಭಾರತದಲ್ಲಿ ದಲಿತ ರಾಜಕಾರಣ ಎಂಬ ವಿದ್ಯಮಾನ ಇದೆಯೇ ಎಂಬುದು ಅನುಮಾನ. ಅದೂ 75 ವರ್ಷಗಳ ದಲಿತ ರಾಜಕಾರಣ ಎಂದರೆ ಪೂನಾ ಒಪ್ಪಂದದ ದಿನದಿಂದ ಇಂದಿನವರೆಗೆ. ಇದು ಒಂದು ರೀತಿ ವಿಡಂಬನೆ ಎನಿಸುವುದಿಲ್ಲವೇ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ತನ್ನ ಅಧಿಪತ್ಯವನ್ನು ಸಾಧಿಸಿದ್ದ ಸಂದರ್ಭದಲ್ಲಿ ಅಂಬೇಡ್ಕರ್ ಅವರಿಗೆ ಸಾಂವಿಧಾನಿಕ ಕ್ರಮಗಳ ಮೂಲಕ ದಲಿತ ಸಮುದಾಯಗಳು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವ ಆಲೋಚನೆ ಇತ್ತೇ ಹೊರತು, ದೇಶದಲ್ಲಿ ದಲಿತ ರಾಜಕಾರಣವನ್ನು ಆರಂಭಿಸುವ ಚಿಂತನೆ ಇರಲಿಲ್ಲ. ಭೂಮಿಯ ರಾಷ್ಟ್ರೀಕರಣವನ್ನು ಒತ್ತಾಯಿಸುವ ಮೂಲಕ ತಮ್ಮ ವಿಶಿಷ್ಟ ದಲಿತ ಪರ ನೀತಿಗಳನ್ನು ಸಾಂವಿಧಾನಿಕ ಚೌಕಟ್ಟಿನಲ್ಲೇ ರೂಪಿಸಿದ ಅಂಬೇಡ್ಕರ್ ಜಾತಿ ವ್ಯವಸ್ಥೆಯ ಕ್ರೌರ್ಯವನ್ನು ಪ್ರತಿರೋಧಿಸಿ ಬೌದ್ಧಧರ್ಮ ಸ್ವೀಕರಿಸಿದ್ದರೂ, ರಾಜಕೀಯವಾಗಿ ದಲಿತ ಸಮುದಾಯಗಳಿಗೆ ತಮ್ಮದೇ ಆದ ಒಂದು ವೇದಿಕೆಯನ್ನು ನಿರ್ಮಿಸುವ ಪ್ರಯತ್ನ ಮಾಡಲಿಲ್ಲ.

ಮತ್ತೊಂದೆಡೆ ಅಂಬೇಡ್ಕರ್ ಅವರ ಆಶಯಗಳನ್ನು ಸಂವಿಧಾನದ ಚೌಕಟ್ಟಿನ ಒಳಗೇ ಸಾಕಾರಗೊಳಿಸುವ ತನ್ನ ಪ್ರಯತ್ನಗಳ ಮೂಲಕ ಕಾಂಗ್ರೆಸ್ ಸರ್ಕಾರ ಕೈಗೊಂಡ ಹಲವಾರು ಸಾಮಾಜಿಕ ನ್ಯಾಯದ ಯೋಜನೆಗಳು ದಲಿತ ಸಮುದಾಯಗಳನ್ನು ಪ್ರಭುತ್ವದ ಕಬಂಧ ಬಾಹುಗಳಲ್ಲಿ ಅಪ್ಪಿಕೊಳ್ಳುವ ಒಂದು ತಂತ್ರವಾಗಿ ರೂಪುಗೊಂಡಿದ್ದವು. ಭಾರತೀಯ ಸಮಾಜದ ಜಾತಿ ವ್ಯವಸ್ಥೆಯ ಆಂತರಿಕ ದ್ವಂದ್ವ ಮತ್ತು ವೈರುಧ್ಯಗಳನ್ನು ತನ್ನದೇ ಆದ ಕುಹಕ ಮಾರ್ಗಗಳಲ್ಲಿ ಬಳಸಿಕೊಂಡ ಕಾಂಗ್ರೆಸ್ ಮತ್ತಿತರ ಪಕ್ಷಗಳು ದಲಿತರಲ್ಲಿನ ಎಡ ಬಲ ತಾರತಮ್ಯಗಳನ್ನು ರಾಜಕೀಯವಾಗಿಯೂ ಬಳಸಿಕೊಂಡಿದ್ದು ಗುಟ್ಟಿನ ಮಾತೇನಲ್ಲ. ಇಂದಿಗೂ ಸಹ ಅಂಬೇಡ್ಕರ್ ಅವರಿಗೆ ಪ್ರತಿಸ್ಪರ್ಧಿಯಾಗಿ ಜಗಜೀವನರಾಂ ಅವರನ್ನು ನಿಲ್ಲಿಸುವ ಒಂದು ಪ್ರವೃತ್ತಿ ಕಾಣುವುದಾದರೆ ಅದರ ಬೀಜಾಂಕುರವಾದದ್ದು 1950ರ ದಶಕದಲ್ಲೇ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕಾಂಗ್ರೆಸ್ ಪಕ್ಷ ಅನುಸರಿಸಿದ ಈ ಒಡೆದು ಆಳುವ ನೀತಿಯನ್ನು ಇತರ ರಾಜಕೀಯ ಪಕ್ಷಗಳು ತಮ್ಮದೇ ಆದ ರೀತಿಯಲ್ಲಿ ಬಳಸಿಕೊಳ್ಳಲಾರಂಭಿಸಿದ್ದು 70ರ ದಶಕದ ನಂತರವೇ.

ಕಾರಣ, 1967ರ ಅವಧಿಯಲ್ಲಿ ಭಾರತೀಯ ಸಮಾಜ ಎದುರಿಸಿದ ಹಲವಾರು ಸಮಸ್ಯೆಗಳು ರಾಜಕೀಯವಾಗಿಯೂ ಸಾಕಷ್ಟು ಪ್ರಭಾವ ಬೀರಿದ್ದವು. ಮೂರು ದಶಕಗಳ ರಾಜಕಾರಣದ ವೈಫಲ್ಯಗಳನ್ನು ಗ್ರಹಿಸುವಾಗ ದೇಶದ ಅಲಕ್ಷಿತ ಸಮುದಾಯಗಳ ಆಶಯಗಳನ್ನು ಪ್ರಾಮಾಣಿಕವಾಗಿ ಪ್ರತಿನಿಧಿಸುವ ಅವಶ್ಯಕತೆಯನ್ನು ಮನಗಂಡ ರಾಜಕೀಯ ವರ್ಗಗಳು, ದಲಿತ ಸಮುದಾಯಗಳ ಏಳಿಗೆಗಿಂತಲೂ, ದೇಶದ ರಾಜಕಾರಣದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ದಲಿತರನ್ನು ಬಳಸಿಕೊಳ್ಳಲಾರಂಭಿಸಿದ್ದವು. ಈ ಸಂದರ್ಭದಲ್ಲಿ ಉಚ್ಛ್ರಾಯ ಹಂತದಲ್ಲಿದ್ದ ದಲಿತ ಚಳುವಳಿ ಸಮಾಜವಾದ–ಲೋಹಿಯಾವಾದ–ಮಾರ್ಕ್ಸ್‌ವಾದಗಳ ಗೊಂದಲಗಳಲ್ಲಿ ಸಿಲುಕಿ ತನ್ನದೇ ಆದ ಒಂದು ಸ್ಪಷ್ಟ ನಿಲುವನ್ನು ಪ್ರತಿಪಾದಿಸುವಲ್ಲಿ ವಿಫಲವಾಗಿತ್ತು. ಈ ವೈಫಲ್ಯದ ಪರಿಣಾಮವಾಗಿಯೇ ರಾಷ್ಟ್ರಾದ್ಯಂತ ದಲಿತ ಚಳುವಳಿ ತನ್ನ ಸ್ವಂತಿಕೆಯನ್ನು ಕಂಡುಕೊಳ್ಳದೆ ವಿವಿಧ ರಾಜಕೀಯ ಪಕ್ಷಗಳ ಅಥವಾ ಸಿದ್ಧಾಂತಗಳ ಬಾಲಂಗೋಚಿಗಳಾಗಿ ಕಾರ್ಯ ನಿರ್ವಹಿಸಲಾರಂಭಿಸಿದ್ದವು. ಕರ್ನಾಟಕ, ಉತ್ತರ ಪ್ರದೇಶ, ಬಿಹಾರ ಮತ್ತಿತರ ರಾಜ್ಯಗಳಲ್ಲಿ ಲೋಹಿಯಾವಾದವನ್ನು ಅನುಸರಿಸಿದ ದಲಿತ ಚಳುವಳಿ, ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ವಾದ, ಆಂಧ್ರದಲ್ಲಿ ಮಾವೋವಾದವನ್ನು ಆಲಂಗಿಸಿಕೊಂಡಿದ್ದೂ ಹೌದು. ಇದನ್ನು ಸಾರ್ವತ್ರೀಕರಿಸಲಾಗುವುದಿಲ್ಲವಾದರೂ ಬಹುತೇಕ ಈ ಬೆಳವಣಿಗೆ ಕಂಡುಬಂದಿದ್ದು ಸತ್ಯ.

ವಿಭಿನ್ನ ರಾಜಕೀಯ ನಿಲುವು

ಕಾಂಶೀರಾಂ–ಮಾಯಾವತಿಯ ರಾಜಕಾರಣ ಮೇಲ್ನೋಟಕ್ಕೆ ದಲಿತ ರಾಜಕಾರಣ ಎಂದು ಕಂಡುಬಂದರೂ ಅದು ವಾಸ್ತವವಾಗಿ ದಲಿತರನ್ನು ಬಳಸಿಕೊಂಡು ಮಾಡಲಾಗುತ್ತಿರುವ ರಾಜಕಾರಣದ ಒಂದು ಆಯಾಮವಷ್ಟೆ ಇದು ಇತರ ಬೂರ್ಷ್ವಾ ರಾಜಕೀಯ ಪಕ್ಷಗಳ ಧೋರಣೆಯ ಮತ್ತೊಂದು ಸ್ವರೂಪವಾಗಿ ಮಾತ್ರ ಕಾಣುತ್ತದೆ. ಹಿಂದೂ ಮುಸ್ಲಿಂ ಭಾಯಿ ಭಾಯಿ ಎಂಬ ಪರಿಕಲ್ಪನೆಯಲ್ಲಿ ಕಾಂಗ್ರೆಸ್ ನಾಲ್ಕು ದಶಕಗಳ ಕಾಲ ನಡೆಸಿದ ರಾಜಕಾರಣವನ್ನು ಬಹುಜನ ಸಮಾಜಪಕ್ಷದ ಬ್ರಾಹ್ಮಣ–ದಲಿತ ರಾಜಕಾರಣದಲ್ಲೂ ಕಾಣಬಹುದಾಗಿದೆ. ಕಾಂಶೀರಾಮ್ ಅಥವಾ ಮಾಯಾವತಿ ದಲಿತ ಸಮುದಾಯಗಳ ರಾಜಕೀಯ ಆಶಯಗಳಿಗೆ ಒಂದು ನಿರ್ದಿಷ್ಟ ಆಯಾಮ ದೊರಕಿಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದಂತೂ ಸತ್ಯ. ಆದರೆ ಭಾರತದ ಸಂದರ್ಭದಲ್ಲಿ ದಲಿತ ಸಮುದಾಯವನ್ನು ಪ್ರಧಾನವಾಗಿ ಪ್ರತಿನಿಧಿಸುವ ರಾಜಕೀಯ ವ್ಯವಸ್ಥೆಯನ್ನು ನೆಲೆಗಾಣುವಂತೆ ಮಾಡಲು ಒಂದು ವಿಶಿಷ್ಟ ಚಿಂತನೆ, ಧೋರಣೆ ಅಗತ್ಯ ಎಂಬ ಸತ್ಯವನ್ನು ಬಿಎಸ್‌ಪಿ ಗ್ರಹಿಸಲೇ ಇಲ್ಲ.

ಬಂಡವಾಳ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ ಮತ್ತು ವಸಾಹತುಶಾಹಿಯ ಸಮ್ಮಿಲನವಾಗಿ ರೂಪುಗೊಂಡಿರುವ ಭಾರತೀಯ ಆಡಳಿತ ವ್ಯವಸ್ಥೆಯ ಚೌಕಟ್ಟಿನ ಒಳಗೇ ದಲಿತ ಸಮುದಾಯಗಳನ್ನು ಪ್ರತಿನಿಧಿಸುವ ರಾಜಕಾರಣವನ್ನು ಹುಟ್ಟುಹಾಕುವ ಈ ಪ್ರಯತ್ನ ಮೊಳಕೆಯಲ್ಲೇ ಚಿವುಟಿಹೋಗದಿದ್ದರೂ, ಕ್ರಮೇಣ ಭ್ರಷ್ಟ ಹಾದಿ ಹಿಡಿದದ್ದು ಸತ್ಯ. ನವ ಉದಾರವಾದ ಮತ್ತು ಜಾಗತೀಕರಣ ಸಂದರ್ಭದಲ್ಲಿ ದಲಿತರ ಏಳಿಗೆಗೆ ವಿಭಿನ್ನ ಸಾಮಾಜಿಕ–ಆರ್ಥಿಕ–ರಾಜಕೀಯ ನೀತಿಗಳನ್ನು ಅನುಸರಿಸುವ ದಾರ್ಷ್ಟ್ಯತೆ ಮಾಯಾವತಿಗೆ ಇಲ್ಲ ಎನ್ನುವುದು ಅವರ ಐದು ವರ್ಷಗಳ ಆಳ್ವಿಕೆಯಲ್ಲಿ ಸ್ಪಷ್ಟವಾಗಿ ಸಾಬೀತಾಗಿದೆ. ಅಂಬೇಡ್ಕರ್ ಅವರ ಆರಾಧನೆ, ದಲಿತ ಅಸ್ಮಿತೆಯ ವೈಭವೀಕರಣ ಮತ್ತು ಜಾತಿ ದೌರ್ಜನ್ಯದ ವಿರುದ್ಧ ಹೋರಾಡುವ ಆರ್ಭಟದಲ್ಲಿ ದಲಿತರು ಎದುರಿಸುತ್ತಿರುವ ಅಸ್ಪೃಶ್ಯತೆ, ಅಸಮಾನತೆ ಮತ್ತು ಅಪಮಾನಗಳು ನೇಪಥ್ಯಕ್ಕೆ ಸರಿದಿರುವುದು ಮಾಯಾವತಿಯವರಿಗೆ ಇಂದಿಗೂ ಅರ್ಥವಾಗಿಲ್ಲ ಎನಿಸುತ್ತದೆ. ಅರ್ಥವಾಗಿದ್ದಲ್ಲಿ ಉತ್ತರ ಪ್ರದೇಶದ ಬೀದಿ ಬೀದಿಗಳಲ್ಲಿ ಆನೆಗಳು, ಅಂಬೇಡ್ಕರ್ ಪ್ರತಿಮೆಗಳ ಬದಲು, ದಲಿತ ಅಸ್ಮಿತೆಯ ಸಾಂಕೇತಿಕ ಪ್ರತಿಮೆಗಳು ಕಂಗೊಳಿಸುತ್ತಿದ್ದವು.

ಅಭಿವೃದ್ಧಿ ಪಥದಲ್ಲಿ ಅನುಸರಿಸಬೇಕಾದ ಆರ್ಥಿಕ ನೀತಿಗಳಲ್ಲಿ ಸ್ಪಷ್ಟತೆ ಇಲ್ಲದಿರುವುದು ಮಾಯಾವತಿಯ ರಾಜಕಾರಣದ ಒಂದು ವೈಶಿಷ್ಟ್ಯವೂ ಹೌದು, ವೈಫಲ್ಯವೂ ಹೌದು. ನೊಯಿಡಾದ ಘಟನೆಗಳೇ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ದೈನಂದಿನ ಜೀವನದಲ್ಲಿ ಸಾಧ್ಯವಾಗಬಹುದಾದ ಜಾತಿ ಅಸ್ಮಿತೆಗಳ ಸಮಾಗಮ, ಸಾಂಸ್ಕೃತಿಕವಾಗಿ ಸಾಮಾಜಿಕ ಸ್ತರದಲ್ಲಿ ಸಾಧ್ಯವಾಗುವುದಿಲ್ಲ ಎಂಬ ಕಟು ಸತ್ಯವನ್ನು ಗ್ರಹಿಸುವುದರಲ್ಲೂ ಮಾಯಾವತಿ ವಿಫಲರಾಗಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ 75 ವರ್ಷಗಳ ದಲಿತ ರಾಜಕಾರಣವನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ಈ ಸಂಗತಿಗಳು ಚರ್ಚೆಗೊಳಪಡಲೇ ಇಲ್ಲ ಎನ್ನುವುದು ವಿಷಾದಕರ. ಮಾಯಾವತಿಯವರ " ದಲಿತ ರಾಜಕಾರಣ" ವನ್ನು ಹೊರತುಪಡಿಸಿದರೆ ದೇಶದಲ್ಲಿ ಈ ಪದಪುಂಜಕ್ಕೆ ಅರ್ಥವೇ ಇರುವುದಿಲ್ಲ ಎನ್ನುವುದು ಸುಸ್ಪಷ್ಟ ಆದರೂ 75 ವರ್ಷಗಳ ದಲಿತ ರಾಜಕಾರಣ ಯಾವುದೇ ಪರಿಣಾಮಕಾರಿ ಸಂಕಥನಗಳನ್ನು ಹುಟ್ಟುಹಾಕಲಿಲ್ಲ. ಗಂಭೀರ ಚರ್ಚೆಗಳನ್ನು ಹುಟ್ಟುಹಾಕಲಿಲ್ಲ. ಇದು ದಲಿತ ಚಳುವಳಿಯಲ್ಲಿ ಸೂಕ್ಷ್ಮವಾಗಿ ನುಸುಳಿರುವ ಸೈದ್ಧಾಂತಿಕ ಹಿನ್ನಡೆಯ ಸಂಕೇತವಾಗಿಯೇ ಕಾಣುತ್ತದೆ.

ಸಾವಿರಾರು ನದಿಗಳು ಕಲುಷಿತವಾದದ್ದೇಕೆ ?

ದಲಿತ ರಾಜಕಾರಣದ ಈ ಸಂಕಥನಗಳ ನಡುವೆಯೇ ಕಂಡು ಬರುವ ವೈಪರೀತ್ಯವೆಂದರೆ ದಲಿತ ಸಂಘಟನೆಗಳ ವಿಘಟನೆ ಮತ್ತು ದಲಿತ ಚಿಂತಕರ ಸೈದ್ಧಾಂತಿಕ ದಿವಾಳಿತನ. ಇದು ಮಹಾರಾಷ್ಟ್ರದ ರಿಪಬ್ಲಿಕನ್ ಪಕ್ಷದ ರಾಜಕೀಯ ನಿಲುವುಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳಲ್ಲಿ ದಲಿತ ರಾಜಕಾರಣದ ಸುಳಿವು ಕಿಂಚಿತ್ತಾದರೂ ಇರುವುದೇ ಆದಲ್ಲಿ ಇಂದು ದೇಶಾದ್ಯಂತ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ಬಾಲಂಗೋಚಿಗಳಾಗಿರುವ ದಲಿತ ಸಂಘಟನೆಗಳು ಮತ್ತು ಪಕ್ಷಗಳು ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವತ್ತ ಯೋಚಿಸಬೇಕಾಗುತ್ತದೆ. ಎಡ–ಬಲ, ಮಾದಿಗ ದಂಡೋರ ಮುಂತಾದ ಬೆಳವಣಿಗೆಗಳು ದಲಿತ ಸಂಘಟನೆಗಳ ವಿಘಟನೆಗೆ ಹೊಸ ಆಯಾಮವನ್ನು ಒದಗಿಸಿರುವುದೇ ಅಲ್ಲದೆ, ಪ್ರಭುತ್ವಕ್ಕೆ ದಲಿತ ಸಮುದಾಯದ ಮೇಲೆ ತಮ್ಮ ಅಧಿಪತ್ಯ ಸಾಧಿಸಲು ಅನುಕೂಲಕರವಾಗಿದೆ.

ಕರ್ನಾಟಕದ ಸಂದರ್ಭದಲ್ಲಿ ಇದು ಇನ್ನೂ ಸ್ಪಷ್ಟವಾಗಿ ಕಾಣುತ್ತದೆ. ಬ್ರಾಹ್ಮಣಿಕೆಗೆ ಪ್ರತಿರೋಧಿ ಆಂದೋಲನವಾಗಿ ರೂಪುಗೊಂಡ ಲಿಂಗಾಯತ ಅಥವಾ ವೀರಶೈವ ಧರ್ಮವನ್ನು ಎಷ್ಟೇ ನಾವು ಶೂದ್ರಪರ ಅಥವಾ ಪ್ರಗತಿಪರ ಎಂದು ಭಾವಿಸಿದರೂ ವಾಸ್ತವದಲ್ಲಿ ಬ್ರಾಹ್ಮಣಿಕೆಯ ಸೂಕ್ಷ್ಮ ತರಂಗಗಳ ಪ್ರಭಾವದಿಂದ ಇನ್ನೂ ಹೊರಬಾರದಿರುವ ವೀರಶೈವ ಸಮುದಾಯ ಇಂದು ಪ್ರಭುತ್ವದ ಮೇಲೂ ತನ್ನ ಹಿಡಿತ ಸಾಧಿಸಿದೆ. ಇದು ಇಲ್ಲಿ ಅಪ್ರಸ್ತುತ ಎನ್ನಬಹುದಾದರೂ, ಕರ್ನಾಟಕದ ಸಂದರ್ಭದಲ್ಲಿ ಪ್ರಭಾವಶಾಲಿ

ಪಂಚಮಸಾಲಿ ಸಮುದಾಯದೊಡನೆ ಸಮೀಕರಣಕ್ಕಾಗಿ ಹಾತೊರೆಯುತ್ತಿರುವ ಛಲವಾದಿ ಸಮುದಾಯದ ಕಾತರವನ್ನು ನೋಡಿದರೆ ಪ್ರಭುತ್ವ ನಮ್ಮ ಜಾತಿ ವ್ಯವಸ್ಥೆಯನ್ನು ಎಷ್ಟು ಅದ್ಭುತವಾಗಿ ತನ್ನ ಒಳಿತಿಗಾಗಿ ಬಳಸಿಕೊಳ್ಳುತ್ತದೆ ಎಂದು ಅರಿವಾಗುತ್ತದೆ. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂದು ಅಬ್ಬರಿಸುತ್ತಾ ದಲಿತ ಚಳುವಳಿಗೆ, ದಲಿತ ಅಸ್ಮಿತೆಗೆ ಮತ್ತು ಸಾಮುದಾಯಿಕ ಘನತೆಗೆ ಒಂದು ನಿರ್ದಿಷ್ಟ ಆಯಾಮವನ್ನು ನೀಡಿದ ದಲಿತ ಕವಿ ಸಿದ್ಧಲಿಂಗಯ್ಯ ಇತ್ತೀಚೆಗೆ ಶಿವಮೊಗ್ಗದಲ್ಲಿ ನೀಡಿರುವ ಹೇಳಿಕೆಯನ್ನು ಈ ಹಿನ್ನೆಲೆಯಲ್ಲೇ ಗ್ರಹಿಸಬೇಕಾಗುತ್ತದೆ.

ಪ್ರಭುತ್ವ ಸಾಂವಿಧಾನಿಕ ಕ್ರಮಗಳ ಮೂಲಕ ಒದಗಿಸುವ ಸೌಲಭ್ಯ ಮತ್ತು ಸವಲತ್ತುಗಳಿಂದಲೇ ದಲಿತರ ಉದ್ಧಾರ ಸಾಧ್ಯ ಎಂದು ಪ್ರತಿಪಾದಿಸುವ ದಲಿತ ವರ್ಗಗಳ ಚಿಂತನೆಯನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗುವುದಿಲ್ಲವಾದರೂ, ಭಾರತದ ಸಾಮಾಜಿಕ ಸಂದರ್ಭದಲ್ಲಿ ಇನ್ನೂ ವಿಭಿನ್ನ ಚಿಂತನೆಯ ಅವಶ್ಯಕತೆಯನ್ನೂ ಮನಗಾಣಬೇಕಾಗಿದೆ. ಪ್ರಭುತ್ವ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ರೂಪಿಸುವ ಯೋಜನೆಗಳು, ನೀತಿಗಳು ಮತ್ತು ಸಾಮಾಜಿಕ–ಆರ್ಥಿಕ ನಿಯಮಗಳು ಪ್ರಜೆಗಳಿಗೆ ಅನುಕೂಲಕರವಾಗಿದ್ದರೂ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸುವಂತಿರುವುದಿಲ್ಲ. ಇದು ಬಂಡವಾಳ ವ್ಯವಸ್ಥೆಯಲ್ಲಿ ಹೆಚ್ಚು ಎದ್ದುಕಾಣುತ್ತದೆ. ಭಾರತದ ದಲಿತ ವರ್ಗಗಳ ದೃಷ್ಟಿಯಲ್ಲಿ ಭಾರತದ ಪ್ರಭುತ್ವದ ಲಕ್ಷಣಗಳನ್ನೂ ಇದೇ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಇಲ್ಲಿ ಅಂಬೇಡ್ಕರ್ ಪ್ರತಿಪಾದಿಸಿದ ಭೂ ರಾಷ್ಟ್ರೀಕರಣದ ಪ್ರಶ್ನೆ ಮತ್ತು ಎಡಪಂಥೀಯರ ಶ್ರಮಜೀವಿ ವರ್ಗಗಳ ಹೋರಾಟ ಹೆಚ್ಚು ಪ್ರಸ್ತುತ ಎನಿಸುತ್ತದೆ. ಆದರೆ ಭಾರತದ ಮತ್ತು ವಿಶಿಷ್ಟವಾಗಿ ಕರ್ನಾಟಕದ ದಲಿತ ಚಳುವಳಿ ಈ ವಿದ್ಯಮಾನಗಳನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಹಾಗಾಗಿ ಪ್ರಭುತ್ವ ದಲಿತರನ್ನು ಓಲೈಸುವ ಮಾನದಂಡಗಳನ್ನು ಅನುಸರಿಸುವಂತೆಯೇ, ದಲಿತ ಚಳುವಳಿಯ ನೇತಾರರನ್ನೂ ತನ್ನ ಕಬಂಧ ಬಾಹುಗಳಲ್ಲಿ ಬಂಧಿಸುವುದರಲ್ಲಿ ಸಾಕಷ್ಟು ಯಶಸ್ಸು ಸಾಧಿಸಿದೆ.

ಈ ವಿದ್ಯಮಾನದ ಒಂದು ಆಯಾಮವನ್ನು ಖ್ಯಾತ ಕ್ರಾಂತಿ ಕವಿ ಸಿದ್ಧಲಿಂಗಯ್ಯನವರ ಪರಾಕ್‌ನಲ್ಲಿ ಕಾಣಬಹುದು. ಶಿವಮೊಗ್ಗದಲ್ಲಿ ನಡೆದ ಮಾಜಿ ಸಿಎಂ ಯಡಿಯೂರಪ್ಪನವರ ಅಭಿನಂದನಾ ಸಮಾರಂಭದಲ್ಲಿ ಮಾನ್ಯ ಕವಿಗಳು ಸನ್ಮಾನ್ಯ ಮಾಜಿ ಮುಖ್ಯಮಂತ್ರಿಯನ್ನು ಶ್ಲಾಘಿಸಿರುವುದು ಅವರ ವ್ಯಕ್ತಿಗತ ನಿಲುವೇ ಆಗಿರಬಹುದು. ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯವೂ ಆಗಿರಬಹುದು. ಆದರೆ ದಲಿತ ಸಮುದಾಯಗಳ ಆಶಯಗಳಿಗೆ ಒಂದು ಸ್ಪಷ್ಟ ಆಯಾಮ ನೀಡುವ ಮೂಲಕ ಸಂಘಟನಾತ್ಮಕ ಶಕ್ತಿಯನ್ನು ಒದಗಿಸಿದ ಒಬ್ಬ ವ್ಯಕ್ತಿ ತನ್ನೆಲ್ಲಾ ಹೊಣೆಗಾರಿಕೆಯನ್ನೂ ಮರೆತು, ಒಂದು ಕೋಮುವಾದಿ ಫ್ಯಾಸಿಸ್ಟ್ ಪಕ್ಷದ ನಾಯಕರಿಗೆ ಪರಾಕ್ ಹೇಳುವುದು ಏನನ್ನು ಸಾರುತ್ತದೆ ? ಇದು ಕೇವಲ ಸಿದ್ಧಲಿಂಗಯ್ಯನವರ ವ್ಯಕ್ತಿಗತ ನಿಲುವಿಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಇಲ್ಲಿ ಸಿದ್ಧಲಿಂಗಯ್ಯ ಕೇವಲ ಸಂಕೇತವಾಗಿ ನಿಲ್ಲುತ್ತಾರೆ. ಇದು ದಲಿತ ಚಳುವಳಿಯನ್ನು ಕಾಡುತ್ತಿರುವ ಸಮಸ್ಯೆಯ ಒಂದು ಆಯಾಮ. ಆಳುವ ವರ್ಗಗಳ ತೋಳ ತೆಕ್ಕೆಯೊಳಗೆ ಸಿಲುಕಿ ಸ್ವಚ್ಛಂದತೆಯನ್ನು ಅನುಭವಿಸುತ್ತಿರುವ ದಲಿತ ಚಳುವಳಿಯ ಒಂದು ವರ್ಗವನ್ನು ಪ್ರತಿನಿಧಿಸುವ ದಿಕ್ಕಿನಲ್ಲಿ ಸಿದ್ಧಲಿಂಗಯ್ಯನವರ ಇತ್ತೀಚಿನ ಧೋರಣೆಯನ್ನು ವಿಶ್ಲೇಷಿಸಬಹುದು. ಹೋರಾಟದ ಸಾಗರಕ್ಕೆ ಸೇರುವ ಸಾವಿರಾರು ನದಿಗಳು ಬತ್ತಿಲ್ಲ ನಿಜ, ಆದರೆ ಕಲುಷಿತಗೊಂಡಿವೆ, ಮಲಿನವಾಗಿವೆ, ಹಾದಿ ತಪ್ಪಿವೆ ಎಂದು ಮಾತ್ರ ಹೇಳಬಹುದು.

ಏಕೆಂದರೆ ಸರ್ಕಾರ ತನ್ನ ಇರುವಿಕೆಗಾಗಿ ಮತ್ತು ತನ್ನ ದಲಿತ ಪರ ಮುಖವಾಡವನ್ನು ಉಳಿಸಿಕೊಳ್ಳಲು ದಲಿತ ಸಮುದಾಯದ ವ್ಯಕ್ತಿಗಳಿಗೆ ನೀಡುವ ಸ್ಥಾನ ಮಾನಗಳು ಮತ್ತು ಪ್ರಶಸ್ತಿಗಳು ಅನೇಕ ದಲಿತ ನಾಯಕರನ್ನು ಪ್ರಭುತ್ವದ ತೆಕ್ಕೆಯೊಳಗೆ ಸೆಳೆದುಕೊಂಡಿವೆ. ಎಂಎಲ್‌ಸಿ ಹುದ್ದೆಯಿಂದ ಹಿಡಿದು ಪದ್ಮಶ್ರೀ ಪ್ರಶಸ್ತಿಯವರೆಗೆ ತನ್ನ "ಔದಾರ್ಯವನ್ನು" ತೋರಿರುವ ಪ್ರಭುತ್ವ ದಲಿತ ನೇತಾರರನ್ನು ತನ್ನೆಡೆಗೆ ಸೆಳೆಯುವ ಮೂಲಕ ದಲಿತ ಚಳುವಳಿಯಲ್ಲಿ ದೊಡ್ಡ ಕಂದರವನ್ನೇ ಸೃಷ್ಟಿಸಿದೆ. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಗಳಿಂದಾಚೆಗೆ ದಲಿತ ಚಳುವಳಿಯನ್ನು ಕೊಂಡೊಯ್ಯುವಲ್ಲಿ ವಿಫಲವಾಗಿರುವ ದಲಿತ ಚಳುವಳಿಯ ನೇತಾರರು ತಮ್ಮ ಸಂಘಟನಾತ್ಮಕ ಹೊಣೆಗಾರಿಕೆಯನ್ನು ಮರೆತು, ಸ್ವಹಿತಾಸಕ್ತಿಗಳ ರಕ್ಷಣೆಗೆ ಬಲಿಯಾಗಿರುವುದು ಕರ್ನಾಟಕದ ಜನತೆ ಕಂಡಿರುವ ಕಟು ಸತ್ಯ. ಸಿದ್ಧಲಿಂಗಯ್ಯ ಈ ಪ್ರವೃತ್ತಿಯ ಒಂದು ಸಾಂಕೇತಿಕ ಶಕ್ತಿಯಾಗಿ ಕಾಣುತ್ತಾರೆ. ಆದರೆ ಇಲ್ಲಿ ವ್ಯಕ್ತಿಗಳನ್ನು ದೂಷಿಸಬೇಕಿಲ್ಲ. ಇದು ಚಳುವಳಿಯ ನ್ಯೂನತೆ ಮತ್ತು ವೈಫಲ್ಯದ ಪ್ರತೀಕ.

ಒತ್ತಡ ತಂತ್ರಗಳ ಸೀಮಿತ ದೃಷ್ಟಿಕೋನ

ನಾಲ್ಕು ದಶಕಗಳ ನಂತರವೂ ತಮ್ಮ ಒತ್ತಡ ತಂತ್ರಗಳ ಮೂಲಕವೇ ರಾಜಕೀಯ ಪಕ್ಷಗಳ ಮತ್ತು ಆಳುವ ವರ್ಗಗಳ ಕೃಪೆಗಾಗಿ ಹೋರಾಡುತ್ತಿರುವ ದಲಿತ ಸಂಘಟನೆಗಳು ಪ್ರಭುತ್ವದಿಂದಾಚೆಗಿನ ಜನಸಮುದಾಯಗಳ ನಡುವೆ ಹೋರಾಟವನ್ನು ಕೊಂಡೊಯ್ಯುವಲ್ಲಿ ವಿಫಲವಾಗಿರುವುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹೋರಾಟದ ಸಾಗರಕ್ಕೆ ಸೇರಬೇಕಾದ ಸಾವಿರಾರು ನದಿಗಳ ಉಗಮ ಸ್ಥಾನವಾದ ಗ್ರಾಮಗಳಲ್ಲಿ ಇಂದು ದಲಿತ ಚಳುವಳಿ ಸೊರಗಿ ಹೋಗಿರುವುದಕ್ಕೆ ಈ ಸೀಮಿತ ದೃಷ್ಟಿಕೋನವೇ ಕಾರಣವಾಗಿದೆ. ಗ್ರಾಮೀಣ ದಲಿತರ ಮೂಲಭೂತ ಸಮಸ್ಯೆಗಳಾದ ಕೃಷಿ, ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಒಡೆತನ ದಲಿತ ಚಳುವಳಿಯ ಆಶಯಗಳಲ್ಲಿ ವ್ಯಕ್ತವಾಗದೆ ಇರುವುದೂ ಈ ಸನ್ನಿವೇಶಕ್ಕೆ ಕಾರಣ ಇರಬಹುದು. ದೇಶದ ದಲಿತರಲ್ಲಿ ಬಹುಪಾಲು ಜನತೆ ಕೃಷಿ ಕಾರ್ಮಿಕರೇ ಆಗಿದ್ದರೂ ಅವರ ಕುಂದುಕೊರತೆಗಳಿಗಾಗಿ ಹೋರಾಡುವ ದಲಿತ ಸಂಘಟನೆಗಳ ಸಂಖ್ಯೆ ಶೂನ್ಯ ಎಂದೇ ಹೇಳಬಹುದು. ಹಾಗಾಗಿ ರೈತರ ಸಮಸ್ಯೆಗಳೇ ಪ್ರಧಾನವಾಗಿ ಬಿಂಬಿಸಲ್ಪಡುತ್ತಿದ್ದು, ಭೂರಹಿತ ಕೃಷಿ ಕಾರ್ಮಿಕರ ಬವಣೆ ಕೇಳುವವರಿಲ್ಲದಂತಾಗಿದೆ.

ಅಷ್ಟೇ ಅಲ್ಲ, ಗ್ರಾಮೀಣ ಜನತೆಯನ್ನು, ವಿಶೇಷವಾಗಿ ದಲಿತ ಸಮುದಾಯಗಳನ್ನು ಕಾಡುವ ಸಾಮಾಜಿಕ ಬಹಿಷ್ಕಾರ, ಜಾತಿ ತಾರತಮ್ಯ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿದ್ದು ಈ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು ಸಾಮಾಜಿಕ ಪ್ರಜ್ಞೆ ಮೂಡಿಸುವ ಆಂದೋಲನ ಈವರೆಗೂ ಕರ್ನಾಟಕದಲ್ಲಿ ಕಂಡುಬಂದಿಲ್ಲ. ಕುಕ್ಕೆ ಸುಬ್ರಮಣ್ಯದ ಮಡೆ ಸ್ನಾನ ಪ್ರಕರಣವೂ ಸಹ ರಾಜ್ಯದ ಜನತೆಯಲ್ಲಿ ಸಾಕಷ್ಟು ಆಕ್ರೋಶ ಮೂಡಿಸಿದರೂ, ಈ ಪದ್ಧತಿಯ ಹಿಂದೆ ಇರುವ ಅಸ್ಪೃಶ್ಯತೆ ಮತ್ತು ಜಾತಿವಾದದ ಸೂಕ್ಷ್ಮ ತರಂಗಗಳನ್ನು ಗ್ರಹಿಸಿ, ವ್ಯವಸ್ಥೆಯ ವಿರುದ್ಧ ಅಭಿಪ್ರಾಯ ಮೂಡಿಸುವ ಪ್ರಯತ್ನಗಳು ನಡೆಯುತ್ತಿಲ್ಲ. ಅಂತರ್ಜಾತಿ ವಿವಾಹಗಳ ಹಿನ್ನೆಲೆಯಲ್ಲಿ ಸಂಭವಿಸುತ್ತಿರುವ ಗೌರವ ಹತ್ಯೆಗಳ ವಿಚಾರದಲ್ಲೂ ಇದೇ ವೈಫಲ್ಯವನ್ನು ಕಾಣುತ್ತಿದ್ದೇವೆ. ಇದು ದಲಿತ ಸಂಘಟನೆಗಳಲ್ಲಿ ಸೈದ್ಧಾಂತಿಕ ಬದ್ಧತೆಯ ಕೊರತೆ ಮತ್ತು ಸ್ವಾರ್ಥಪರ ರಾಜಕಾರಣದ ಸಂಕೇತವಾಗಿ ಕಾಣುತ್ತದೆ. ದಲಿತ ಸಂಘಟನೆಗಳ ವಿಘಟನೆಗೂ ಇದೇ ಕಾರಣ ಎಂದು ಹೇಳಬೇಕಿಲ್ಲ.

ಇಂತಹ ವಿಷಮ ಸನ್ನಿವೇಶದಲ್ಲಿ ಬೇಕಿರುವುದು ದಲಿತ ಚಿಂತನೆಗಳ ಐಕ್ಯತೆಯೇ ಹೊರತು ಸಂಘಟನೆಗಳ ಐಕ್ಯತೆಯಲ್ಲ. ಸಂಘಟನೆಗಳ ಐಕ್ಯತೆಯ ಕೂಗು ಎಷ್ಟೇ ಗಟ್ಟಿಯಾಗಿದ್ದರೂ ಸಂಘಟನೆಗಳ ಮೂಲ ತಳಪಾಯವೇ ಅಭದ್ರತೆಯಿಂದ ಬಳಲುತ್ತಿರುವ ಸಂದರ್ಭದಲ್ಲಿ ಸಂಘಟನಾತ್ಮಕ ಚಿಂತನೆಯಿಂದ ಹೊರತಾಗಿರುವ ದಲಿತ ಪರ ಚಿಂತನೆಗಳು ಒಂದಾಗಬೇಕಿದೆ. ಹಾಗಾದಲ್ಲಿ ಮಾತ್ರ ಕವಲು ಹಾದಿಯಲ್ಲಿರುವ ಕರ್ನಾಟಕ ದಲಿತ ಚಳುವಳಿಗೆ ಹೊಸ ಆಯಾಮವನ್ನು ಒದಗಿಸಲು ಸಾಧ್ಯ.

ದಲಿತ ಸಮುದಾಯಗಳನ್ನು ಕಾಡುವ ಸಾಮಾಜಿಕ ಬಹಿಷ್ಕಾರ, ಜಾತಿ ತಾರತಮ್ಯ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿದ್ದು ಈ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು ಸಾಮಾಜಿಕ ಪ್ರಜ್ಞೆ ಮೂಡಿಸುವ ಆಂದೋಲನ, ಈವರೆಗೂ ಕರ್ನಾಟಕದಲ್ಲಿ ಕಂಡುಬಂದಿಲ್ಲ. ಕುಕ್ಕೆ ಸುಬ್ರಮಣ್ಯದ ಮಡೆ ಸ್ನಾನ ಪ್ರಕರಣವೂ ಸಹ ರಾಜ್ಯದ ಜನತೆಯಲ್ಲಿ ಸಾಕಷ್ಟು ಆಕ್ರೋಶ ಮೂಡಿಸಿದರೂ, ಈ ಪದ್ಧತಿಯ ಹಿಂದೆ ಇರುವ ಅಸ್ಪೃಶ್ಯತೆ ಮತ್ತು ಜಾತಿವಾದದ ಸೂಕ್ಷ್ಮ ತರಂಗಗಳನ್ನು ಗ್ರಹಿಸಿ, ವ್ಯವಸ್ಥೆಯ ವಿರುದ್ಧ ಅಭಿಪ್ರಾಯ ಮೂಡಿಸುವ ಪ್ರಯತ್ನಗಳು ನಡೆಯುತ್ತಿಲ್ಲ.

ಬುದ್ಧನೆಂದರೆ...

ಜಿ ವಿ ಆನಂದಮೂರ್ತಿ

(ಝೆನ್ ಗುರುವೊಬ್ಬ ತನ್ನ ಶಿಷ್ಯರನ್ನು ಕುರಿತು ಈ ರೀತಿ ಪ್ರಶ್ನಿಸಿದ; 'ಬುದ್ಧನೆಂದರೆ ಏನು?' ಅದಕ್ಕೆ ಅವನ ಶಿಷ್ಯರ ಉತ್ತರ ಹೀಗಿತ್ತು!)

ಬುದ್ಧನೆಂದರೆ...
ಮಣ್ಣಿನಾಳಕ್ಕೆ ಬೇರುಬಿಟ್ಟ ಜೀವವೃಕ್ಷ
ಉರಿಬಿಸಿಲಿಗೆ ತಂಪು ನೆರಳು
ಮರಿಹಕ್ಕಿಗಳಿಗೆ ತಾಯ್ತನದ ಗೂಡು
ಹೂವು, ಹಣ್ಣು ನಿಬ್ಬಾಣದ ಫಲ
ಜೋಳಿಗೆ ತುಂಬ.

ಬುದ್ಧನೆಂದರೆ...
ಭಿನ್ನ ಬೇಧವಿಲ್ಲದ ನೀರು
ತುದಿ ಕಾಣದ ಹರಿಯುವ ಹೊಳೆ
ದಾಹ ಕಳೆಯುವ ಜೀವನದಿ
ಆಳಕ್ಕಿಳಿದಷ್ಟೂ ಮುತ್ತು ರತ್ನ ಪಚ್ಚೆ
ಧ್ಯಾನದ ನಿಧಿ.

ಬುದ್ಧನೆಂದರೆ...
ತೈಲ ಬತ್ತಿಗಳ ಹಂಗಿಲ್ಲದೆ
ತಣ್ಣಗುರಿಯುವ ನಂದಾದೀಪ
ಕತ್ತಲೆಯ ಪೊರೆ ಹರಿದು
ಒಳಗನೆ ಬೆಳಗುವ ಬೆಳಗು
ಬೆಳಗು ಬೆಳಗು ಲೋಕದ ಬೆಳಗು.

ಬುದ್ಧನೆಂದರೆ...
ನಿಬ್ಬಾಣದೂರಿಗೆ ದಾರಿ ತೋರುವ ಕೈಮರ
ಮತವಲ್ಲ! ಹೊತ್ತಗೆಯಲ್ಲ! ಬೋಧನೆಯಲ್ಲ!
ನಡೆಯುವ ದಾರಿ
ಜಾಗರದ ಮಧ್ಯಮ ದಾರಿ
ನಡೆದವನಿಗಷ್ಟೆ ಕಾಣುವ ಅರಿವಿನ ಬಯಲು.

ಬುದ್ಧನೆಂದರೆ...
ಮಾಗಿದ ಗೊನೆ, ತುಂಬಿದ ತೆನೆ ಭೂಮಿತಾಯಿ
ಮಮಕಾರದ ಮಡಿಲು
ಕರುಳ ಕುಡಿಗಳ ತಬ್ಬಿ
ಎದೆಹಾಲು ಉಣಿಸುವ ತಾಯಿ.

ನಕ್ಕು ಗುರು ಹೇಳಿದ:
ಇದಾವುದೂ ಅಲ್ಲ!
ಬುದ್ಧನೆಂದರೆ...
ಒಂದು ಮಿತ್ತಿಗೆ ಅನ್ನ
ಒಂದು ಬೊಗಸೆ ನೀರು. ■

ಬೌದ್ಧ ದರ್ಶನದ ಪ್ರಸ್ತುತತೆ

ಡಾ. ಬಸವರಾಜ ಸಬರದ

ಭಾರತೀಯ ದರ್ಶನಗಳಲ್ಲಿ ಚಾರ್ವಾಕ-ದರ್ಶನವನ್ನು ಹೊರತು ಪಡಿಸಿದರೆ, ಬೌದ್ಧ ದರ್ಶನವೇ ಪ್ರಾಚೀನವಾದುದು. ಬುದ್ಧ ಒಬ್ಬ ತತ್ವಜ್ಞಾನಿ; ಆತನಿಂದ ಪ್ರಚಾರಕ್ಕೆ ಬಂದ ದರ್ಶನವೇ ಬೌದ್ಧ ಸಿದ್ಧಾಂತ. ಬೌದ್ಧ ಸಿದ್ಧಾಂತದ ಮೂಲತತ್ವಗಳಲ್ಲಿ ಶೂನ್ಯವಾದ ಬಹುಮುಖ್ಯವಾದುದಾಗಿದೆ. ಬುದ್ಧನಿಗಿಂತಲೂ ಪ್ರಾಚೀನರಾದ ಕಾಶ್ಯಪ, ಕನಕಮುನಿ ಮೊದಲಾದವರಿಂದ ಈ ಸಿದ್ಧಾಂತವು ಪ್ರಸ್ತಾಪಿಸಲ್ಪಟ್ಟಿತೆಂದು ಬೌದ್ಧ ಧರ್ಮಗ್ರಂಥಗಳಿಂದ ತಿಳಿದು ಬರುತ್ತದೆ. ಗೌತಮ ಬುದ್ಧ ಶೂನ್ಯವಾದಕ್ಕೊಂದು ತಾತ್ವಿಕ ತಳಹದಿವನ್ನು ಹಾಕಿದ. ಉಳಿದ ಧರ್ಮದ ಸ್ಥಾಪಕರು ತಮ್ಮ ಸಿದ್ಧಾಂತಗಳನ್ನು ಜನತೆ ಶ್ರದ್ಧೆಯಿಂದ ನಂಬಬೇಕೆಂದು ಹೇಳಿದರೆ, ಬುದ್ಧ ಮಾತ್ರ ತನ್ನ ವಿಚಾರಗಳನ್ನು ಒರೆಹಚ್ಚಿ ಪರೀಕ್ಷಿಸಿ ಸ್ವೀಕರಿಸಬೇಕೆಂದು ಹೇಳಿದ. ಹನ್ನೆರಡನೇ ಶತಮಾನದಲ್ಲಿ ಬಂದ ಬಸವಧರ್ಮವೂ ಕೂಡ ಇದೇ ಮಾತನ್ನು ಹೇಳುತ್ತದೆ. ಬುದ್ಧನ ಈ ವಿಚಾರವನ್ನು ಬೌದ್ಧ ಗ್ರಂಥಕಾರರು ಹೀಗೆ ಹೇಳುತ್ತಾರೆ.

> "ತಾಪಾತ್ ವೇದಾಚ್ಚ್ ನಿಕಷಾತ್ ಸುವರ್ಣಮಿವ ಪಣ್ಡಿತೈಃ
> ಪರೀಕ್ಷ್ಯ ಭಿಕ್ಷವಃ ಗ್ರಾಹ್ಯಂ ನತು ಮದ್ವಾಕ್ಯ ಗೌರವಾತ್"

(ತತ್ವ ಸಂಗ್ರಹ: ಪೀಠಿಕೆ)
(ಹಿಂದೂ ದರ್ಶನಸಾರ ಮೈ.ವಿ.ವಿ–1970)

ಬುದ್ಧನೇ ಈ ಮಾತನ್ನು ಹೇಳಿದನೆಂದು ಬೌದ್ಧಗ್ರಂಥಕಾರರು ಬರೆದಿದ್ದಾರೆ. ಬಂಗಾರವನ್ನು ಬೆಂಕಿಯಲ್ಲಿ ಕಾಯಿಸಿ, ಕತ್ತರಿಸಿ, ಒರೆಹಚ್ಚಿ ಪರೀಕ್ಷಿಸುವಂತೆ, ನನ್ನ ಸಿದ್ಧಾಂತಗಳನ್ನು ಪರೀಕ್ಷಿಸಿ, ಸ್ವೀಕರಿಸಿರೆಂದು ಬುದ್ಧ ಹೇಳಿದ. ಹನ್ನೆರಡನೇ ಶತಮಾನದ ಶರಣರೂ ಕೂಡ ಇದೇ ವಿಚಾರವನ್ನು ಹೇಳಿದರು. ಹೀಗಾಗಿ ಬೌದ್ಧ ದರ್ಶನಕ್ಕೂ-ಬಸವ ಧರ್ಮಕ್ಕೂ ಅನೇಕ ವಿಷಯಗಳಲ್ಲಿ ಸಾಮ್ಯತೆಯಿದೆ. ಬುದ್ಧನ ನಿರ್ವಾಣದ ನಂತರ ಅನೇಕ ವಿದ್ವಾಂಸರು ಬುದ್ಧನ ಉಪದೇಶಗಳನ್ನೇ ಸಂಗ್ರಹಿಸಿದರು. ಸೂತ್ರ ಪಿಟಕ, ವಿನಯ ಪಿಟಕ, ಅಭಿಧರ್ಮ ಪಿಟಕ ಹೀಗೆ ಮೂರು ಪಿಟಕಗಳಲ್ಲಿ ಬುದ್ಧನ ವಿಚಾರಗಳು ಸೇರಿಕೊಂಡವು. ಈ ಗ್ರಂಥಗಳು ಮಾಗಧಿ ಭಾಷೆ, ಪಾಳೀ ಭಾಷೆ ಮುಂತಾದ ಪ್ರಾಕೃತ ಭಾಷೆಗಳಲ್ಲಿ ಬೆಳಕು ಕಂಡವು. ಈ ತ್ರಿಪಿಟಕ ಸಂಪ್ರದಾಯವು ಸಾಮ್ರಾಟ ಅಶೋಕನ ಕಾಲದಲ್ಲಿ ಪ್ರಚಾರದಲ್ಲಿದ್ದುದು ತಿಳಿದುಬರುತ್ತದೆ. ಪಿಟಕವೆಂದರೆ, ಪೇಟಕಾ-ಪೆಟ್ಟಿಗೆಯೆಂದರ್ಥವಾಗುತ್ತದೆ. ಈ ಗ್ರಂಥಗಳನ್ನು ಮೂರು ಪೆಟ್ಟಿಗೆಗಳಲ್ಲಿ ವಿಷಯಾನುಸಾರ ಕೂಡಿಟ್ಟದ್ದರಿಂದ ಪಿಟಕವೆಂಬ ಹೆಸರು ಬಂದಿರಬಹುದಾಗಿದೆ.

ಬುದ್ಧನ ನಂತರದಲ್ಲಿ ಚಂದ್ರಕೀರ್ತಿ, ವಸುಮಿತ್ರ, ವಸುಬಂಧ, ಧರ್ಮತ್ರಾತ, ನಾಗಾರ್ಜುನ, ಅಸಂಗ, ಧರ್ಮಕೀರ್ತಿ ಶಾಂತದೇವ, ಕಮಲಶೀಲ ಮೊದಲಾದವರು ಬೌದ್ಧ ಮತವನ್ನು ಪ್ರಚಾರಗೊಳಿಸಿದರು. ಬೌದ್ಧರು ಉಪದೇಶಿಸಿದ ತತ್ವಗಳಲ್ಲಿ ಆರ್ಯಸತ್ಯವೂ ಒಂದು. ಆರ್ಯಸತ್ಯದಲ್ಲಿ ಐದು ಸ್ಕಂದಗಳು ಬರುತ್ತವೆ. ಸ್ಕಂದವೆಂದರೆ ಗುಂಪು ಎಂದರ್ಥವಾಗುತ್ತದೆ. ಈ ಐದು ಸ್ಕಂದಗಳಲ್ಲಿ ಬೋಧಿಸಿರುವ ಬೌದ್ಧ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ಬೌದ್ಧ ಸಿದ್ಧಾಂತದಲ್ಲಿ ನಾಲ್ಕುವಿಧ ಭಾವನೆಗಳು ಬಹುಮುಖ್ಯವಾಗಿವೆ. ಸ್ವರ್ವಂ ಸ್ವಲಕ್ಷಣಂ ಸ್ವಲಕ್ಷಣಂ, ಕ್ಷಣಿಕಂ ಕ್ಷಣಿಕಂ, ದುಃಖಂ ದುಃಖಂ, ಶೂನ್ಯಂ ಶೂನ್ಯಂ ಈ ಭಾವನೆಗಳಿಂದ ಸಂಸಾರಕ್ಕೆ ಮೂಲಕಾರಣವಾದ ಭ್ರಾಂತಿ-ಅವಿದ್ಯೆ ತೊಲಗುವುದೆಂದು ಬುದ್ಧನ ಉಪದೇಶದಲ್ಲಿ ಹೇಳಲಾಗಿದೆ. ಈ ನಾಲ್ಕೂ ವಿಧವಾದ ಭಾವನೆಗಳನ್ನೇ ಆರ್ಯಸತ್ಯ ಚತುಷ್ಟಯವೆಂದು ಭಾಸ್ಕರ ಭಾಷ್ಯಕಾರರು ಹೇಳಿದ್ದಾರೆ. ಶೂನ್ಯತೋಪದೇಶದಿಂದಲೇ ಭ್ರಾಂತಿ ದೂರವಾಗುವದೆಂದವರು ಹೇಳಿದ್ದಾರೆ.



ಸಂಪ್ರದಾಯದೊಂದಿಗೆ ಹೋರಾಟ

ಬೌದ್ಧ ದರ್ಶನವು ಮೊದಲು ಮುಖಾಮುಖಿಯಾದದ್ದು ಸಂಪ್ರದಾಯದೊಂದಿಗೆ. ಸ್ಥಗಿತಗೊಂಡಿದ್ದ ಶತಮಾನಗಳ ನಂಬಿಕೆಗಳನ್ನು ಅದು ಮೊದಲು ಪ್ರಶ್ನಿಸಿತು. ವಸ್ತುಗಳು ಸ್ಥಿರವೆಂಬ ಭಾವನೆಯೇ ದುಃಖಮಯವಾದ ಸಂಸಾರಕ್ಕೆ ಮೂಲಕಾರಣ ಮತ್ತು ಕ್ಷಣಿಕವೆಂಬ ಭಾವನೆಯೇ ಪರಮ ವೈರಾಗ್ಯಕ್ಕೆ ಮೂಲ. ಈ ವಿಷಯವನ್ನು ಬೌದ್ಧ ದರ್ಶನ ಮತ್ತೊಂದು ರೀತಿಯಲ್ಲಿ ವಿಶ್ಲೇಷಿಸುತ್ತದೆ. ಸ್ಥಿರವೆಂಬುದು ಕಾಲವನ್ನು ಮುಖ್ಯವಾಗಿ ಅವಲಂಬಿಸಬೇಕಾಗಿಲ್ಲ. ಅಂದರೆ ನೂರಾರು ವರ್ಷ ಉಳಿದಿರುವುದು ಸ್ಥಿರವೆಂದು ಅರ್ಥೈಸಬಾರದು. ಆ ವಸ್ತು ಅಥವಾ ವ್ಯಕ್ತಿಗೆ ಚಲನೆ ಬಹುಮುಖ್ಯ. ಚಲನಶೀಲವಲ್ಲದುದು ಸಾವಿರಾರು ವರ್ಷವಿದ್ದರೂ ಅದು ವ್ಯರ್ಥ. ಚಲನಶೀಲವಾಗಿರುವಂತಹದು ಕೆಲವೇ ವರ್ಷವಿದ್ದರೂ ಅದು ಸಾರ್ಥಕ. ಕ್ಷಣಿಕವೆಂಬುದನ್ನು ಬುದ್ಧ ಹೀಗೆ ಹೇಳುತ್ತಾನೆ. ಜೋಳದ ಬೀಜವಾಗಿರಲಿ, ಬತ್ತದ ಬೀಜವಾಗಿರಲಿ ಕಣಜದಲ್ಲಿದ್ದಾಗ ಅದು ಮೊಳಕೆಯೊಡೆಯುವುದಿಲ್ಲ, ಅದೇ ಬೀಜವನ್ನು ಗದ್ದೆಯಲ್ಲಿ ಹಾಕಿದಾಗ ಅದು ಮೊಳಕೆಯೊಡೆದು ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಬೀಜದ ರೂಪ ಕಣ್ಮರೆಯಾಗಿ ಸಸಿಯ ರೂಪವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಚಲನಶೀಲತೆಯೆಂಬುದು ರೂಪಾಂತರ ಹೊಂದುತ್ತದೆ. ಇದು ಸ್ಥಿರ ಅಥವಾ ಇದು ಕ್ಷಣಿಕವೆಂಬಂತಹ ತೀರ್ಮಗಳು ಸರಿಯಲ್ಲ. ಸ್ಥಿರವಿದ್ದದ್ದು, ಕ್ಷಣಿಕವಾಗುತ್ತದೆ, ಕ್ಷಣಿಕವಿದ್ದುದು ಸ್ಥಿರವಾಗುತ್ತದೆ. ಸುಖ-ದುಃಖ ಇವೆರಡೂ ನಮ್ಮೊಳಗಡೆಯೇ ಇವೆಯೆಂದು ಬುದ್ಧ ಹೇಳುತ್ತಾನೆ. ಆರ್ಷೇಯವಾದುದು, ಚಿರಕಾಲವಾದುದು, ಖಾಯಂ ಆದುದು ಯವುದೂ ಇಲ್ಲ. ಇದನ್ನೇ ಬುದ್ಧ ಕ್ಷಣಿಕವಾದದಲ್ಲಿ ಸ್ಪಷ್ಟಪಡಿಸಿದ್ದಾನೆ. ವೈರಾಗ್ಯವನ್ನು ಕ್ಷಣಿಕವೆಂದು ತಿಳಿಯುವುದೇ ಕಾರಣವಾಗಬೇಕಾಗಿಲ್ಲ. ಶಾಶ್ವತವೆಂಬ ತಿಳುವಳಿಕೆ ಇದ್ದಾಗ್ಯೂ ವೈರಾಗ್ಯ ಹೊಂದಿದವರಿದ್ದಾರೆ. ಒಂದು ಬೀಜ ಮೊಳಕೆಯೊಡೆದು, ಎಲೆಯಾಗಿ, ದಂಟಾಗಿ, ಹೂವಾಗಿ, ಹಣ್ಣುಕೊಡುವುದು-ಫಲನೀಡುವುದು ಬಹುಮುಖ್ಯವಾದ ಪ್ರಕ್ರಿಯೆ. ಇದನ್ನೇ ಪರಿಣಾಮವೆಂದು ಕರೆಯಲಾಗುತ್ತದೆ. ನಿತ್ಯ-ಅನಿತ್ಯ, ಶಾಶ್ವತ-ಕ್ಷಣಿಕ ಎಂಬ ವಾದಕ್ಕಿಂತ ಪರಿಣಾಮ-ಪ್ರಕ್ರಿಯೆಗಳು ಮುಖ್ಯವಾಗುತ್ತವೆ. ಬೌದ್ಧ ದರ್ಶನವು ಪ್ರಾರಂಭದಲ್ಲಿಯೇ ಅನೇಕ ಸಂಪ್ರದಾಯವಾದಿಗಳನ್ನು ಎದುರು ಹಾಕಿಕೊಂಡಿತು.

ಬುದ್ಧ, ದೇವರ ಬಗೆಗೆ ಮಾತನಾಡದೆ ಮನುಷ್ಯರ ಬಗೆಗೆ ಮಾತನಾಡಿದ. ಅರಮನೆಯ ವೈಭೋಗಕ್ಕಿಂತ, ಬಡವರ ಕಣ್ಣೀರೊರೆಸುವುದು ಮುಖ್ಯವೆಂದು ತಿಳಿದ. ಸರ್ವವನ್ನೂ ನಾಶಗೊಳಿಸುವ ಹಿಂಸೆಗಿಂತ, ಅಹಿಂಸೆಯೇ ದೊಡ್ಡದೆಂದು ಭಾವಿಸಿದ. ಧರ್ಮದ ಮೂಲಕ ಇಂತಹ ಕ್ರಾಂತಿಕಾರಕ ವಿಚಾರಗಳನ್ನು ಹೇಳಿದ ಮೊದಲ ವ್ಯಕ್ತಿ ಬುದ್ಧ; ನಂತರದಲ್ಲಿ ಬಸವಣ್ಣ ಬರುತ್ತಾನೆ. ಹೀಗಾಗಿ ಬುದ್ಧನ ಕ್ರಾಂತಿಕಾರಕ ವಿಚಾರಗಳು,

ಬಸವಣ್ಣನಲ್ಲಿ ಚಿಗುರೊಡೆದು ಮುಂದೆ ಅಂಬೇಡ್ಕರ್ ಮೂಲಕ ಪ್ರಸ್ತುತಗೊಳ್ಳುತ್ತವೆ. ಹೀಗಾಗಿ ಬುದ್ಧ-ಬಸವ-ಅಂಬೇಡ್ಕರ್ ಕೇವಲ ಹೆಸರುಗಳಾಗಿರದೆ ಅವು ಕ್ರಾಂತಿಯ ಪರಂಪರೆಗಳಾಗಿವೆ. ಒಂದರೊಳಗೊಂದು ಕೂಡಿಕೊಂಡಿವೆ. ಈ ಕ್ರಾಂತಿಕಾರಕ ಪರಂಪರೆಗೆ ಹಿಂದೂ ಸಂಪ್ರದಾಯವಾದಿಗಳು, ಪುರೋಹಿತಶಾಹಿ ಮನಸ್ಸುಗಳು ಬೆಚ್ಚಿಬೀಳುತ್ತವೆ. ಶತಮಾನಗಳಿಂದ ಮೌಢ್ಯತೆಯನ್ನು ಬಿತ್ತಿ ಸಂಪ್ರದಾಯವನ್ನು ಹುಟ್ಟುಹಾಕಿದ ಪುರೋಹಿತಶಾಹಿ ವ್ಯವಸ್ಥೆಯನ್ನು ಬುದ್ಧ-ಬಸವ-ಅಂಬೇಡ್ಕರ್ ಪರಂಪರೆ ನೇರವಾಗಿ ತಿರಸ್ಕರಿಸುತ್ತದೆ. ಧರ್ಮ-ದೇವರುಗಳ ಹೆಸರಿನಲ್ಲಿ ನಡೆಯುವ ಎಲ್ಲ ಶೋಷಣೆಯನ್ನು ಈ ಪರಂಪರೆ ವಿರೋಧಿಸುತ್ತದೆ.

ಅಷ್ಟಾಂಗಿಕ ಮಾರ್ಗಗಳು:

ಬುದ್ಧ ಬೋಧಿಸಿದ ಅಷ್ಟಾಂಗಿಕ ಮಾರ್ಗಗಳು ಜಾಗತೀಕರಣದ ಈ ಸಂದರ್ಭದಲ್ಲಿ ತೀರಾ ಪ್ರಸ್ತುತವಾಗಿವೆ.

1)ಸಮ್ಯಗ್ ದೃಷ್ಟಿ:-
2)ಸಮ್ಯಗ್ ಸಂಕಲ್ಪ:-
3)ಸಮ್ಯಗ್ ವಾಚಾ:-
4)ಸಮ್ಯಗ್ ಕರ್ಮ:-
5)ಸಮ್ಯಗ್ ವಾಯಾಮ:-
6)ಸಮ್ಯಗ್ ಆಜೀವ:-
7)ಸಮ್ಯಗ್ ಸ್ಮೃತಿ:-
8)ಸಮ್ಯಗ್ ಸಮಾದಿ:-

ಬುದ್ಧನ ಈ ಅಷ್ಟಾಂಗ ಮಾರ್ಗಗಳಲ್ಲಿ ಪ್ರಾರಂಭದಲ್ಲಿ ಎಲ್ಲದಕ್ಕೂ "ಸಮ್ಯಗ್" ಎಂಬ ಪದ ಪುನರಾವರ್ತನೆಗೊಳ್ಳುತ್ತ ಹೋಗುತ್ತದೆ. "ಸಮ್ಯಗ್" ಎಂದರೆ "ಒಳ್ಳೆಯ" ಎಂಬ ಅರ್ಥವಿದೆ. ಇಲ್ಲಿ ಬಳಕೆಯಾಗಿರುವ "ಒಳ್ಳೆಯ" ಪದ, ಜನಹಿತಯೆಂಬರ್ಥದಲ್ಲಿದೆ. ಒಳ್ಳೆಯವರಾಗುವುದು ಒಂದು ರೀತಿಯಾದರೆ, ಒಳ್ಳೆಯದನ್ನು ಮಾಡುವುದು ಬಹುಮುಖ್ಯವಾದುದಾಗಿದೆ. ಬುದ್ಧ ಇಲ್ಲಿ ಎರಡನ್ನೂ ಹೇಳಿದ್ದಾನೆ. ಮನುಷ್ಯ ಮೊದಲು ತಾನು ಒಳ್ಳೆಯವನಾಗಬೇಕು ಮತ್ತು ಒಳ್ಳೆಯದನ್ನು ಮಾಡಬೇಕು. ಆದರೆ ಅನೇಕರು ಒಳ್ಳೆಯವರಾಗಲಿಕ್ಕೆ ಪ್ರಯತ್ನಿಸುತ್ತಾರೆ. ಕೊನೆಗೆ ತಾನು ಜನರಿಂದ ಒಳ್ಳೆಯವನೆನಿಸಿಕೊಳ್ಳಬೇಕೆಂಬುದು ಒಂದು ಭ್ರಮೆಯಾಗಿ ಬೆಳೆಯುತ್ತ ಹೋಗುತ್ತದೆ. ಒಳ್ಳೆಯವನಾಗಬೇಕೆಂಬ ಕೀರ್ತಿಶನಿಯ ಬೆನ್ನು ಹತ್ತುವದಕ್ಕಿಂತ ಒಳ್ಳೆಯದನ್ನು ಮಾಡುವುದು ಬಹುಮುಖ್ಯವಾಗುತ್ತದೆ. ಒಳ್ಳೆಯವನಾಗಿದ್ದು ಒಳ್ಳೆಯದನ್ನು ಮಾಡದೆ ಹೋದರೆ ವ್ಯರ್ಥವೆನಿಸುತ್ತದೆ. ಒಳ್ಳೆಯವನಾಗಲು ಹಪಹಪಿಸುವದಕ್ಕಿಂತ ಒಳ್ಳೆಯದನ್ನು ಮಾಡುವುದು ಬಹುಮುಖ್ಯವಾಗುತ್ತದೆ. ಇದನ್ನೇ ಬುದ್ಧ "ಸಮ್ಯಗ್" ಎಂದು ಕರೆದಿದ್ದಾನೆ.

ಅವೈದಿಕ ದರ್ಶನಗಳೆಲ್ಲ ದೇಹ ಮತ್ತು ಬುದ್ಧಿಗಿಂತ ಚೇತನಕ್ಕೆ ಮಹತ್ವ ನೀಡಿವೆ. ಚೇತನವಿರದೇ ಹೋದರೆ ದೇಹ ಮತ್ತು ಬುದ್ಧಿ ಜಡಗೊಳ್ಳುತ್ತವೆ. ಇದನ್ನೇ ಬಸವಣ್ಣ ಸ್ಥಾವರ-ಜಂಗಮಗಳೆಂದು ವಿಂಗಡಿಸಿದ್ದಾನೆ. ಮನಸ್ಸನ್ನು ವಿಶಾಲಗೊಳಿಸುವದರಿಂದ "ಸಮ್ಯಗ್" ಬೆಳೆದು ಬಿಡುತ್ತದೆ. ಇಂತಹ ಮನಸ್ಸನ್ನು ಚಲನಶೀಲಗೊಳಿಸುವುದೇ ಚೈತನ್ಯವಾಗಿದೆ. ಇದನ್ನೇ ಧಾರ್ಮಿಕ ಪರಿಭಾಷೆಯಲ್ಲಿ ಆತ್ಮ-ಪರಮಾತ್ಮ ಎಂದು ಕರೆಯಲಾಗುತ್ತದೆ. ಸಮ್ಯಗ್



ದೃಷ್ಟಿಯೆಂದರೆ ಒಳ್ಳೆಯಮನಸ್ಸಿನಿಂದ ನೋಡುವುದು. ದೃಷ್ಟಿ ಹೇಗಿದೆಯೋ ಹಾಗೆ ಸೃಷ್ಟಿ ಕಾಣಿಸುತ್ತದೆ. ಸೌಂದರ್ಯವಾಗಲಿ, ಕುರೂಪವಾಗಲಿ ಸೃಷ್ಟಿಯಲ್ಲಿರದೆ ದೃಷ್ಟಿಯಲ್ಲಿರುತ್ತದೆ. ನಾವು ನೋಡುವ ದೃಷ್ಟಿ ಒಳ್ಳೆಯದಾಗಿದ್ದರೆ, ಕಣ್ಣಿಗೆ ಕಾಣುವದೆಲ್ಲ ಸುಂದರವಾಗಿ ಕಾಣಿಸುತ್ತದೆ. ನಮ್ಮ ದೃಷ್ಟಿಯಲ್ಲಿಯೇ ಸಂಕುಚಿತತೆ ಇದ್ದರೆ, ಸೃಷ್ಟಿಯ ಪ್ರತಿಯೊಂದು ವಸ್ತುವೂ ವಕ್ರವಾಗಿಯೇ ಕಾಣಿಸುತ್ತದೆ. ಆದುದರಿಂದ ಮನುಷ್ಯ ಮೊದಲು ತನ್ನ ದೃಷ್ಟಿಯನ್ನು, ತನ್ನ ಭಾವನೆಯನ್ನು, ತನ್ನ ಉದ್ದೇಶವನ್ನು ಒಳ್ಳೆಯದನ್ನಾಗಿಸಿಕೊಳ್ಳಬೇಕು. ಆಗ ಕಣ್ಣಿಗೆ ಕಾಣುವದೆಲ್ಲಾ ಸುಂದರವಾಗಿ ಕಾಣಿಸುತ್ತದೆ. ಒಣಗಿದ ಮರದಲ್ಲಿಯೂ ಹಸಿರು ಕಾಣಿಸುತ್ತದೆ. ಸುಡುವ ಬಿಸಿಲೂ ಬೆಳದಿಂಗಳಾಗಿ ಕಂಗೊಳಿಸುತ್ತದೆ. ಹೀಗಾಗಿ ಸಮ್ಯಗ್ ದೃಷ್ಟಿಗೆ ದೊಡ್ಡ ಶಕ್ತಿಯಿದೆ. ಇದನ್ನು ಬುದ್ಧ ಮೊದಲನೇ ಅಷ್ಟಾಂಗವೆಂದು ಕರೆದ. ಒಳ್ಳೆಯ ಮನಸ್ಸಿನಿಂದ ಕೆಲಸಮಾಡಿದರೆ ಶರಣರ ಪ್ರಕಾರ ಕಾಯಕವಾಗುತ್ತದೆ. ಒಳ್ಳೆಯ ದೃಷ್ಟಿಯಿಂದ ಜಗವನ್ನು ನೋಡಿದಾಗ, ಅಲ್ಲೆಲ್ಲಾ ಸುಂದರ ಹೂಗಳೇ ಗೋಚರಿಸುತ್ತವೆ. ಸಮ್ಯಗ್ ದೃಷ್ಟಿಯಿಂದ ಸಮಾನತೆ, ಪ್ರೀತಿ ಹುಟ್ಟಲು ಸಾಧ್ಯವಾಗುತ್ತದೆ. ಇವನಾರವ ಇವನಾರವ ಇವನಾರವನೆಂದೆನಿಸದೆ, ಇವ ನಮ್ಮವ ಇವ ನಮ್ಮವನೆಂದೆನಿಸುವುದು ಬಸವಣ್ಣನ ಸಮ್ಯಗ್ ದೃಷ್ಟಿಗೆ ಸಾಕ್ಷಿಯಾಗಿದೆ.

ಸಮ್ಯಗ್ ದೃಷ್ಟಿ ಮನುಷ್ಯನ ಮನಸ್ಸಿಗೆ ಸಂಬಂಧಿಸಿದ್ದರೆ ಸಮ್ಯಗ್ ಸಂಕಲ್ಪವು ಕ್ರಿಯೆಗೆ ಸಂಬಂಧಿಸಿದ್ದಾಗಿದೆ. ಒಳ್ಳೆಯ ಮನುಸ್ಸು ಇದೆ, ಒಳ್ಳೆಯ ಭಾವನೆ ಇದೆ ಆದರೆ ಅದು ಜಾರಿಗೆ ಬರದೆ, ಕ್ರಿಯಾತ್ಮಕಗೊಳ್ಳದೆ ಉಪಯೋಗವಾಗುವದಿಲ್ಲ. ಅಂತಹ ಕ್ರಿಯಾತ್ಮಕ ಚಾಲನೆ ಸಮ್ಯಗ್ ಸಂಕಲ್ಪದಿಂದ ಸಾಧ್ಯವಾಗುತ್ತದೆ. ಜನವಿರೋಧಿ ಕಾರ್ಯವನ್ನು ಮಾಡದೆ, ಜನಪರ ಕಾರ್ಯ ಮಾಡಲು ನಿರ್ಧರಿಸುವುದೇ ಸಮ್ಯಗ್ ಸಂಕಲ್ಪವಾಗಿದೆ. ಈ ನಿರ್ಧಾರ ಅಚಲವಾಗಿರಬೇಕು. ಇಂತಹ ಜನಪರ ಕಾರ್ಯವನ್ನು ಕ್ರಿಯಾರೂಪಕ್ಕೆ ತರುವದೇ ಸಮ್ಯಗ್ ಕರ್ಮ. ಕರ್ಮವೆಂದರೆ ಕ್ರಿಯೆ; ಹಣೆಬರಹವಲ್ಲ. ಇದನ್ನು ಬುದ್ಧ-ಬಸವ-ಅಂಬೇಡ್ಕರ ವಿವಿಧ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಒಳ್ಳೆಯ ಕೆಲಸ ಮಾಡುವುದು, ಜನಹಿತ ಸೇವೆಮಾಡುವುದೇ ನಿಜವಾದ ಸಮ್ಯಗ್ ಕರ್ಮವಾಗುತ್ತದೆ. ಸಮ್ಯಗ್ ವಾಚಾ ಎಂದರೆ ಒಳ್ಳೆಯದನ್ನು ಮಾತನಾಡುವುದು. ಎಲ್ಲಿ ಅಸೂಯೆ, ಹೊಟ್ಟೆಕಿಚ್ಚು ಇರುತ್ತದೆಯೋ, ಅಲ್ಲೆಲ್ಲಾ ಇನ್ನೊಬ್ಬರ ನಿಂದೆ, ಚುಚ್ಚು ಮಾತು ಸಾಮನ್ಯವಾಗಿರುತ್ತದೆ. ಆದರೆ ಸಮ್ಯಗ್ ವಾಚಾದಲ್ಲಿ ಇತರರನ್ನು ಹೀಗಳೆದು ಮಾತನಾಡದೆ, ಒಳ್ಳೆಯ ಮಾತುಗಳನ್ನು ಆಡಬೇಕೆಂಬುದು ಮುಖ್ಯವಾಗುತ್ತದೆ. ಮಾನಸಿಕ-ವಿಕಾರಗಳನ್ನು ತೊರೆಯಲಿಕ್ಕೆ, ದೈಹಿಕ-ಆರೋಗ್ಯವನ್ನು ಕಾಪಾಡಿಕೊಳ್ಳುವದಕ್ಕೆ ಸಮ್ಯಗ್ ವ್ಯಾಯಾಮ ಮುಖ್ಯವಾಗಿದೆ. ಸಮ್ಯಗ್ ಆಜೀವ ಕೈಕೊಂಡ ಕಾರ್ಯದಲ್ಲಿ ಪ್ರಾಮಾಣಿಕವಾಗಿರಬೇಕೆಂದು ಹೇಳುತ್ತದೆ. ಸಮ್ಯಗ್ ಸ್ಮೃತಿ ಏಕಾಗ್ರತೆಯ ಸಾಧನೆಗೆ ಕಾರಣವಾಗುತ್ತದೆ. ಜನನ, ಮರಣ, ಬೇನೆ, ಮುಪ್ಪು ಈ ಮುಂತಾದವುಗಳ ಬಗೆಗೆ ಸರಿಯಾದ ತಿಳುವಳಿಕೆಯನ್ನು ಸಮ್ಯಗ್ ಸ್ಮೃತಿ ಮಾಡಿಕೊಡುತ್ತದೆ. ಸಮ್ಯಗ್ ಸಮಾಧಿಯೆಂಬುದು ಧ್ಯಾನಸ್ಥ ಸ್ಥಿತಿಯನ್ನು ವಿವರಿಸುತ್ತದೆ. ಮಾತಿಗಿಂತ ಮೌನ ದೊಡ್ಡದು. ಮೌನಕ್ಕಿಂತ ಧ್ಯಾನ ದೊಡ್ಡದು. ಇಂತಹ ಧ್ಯಾನಸ್ಥ ನಿಲುವು ಮೋಕ್ಷ ಸಾಧನೆಯ ಮಾರ್ಗ ಮಾತ್ರವಾಗಿರದೆ. ಅರಿವಿನ ವಿಸ್ತಾರದ ಸಾಧ್ಯತೆಯೂ ಆಗಿದೆ.

ಜಾಗತೀಕರಣದೊಂದಿಗೆ ಮುಖಾಮುಖಿ:

ಜಾಗತೀಕರಣದ ಜ್ವಾಲೆ ಇಂದು ಜಗತ್ತನ್ನೇ ಆವರಿಸಿದೆ. ಉದಾರೀಕರಣ (Libralisation) ಖಾಸಗೀಕರಣ (Privatesation)-

ತತ್ವಜ್ಞಾನ ಮತ್ತು ವ್ಯವಹಾರ

ಹಸನ್ ನಯೀಂ ಸುರಕೋಡ

ಥೈಲ್ಯಾಂಡಿನ ಬ್ಯಾಂಕಾಕಿನಲ್ಲಿ 2012ರ ಜನವರಿ 28-29ರಂದು AMAN (Asian Muslim Action Network) ಒಂದು ಕುತೂಹಲಕರ ವಿಚಾರಸಂಕಿರಣವನ್ನು ಏರ್ಪಡಿಸಿತ್ತು. ಏಷ್ಯಾದ ವ್ಯಾಪ್ತಿಯುಳ್ಳ ಸಂಘಟನೆ ಅದು. ಅಂತರ್ಧರ್ಮೀಯ ಶಾಂತಿ, ಮಾನವ ಹಕ್ಕುಗಳು ಹಾಗೂ ಮಹಿಳಾ ಹಕ್ಕುಗಳ ಪ್ರತಿಪಾದನೆ ಆ ಮುಸ್ಲಿಂ ಸಂಘಟನೆಯ ಧ್ಯೇಯ. ಫಿಲಿಪೈನ್ಸ್, ಮಲೇಷ್ಯಾ, ಇಂಡೋನೇಷ್ಯಾ, ಥೈಲ್ಯಾಂಡ್, ಭಾರತ, ಬಾಂಗ್ಲಾ ದೇಶ ಮುಂತಾದ ಹಲವಾರು ಏಷ್ಯನ್ ದೇಶಗಳ ಪ್ರತಿನಿಧಿಗಳು ಅದರಲ್ಲಿ ಪಾಲ್ಗೊಂಡಿದ್ದರು. ಜೊತೆಗೆ ಸ್ವಿಡನ್‌ದಿಂದ ಮೂವರು ಪ್ರತಿನಿಧಿಗಳು ಸಹ ವಿಚಾರಸಂಕಿರಣದಲ್ಲಿ ಭಾಗವಹಿಸಿ ಕುತೂಹಲಕರ ವಿಷಯ ಮಂಡಿಸಿದರು.

AMANನ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಸಬೂರ್ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿ ವಿಚಾರಸಂಕಿರಣದ ಉದ್ದೇಶದ ಮೇಲೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿದರು. AMANನ ಅಧ್ಯಕ್ಷನಾದ ನಾನು ಪ್ರಾಸ್ತಾವಿಕ ನುಡಿಗಳನ್ನಾಡಿ ವಿಚಾರಸಂಕಿರಣದ ಉದ್ದೇಶವನ್ನು ವಿವರಿಸಿದೆ. ನಾವು ಹೆಚ್ಚಿನ ಸಂದರ್ಭಗಳಲ್ಲಿ ಒಂದು ವಿಶಿಷ್ಟ ತತ್ವಜ್ಞಾನ ಇಲ್ಲಾ ಐಡಿಯಾಲಜಿ ಇಲ್ಲಾ ಧರ್ಮದಲ್ಲಿ ನಂಬಿಕೆ ಉಳ್ಳವರಾಗಿರುತ್ತೇವೆ, ಆದರೆ ದುರದೃಷ್ಟವೆನ್ನುವಂತೆ ನಮ್ಮ ವ್ಯವಹಾರ ಸಂಪೂರ್ಣವಾಗಿ ಆ ನಂಬಿಕೆ ಇಲ್ಲಾ ತತ್ವಜ್ಞಾನದಿಂದ ನಿಯಂತ್ರಿಸಲ್ಪಡುವುದಿಲ್ಲ ಎಂದು ನಾನು ಹೇಳಿದೆ. ಅದಕ್ಕೆಂತಲೇ ನೀವು ಆಡಿದಂತೆ ನಡೆಯುವುದಿಲ್ಲ ಏಕೆ (ಲೀ ಮಾ ತಖುಲುನಾ ಮಾ ಲಾ ತಫಾಅಲುನ್) ಎನ್ನುವ ಸೂಕ್ತ ಪ್ರಶ್ನೆಯನ್ನು ಕೇಳುತ್ತದೆ.

ಮನುಷ್ಯನ ವರ್ತನೆ ತುಂಬ ಸಂಕೀರ್ಣವಾದದ್ದು ಎನ್ನುವುದು ಈ ಪ್ರಶ್ನೆಗೆ ಉತ್ತರ. ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ, ಎಲ್ಲಕ್ಕೂ ಮಿಗಿಲಾಗಿ ವ್ಯಕ್ತಿಯ ಸ್ವಂತ ಹಿತಾಸಕ್ತಿಯಂತಹ ಹಲವಾರು ಸಂಗತಿಗಳಿಂದ ಮನುಷ್ಯನ ವರ್ತನೆ ನಿರ್ಧರಿಸಲ್ಪಡುತ್ತದೆ. ಕ್ರಿಯಾಶೀಲ ಮನುಷ್ಯ ಯಾವುದೋ ಒಂದು ಧರ್ಮ, ಐಡಿಯಾಲಜಿ ಇಲ್ಲಾ ತತ್ವಜ್ಞಾನಕ್ಕೆ ಬದ್ಧನಾಗಬಹುದು. ಆದರೆ ಅವನು/ಅವಳು ಆ ಧರ್ಮ, ಐಡಿಯಾಲಜಿ ಇಲ್ಲಾ ತತ್ವಜ್ಞಾನದ ಮೂಲ ತತ್ವಗಳನ್ನು ನೇರವಾಗಿ ಕ್ರಿಯೆಗಳಾಗಿ ಪರಿವರ್ತಿಸಲೇಬೇಕೆಂದೇನಿಲ್ಲ. ಹಾಗಾಗಿದ್ದರೆ ನಮ್ಮ ಜಗತ್ತು ಬದುಕಲು ಅರ್ಹವಾದ ಪರಿಪೂರ್ಣ, ಶಾಂತಿ ಹಾಗೂ ಸೌಹಾರ್ದದ ಬೀಡಾಗಿರುತ್ತಿತ್ತು.

ಐದು ಸಾವಿರ ವರ್ಷಕ್ಕೂ ಹೆಚ್ಚಿನ ಇತಿಹಾಸವುಳ್ಳ ಹಾಗೂ ನೂರಾರು ಪ್ರವಾದಿಗಳು, ಸಂತರು, ಚಿಂತಕರನ್ನು ಕಂಡಿರುವ ನಮ್ಮ ಜಗತ್ತು ನಿಷ್ಕ್ರಿಯತೆಯಿಂದಾಗಿ ಹಾಗೂ ನಾವು ನಂಬಿದ, ನಮ್ಮ ಘೋಷಿತ ತತ್ವಜ್ಞಾನವನ್ನು ಕಾರ್ಯಗತಗೊಳಿಸದಿರುವುದರಿಂದಾಗಿ ಇನ್ನೂ ಘರ್ಷಣೆ, ಯುದ್ಧ ಹಾಗೂ ರಕ್ತಪಾತದಲ್ಲಿ ಮುಳುಗಿ ಬಿಟ್ಟಿದೆ. ಈ ಕಾರಣಕ್ಕಾಗಿಯೇ ಮಹಾನ್ ವ್ಯಕ್ತಿಗಳು ಹಾಗೂ ಚಿಂತಕರ ಜನ್ಮ ದಿನದ ಸಂದರ್ಭಗಳಲ್ಲಿ ಅವರು ಬೋಧಿಸಿದ್ದನ್ನು ಪ್ರತಿ ವರ್ಷ ನೆನಪಿಸಿಕೊಳ್ಳುತ್ತೇವೆ, ಆ ಸಂದೇಶವನ್ನು ವರ್ಷಗಳುರುಳಿದಂತೆ ಪುನರಾವರ್ತಿಸುತ್ತೇವೆ. ಆದರೆ ಆಚರಣೆ ಮಾತ್ರ ಎಂದಿನಂತೆ ದೊಡ್ಡ ಶೂನ್ಯವಾಗಿರುತ್ತದೆ.

ಮುಸಲ್ಮಾನರಿಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ನಾವು ಪ್ರವಾದಿಯ ಜನ್ಮ ದಿನ (ಈದ್ ಮೀಲಾದುನ್ನಬಿ)ವನ್ನು ಪ್ರತಿ ವರ್ಷ ಆಚರಿಸುತ್ತೇವೆ. ಪ್ರತಿ ವರ್ಷ ನಮ್ಮ ಮೌಲಾನಾಗಳು ಹಾಗೂ ಮೌಲವಿಗಳು ಪ್ರವಾದಿಯ ಜೀವನ ಚರಿತ್ರೆಯನ್ನು ಗಮನದಲ್ಲಿರಿಸಿಕೊಂಡು ನಾವು ಕ್ರಿಯಾಶೀಲರಾಗಬೇಕೆಂದು ಹೇಳುತ್ತಲೇ ಇದ್ದಾರೆ. ಆದರೆ ನಾವು ಇಷ್ಟು ವರ್ಷ ವರ್ತಿಸಿದಂತೆಯೆ ವರ್ತಿಸುತ್ತಲಿದ್ದೇವೆ. ಅಷ್ಟೇ ಅಲ್ಲ, ಬೋಧನೆಯ ಕಾಯಕದಲ್ಲಿ ತೊಡಗಿಕೊಂಡ ಮೌಲವಿಗಳು ಹಾಗೂ ಮೌಲಾನಾಗಳೆ ಪ್ರವಾದಿಯ ಜೀವನಚರಿತ್ರೆಗೆ ತಕ್ಕಂತೆ ನಡೆಯುವುದಿಲ್ಲ. ನಮಗೆ ಆದರ್ಶ ವ್ಯಕ್ತಿಗಳೆ ಇಲ್ಲವಾಗಿದ್ದಾರೆ. ಕುರ್‌ಆನ್ ಪುರುಷ ಹಾಗೂ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಕೊಡಮಾಡಿದೆ,



ಕುರ್‌ಆನ್ ಸಂಪತ್ತನ್ನು ಕೂಡಿಹಾಕುವುದನ್ನು ಬಲವಾಗಿ ಖಂಡಿಸುತ್ತದೆ. ಆ ವಿಷಯವಾಗಿ ಕುರ್‌ಆನ್‌ನಲ್ಲಿ ಹಲವಾರು ಶ್ಲೋಕಗಳಿವೆ. ಆದಾಗ್ಯೂ ಮುಸಲ್ಮಾನರು ಸಂಪತ್ತನ್ನು ಎಂದೂ ಕೂಡಿಹಾಕಬಾರದೆನ್ನಲಿಲ್ಲ. ಕೇವಲ ಸೂಫಿಗಳು ಆವಶ್ಯಕತೆಗಳಿಗನುಗುಣವಾಗಿ ಬದುಕುವ ಜೀವನಶೈಲಿಯನ್ನು ಅಂಗೀಕರಿಸಿದರು. ಕೇವಲ ಬಡವರು ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನುಳಿದಂತೆ ಮಿಕ್ಕೆಲ್ಲ ಮುಸಲ್ಮಾನರು ವಿಲಾಸದ ಬದುಕನ್ನು ಬದುಕಬೇಕೆಂದವರು. ಈ ಮುಸಲ್ಮಾನರು ಇಸ್ಲಾಮೀ ತತ್ವಜ್ಞಾನವನ್ನು ಅಂಗೀಕರಿಸಿದ್ದರೆ ಪೂರ್ವ ಯುರೋಪಿನಲ್ಲಿ ಕಮ್ಯುನಿಜಂ ಬರುವುದಕ್ಕೆ ಎಷ್ಟೋ ಮೊದಲು ಬಡತನದ ನಿರ್ಮೂಲನೆಯಾಗಿರುತ್ತಿತ್ತು.

ಅದು ತನ್ನ ಆಶಯದಲ್ಲಿ ಪ್ರಜಾಸತ್ತಾತ್ಮಕವಾಗಿದೆ, ಅದು ಮಾನವ ಹಕ್ಕುಗಳನ್ನು ಮಾನ್ಯ ಮಾಡುತ್ತದೆ– ಆ ಬಗ್ಗೆ ರಾಶಿ ರಾಶಿ ಪ್ರಬಂಧಗಳನ್ನು ಬರೆಯಲಾಗಿದೆ–, ಇಸ್ಲಾಮಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ ಇತ್ಯಾದಿಯಾಗಿ ನಾವು ವೈಭವೀಕರಿಸುತ್ತೇವೆ. ಆದರೆ ಈ ಆದರ್ಶಗಳು ಆಚರಣೆಯಲ್ಲಿವೆಯೆ ಎಂದು ನಾವು ಏಕೆ ವಿಮರ್ಶಾತ್ಮಕವಾಗಿ ಚಿಂತನೆ ಮಾಡುತ್ತಿಲ್ಲ? ನಾವು ನಮ್ಮ ಮಹಿಳೆಯರನ್ನು ಸಮಾನರೆಂದು ಪರಿಗಣಿಸುತ್ತಿದ್ದೇವೆಯೆ? ನಾವು ಅವರಿಗೆ ಕನಿಷ್ಠ ಇಸ್ಲಾಂ ಕೊಡಮಾಡಿದ ಹಕ್ಕುಗಳನ್ನಾದರೂ ನೀಡಿದ್ದೇವೆಯೆ? ಅವರನ್ನು ಈ ಹಕ್ಕುಗಳಿಂದ ವಂಚಿತಗೊಳಿಸಲೆಂದೇ ಸಾಕಷ್ಟು ಕಸರತ್ತು ಮಾಡುತ್ತಿರುವುದನ್ನು ನಾವು ಕಾಣಬಹುದು. ಯಾರಾದರೂ ಈ ಹಕ್ಕುಗಳಿಗಾಗಿ ಆಗ್ರಹಿಸತೊಡಗಿದರೆ ಅವನು/ಅವಳು ಪಾಶ್ಚಿಮಾತ್ಯ ಮಹಿಳಾವಾದಿಯೆನ್ನುವ ಆಪಾದನೆಗೆ ಗುರಿಯಾಗಬೇಕಾಗುತ್ತದೆ.

ಹೀಗೆ ನಾವು ಒಂದೇ ಉಸಿರಿನಲ್ಲಿ ನಮ್ಮ ಮಾತನ್ನು ನಾವೇ ನಿರಾಕರಿಸಿ ಬಿಡುತ್ತಿದ್ದೇವೆ. ಎಷ್ಟು ಇಸ್ಲಾಮೀ ದೇಶಗಳು ಪ್ರಜಾಪ್ರಭುತ್ವ ಹೊಂದಿವೆ? ಅಷ್ಟಕ್ಕೂ ಕೆಲ ದೇಶಗಳಲ್ಲಿ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವ ಪ್ರಯತ್ನ ನಡೆದಿದ್ದರೆ ಅದು ಜನತೆಯ ಹೋರಾಟದಿಂದಾಗಿಯೆ ವಿನಾ ಇಸ್ಲಾಂ ಅದನ್ನು ಪ್ರತಿಪಾದಿಸುತ್ತದೆಯೆಂದೇನಲ್ಲ. ಇಜಿಪ್ಟ್, ಲಿಬಿಯ, ಟುನೀಷಿಯ ಮುಂತಾದ ದೇಶಗಳಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ದೊರಕಿಸಲು ನೂರಾರು ಜನ ಪ್ರಾಣ ಕಳೆದುಕೊಳ್ಳಬೇಕಾಯಿತು. ಇಸ್ಲಾಮಿನ ತತ್ವಗಳನ್ನು ನಾವು ಗಣನೆಗೆ ತೆಗೆದುಕೊಂಡಿದ್ದರೆ ಶತಶತಮಾನಗಳಿಂದ ಪ್ರಜಾಪ್ರಭುತ್ವ ಸುಭದ್ರವಾಗಿರುತ್ತಿತ್ತು.

ಅದೇ ರೀತಿ ಮಾನವ ಹಕ್ಕುಗಳು–ಕುರ್‌ಆನ್‌ನಲ್ಲಿ ಸ್ಪಷ್ಟವಾಗಿ ಅವುಗಳ ಉಲ್ಲೇಖವಿದ್ದರೂ–ಹಲವಾರು ಇಸ್ಲಾಮೀ ದೇಶಗಳಲ್ಲಿ ಅವಾಚ್ಯ ಶಬ್ದವಾಗಿತ್ತು, ಈಗಲೂ ಅವಾಚ್ಯವೆಂದು ಪರಿಗಣಿಸಲ್ಪಟ್ಟಿದೆ. ಸರ್ವಾಧಿಕಾರಿ ಆಡಳಿತಗಾರರು ಮಾನವ ಹಕ್ಕುಗಳ ಕಾರ್ಯಕರ್ತರಿಗೆ ವಿದೇಶೀ ಏಜೆಂಟರೆನ್ನುವ ಹಣೆಪಟ್ಟಿ ಹಚ್ಚಲೆತ್ನಿಸುತ್ತಿದ್ದಾರೆ. ಕುರ್‌ಆನ್ ಏಕೈಕ ಸಂವಿಧಾನ ಆಗಬಲ್ಲದು (ಪ್ರಜಾಪ್ರಭುತ್ವವನ್ನು ತಿರಸ್ಕರಿಸುವ ಕುತಂತ್ರ) ಎಂದು ಪ್ರತಿಪಾದಿಸುವವರೇ ಅದನ್ನು ಖುಲ್ಲಂ ಖುಲ್ಲಾ ಉಲ್ಲಂಘಿಸುತ್ತಿದ್ದಾರೆ. ಇಸ್ಲಾಮೀ ಜಗತ್ತು ಕುರ್‌ಆನ್‌ನ ಅವಕಾಶಗಳನ್ನು ಕಾರ್ಯಗತಗೊಳಿಸಿದ್ದರೆ ಮುಸಲ್ಮಾನರಿಗೆ ಇಂದು ಒಂದು ಉತ್ತಮ ಜಗತ್ತಿನಲ್ಲಿ ಉಸಿರಾಡುವ ಅವಕಾಶವಿರುತ್ತಿತ್ತು. ಆದರೆ ಎಲ್ಲೆಡೆ ಆಚರಣೆ ಎಂದೂ ಬೋಧನೆಯಂತಿಲ್ಲವೇ ಇಲ್ಲ.

ಇದು ಬರೀ ಇಸ್ಲಾಮೀ ಜಗತ್ತಿಗೆ ಮಾತ್ರ ಅನ್ವಯಿಸುವ ಮಾತಲ್ಲ. ಪಾಶ್ಚಾತ್ಯ ದೇಶಗಳೇನೂ ಕಮ್ಮಿ ಢೋಂಗಿಯಾಗಿಲ್ಲ. ಪಾಶ್ಚಾತ್ಯ ದೇಶದ ಜನರು ಪುನರುಜ್ಜೀವನ, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವನ್ನು ನೆಲೆಗೊಳಿಸಲು ಅಪಾರ ತ್ಯಾಗ ಮಾಡಿದ್ದಾರೆ. ಆ ಉದ್ದೇಶಕ್ಕಾಗಿ ಲಕ್ಷಾಂತರ ಜನರು ಬಲಿದಾನ ಮಾಡಬೇಕಾಯಿತು. ಆದರೆ ಶೀಘ್ರವೇ ಆ ದೇಶಗಳಿಗೆ ಪ್ರಜಾಪ್ರಭುತ್ವ ಸಾಮ್ರಾಜ್ಯಶಾಹಿಯಾದರೆ ಏಷ್ಯಾ ಹಾಗೂ ಆಫ್ರಿಕಾದ ದೇಶಗಳಿಗೆ ಅದು ವಸಾಹತುಶಾಹಿಯಾಗಿ ಪರಿಣಮಿಸಿತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ ಮತ್ತಿತರ ಪಾಶ್ಚಿಮಾತ್ಯ ಶಕ್ತಿಗಳು ಹಲವಾರು ಏಷ್ಯನ್ ಹಾಗೂ ಆಫ್ರಿಕನ್ ದೇಶಗಳನ್ನು ತಮ್ಮ ವಸಾಹತುಗಳನ್ನಾಗಿ ಪರಿವರ್ತಿಸಿದವು. ಆ ದೇಶದ ಜನರಿಗೆ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಿದವು.

ಈ ವಸಾಹತುಗಳು ಪುನಃ ಸ್ವಾತಂತ್ರ್ಯ ಗಳಿಸಿಕೊಳ್ಳಲು ತಮ್ಮ ವಸಾಹತುಶಾಹೀ ಆಳರಸರ ವಿರುದ್ಧ ಸಾವಿರಾರು ಜನರನ್ನು ಬಲಿ ಕೊಟ್ಟು ಹೋರಾಟ ಮಾಡಬೇಕಾಯಿತು. ಫ್ರಾನ್ಸ್ ವಿರುದ್ಧ ಮಾಡಿದ ಅಲ್ಜೀರಿಯನ್ನರ ಹೋರಾಟ ಎಷ್ಟು ಭೀಕರವಾಗಿತ್ತು ಎನ್ನುವುದನ್ನು ನಾವು ನೋಡಬಹುದು. ವಜ್ರ ಬಾಚಿಕೊಳ್ಳುವ ಉದ್ದೇಶದಿಂದ ಕಾಂಗೋನಲ್ಲಿ ಅಮೆರಿಕಾ ಮಾಡಿದ್ದು–ಲುಮಾಂಬಾರ ಹತ್ಯೆಗೈದದ್ದು–ಅತ್ಯಂತ ಹೇಯ ಕೃತ್ಯ. ಪಾಶ್ಚಾತ್ಯ ಶಕ್ತಿಗಳು ಈ ಆಫ್ರೋ–ಏಷ್ಯನ್ ಹಾಗೂ ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ನೈಜ ಪ್ರಜಾಪ್ರಭುತ್ವ ಕ್ರಿಯಾಶೀಲವಾಗಲು ಬಿಡುವುದಿಲ್ಲ.

ಅಮೆರಿಕಾ, ಹಲವಾರು ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಅನೇಕ ಸರ್ವಾಧಿಕಾರಿಗಳನ್ನು ಪ್ರತಿಷ್ಠಾಪಿಸಿದೆ, ಅವುಗಳನ್ನು ನಿರ್ವೀರ್ಯ ಅಣಕು ಗಣತಂತ್ರ ವ್ಯವಸ್ಥೆಯ ಮಟ್ಟಿಗೆ ತಂದಿದೆ. ಆದಾಗ್ಯೂ ಅಮೆರಿಕಾ ತನ್ನದು ಮಾತ್ರ ನೈಜ ಪ್ರಜಾಪ್ರಭುತ್ವವೆಂದು ಕೊಚ್ಚಿಕೊಂಡರೆ ರಷ್ಯಾ ಸರ್ವಾಧಿಕಾರಿ ಪ್ರಭುತ್ವವೆಂದು ಹೀಗಳೆಯುತ್ತಿತ್ತು. ಅದೊಂದು ಪ್ರಜಾಪ್ರಭುತ್ವವೆನ್ನುವುದು ಬರಿ ಮಿಥ್ಯೆ ಎಂದು ಅದರ ದೈನಂದಿನ ನಡೆವಳಿ ಋಜುವಾತುಪಡಿಸುತ್ತಲಿದೆ. ಅದು ಅಫ್ಘಾನಿಸ್ತಾನ್ ಹಾಗೂ ಇರಾಕ್ ಎರಡನ್ನೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಮಸಣವನ್ನಾಗಿಸಿತು. ಅದು ಸದ್ದಾಂ ಮತ್ತು ತಾಲಿಬಾನ್ ಪ್ರಭುತ್ವದ ವಿರುದ್ಧ ಅಪಪ್ರಚಾರ ಮಾಡಲು ಮಾಧ್ಯಮವನ್ನು ಬಳಸಿಕೊಂಡಿತು. ಅಲ್ಲಿ ಯಾವುದೇ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳನ್ನು ಪತ್ತೆ ಹಚ್ಚುವುದಕ್ಕಿಂತ ಹೆಚ್ಚಾಗಿ ಅದು ತನ್ನ ಸ್ವಂತದ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳಿಂದ ಲಕ್ಷಾಂತರ ಜನರನ್ನು ಕೊಂದುಬಿಟ್ಟಿತು.

ಅಮೆರಿಕಾ ಸಾವಿರಾರು ಸಂಖ್ಯೆಯಲ್ಲಿ ಅಮಾಯಕ ಜನರನ್ನು ಕೊಲ್ಲುವುದಕ್ಕೆ ಸಂಬಂಧಿಸಿದಂತೆ ಇಸ್ರೇಲನ್ನು ಬಲವಾಗಿ ಬೆಂಬಲಿಸುತ್ತದೆ. ಆ ಉದ್ದೇಶಕ್ಕಾಗಿ ಅದಕ್ಕೆ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಪೂರೈಸುತ್ತದೆ. ಇಸ್ರೇಲ್ ಸುಮಾರು 200 ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ವಿಷಯವಾಗಿ ವಿರೋಧ ವ್ಯಕ್ತಪಡಿಸುವ ಗೊಡವೆಗೇ ಹೋಗುವುದಿಲ್ಲ (ಬದಲಾಗಿ ಸಮರ್ಥಿಸುತ್ತದೆ). ಇನ್ನೊಂದೆಡೆ ತನ್ನ ಪರಮಾಣು ಕಾರ್ಯಕ್ರಮ ಅಣುಶಕ್ತಿ ಅಭಿವೃದ್ಧಿಪಡಿಸುವುದಕ್ಕಾಗಿ ಇದೆಯೆ ಹೊರತು ಶಸ್ತ್ರಾಸ್ತ್ರಗಳ ನಿರ್ಮಾಣಕ್ಕಾಗಿ ಅಲ್ಲವೆಂದು ಇರಾನ್ ಸ್ಪಷ್ಟಪಡಿಸಿದ್ದರೂ ಅದು ಪರಮಾಣು ಕಾರ್ಯಕ್ರಮ ಕೈ ಬಿಡುವಂತೆ ಮಾಡಲು ಸಾಧ್ಯವಾದ ಎಲ್ಲ ಪ್ರಯತ್ನ ಮಾಡುತ್ತಿದೆ. ಅದೂ ಅಂತರ್ ರಾಷ್ಟ್ರೀಯ ಪರಮಾಣು ಆಯೋಗ ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಮೊದಲೇ. ಇದು ಆಷಾಢಭೂತಿತನವಲ್ಲವೆ?

ಇಸ್ರೇಲ್ ತಾನೊಂದು ಯಹೂದಿ ರಾಷ್ಟ್ರವೆಂದು ಹೇಳಿಕೊಳ್ಳುತ್ತದೆ. ಆದರೆ ಅದು ಜುಡಾಯಿಜಮ್ಮಿನ ಬೋಧನೆಗಳನ್ನು ಉಲ್ಲಂಘಿಸುವಂತಹದೆಲ್ಲವನ್ನೂ ಮಾಡುತ್ತಿದೆ. ಇಸ್ರೇಲಿ ಪ್ರಭುತ್ವದ ನಡವಳಿಕೆ ವಾಸ್ತವದಲ್ಲಿ ಜುಡಾಯಿಜಮ್ಮಿಗಿಂತ ಝಿಯನಿಸ್ಟ್ ಐಡಿಯಾಲಜಿಗೆ ಅನುಗುಣವಾಗಿದೆ. ಜಗಜ್ಜಾಹೀರಾಗಿರುವಂತೆ ಇಸ್ಲಾಂ ಜುಡಾಯಿಜಮ್ಮನ್ನು ಧರ್ಮಗ್ರಂಥದ ಜನರ ಧರ್ಮವೆಂದು ಮಾನ್ಯ ಮಾಡಿದೆ. ಇತಿಹಾಸುದ್ದಕ್ಕೂ ಮುಸ್ಲಿಮರು ಮತ್ತು ಯಹೂದಿಗಳ ಸಂಬಂಧಗಳು ಸುಮಧುರವಾಗಿವೆ. ಯಹೂದಿಗಳು ಮುಸ್ಲಿಂ ದೇಶಗಳಲ್ಲಿ ಶಾಂತಿ ಹಾಗೂ ನೆಮ್ಮದಿಯಿಂದ ಬದುಕಿದ್ದಾರೆ. ಅಷ್ಟೇ ಅಲ್ಲ ಮುಸ್ಲಿಂ



ದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ವಾಸ್ತವದಲ್ಲಿ ಯಹೂದಿಯರು ಕ್ರಿಶ್ಚಿಯನ್ನರಿಂದಲೇ ಚಿತ್ರಹಿಂಸೆಗೀಡಾಗಿದ್ದಾರೆ.

ಇಂದು ಪಾಶ್ಚಾತ್ಯ ದೇಶಗಳು ಇಸ್ರೇಲನ್ನು ಬೆಂಬಲಿಸುತ್ತಿವೆ, ಯಹೂದಿಯರನ್ನು ಮಿತ್ರರೆಂದು ಪರಿಗಣಿಸುತ್ತವೆ. ಯಾಕೆ? ಯಾಕೆಂದರೆ ಅವು ಅರಬರನ್ನು ಯಹೂದಿಯರ ಶತ್ರುಗಳನ್ನಾಗಿ ಮಾಡಿವೆ. ತಮ್ಮನ್ನು ಯಹೂದಿಯರ ಮಿತ್ರರನ್ನಾಗಿ ಮಾಡಿಕೊಂಡಿವೆ– ಅರೇಬಿಯಾದ ತೈಲಕ್ಕಾಗಿ. ಅರಬರು ತೈಲ ಪೂರೈಕೆಯನ್ನು ನಿಲ್ಲಿಸಿ ಬಿಡಬಹುದು, ತಮ್ಮ ಕಾರ್ಖಾನೆಗಳಲ್ಲಿನ ಯಂತ್ರಗಳ ಚಕ್ರಗಳು ನಿಂತು ಬಿಡಬಹುದೆಂದು ಅಮೇರಿಕನ್ನರಿಗೆ ಆತಂಕ. ಅದಕ್ಕೆಂತಲೇ ಅವರು ಇಸ್ರೇಲನ್ನು ಅವರ ಮಧ್ಯೆ ನೆಲೆ ನಿಲ್ಲಿಸಿದರು. ಆ ಮೂಲಕ ಇಸ್ರೇಲಿನ ಸಹಾಯದೊಂದಿಗೆ ಅರಬರನ್ನು ಹತ್ತಿಕ್ಕಬಹುದು ಎನ್ನುವುದು ಅವರ ಲೆಕ್ಕಾಚಾರವಾಗಿತ್ತು. ಅದು ಒಂದು ಚಾಣಾಕ್ಷ ತಂತ್ರವಲ್ಲದೆ ಇನ್ನೇನಲ್ಲ.

ತಾವು ಇಸ್ಲಾಂ ವಿರೋಧಿಯಾಗಿ ಕಂಡು ಬರಬಾರದೆಂದು ಅವರು ಸೌದಿ, ಕುವೈಟ್ ಮತ್ತಿತರ ಇಂತಹ ಕೊಲ್ಲಿ ರಾಷ್ಟ್ರಗಳ ಸ್ನೇಹ ಸಂಪಾದಿಸಿ ಇಲ್ಲಿ ತಮ್ಮ ಸೇನಾ ನೆಲೆಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ತಮ್ಮದೇ ಜನತೆಯ ಪ್ರಜಾಸತ್ತಾತ್ಮಕ ಆಶೋತ್ತರಗಳನ್ನು ಹೊಸಕಿ ಹಾಕಲು, ಇಸ್ರೇಲ್ ವಿರುದ್ಧ ಹೋರಾಡುವುದಕ್ಕೆ ಬದಲಾಗಿ ತಮ್ಮದೇ ಜನತೆಯ ಬಂಡಾಯಗಳನ್ನು ಹತ್ತಿಕ್ಕಲು ಶಸ್ತ್ರಾಸ್ತ್ರಗಳನ್ನು ಪಡೆಯಲು ಅಮೇರಿಕಾದ ಸಹಾಯ ಈ ಅರಬ್ ದೇಶಗಳಿಗೆ ಸಹ ಅವಶ್ಯವೆನಿಸಿದೆ.

ಹೀಗೆ ಅಮೇರಿಕಾ ತಾನೇ ಚಾಣಾಕ್ಷತನದಿಂದ ಹುಟ್ಟುಹಾಕಿದ ಸಂದರ್ಭವನ್ನು ಬಳಸಿಕೊಳ್ಳುತ್ತಿದೆ. ಒಂದೆಡೆ ಅದು ಅರೇಬಿಯಾದ ತೈಲವನ್ನು ನಿಯಂತ್ರಿಸಿದರೆ ಇನ್ನೊಂದೆಡೆ ಅಮೇರಿಕಾದ ಅರ್ಥವ್ಯವಸ್ಥೆ ಬಲವಾಗಿ ಅವಲಂಬಿಸಿರುವ ಸೇನಾ ಉದ್ದಿಮೆ ಸಂಕೀರ್ಣವನ್ನು ಸಲಹುತ್ತದೆ. ಅಮೇರಿಕಾದ ಯಾವುದೇ ಸರ್ಕಾರ ಈ ಉದ್ದಿಮೆಗಳ ಒತ್ತಡಗಳನ್ನು ಹಾಗೂ ಅವುಗಳ ಪ್ರಭಾವಿ ಲಾಬಿಗಳನ್ನು ಅಲಕ್ಷಿಸುವುದು ಸಾಧ್ಯವಿಲ್ಲ. ಈ ಪ್ರಕ್ರಿಯೆಯಲ್ಲಿ ಅವರು ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ಸಾಧ್ಯವಾದ ಎಲ್ಲ ತತ್ವಗಳನ್ನು ಉಲ್ಲಂಘಿಸುತ್ತಾರೆ.

ಪತ್ರಿಕಾ ಸ್ವಾತತ್ರ್ಯ ಕುರಿತಂತೆ ಮಾತನಾಡದಿರುವುದೇ ಒಳ್ಳೆಯದು. ಅದೊಂದು ದೊಡ್ಡ ಭ್ರಮೆ. ಮಾಧ್ಯಮವೇ ಸಂಪೂರ್ಣವಾಗಿ ಪ್ರಬಲ ಪಟ್ಟಭದ್ರ ಹಿತಾಸಕ್ತಿಗಳಿಂದ ನಿಯಂತ್ರಿಸಲ್ಪಡುತ್ತಿದೆ. ಪತ್ರಿಕಾ ಮಾಧ್ಯದಲ್ಲಿ ಪ್ರಕಟವಾಗುವುದು ಇಲ್ಲಾ ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ತೋರಿಸುವುದನ್ನು ಅದೆಷ್ಟು ಚಾಣಾಕ್ಷತನದಿಂದ ಆಯ್ಕೆ ಮಾಡಿಕೊಳ್ಳಲಾಗುವುದೆಂದರೆ ಒಂದೆಡೆ ಅದು ಮಾಧಯಮ ಸ್ವಾತಂತ್ರ್ಯದಂತೆ ಕಂಡರೆ ಇನ್ನೊಂದೆಡೆ ಅದು ಮಾಧ್ಯಮದ ಹಿತಾಸಕ್ತಿಗಳು ಹಾಗೂ ಉದ್ಯಮಪತಿಗಳ ಹಿತವನ್ನು ಸಹ ರಕ್ಷಿಸುತ್ತದೆ. ಈ ಆಟವನ್ನರಿಯದ ಸಾಮಾನ್ಯ ಜನ ಅಮೇರಿಕಾದಲ್ಲಿನ ಸ್ವಾತಂತ್ರ್ಯ ಹಾಡಿ ಹರಿಸುತ್ತಾರೆ.

ಹೌದು, ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಬಲು ಮಹತ್ವದ ಮೂಲಭೂತ ಮೌಲ್ಯ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಅಪ್ಪಟ ಸ್ವಾತಂತ್ರ್ಯ ಲಭಿಸುವಂತಾದರೆ ಪರಿಸ್ಥಿತಿ ಬೇರೆಯದೆ ಆಗಿರುತ್ತದೆ. ಆದರೂ ಮೇಲೆ ಸೂಚಿಸಿರುವಂತೆ, ಸ್ವಾತಂತ್ರ್ಯದ ಭ್ರಮೆಯನ್ನು ನಿರ್ಮಿಸುವಿದಕ್ಕಾಗಿ ಸ್ವಾತಂತ್ರ್ಯವನ್ನೇ ಚಾಣಾಕ್ಷತನದಿಂದ ವ್ಯಖ್ಯಾನಿಸಲ್ಪಡುತ್ತದೆ. ಆಗ ಪಟ್ಟಭದ್ರ ಹಿತಾಸಕ್ತಿಗಳು ಈ ಸ್ವಾತಂತ್ರ್ಯದ ತತ್ವವನ್ನೇ ತಮಗೆ ಅನುಕೂಲವಾಗುವಂತೆ ಬಳಸಿಕೊಳ್ಳುತ್ತವೆ.

ಒಂದೆಡೆ ಉನ್ನತ ಆದರ್ಶಗಳ ತತ್ವಜ್ಞಾನ, ಇನ್ನೊಂದೆಡೆ ಅದಕ್ಕೆ ತದ್ವಿರುದ್ಧವಾಗಿ ಪ್ರಬಲ ಪಟ್ಟಭದ್ರ ಹಿತಾಸಕ್ತಿಗಳ ನಡಾವಳಿ ಪರಸ್ಪರ ಪೂರಕವಾಗಿ ಸಾಗುತ್ತಿರುತ್ತದೆ ಹಾಗೂ ಆ ಕಾರಣಕ್ಕಾಗಿಯೇ ಇಂತಹ ತತ್ವಜ್ಞಾನವಿದ್ದರೂ ಜನರ ಕಷ್ಟ ಕೊನೆಗಾಣದಾಗಿದೆ ಎನ್ನುವುದನ್ನು ಸೂಚಿಸುವುದಕ್ಕಾಗಿ ಇದೆಲ್ಲವನ್ನು ನಿರೂಪಿಸಬೇಕಾಯಿತು. ದೈವಶಾಸ್ತ್ರೀಯ ಪರಿಭಾಷೆಯಲ್ಲಿ ಹೇಳಬಹುದಾದರೆ ಅಲ್ಲಾಹ್ 124000 ಪ್ರವಾದಿಗಳನ್ನು ಕಳಿಸಿದ್ದಾನೆ ಎನ್ನುವ ಸಂಗತಿಯ ಹೊರತಾಗಿಯೂ ಎಲ್ಲ ಬಗೆಯ ಅನ್ಯಾಯ ತೊಡೆದು ಹಾಕಿ ನ್ಯಾಯ ನೆಲೆಸುವಂತೆ ಮಾಡಬಲ್ಲ ರಕ್ಷಕ ಇಲ್ಲಾ ಮೆಹದಿಗಾಗಿ ಜನ ಎದುರು ನೋಡುತ್ತಿದ್ದಾರೆ.

ಕುರ್‌ಆನ್‌ನಲ್ಲಿ ಅಲ್ಲಾಹ್ ಭರವಸೆ ನೀಡಿರುವಂತೆ, ದುರ್ಬಲ ವರ್ಗಗಳಿಗಾಗಿ ಒಂದೆಡೆ ಅಲ್ಲಾಹ್ ಮೋಸೆಸ್‌ನಂತಹ ಪ್ರವಾದಿಗಳನ್ನು ಕಳಿಸುತ್ತಾನೆ. ಅವನು ದುರ್ಬಲರನ್ನು ವಿಮೋಚನೆಗೊಳಿಸುತ್ತಾನೆ. ಮತ್ತೆ ದುರ್ಬಲರು ತಮ್ಮನ್ನು ವಿಮೋಚನೆಗೊಳಿಸಲು ಮೋಸೆಸ್‌ನಂತಹವನನಿಗಾಗಿ ಎದುರು ನೋಡುತ್ತಲೇ ಇದ್ದಾರೆ. ಪ್ರಾಯಶಃ ಅವರು ಮತ್ತೆ ಮತ್ತೆ ದುರ್ಬಲರಾಗುತ್ತಾರೆ ಹಾಗೂ ಅವರು ಮತ್ತೆ ಮತ್ತೆ ತಮ್ಮನ್ನು ವಿಮೋಚನೆಗೊಳಿಸುವ ಮೋಸೆಸ್ ಇಲ್ಲಾ ಮೆಹದಿಗಾಗಿ ಎದುರು ನೋಡುತ್ತಲೇ ಇರುತ್ತಾರೆ. ಇದು ಕೊನೆ ಇಲ್ಲದೆ ಮುಂದುವರಿಯುತ್ತದೆ. ಏಕೆಂದರೆ ಸ್ವಾರ್ಥ ಹಿತಾಸಕಿಗಳು ಹಾಗೂ ಎಲ್ಲ ಬಗೆಯ ಆಮಿಷಗಳಿಂದ ಮುಕ್ತವಾದ ಮನುಷ್ಯನಿನ್ನೂ ಹುಟ್ಟಿ ಬರಬೇಕಾಗಿದೆ.

ನಾವು ಇನ್ನೂ ಪಿತೃಪ್ರಧಾನ ಸಂಪ್ರದಾಯದಿಂದ ಮುಕ್ತರಾಗುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಮಹಿಳೆಯರು ಶಾಶ್ವತವಾಗಿ ತಮ್ಮನ್ನು ವಿಮೋಚನೆಗೊಳಿಸಿಕೊಳ್ಳುವುದೂ ಸಾಧ್ಯವಾಗುತ್ತಿಲ್ಲ. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕು ಎನ್ನುವುದಕ್ಕೆ ಪದೇ ಪದೇ ನಾವು ಕುರ್‌ಆನ್‌ನ ಬೋಧನೆಗಳಿಗೇ ಮೊರೆ ಹೋಗಬೇಕಾಗಿದೆ. ಮುಸ್ಲಿಂ ಜಗತ್ತಿನ ಬಹುತೇಕ ದೇಶಗಳಲ್ಲಿ ಮಹಿಳೆಯರು ಸಮಾನತೆಯ ಮಾತೇ ಎತ್ತುವಂತಿಲ್ಲ. ಇಂದಿಗೂ ಮರ್ಯಾದಾ ಹತ್ಯೆ ಮುಂದುವರಿದೇ ಇದೆ. ಕೊಲೆಗಾರ ಹೆಸರಿಗೆ ಶಿಕ್ಷೆ ಅನುಭವಿಸಿ ಪಾರಾಗಿ ಬಿಡುತ್ತಾನೆ. ಅಪರಿಚಿತನೊಂದಿಗೆ ಮಾತನಾಡುವುದು ಇಲ್ಲಾ ತನ್ನ ಇಚ್ಛೆಗನುಗುಣವಾಗಿ ಮದುವೆಯಾಗುವುದನ್ನು ಕುಟುಂಬಕ್ಕೆ ಕಳಂಕವೆಂದೇ ಪರಿಗಣಿಸಲಾಗುತ್ತಿದೆ.

ಇಸ್ಲಾಂ ನ್ಯಾಯಸಮ್ಮತ ವಿತರಣೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ. ಹೆಚ್ಚುವರಿ ಸಂಪತ್ತನ್ನು ಇಲ್ಲವದವರಿಗೆ ಹಂಚಬೇಕೆಂದು ಕುರ್‌ಆನ್ ಆಸ್ತಿಕರಿಗೆ ವಿಧಿಸುತ್ತದೆ. ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಬದುಕನ್ನು ಬದುಕ ಬೇಕೇ ವಿನಾ ದುರಾಸೆಯೇ ಬದುಕಿನ ಧ್ಯೇಯವಾಗಬಾರದೆಂದೂ ಅದು ಕಿವಿ ಮಾತು ಹೇಳುತ್ತದೆ. ಒಂದು ಹದೀಸ್ ಮೇರೆಗೆ ಪುರುಷರು ಉಂಗುರವನ್ನುಳಿದಂತೆ ಬೇರೆ ಯಾವುದೇ ಬಂಗಾರದ ಆಭರಣಗಳನ್ನು ತೊಡುವುದನ್ನು ನಿಷೇಧಿಸಲಾಗಿದೆ. ಹದಿಸ್ ಮೇರೆಗೇ ಮುಸಲ್ಮಾನರು ಬಂಗಾರ ಇಲ್ಲಾ ಬೆಳ್ಳಿಯ ತಟ್ಟೆಯಲ್ಲಿ ಊಟ ಮಾಡುವುದನ್ನೂ ನಿಷೇಧಿಸಲಾಗಿದೆ. ಆದಾಗ್ಯೂ ಉಮ್ಮೆಯಾರಿಂದ ಮೊದಲು ಮಾಡಿ ಆಳುವ ವರ್ಗದ ಮುಸಲ್ಮಾನರು ಸಾಮಾನ್ಯ'ಧರ್ಮನಿಷ್ಠರ ಕಲ್ಪನೆಗೂ ಮೀರಿದ ವಿಲಾಸದಲ್ಲಿ ಮುಳುಗಿದ್ದಾರೆ.

ಕುರ್‌ಆನ್ ಸಂಪತ್ತನ್ನು ಕೂಡಿಹಾಕುವುದನ್ನು ಬಲವಾಗಿ ಖಂಡಿಸುತ್ತದೆ. ಆ ವಿಷಯವಾಗಿ ಕುರ್‌ಆನ್‌ನಲ್ಲಿ ಹಲವಾರು ಶ್ಲೋಕಗಳಿವೆ. ಆದಾಗ್ಯೂ ಮುಸಲ್ಮಾನರು ಸಂಪತ್ತನ್ನು ಎಂದೂ ಕೂಡಿಹಾಕಬಾರದೆನ್ನಲಿಲ್ಲ. ಕೇವಲ ಸೂಫಿಗಳು ಆವಶ್ಯಕತೆಗಳಿಗನುಗುಣವಾಗಿ ಬದುಕುವ ಜೀವನಶೈಲಿಯನ್ನು ಅಂಗೀಕರಿಸಿದರು. ಕೇವಲ ಬಡವರು ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನುಳಿದಂತೆ ಮಿಕ್ಕೆಲ್ಲ ಮುಸಲ್ಮಾನರು

ವಿಲಾಸದ ಬದುಕನ್ನು ಬದುಕಬೇಕೆಂದವರು. ಈ ಮುಸಲ್ಮಾನರು ಇಸ್ಲಾಮೀ ತತ್ವಜ್ಞಾನವನ್ನು ಅಂಗೀಕರಿಸಿದ್ದರೆ ಪೂರ್ವ ಯುರೋಪಿನಲ್ಲಿ ಕಮ್ಯುನಿಜಂ ಬರುವುದಕ್ಕೆ ಎಷ್ಟೋ ಮೊದಲು ಬಡತನದ ನಿರ್ಮೂಲನೆಯಾಗಿರುತ್ತಿತ್ತು.

ಮಾರ್ಕ್ಸ್‌ನ ಪ್ರಸಿದ್ಧ ಹೇಳಿಕೆ ಪ್ರಕಾರ ತತ್ವಶಾಸ್ತ್ರಜ್ಞರು ಬರೀ ವಿಶ್ವವನ್ನು ವಿಶ್ಲೇಷಿಸಿದರೆ ಸಾಲದು, ಅದನ್ನು ಬದಲಿಸಬೇಕು. ಬದಲಾವಣೆಗೆ ಅವಶ್ಯವಾಗಿರುವುದು ಮೇಲ್ ಪಂಕ್ತಿಯ ಆಚರಣೆ. ಖೇದದ ಸಂಗತಿಯೆಂದರೆ ಕಮ್ಯುನಿಸ್ಟರು ಸಹ ಅಪವಾದವಾಗಿಲ್ಲ. ಯುಗೊಸ್ಲಾವಿಯಾದ ಡಿಜ್ಲಾಸ್ ತನ್ನ ಒಂದು ಗ್ರಂಥದಲಿ ರಷ್ಯಾದಲ್ಲಿ ಅಧಿಕಾರಸ್ಥರ ವರ್ಗವೊಂದು ಅಸ್ತಿತ್ವಕ್ಕೆ ಬಂದದ್ದನ್ನು ಹಾಗೂ ಆ ವರ್ಗ ಎಲ್ಲ ವಿಶೇಷಾಧಿಕಾರಗಳನ್ನು ಹೊಂದಿದ್ದನ್ನು ನಿರೂಪಿಸಿದ್ದಾನೆ. ಅಧಿಕಾರ ಗಳಿಸಿದವರು ವಿಶೇಷಾಧಿಕಾರಗಳನ್ನು ಹೊಂದಲು ಸಾಧ್ಯವಾದ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಲು ಹವಣಿಸುತ್ತಾರೆ. ಇದು ಎಲ್ಲ ಮನುಷ್ಯರ ದೌರ್ಬಲ್ಯವಾಗಿದೆ. ಮುಸ್ಲಿಂ ಆಳುವ ವರ್ಗದವರು ಮುಖ್ಯವಾಗಿ ಪಾಳೆಯಗಾರರಾದರು. ಅವು ಸಾಗುವಳಿ ಮಾಡದ ಭೂಮಾಲಿಕ ವರ್ಗವಾದರು–ಇಸ್ಲಾಂ ಪ್ರವಾದಿ, ರೈತರ ಶೋಷಣೆಗೆ ದಾರಿ ಮಾಡಿಕೊಡುವಂತಹ ಬೆಳೆ ಪಾಲುದಾರಿಕೆಯನ್ನು ಸ್ಪಷ್ಟವಾಗಿ ನಿಷೇಧಿಸಿದಾಗ್ಯೂ.

ವಸ್ತು ಸ್ಥಿತಿ ಹೀಗಿದ್ದರೂ, ಉಲಮಾ ಬಡ್ಡಿ(ರಿಬಾ)ಯನ್ನು ನಿಷೇಧಿಸಿದಂತೆ ಬೆಳೆ ಪಾಲುದಾರಿಕೆಯನ್ನು ಖಂಡಿಸಲಿಲ್ಲ. ಪ್ರಾಯಶಃ ಮುಖ್ಯ ಕಾರಣ ಕುರ್‌ಆನ್ ರಿಬಾ('ರಿಬಾ' ಪದದ ನಿಖರವಾದ ಅರ್ಥ ಏನು ಎನ್ನುವುದರ ಕುರಿತಂತೆ ವಿವಾದವಿದ್ದಾಗ್ಯೂ) ಖಂಡಿಸುತ್ತದೆ, ಆದರೆ ಬೆಳೆ ಪಾಲುದಾರಿಕೆಯನ್ನು ಪ್ರಸ್ತಾಪಿಸಿಲ್ಲ. ಆದಾಗ್ಯೂ ಅರೇಬಿಯಾದ ಕೆಲವು ಪ್ರದೇಶಗಳಲ್ಲಿ ಇಂತಹ ಪದ್ಧತಿಯತ್ತ ಪ್ರವಾದಿಯ ಗಮನ ಸೆಳೆದಾಗ ಅವರು ಅದನ್ನು ಖಂಡಿಸಿದ್ದರು.

ಇಸ್ಲಾಂ ಅಂತರ್‌ರಾಷ್ಟ್ರೀಯ ವಾಣಿಜ್ಯ ವ್ಯಾಪಾರದ ಕೇಂದ್ರವಾಗಿದ್ದ ಮಕ್ಕಾದಲ್ಲಿ ಮೈವೆತ್ತಿತು. ರಿಬಾ ಜಾರಿಯಲ್ಲಿತ್ತು. ಅದು ಅತ್ಯಂತ ಘೋರ ಶೋಷಣೆಯ ವಹಿವಾಟಾಗಿತ್ತು. ಹಾಗಾಗಿ ಕುರ್‌ಆನ್ ಅದನ್ನು ಖಂಡಿಸಿತ್ತು. ಆದರೆ ಅದು ಮುಖ್ಯವಾಗಿ ಮರುಭೂಮಿಯ ದೇಶವಾಗಿದ್ದರಿಂದ ಕೃಷಿ ಚಟುವಟಿಕೆ ಅಷ್ಟಾಗಿ ನಡೆಯುತ್ತಿರಲಿಲ್ಲ. ಹಾಗಾಗಿ ಕುರ್‌ಆನ್ ಅದನ್ನು ಪ್ರಸ್ತಾಪಿಸಲಿಲ್ಲ. ಆದರೆ ಪ್ರವಾದಿ ಅದನ್ನು ಖಂಡಿಸಿದ್ದರು.

ಅದೇನೇ ಇರಲಿ, ಇಸ್ಲಾಮಿನ ನಂತರದ ಇತಿಹಾಸದಲ್ಲಿ ಅಧಿಕಾರ ಕೇಂದ್ರ ಕೃಷಿ ಪ್ರಧಾನವಾದ ಮಧ್ಯ ಏಷ್ಯಾಕ್ಕೆ ಸ್ಥಳಾಂತರಗೊಂಡಿತು. ಅಲ್ಲಿ ಬೆಳೆ ಪಾಲುದಾರಿಕೆಯಂತಹ ಪಾಳೆಯಗಾರಿ ಪದ್ಧತಿಗಳು ಜಾರಿಯಲ್ಲಿದ್ದವು. ಆಳುವ ವರ್ಗ ಮುಖ್ಯವಾಗಿ ಪಾಳೆಯಗಾರಿ ವರ್ಗವಾಗಿತ್ತು. ದೈವಶಾಸ್ತ್ರಜ್ಞರು ಹಾಗೂ ನ್ಯಾಯಶಾಸ್ತ್ರ ಪರಿಣಿತರು ಬೆಳೆಪಾಲುದಾರಿಕೆ ಕುರಿತು ಮೌನ ತಾಳಿದರು. ಆ ಪ್ರದೇಶಗಳ ಅರ್ಥವ್ಯವಸ್ಥೆಗೆ ವ್ಯಾಪಾರವು ಮುಖ್ಯವೆನಿಸದಾಗಿದ್ದುದರಿಂದ ರಿಬಾಅನ್ನು ಖಂಡಿಸುತ್ತಲೇ ಹೋದರು.

ಅಧಿಕಾರ ಕೇಂದ್ರವಾಗಿದ್ದ ಬಾಗ್ದಾದ್, ಇಜಿಪ್ತ್, ಇರಾನ್, ಭಾರತ ಹಾಗೂ ಇಂತಹ ಇತರ ದೇಶಗಳೆಲ್ಲ ಕೃಷಿ ಪ್ರದೇಶಗಳಾಗಿದ್ದವು. ಎಲ್ಲೆಡೆ ಜಾರಿಯಲ್ಲಿದ್ದ ಬೆಳೆಪಾಲುದಾರಿಕೆ ಮಾನ್ಯತೆ ಪಡೆದ ಪದ್ಧತಿಯಾಗಿತ್ತು, ವ್ಯಾಪಾರವು ಕೃಷಿಗೆ ಪೂರಕವಾಗಿತ್ತು. ಹಾಗಾಗಿ ರಿಬಾಅನ್ನು ಖಂಡಿಸುವುದು ಹೆಚ್ಚು ಸುಲಭವಾಗಿತ್ತು. ಒಂದು ಬಗೆಯ ಚಕ್ರ ಬಡ್ಡಿಯಾಗಿದ್ದ ರಿಬಾ ಅತ್ಯಂತ ಸುಲಿಗೆಕೋರ ಪ್ರವೃತ್ತಿಯಾಗಿತ್ತು. ಆ ಕಾರಣಕ್ಕಾಗಿ ಕುರ್‌ಆನ್ ಅದನ್ನು ಬಲವಾಗಿ ಖಂಡಿಸಿತು. ಆದರೆ ಇಂದು ಅದರ ಪಾತ್ರ ಬದಲಾಗಿದ್ದು ಬ್ಯಾಂಕ್ ಬಡ್ಡಿಯು ನಿಜಕ್ಕೂ ದೈವಶಾಸ್ತ್ರಜ್ಞರು ಹಾಗೂ ನ್ಯಾಯಶಾಸ್ತ್ರ ಪರಿಣಿತರು ಅರ್ಥೈಸಿರುವಷ್ಟು ಖಂಡನಾರ್ಹವಾಗಿರಲಿಲ್ಲ. ಇಸ್ಲಾಮೀ ವಿದ್ವಾಂಸರ ಪೈಕಿ ಹಲವರು ಬ್ಯಾಂಕ್ ಬಡ್ಡಿಯನ್ನು ಸಮ್ಮತಿಸಬಹುದೆಂದು ಭಾವಿಸುತ್ತಾರೆ.

ಆದರೆ ಮುಸ್ಲಿಮರ ಒಂದು ಸಮೂಹ ವ್ಯಾಪಾರದಲ್ಲಿ ತೊಡಗಿದ್ದರಿಂದ, ಬಡ್ಡಿಯನ್ನೊಳಗೊಂಡ ವಹಿವಾಟುಗಳು ಅವರಿಗೆ ಅನಿವಾರ್ಯವಾಗಿದ್ದರಿಂದ ಮುಸ್ಲಿಂ ನ್ಯಾಶಾಸ್ತ್ರ ಪರಿಣಿತರು, ಅದರ ನೈಜ ಸ್ವರೂಪವನ್ನು ಬಚ್ಚಿಡುವ ರೀತಿಯಲ್ಲಿ ಈ ವಹಿವಾಟುಗಳಲ್ಲಿ ತೊಡಗಲು ಸಾಧ್ಯವಾಗಬಹುದಾದ ವಿಧಿವಿಧಾನಗಳನ್ನು ಕಂಡುಹಿಡಯಲು ಹೆಣಗಾಡಿದರು. ಅದನ್ನು ಹಿಲಾ(ಬಹುವಚನ– ಹಿಯಾಲ) ಇಲ್ಲಾ ಉಪಾಯವೆಂದು ಕರೆಯಲಾಯಿತು. ಆ ಮೂಲಕ ಬಡ್ಡಿಯನ್ನು ನ್ಯಾಯಸಮ್ಮತವಾಗಿ ಸ್ವಿಕರಿಸಬಹುದು. ಆದಾಗ್ಯೂ ಅದನ್ನು ವ್ಯಾಪಾರ ವಹಿವಾಟೆಂದು ಕರೆಯಲಾಯಿತೇ ವಿನಾ ಬಡ್ಡಿಯೆಂದು ಕರೆಯಲಾಗುತ್ತಿರಲಿಲ್ಲ. ಹೀಗೆ ಯಾವುದು ಅನ್ಯಾಯ ಹಾಗೂ ಶೋಷಕವಾಗಿತ್ತೋ ಅದು ನ್ಯಾಯಸಮ್ಮತವೂ ಅಶೋಷಕವೂ ಆಗಿಬಿಟ್ಟಿತು.

ವ್ಯಾಪಾರದಲ್ಲಿ ತೊಡಗಿದ್ದ ಮುಸ್ಲಿಮರಿಗೆ ಬಡ್ಡಿಯನ್ನೊಳಗೊಂಡ ವಹಿವಾಟುಗಳು ಅನಿವಾರ್ಯವಾಗಿದ್ದರಿಂದ ಮುಸ್ಲಿಂ ನ್ಯಾಯಶಾಸ್ತ್ರ ಪರಿಣಿತರು, ಅದರ ನೈಜ ಸ್ವರೂಪವನ್ನು ಬಚ್ಚಿಡುವ ರೀತಿಯಲ್ಲಿ ಈ ವಹಿವಾಟುಗಳಲ್ಲಿ ತೊಡಗಲು ಸಾಧ್ಯವಾಗಬಹುದಾದ ವಿಧಿವಿಧಾನಗಳನ್ನು ಕಂಡುಹಿಡಯಲು ಹೆಣಗಾಡಿದರು. ಅದನ್ನು ಹಿಲಾ ಇಲ್ಲಾ ಉಪಾಯವೆಂದು ಕರೆಯಲಾಯಿತು. ಆ ಮೂಲಕ ಬಡ್ಡಿಯನ್ನು ನ್ಯಾಯಸಮ್ಮತವಾಗಿ ಸ್ವಿಕರಿಸಬಹುದು. ಆದಾಗ್ಯೂ ಅದನ್ನು ವ್ಯಾಪಾರ ವಹಿವಾಟೆಂದು ಕರೆಯಲಾಯಿತೇ ವಿನಾ ಬಡ್ಡಿಯೆಂದು ಕರೆಯಲಾಗುತ್ತಿರಲಿಲ್ಲ.

ಹೀಗೆ ಇಡೀ ಸಮಸ್ಯೆ ವ್ಯಾವಹಾರಿಕ ತತ್ವಜ್ಞಾನದ್ದಾಗಿದೆ. ತತ್ವಜ್ಞಾನ ಹಾಗೂ ಐಡಿಯಾಲಜಿ ನಮಗೆ ಆಕರ್ಷಕವೆನಿಸಿದರೂ ನಾವು ಅದನ್ನು ಆಚರಣೆಗೆ ತರುವುದಿಲ್ಲ. ಏಕೆಂದರೆ ಅದು ಒಂದೋ ನಮ್ಮ ಹಿತಾಸಕ್ತಿಗಳಿಗೆ ಮಾರಕವಾಗುತ್ತದೆ ಇಲ್ಲಾ ಮೇಲೆ ಸೂಚಿಸಿರುವಂತೆ ಅದು ಸಮಾಜದಲ್ಲಿ ಆರ್ಥಿಕ ವ್ಯವಹಾರಗಳ ಮಹತ್ವದ ಸ್ವರೂಪಕ್ಕೆ ಆಘಾತಕಾರಿಯಾಗುತ್ತದೆ. ಸಾಮಾಜಿಕ–ಆರ್ಥಿಕ ಸಂರಚನೆ ಹಾಗೂ ಸಾಮಾಜಿಕ–ಸಾಂಸ್ಕೃತಿಕ ಪದ್ಧತಿಗಳು ನಮ್ಮ ವ್ಯವಹಾರಗಳನ್ನು ನಿರ್ಧರಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ.

ನಾವು ಯಾವುದೋ ತತ್ವಜ್ಞಾನ ಇಲ್ಲಾ ಐಡಿಯಾಲಜಿಯನ್ನು ಅಂಗೀಕರಿಸಬೇಕೆಂದರೂ ಈ ಸಂಗತಿಗಳು(ಸಾಮಾಜಿಕ–ಆರ್ಥಿಕ ಹಾಗೂ ಸಾಮಾಜಿಕ–ಸಾಂಸ್ಕೃತಿಕ) ನಮ್ಮ ವ್ಯವಹಾರಗಳಿಗೆ ತೊಡಕಾಗಿ ಪರಿಣಮಿಸುತ್ತವೆ. ಇನ್ನೊಂದು ಉತ್ತಮ ನಿದರ್ಶನವೆಂದರೆ ಭಾರತದಲ್ಲಿನ ಜಾತಿ ಪದ್ಧತಿ. ಜಾತಿ ಪದ್ಧತಿಯನ್ನು ವಿರೋಧಿಸುವವರು, ಸಮಾನತೆಯಲ್ಲಿ ನಂಬಿಕೆಯುಳ್ಳವರಿಗೆ ಸಹ ತಮ್ಮ ದೈನಂದಿನ ಜೀವನದಲ್ಲಿ ಜಾತಿ ಬಿಟ್ಟುಕೊಡುವುದು ತುಂಬ ಕಠಿಣವೆನಿಸುತ್ತದೆ. ಸಾಮಾಜಿಕ–ಸಾಂಸ್ಕೃತಿಕ ಸಂಗತಿಗಳ ಪ್ರಭಾವ ತೀರ ಆಳವಾದುದಾಗಿರುತ್ತದೆ.

ಇಸ್ಲಾಮಿನ ಸಮಾನತೆ ಹಾಗೂ ಸಹೋದರತ್ವ ಮತ್ತು ಸಹೋದರಿಯತ್ವದ ಆಕರ್ಷಣೆ ಬಡವರು, ಹಿಂದುಳಿದ ವರ್ಗದವರನ್ನು ಸೆಳೆಯಿತು. ಆದರೆ ಶೀಘ್ರವೇ ಇಸ್ಲಾಮಿಗೆ ಮತಾಂತರದಿಂದ ತಮ್ಮ ಕೆಳ ಸ್ತರದ ಸಾಮಾಜಿಕ ಸ್ಥಾನಮಾನ ಎಳ್ಳಷ್ಟೂ ಬದಲಾಗಲಿಲ್ಲವೆನ್ನುವುದು ಅವರ ಅರಿವಿಗೆ ಬಂತು. ಸಾಮಾಜಿಕವಾಗಿ ಮತಾಂತರಕ್ಕೂ ಮೊದಲು ತಾವಿದ್ದ ಸ್ಥಿತಿಯಲ್ಲೇ ಅವರು ಮುಂದುವರಿದಿದ್ದರು. ಇದು ವಿಶೇಷವಾಗಿ ಭಾರತ ಉಪಖಂಡಕ್ಕೆ ನಿಜವೆನಿಸುತ್ತದೆ. ಭಾರತ ಹಾಗೂ ಪಾಕಿಸ್ತಾನದಲ್ಲಿ ಕೆಳ ಜಾತಿಯ ಮುಸಲ್ಮಾನರನ್ನು ಕಾಣಬಹುದಾಗಿದೆ. ಈ ಕೆಳ ಜಾತಿಗಳ ಮುಸಲ್ಮಾನರು ಮಸೀದಿಯಲ್ಲಿ ಮೊದಲ ಪ್ರಾರ್ಥನೆ ಸಲ್ಲಿಸಲು ಸಾಲಿನಲ್ಲಿ ನಿಲ್ಲಲಾರರು ಎನ್ನುವುದನ್ನು ಹಲವಾರು ಅಧ್ಯಯನಗಳು ತೋರಿಸಿಕೊಟ್ಟಿವೆ. ಮಸೀದಿಯಲ್ಲಿನ ಮೊದಲ ಕೆಲವು ಸಾಲುಗಳನ್ನು ಮೇಲ್‌ಸ್ತರದ ಮುಸಲ್ಮಾನರು ಆಕ್ರಮಿಸಿಕೊಂಡಿರುತ್ತಾರೆ.

ತತ್ವಜ್ಞಾನವನ್ನು ಆಚರಣೆಗೆ ತರುವುದು ಅತ್ಯಂತ ಕಠಿಣ ಸವಾಲಾಗಿ ಪರಿಣಮಿಸುತ್ತದೆ ಎನ್ನುವುದನ್ನು ಗಮನಿಸಬಹುದು. ಈ ಮೊದಲು ಸೂಚಿಸಿರುವಂತೆ, ಧರ್ಮ ಇಲ್ಲಾ ಐಡಿಯಾಲಜಿ ಯಾವುದೇ ಆಗಿರಲಿ ಇದೇ ಗತಿಯಾಗಿರುತ್ತದೆ. ಸಮಾನತೆಯ ತತ್ವಜ್ಞಾನ ಇಲ್ಲಾ ಐಡಿಯಾಲಜಿಯನ್ನಾಧರಿಸಿದ ಪ್ರತಿಯೊಂದು ಸಮಾಜದಲ್ಲಿ ಆರಂಭಿಕ ಅಲ್ಪಾವಧಿಯಲ್ಲೇ ಒಂದಿಲ್ಲೊಂದು ಅಧಿಕಾರಸ್ಥ ವರ್ಗ ಅಸ್ತಿತ್ವಕ್ಕೆ ಬರುತ್ತದೆ. ಈ ಅಧಿಕಾರಸ್ಥ ವರ್ಗಗಳು ಆ ತತ್ವಜ್ಞಾನದ ಮೂಲ ಮೌಲ್ಯಗಳು ಇಲ್ಲಾ ಬೋಧನಗಳಿಗಿಂತ ಹೆಚ್ಚಾಗಿ ತಮ್ಮ ವಿಶೇಷಾಧಿಕಾರಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೇ ಒತ್ತು ಕೊಡುತ್ತವೆ. ಆದಾಗ್ಯೂ ಆ ವರ್ಗದ ಜನರು ಆ ಮೌಲ್ಯಗಳು ಇಲ್ಲಾ ಬೋಧನೆಗಳ ಕುರಿತು ಬೊಗಳೆ ಬಿಡುತ್ತಾರೆ.

ಹೆಚ್ಚಿನ ಮಟ್ಟದ ಅಧಿಕಾರಸ್ಥರು ಆ ಮೌಲ್ಯಗಳು ಹಾಗೂ ಬೋಧನೆಗಳ ಕುರಿತು ಇನ್ನಷ್ಟು ಹೆಚ್ಚಾಗಿ ಬೊಗಳೆ ಬಿಡುವುದುಂಟು. ಆದರೆ ಅವುಗಳನ್ನು ಆಚರಣೆಗೆ ತರುವುದನ್ನು ಮಾತ್ರ ಕಡೆಗಣಿಸುವುದುಂಟು. ■

ನರೇಂದ್ರ ಮೋದಿಗೊಂದು ಬಹಿರಂಗ ಪತ್ರ

ಮೂಲ: **ಸಂಜೀವ ಭಟ್**
ಅನು: **ದು ಸರಸ್ವತಿ**



ಆತ್ಮೀಯ ಶ್ರೀ ಮೋದಿಯವರೆ,

ಆರು ಕೋಟಿ ಗುಜರಾತಿಗಳಿಗೆ ನೀವು ಬರೆದಿರುವ ಬಹಿರಂಗ ಪತ್ರ ಸ್ವಾಗತಾರ್ಹ. ಪತ್ರದ ಮೂಲಕ ನಿಮ್ಮ ಮನಸ್ಸಿನೊಳಗೆ ಇಣುಕಿ ನೋಡಲು ಕಿಟಕಿ ಸಿಕ್ಕಂತಾಯಿತು. ಅಲ್ಲದೆ ನಿಮಗೆ ಅದೇ ಮಾಧ್ಯಮದ ಮೂಲಕ ಬರೆಯುವ ಅವಕಾಶ ಸಿಕ್ಕಂತಾಯಿತು.

ನನ್ನ ಪ್ರೀತಿಯ ಸೋದರನೆ, S.L.P.(CRL) NO1088 ಆಫ್ 2008 viz ಜಾಕಿಯ ನಸಿಮ್ ಅಹ್‌ಸಾನ್ ಅಂಡ್ ವರ್ಸಸ್ ಸ್ಟೇಟ್ ಆಫ್ ಗುಜರಾತ್ ಅಂಡ್ ಅದರ್ಸ್ ಪ್ರಕರಣಕ್ಕೆ ಸಂಬಂಧಪಟ್ಟ ಕ್ರಿಮಿನಲ್ ಅಪೀಲ್ ನಂ. 1765 ಆಫ್ 2011 ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪು ಹಾಗೂ ಆದೇಶವನ್ನು ತಾವು ಸಂಪೂರ್ಣವಾಗಿ ತಿರುಚಿಬಿಟ್ಟಿದ್ದೀರಿ. ನೀವು ಆಯ್ಕೆ ಮಾಡಿಕೊಂಡ ಸಲಹೆಗಾರರು ಮತ್ತೊಮ್ಮೆ ತಾವು ಹಾದಿ ತಪ್ಪುವಂತೆ ಮಾಡಿದ್ದರೆ. ಆ ಮೂಲಕ ತಮ್ಮ ಚುನಾಯಿತ ನಾಯಕನೆಂದು ಭಾವಿಸುವ 6 ಕೋಟಿ ಗುಜರಾತಿಗಳನ್ನು ತಾವು ಹಾದಿ ತಪ್ಪುವಂತೆ ಮಾಡಿದ್ದೀರಿ.

ಕೆಲವು ರಾಜಕೀಯ ವಲಯದಲ್ಲಿ ತೀರ್ಪು ಹಾಗು ಆದೇಶ ಕುರಿತಂತೆ ಸಂಭ್ರಮದ ವಿಜಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ನಿಮ್ಮ ಗುಜರಾತಿ ಕಿರಿಯ ಸೋದರನಾಗಿ ತೀರ್ಪು ಹಾಗು ಆದೇಶವನ್ನೂ ಅರ್ಥಮಾಡಿಸಲು ತಮಗೆ ಸಹಾಯ ಮಾಡಬೇಕೆನಿಸುತ್ತದೆ. ನಿಮ್ಮ ಪತ್ರದಲ್ಲಿ, "ಸುಪ್ರೀಂ ಕೋರ್ಟ್ ತೀರ್ಪಿನಿಂದ ಒಂದು ವಿಷಯವಂತೂ ನಿಚ್ಚಳವಾಗಿದೆ. ಅದೇನೆಂದರೆ 2002ರ ಗಲಭೆಗಳ ನಂತರ ನನ್ನ ಹಾಗೂ ಗುಜರಾತ್ ಸರ್ಕಾರದ ವಿರುದ್ಧ ಮಾಡಲಾದ ಸುಳ್ಳು ಹಾಗೂ ಕಲ್ಪಿತ ಆರೋಪಗಳು ಉಂಟುಮಾಡಿದ್ದ ಅನಾರೋಗ್ಯಕರ ವಾತಾವರಣವು ಕೊನೆಗೊಂಡಿದೆ", ಎಂದು ಹೇಳಿದ್ದೀರಿ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಜಕಿಯಾ ಜಫ್ರಿಯವರು ನೀಡಿರುವ ದೂರಿನಲ್ಲಿರುವ ಆರೋಪಗಳು ನಡೆದಿಲ್ಲ ಅಥವಾ ಸುಳ್ಳು ಎಂದು ಎಲ್ಲೂ ಹೇಳಿಲ್ಲ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ. ಸತ್ಯವೇನೆಂದರೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ, ನೀಡಿರುವ ಆದೇಶವು ಗುಜರಾತ್ ನರಮೇಧದ ಅಸಹಾಯಕ ಬಲಿಪಶುಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಶ್ರೀಮತಿ ಜಫ್ರಿಯವರು ತಮ್ಮ ದೂರನ್ನು ಪ್ರಥಮ ಮಾಹಿತಿ ವರದಿ (F.I.R)ಯಾಗಿ ದಾಖಲಿಸಬೇಕೆಂದು ಗುಜರಾತ್ ಉಚ್ಚ ನ್ಯಾಯಾಲಕ್ಕೆ ಮನವಿ ಮಾಡಿಕೊಂಡಿದ್ದು ತಮಗೆ ಸ್ಪಷ್ಟವಾಗಿ ತಿಳಿದಿದೆ. ಮನವಿಯನ್ನು ಗುಜರಾತ್ ಉಚ್ಚ ನ್ಯಾಯಾಲಯವು ತಿರಸ್ಕರಿಸಿತ್ತು. ಹಾಗಾಗಿ ಶ್ರೀಮತಿ ಜಫ್ರಿಯವರು ಉಚ್ಚನ್ಯಾಯಾಲಯದ ಆದೇಶದ ವಿರುದ್ಧ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮನವಿ ಸಲ್ಲಿಸಿದ್ದರು. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಜಫ್ರಿಯವರ ದೂರನ್ನು ಪರಿಶೀಲಿಸಲು ಎಸ್.ಐ.ಟಿ (Special Invesftation Team)ಗೆ ಆದೇಶ ನೀಡಿತ್ತು ಮತ್ತು ಎಸ್.ಐ.ಟಿ ಸಂಗ್ರಹಿಸಿದ ಸಾಕ್ಷ್ಯಗಳನ್ನು ಪರೀಕ್ಷಿಸಲು ನಿಷ್ಪಕ್ಷಪಾತ ವಿಚಾರವಂತರಿಗೂ (learned Amicus) ಆದೇಶ ನೀಡಿತ್ತು. ಬಹು ದೀರ್ಘವಾದ ಹಾಗು ಪ್ರಯಾಸಕರವಾದ ಪ್ರಕ್ರಿಯೆಯ ನಂತರ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಜಫ್ರಿಯವರ ಮನವಿಯನ್ನು ಒಪ್ಪಿರುವುದಷ್ಟೇ ಅಲ್ಲದೆ ಅವರ ದೂರನ್ನು ಪ್ರಥಮ ಮಾಹಿತಿ ವರದಿಯಾಗಿಯೇ ಪರಿಗಣಿಸತಕ್ಕದ್ದು, ಜೊತೆಗೆ ಅಪರಾಧ ದಂಡ ಸಂಹಿತೆಯ ಸೆಕ್ಷನ್ 173(2)ರಡಿ ವರದಿಯನ್ನು ಸಲ್ಲಿಸತಕ್ಕದ್ದು ಎಂದು ಎಸ್.ಐ.ಟಿಗೆ ಆದೇಶಿಸಿದೆ. ಅಪರಾಧ ದಂಡ ಸಂಹಿತೆಯ ಸೆಕ್ಷನ್ 173(2) ಸಾಮಾನ್ಯ ಭಾಷೆಯಲ್ಲಿ ಆರೋಪ ಪಟ್ಟಿ (Charge sheet) ಅಥವಾ ಅಂತಿಮ ವರದಿ ಎನ್ನುತ್ತಾರೆ ಎಂಬುದನ್ನು ತಮಗೆ ಹಾಗೂ ತಮ್ಮ 6 ಕೋಟಿ ಸೋದರ, ಸೋದರಿಯರಿಗೆ ತಿಳಿಸುವುದು ಉಪಯುಕ್ತವೆಂದು ಭಾವಿಸುತ್ತೇನೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನಿಷ್ಪಕ್ಷಪಾತ ವಿಚಾರವಂತರ ವರದಿಗಳನ್ನು

ಸೇರಿದಂತೆ ಸಂಗ್ರಹಿಸಲಾದ ಎಲ್ಲ ಸಾಕ್ಷ್ಯಗಳನ್ನು ವಿಚಾರಣೆ ಮಾಡುವ ಅಧಿಕಾರವಿರುವ ದಂಡಾಧಿಕಾರಿಯ ಮುಂದಿಡಲು ಸಹ ಎಸ್.ಐ.ಟಿಗೆ ಆದೇಶಿಸಿದೆ. ಇದು ಈ ನಾಡಿನ ಕಾನೂನು ಸೂಕ್ತವಾಗಿ ಜಾರಿಗೊಳ್ಳಲು ಅಪರಾಧ ದಂಡ ಸಂಹಿತೆ ಅನ್ವಯ ಸರ್ವೋಚ್ಚ ನ್ಯಾಯಾಲಯಕ್ಕಿದ್ದ ಉತ್ತಮ ಆಯ್ಕೆ ಎಂಬುದನ್ನು ನೀವು ಒಪ್ಪುತ್ತೀರೆಂದು ನಾನು ಖಂಡಿತ ಭಾವಿಸುತ್ತೇನೆ.

ಶ್ರೀಮತಿ ಜಫ್ರಿಯವರಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ಏನನ್ನು ನೀಡಿದೆಯೋ ಅದು ಆಕೆ ಮೂಲದಲ್ಲಿ ಮನವಿ ಮಾಡಿಕೊಂಡಿರುವುದಕ್ಕಿಂತ ಹೆಚ್ಚಿನದೇ ಆಗಿದೆ. ಇದನ್ನು ತಮಗೆ ಸಿಕ್ಕ ಗೆಲುವೆಂದು ನಮ್ಮಲ್ಲಿ ಕೆಲವರು ಭಾವಿಸಿ ಹಿಗ್ಗಿನಿಂದ ಮೆರೆಯುತ್ತಿದ್ದಾರೆ. ಅತ್ಯಂತ ಜಾಣತನದಿಂದ ಪದಗಳನ್ನು ಬಳಸಲಾಗಿರುವ ಈ ಆದೇಶದಿಂದಾಗಿ 2002ರ ನರಮೇಧವನ್ನು ಆಯೋಜಿಸಿ, ಜಾರಿಗೆ ತಂದವರ ಲೆಕ್ಕ ಚುಕ್ತಾ ಮಾಡುವ ದಿನಗಳು ಹತ್ತಿರವಾಗುತ್ತಿವೆ. ಢಂಬಾಚಾರದ ಪ್ರದರ್ಶನವಂತೂ, ಸುಲಭವಾಗಿ ಮೋಸ ಹೋಗುವ ಗುಜರಾತಿ ಜನರನ್ನು ಹಾದಿ ತಪ್ಪಿಸಲು ಮತ್ತು ರಾಜಕೀಯ ವಲಯದೊಳಗೆ ಪೊಳ್ಳು ವಿಶ್ವಾಸವನ್ನು ತುಂಬುವ ಜಾಣ ಪ್ರಯತ್ನವಾಗಿದೆ. ಆದೇಶದ ನಿಜ ಉದ್ದೇಶವು ಆಳಕ್ಕಿಳಿಯುತ್ತ ಕಾನೂನುರೀತ್ಯ ಪರಿಣಾಮ ಬೀರತೊಡಗಿದಾಗ ಸಂಪೂರ್ಣ ಭಿನ್ನವಾದ ಚಿತ್ರಣವನ್ನು ನಾವು ನೋಡಲಿದ್ದೇವೆ.

ತಮ್ಮಿಚ್ಛೆಗಾಗಿ ಪ್ರಜ್ಞಾಪೂರ್ವಕವಾಗಿಯೋ ಅಥವಾ ಉಪೇಕ್ಷೆಯಿಂದಲೋ ತಮ್ಮ ದುರುದ್ದೇಶಗಳಿಗಾಗಿ ತಾವು ಗುಜರಾತಿನ ಜನರ ಹಾದಿ ತಪ್ಪಿಸುತ್ತಿರುವುದನ್ನು ಕಂಡು ಆರು ಕೋಟಿ ಗುಜರಾತಿಗಳಲ್ಲಿ ಒಬ್ಬನಾದ ನನಗೆ ಅತೀವ ವೇದನೆಯಾಗುತ್ತಿದೆ, ಮೋಸ

ಗುಜರಾತ್‌ಗೆ ಕಳಂಕ ತರುತ್ತಿರುವವರು ಅವಿರತವಾಗಿ ನ್ಯಾಯ ಹಾಗೂ ಸತ್ಯಕ್ಕಾಗಿ ಶ್ರಮಿಸುತ್ತಿರುವ ಅಮಾಯಕ ಬಲಿಪಶುಗಳಲ್ಲ. ಬದಲಿಗೆ ರಾಜಕೀಯ ಮತ್ತು ಚುನಾವಣೆಯ ದುರುದ್ದೇಶದ ಫಲಕ್ಕಾಗಿ ದ್ವೇಷವನ್ನು ಬಿತ್ತಿ, ಬೆಳೆ ತೆಗೆದು ಹೀನಾಯ ಕೃತ್ಯ ಎಸಗಿದ ಜನರಿಂದಾಗಿ. ದಯವಿಟ್ಟು ಯೋಚಿಸಿ ನೋಡಿ, ಅಂತರಂಗವನ್ನು ನೋಡಿಕೊಳ್ಳುವುದೆಂದರೆ ಬಹಿರಂಗಗೊಂಡಂತೆ."

"ಗುಜರಾತಿನ ಶಾಂತಿ, ಐಕ್ಯತೆ ಮತ್ತು ಸೌಹಾರ್ದತೆಯನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ನೀವು ತೋರಿಸಿರುವ ಕಾಳಜಿ ಹಾಗು ಪ್ರಯತ್ನಗಳು ನನ್ನ ಮನಸ್ಸಿಗೆ ನಾಟಿವೆ. 2002ರ ನಂತರ ಯಾವುದೇ ದೊಡ್ಡ ಮಟ್ಟದ ಕೋಮು ಹಿಂಸೆಗಳಿಂದ ಗುಜರಾತನನ್ನು ಮುಕ್ತಗೊಳಿಸಿದ್ದಕ್ಕಾಗಿ ನಿಮಗೆ ಹಾಗು ನಿಮ್ಮ ಕುಲಬಾಂಧವರಿಗೆ ಅಭಿನಂದನೆಗಳು. ಇದಕ್ಕೆ ಕಾರಣಗಳೇನೆಂದು 6 ಕೋಟಿ ಗುಜರಾತಿಗಳಿಗೆ ಸಹ ಸ್ಪಷ್ಟವಾಗಿಲ್ಲದಿರಬಹುದು. ಭಾರತೀಯ ಪೊಲೀಸ್ ಸೇವೆಯಲ್ಲಿ ನನ್ನದೀಗ 24ನೇ ವರ್ಷ. ಗುಜರಾತ್ ರಾಜ್ಯಕ್ಕೆ ನಾನು ನೇಮಕಗೊಂಡಾಗ ಅದು ವ್ಯಾಪಕವಾದ ಕೋಮು ಹಿಂಸೆಯ ಪ್ರಸವವೇದನೆಯಿಂದ ನರಳುತ್ತಿತ್ತು. ಬೆಂಕಿಯ ದೀಕ್ಷೆ ಪಡೆದಾಗಿನಿಂದ ನಾನು ಒಡೆದಾಳುವ ದ್ವೇಷದ ರಾಜಕಾರಣದೊಂದಿಗೆ ವ್ಯವಹರಿಸುವ ನಿಮ್ಮ ಇಚ್ಛೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅದರೊಂದಿಗೆ ವ್ಯವಹರಿಸಲು ಪ್ರಯತ್ನಿಸುತ್ತಿದ್ದೇನೆ. ಕೋಮುಗಳ ಧ್ರುವೀಕರಣ ಪೂರ್ಣಗೊಂಡಿರುವ ಗುಜರಾತಿನಲ್ಲಿ ಯಾವುದೇ ರಾಜಕೀಯ ಪಕ್ಷಕ್ಕಾದರೂ ಕೋಮು ಹಿಂಸೆ, ಚುನಾವಣಾ ಫಲಗಳನ್ನು ನೀಡಬಲ್ಲದು ಎಂಬಲ್ಲಿಗೆ ಗುಜರಾತ್‌ನ ರಾಜಕಾರಣ ಬಂದು ನಿಂತಿದೆ. ಇದನ್ನು ನಾನು ಸ್ಪಷ್ಟವಾಗಿ ಗಮನಿಸಿದ್ದೇನೆ. ಗುಜರಾತಿನ ಪ್ರಯೋಗ

ಗುಜರಾತ್ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಆತನ ಪಡೆಗಳು ಅಲ್ಲಿ ನಡೆಸಿದ ಹತ್ಯಾಕಾಂಡ ಜರುಗಿ 10 ವರ್ಷಗಳಾದವು. ದ್ವೇಷದ ರಾಜಕಾರಣ ಮಾಡಿ ಗದ್ದುಗೆ ಹಿಡಿದವರು ನರಮೇಧದ ಇತಿಹಾಸವನ್ನು ಮರೆಸಲು ಅಭಿವೃದ್ಧಿಯ ಮಂತ್ರ ಜಪಿಸುತ್ತ ಬಂದಿದ್ದಾರೆ. ಹೈಟೆಕ್ಕು, ಹೈವೇ ರೋಡುಗಳನ್ನು ಪ್ರದರ್ಶಿಸಿ, ಬಂಡವಾಳವನ್ನು ಆಕರ್ಷಿಸಲು 'ಬಿಗ್ ಬಿ' ತಾರೆಗೆ ರಾಯಭಾರತ್ವ ವಹಿಸಿದ್ದಾರೆ. ಇದ್ಯಾವುದೂ ಸತ್ಯವನ್ನು ಮರೆಮಾಚದು. ಹಚ್ಚಿಸಿದವರನ್ನೂ ಲೆಕ್ಕಿಸದೆ ಸುಡುವ ದ್ವೇಷದ ಕಿಚ್ಚಿಗೆ ಭೇದಭಾವವಿಲ್ಲ. ಹಾಗೆಯೇ ಸತ್ಯದ ಬೆಳಕಿಗೂ ಭೇದಭಾವವಿಲ್ಲ. ಕಗ್ಗತ್ತಲ ಗವಿಯೊಳಗಿನ ಸಂದಿನೊಳಗೆಲ್ಲೋ ಸಿಲುಕಿರುವ ಬೆಳಕಿನ ಕಣವನ್ನು ಅದು ತಡಕಬಲ್ಲದು. ಇದಕ್ಕೆ ಸಾಕ್ಷಿ ಎಂಬಂತಿದೆ ಸಂಜೀವ ಭಟ್ ಅವರ ಪತ್ರ. ಸಂಜೀವ ಭಟ್ ಅವರು ಗೋಧ್ರಾ ಹತ್ಯಾಕಾಂಡದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದವರು. ಅವರು ಹತ್ಯಾಕಾಂಡಕ್ಕೆ ಸಾಕ್ಷಿಯಷ್ಟೇ ಅಲ್ಲ, ಅದರ ಜವಾಬ್ದಾರಿಯ ಪಾಲನ್ನು ಹೊತ್ತಿರುವವರು. ಅಪರಾಧದ ಹೊಣೆ ಹೊತ್ತವರು ತಪ್ಪನ್ನು ಒಪ್ಪಿಕೊಳ್ಳುವುದು, ಪರಿತಪಿಸುವುದಷ್ಟೇ ಅಲ್ಲದೆ ವಿಚಾರಣೆಯ ಸಂದರ್ಭದಲ್ಲಿ ಸತ್ಯವನ್ನು ಬಹಿರಂಗ ಪಡಿಸುವುದು ನ್ಯಾಯದ ಹಾದಿಯಲ್ಲೊಂದು ಮಹತ್ವದ ಹೆಜ್ಜೆಯಾಗಿದೆ. ಗುಜರಾತ್ ಹತ್ಯಾಕಾಂಡ ಜರುಗಿ 10 ವರ್ಷವಾಗಿರುವ ಸಂದರ್ಭದಲ್ಲಿ, ಕಳೆದ ವರ್ಷ ಸಂಜೀವ ಭಟ್‌ರವರು ನರೇಂದ್ರ ಮೋದಿಯವರಿಗೆ ಬರೆದ ಬಹಿರಂಗ ಪತ್ರವನ್ನು ಪ್ರಸ್ತುತವೆನಿಸಿದ್ದರಿಂದ ಇಲ್ಲಿ ಪ್ರಕಟಿಸಲಾಗಿದೆ. –ಸಂಪಾದಕರು

ಹೋದೆನೆನಿಸುತ್ತಿದೆ. ಅಡಾಲ್ಫ್ ಹಿಟ್ಲರ್‌ನ ಆಪ್ತನಾಗಿದ್ದ ಮತ್ತು ನಾಜಿ ಜರ್ಮನಿಯಲ್ಲಿ ಪ್ರಚಾರ ಮಂತ್ರಿಯಾಗಿದ್ದ ಜೋಸೆಫ್ ಗೊಬೆಲ್ಸ್ ಪ್ರತಿಪಾದಿಸಿ, ಯಶಸ್ವಿಯಾಗಿ ಆಚರಿಸಿದ ಸಿದ್ಧಾಂತವು ಬಹು ಸಂಖ್ಯಾತರೊಂದಿಗೆ ಕೆಲಕಾಲ ಕೆಲಸ ಮಾಡಬಹುದು. ಆದರೆ ಈ ಗೊಬೆಲಿಯನ್ ಪ್ರತಿಪಾದನೆ ಎಲ್ಲ ಜನರನ್ನು ಎಲ್ಲ ಕಾಲಕ್ಕೂ ಮೋಸಗೊಳಿಸಲಾರದೆಂದು ಇತಿಹಾಸದ ಅನುಭವವು ನಮಗೆ ತಿಳಿಸಿಕೊಟ್ಟಿದೆ.

"ದ್ವೇಷದಿಂದ ದ್ವೇಷವನ್ನು ಗೆಲ್ಲಲಾಗುವುದಿಲ್ಲ" ಎಂಬ ನಿಮ್ಮ ಮನವರಿಕೆಯನ್ನು ನಾನು ಸಂಪೂರ್ಣವಾಗಿ ಸಮ್ಮತಿಸುತ್ತೇನೆ. ಕಳೆದ ಒಂದು ದಶಕದಿಂದ ಈ ರಾಜ್ಯವನ್ನು ಆಳುತ್ತಿರುವ ನಿಮಗಿಂತಲೂ, ಕಳೆದ 23 ವರ್ಷಗಳಿಂದ ಭಾರತೀಯ ಪೊಲೀಸ್ ಸೇವೆಯಲ್ಲಿ ಕೆಲಸ ಮಾಡುತ್ತಿರುವ ನನಗಿಂತಲೂ ಇನ್ನ್ಯಾರಿಗೆ ಈ ಸತ್ಯ ಚೆನ್ನಾಗಿ ತಿಳಿಯಬಲ್ಲದು ಹೇಳಿ. 2002ರಲ್ಲಿ ದ್ವೇಷದ ಕುಣಿತವನ್ನು ಸಂಯೋಜಿಸಿ, ಗುಜರಾತಿನ ವಿವಿಧೆಡೆ ಪ್ರದರ್ಶಿಸಲಾದ ಆ ದಿನಗಳಲ್ಲಿ, ನಿಮ್ಮೊಂದಿಗೆ ಸೇವೆ ಸಲ್ಲಿಸಿದ ದೌರ್ಭಾಗ್ಯ ನನ್ನದು. ಅಂದು ನಿರ್ವಹಿಸಿದ ನಮ್ಮ ಪಾತ್ರಗಳ ವಿವರಗಳನ್ನು ಚರ್ಚಿಸಲು, ಬಯಲಿಗೆಳೆಯಲು ಇದು ಸೂಕ್ತವಾದ ವೇದಿಕೆಯಲ್ಲ. ಆದರೂ ಸೂಕ್ತ ಪ್ರಾಧಿಕಾರದ ಮುಂದೆ ಗುಜರಾತ್ ರಾಜಕಾರಣದಲ್ಲಿ ತಾಂಡವವಾಡುತ್ತಿದ್ದ ದ್ವೇಷವನ್ನು ಕುರಿತ ನಮ್ಮ ಜ್ಞಾನವನ್ನು ಪ್ರದರ್ಶಿಸಲು ಖಂಡಿತವಾಗಿ ನಮ್ಮಿಬ್ಬರಿಗೂ ವಿಪುಲವಾದ ಅವಕಾಶಗಳಿವೆ. ಈ ಕಾರಣಕ್ಕಾಗಿ ಸರ್ಕಾರದ ಒಳಗೆ/ ಹೊರಗೆ ಇರುವ ನಿಮ್ಮ ಆಪ್ತೇಷ್ಟರು ನನ್ನ ದ್ವೇಷಿಸಲಾರರೆಂದು ಆಶಿಸುವೆ.

"ಸುಳ್ಳುಗಳನ್ನು ಹರಡುತ್ತ ಗುಜರಾತಿನ ಹೆಸರಿಗೆ ಮಸಿಬಳಿಯುತ್ತಿರುವವರ ವಿಶ್ವಾಸಾರ್ಹತೆ ಅವನತಿ ತಲುಪಿದೆ. ಈ ದೇಶದ ಜನರು ಅಂತಹವರನ್ನು ಇನ್ನೆಂದು ನಂಬುವುದಿಲ್ಲ" ಎಂದು ನೀವು ನೀಡಿರುವ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. ಆದರೆ ನನ್ನ ಪ್ರತಿಯ ನೋಡದರನೇ. ಸುಳ್ಳು ಹರಡುತ್ತ ಗುಜರಾತ್‌ನ ಹೆಸರಿಗೆ ಕಳಂಕ ತರುತ್ತಿರುವವರು ಯಾರೆಂಬುದನ್ನು ನೀವು ತಪ್ಪಾಗಿ ಗ್ರಹಿಸಿದ್ದೀರಿ. ನನಗೆ ತಿಳಿದಿರುವಂತೆ

ಶಾಲೆಯಲ್ಲಿ ಒಡಕು ಮೂಡಿಸುವ ದ್ವೇಷದರಾಜ ಕಾರಣದ ಪ್ರಯೋಗವು ಅತ್ಯಂತ ಯಶಸ್ವಿಯಾಗಿದೆ. "6 ಕೋಟಿ ಗುಜರಾತಿಗಳ" ಹೃದಯ ಹಾಗೂ ಮನಸ್ಸಿನಲ್ಲಿ ಒಡಕು ಮೂಡಿಸುವಲ್ಲಿ ನೀವು ಮತ್ತು ನಿಮ್ಮಂತವರು ಅತ್ಯಂತ ಯಶಸ್ವಿಯಾಗಿದ್ದೀರಿ. ಗುಜರಾತಿನಲ್ಲಿ ಇನ್ಯಾವ ಹೆಚ್ಚಿನ ಕೋಮು ಹಿಂಸೆಯನ್ನು ಅವಲಂಬಿಸುವ ಅಗತ್ಯವೇ ಹಳಸಲಾಗಿಬಿಟ್ಟಿದೆ.

ಎಲ್ಲ ಕಾಲ ಮತ್ತು ಸಂದರ್ಭಗಳಲ್ಲಿ ವಿಶ್ವಾಸಾರ್ಹತೆಯಿಂದ ನಡೆದುಕೊಳ್ಳುವುದು ನಮ್ಮಂತಹ ಸಂವಿಧಾನಾತ್ಮಕ ಪ್ರಜಾತಂತ್ರದಲ್ಲಿ ಸರ್ಕಾರದ ಅಗತ್ಯವಾಗಿದೆ. 2002ರ ಗುಜರಾತ್ ಹತ್ಯಾಕಾಂಡವು ಗೋಧ್ರಾದಲ್ಲಿ ಫೆಬ್ರವರಿ 27, 2002ರಂದು ಬೆಳಗಿನ ಜಾವ ಜರುಗಿದ ಘಟನೆಯಿಂದ ಪ್ರೇರಿತವಾದುದು ಎಂಬ ದಾರಿ ತಪ್ಪಿಸುವ ಪ್ರಚಾರಕ್ಕೆ ಕಳೆದ 9 ವರ್ಷಗಳಿಂದ ಹಲವಾರು ಸ್ನೇಹಿತರು ಮಿಕಗಳಾಗಿದ್ದಾರೆ. ನ್ಯೂಟನ್‌ನ ಸೂತ್ರ ಎಲ್ಲಿಯೂ ಈ ರೀತಿ ದುರ್ಬಳಕೆಯಾಗಿರಲಿಲ್ಲ. 2002ರ ಮಾರ್ಚ್‌ನಲ್ಲಿ ನೀವು ಮೊರೆಹೋಗಿದ್ದು ನ್ಯೂಟನ್‌ನ ಭೌತಶಾಸ್ತ್ರ ಕುರಿತ ನಿಮ್ಮ ತಿಳುವಳಿಕೆಗೆ. ಅದನ್ನೇ ನೀವು 2002ರ ಹತ್ಯಾಕಾಂಡದ ಉತ್ತುಂಗದ ಸಂದರ್ಭದ ಆಡಳಿತ ಹಾಗೂ ರಾಜಕಾರಣಕ್ಕೆ ಅಳವಡಿಸಿದಿರಿ. ಸಂವಿಧಾನಾತ್ಮಕ ಪ್ರಜಾತಂತ್ರದಲ್ಲಿ ಜಾತ್ಯಾತೀತ ಸರ್ಕಾರವು ಪಕ್ಷಪಾತಿಯಾಗಿರಕೂಡದು ಎಂಬ ವಚನಕ್ಕೆ ಬದ್ಧವಾಗಿರುತ್ತದೆ ಎಂಬುದು ಸಾರ್ವತ್ರಿಕವಾಗಿ ಸಮ್ಮತಿಸಲ್ಪಟ್ಟ ತತ್ವ. ಇದನ್ನು ನೀವು ಉದ್ದೇಶಪೂರ್ವಕವಾಗಿಯೇ ಮರೆತಿದ್ದೀರಿ ಮತ್ತು ನಮ್ಮಲ್ಲಿ ಹಲವರು ಈಗ ಉಪೇಕ್ಷೆಯಿಂದ ಮರೆತಿದ್ದಾರೆ. ನ್ಯೂಟನ್ ಪ್ರಕ್ರಿಯೆಯೇ ಜಾರಿಗೊಳ್ಳುವಂತಿದ್ದರೆ ಅದನ್ನು ಮೊದಲೇ ಗ್ರಹಿಸಿ ನಿಯಂತ್ರಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ; ಅಮಾಯಕರ ಬಲಿಯನ್ನು ಆಯೋಜಿಸುವುದಲ್ಲ! ಅದು ಹಾಗಿರಲಿ, ಮಹಾತ್ಮರ ನಾಡಿನಲ್ಲಿ ಸದ್ಭಾವನೆಯನ್ನು ಹರಡುವ ನಿಮ್ಮ ಉದ್ದೇಶಕ್ಕೆ ಸಹಮತ ತೋರುವ ಸಲುವಾಗಿ ತಮ್ಮ ಸದ್ಭಾವನ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಲು ನಿರ್ಧರಿಸಿದ್ದೇನೆ. ಸತ್ಯ ಹೊರ ಬರಲು ಮತ್ತು ನ್ಯಾಯ ಹಾಗು ವಿಶ್ವಾಸ ಗೆಲ್ಲಲು ಸಹಾಯ

ಸದ್ಭಾವದ ಪೂರ್ವ ಸ್ಥಿತಿಯೇ ಸಮಭಾವ. ಸಮತೆ ಮತ್ತು ವಿಶ್ವಾಸದ ಆಡಳಿತವು, ನಿಮ್ಮ ನಂಬಿಕೆಯ ಮೊದಲ ಪದವಷ್ಟೆ ಅಲ್ಲ ನಿಮ್ಮ ಧರ್ಮದ ಕೊನೆಯ ವಾಕ್ಯವೂ ಆಗಬೇಕು. ಸತ್ಯ ಎಂಬುದು ಯಾವಾಗಲು ಕೊಂಚ ಕಹಿಯೇ, ನುಂಗಲು ಸುಲಭವಲ್ಲ. ನಾನು ಬರೆದಿರುವ ಪತ್ರವನ್ನು ಮುಕ್ತಮನಸ್ಸಿನಿಂದ ಪರಿಗ್ರಹಿಸುತ್ತೀರೆಂದು ಹಾಗೂ ನೀವು ಅಥವಾ ನಿಮ್ಮ ಏಜೆಂಟರುಗಳು ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಪ್ರತೀಕಾರದ ಕೃತ್ಯಗಳಿಗೆ ಇಳಿಯುವುದಿಲ್ಲವೆಂದು ಭಾವಿಸುತ್ತೇನೆ.

ಮಾಡುವುದಕ್ಕಿಂತ ಉತ್ತಮ ದಾರಿಯುಂಟೆ? ಸತ್ಯ ಹಾಗು ನ್ಯಾಯವಿಲ್ಲದೆ ಯಾವ ಸದ್ಭಾವನೆ ಅಥವಾ ವಿಶ್ವಾಸವೂ ಇರಲು ಸಾಧ್ಯವಿಲ್ಲವೆಂಬುದನ್ನು ನಾವೆಲ್ಲರು ತಿಳಿದಿದ್ದೇವೆ. ಗುಜರಾತಿನ ರಾಜಕಾರಣ ಮತ್ತು ಆಡಳಿತದಲ್ಲಿ ಸದ್ಭಾವನೆಯನ್ನು ಮರು ಸ್ಥಾಪಿಸಲು ನಾನು ಬದ್ಧ ಎಂದು ಮತ್ತೊಮ್ಮೆ ದೃಢಪಡಿಸುತ್ತೇನೆ.

ನಿಜವಾದ, ಹೃದಯಪೂರ್ವಕವಾದ ವಿಶ್ವಾಸವನ್ನು ಒತ್ತಾಯಿಸಲಾಗದು, ಕೊಳ್ಳಲಾಗದು ಅಥವಾ ಕಿತ್ತುಕೊಳ್ಳಲಾಗದು. ಅದಕ್ಕೆ ಅರ್ಹರಾಗಲು ನಾವು ಪ್ರಯತ್ನಿಸಬಹುದಷ್ಟೆ ಎಂದು ಎಚ್ಚರಿಸುತ್ತೇನೆ. ಅದು ಸುಲಭ ಸಾಧ್ಯವಲ್ಲ. ಮಹಾತ್ಮರ ನಾಡು ನಿಧಾನವಾಗಿಯಾದರೂ ಖಂಡಿತವಾಗಿ ತನ್ನ ಉದ್ರಿಕ್ತ ಸ್ಥಿತಿಯಿಂದ ಹೊರಬರುತ್ತಿದೆ.

ಗುಜರಾತಿನ ಅತ್ಯಂತ ಪ್ರಬಲ ವ್ಯಕ್ತಿಯಾದ ನೀವು ಸಮುದಾಯದ ಎಲ್ಲಾ ವರ್ಗಗಳ ಗ್ರಹಿಕೆಗಳಿಗೆ ಜವಾಬ್ದಾರರಾಗುವ ಅಗತ್ಯವಿಲ್ಲವೆಂದು ತಿಳಿದಿರಬಹುದು. ಪ್ರಾಮಾಣಿಕವಾದ ವಿಶ್ವಾಸವಿಲ್ಲದ ಅಧಿಕಾರವು ಗಂಡಾಂತರಗಳಿಂದ ತುಂಬಿದ ದಾರಿ ಎಂಬುದನ್ನು ಇತಿಹಾಸವು ಮತ್ತೆ ಮತ್ತೆ ಸಾಬೀತುಪಡಿಸಿದೆ. ಹಿಂತಿರುಗಲು ಸಾಧ್ಯವಿಲ್ಲದ ದಾರಿ ಅದು.

ಸದ್ಭಾವದ ಪೂರ್ವ ಸ್ಥಿತಿಯೇ ಸಮಭಾವ. ಸಮತೆ ಮತ್ತು ವಿಶ್ವಾಸದ ಆಡಳಿತವು, ನಿಮ್ಮ ನಂಬಿಕೆಯ ಮೊದಲ ಪದವಷ್ಟೆ ಅಲ್ಲ ನಿಮ್ಮ ಧರ್ಮದ ಕೊನೆಯ ವಾಕ್ಯವೂ ಆಗಬೇಕು.

ಸತ್ಯ ಎಂಬುದು ಯಾವಾಗಲು ಕೊಂಚ ಕಹಿಯೇ, ನುಂಗಲು ಸುಲಭವಲ್ಲ. ನಾನು ಬರೆದಿರುವ ಪತ್ರವನ್ನು ಮುಕ್ತಮನಸ್ಸಿನಿಂದ ಪರಿಗ್ರಹಿಸುತ್ತೀರೆಂದು ಹಾಗೂ ನೀವು ಅಥವಾ ನಿಮ್ಮ ಏಜೆಂಟರುಗಳು ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಪ್ರತೀಕಾರದ ಕೃತ್ಯಗಳಿಗೆ ಇಳಿಯುವುದಿಲ್ಲವೆಂದು ಭಾವಿಸುತ್ತೇನೆ.

ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್ ಹೇಳುತ್ತಾನೆ. ಎಲ್ಲಿಯೇ ಅನ್ಯಾಯವಾದರೂ ಅದು ಎಲ್ಲೆಡೆಯ ನ್ಯಾಯಕ್ಕೆ ಕೂಡ ಬೆದರಿಕೆ ಒಡ್ಡುತ್ತದೆ ಎಂದು. ಗುಜರಾತಿನಲ್ಲಿ ನ್ಯಾಯಕ್ಕಾಗಿ ಹೆಣಗಾಡುತ್ತಿರುವ ಅಸಹಾಯಕ ಬಲಿಪಶುಗಳ ಚೈತನ್ಯ ಆಗೀಗ ಎದ್ದೇಳಬಹುದು. ಆದರೆ ಅದನ್ನು ಸುಳ್ಳು ಗೋಬೆಲಿಯನ್ ಪ್ರತಿಪಾದನೆಯು ಹತ್ತಿಕ್ಕಲು ಸಾಧ್ಯವಿಲ್ಲ. ನ್ಯಾಯಕ್ಕಾಗಿ ಹೋರಾಡುವುದು ಜಗತ್ತಿನ ಯಾವ ಮೂಲೆಯಲ್ಲೂ ಸುಲಭವಲ್ಲದ್ದು, ಮತ್ತು ಎಲ್ಲ ಕಾಲಕ್ಕೂ ಎಣೆಯಿಲ್ಲದ ತಾಳ್ಮೆ ಹಾಗೂ ದೃಢ ಮತ್ತು ನಿರಂತರವಾದ ಪ್ರಯತ್ನವನ್ನು ಬೇಡುತ್ತದೆ. ಗುಜರಾತಿನಲ್ಲಿ ಸತ್ಯ ಹಾಗೂ ನ್ಯಾಯಕ್ಕಾಗಿ ಹೋರಾಡುತ್ತಿರುವವರ ಚೈತನ್ಯವನ್ನು ಬರೋಡಾ ಎಂ.ಎಸ್. ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿ ಭೂಚುಂಗ್ ಸೋನಮ್‌ರವರ ಪದ್ಯ ಬಹು ಚೆನ್ನಾಗಿ ಹಿಡಿದಿದೆ.

ನನ್ನಲ್ಲಿ ತತ್ವವಿದೆ ಅಧಿಕಾರವಿಲ್ಲ
ನಿನ್ನಲ್ಲಿ ಅಧಿಕಾರವಿದೆ ತತ್ವವಿಲ್ಲ
ನೀನು ನೀನೇ
ನಾನು ನಾನೇ
ಸಂಧಾನದ ಪ್ರಶ್ನೆಯೇ ಇಲ್ಲ
ಕದನ ಆರಂಭವಾಗಲಿ...

ನನ್ನಲ್ಲಿ ಸತ್ಯವಿದೆ ಬಲವಿಲ್ಲ
ನಿನ್ನಲ್ಲಿ ಬಲವಿದೆ ಸತ್ಯವಿಲ್ಲ
ನೀನು ನೀನೇ
ನಾನು ನಾನೇ
ಸಂಧಾನ ಸಾಧ್ಯವೇ ಇಲ್ಲ
ಕದನ ಆರಂಭವಾಗಲಿ

ನೀನು ನನ್ನ ತಲೆ ಒಡೆದರೂ
ನಾನು ಹೋರಾಡುತ್ತೇನೆ
ನೀನು ನನ್ನ ಮೂಳೆ ಪುಡಿಮಾಡಿದರೂ
ನಾನು ಹೋರಾಡುತ್ತೇನೆ
ನೀನು ನನ್ನ ಜೀವಂತವಾಗಿ ಹೂತರೂ
ನಾನು ಹೋರಾಡುತ್ತೇನೆ
ಸತ್ಯ ನನ್ನೊಳಗೆ ಹರಿದಾಡುತ್ತಿರುವವರೆಗೂ
ನಾನು ಹೋರಾಡುತ್ತೇನೆ
ಶಕ್ತಿಯ ಕೊನೆಯ ಹನಿಯವರೆಗೂ
ನಾನು ಹೋರಾಡುತ್ತೇನೆ
ಕಟ್ಟಕೊನೆಯ ಉಸಿರಿನ ತನಕ
ನಾನು ಹೋರಾಡುತ್ತೇನೆ....
ನೀನು ಕಟ್ಟಿದ ಸುಳ್ಳಿನ ರಥ
ನಿನ್ನ ಸುಳ್ಳುಗಳಿಂದ ಕಟ್ಟಿದ ಕೋಟೆ
ಮುಗುಚಿ ಬೀಳುವವರೆಗೂ
ನೀನು ಸುಳ್ಳುಗಳಿಂದ ಪೂಜಿಸಿದ ದೆವ್ವವು
ನನ್ನೀ ಸತ್ಯ ದೇವತೆಯ ಮುಂದೆ
ಮಂಡಿ ಊರುವವರೆಗೂ
ನಾನು ಹೋರಾಡುವೆ.

“ಆ ಕರುಣಾಮಯಿ ದೇವನು ಪ್ರತಿಯೊಬ್ಬರೊಂದಿಗೂ ಸಮತೆ ಹಾಗೂ ದಯಾಳುವಾಗಿರಲು ಅಗತ್ಯವಾದ ಶಕ್ತಿಯನ್ನು ತಮಗೆ ನೀಡಲಿ. ಸತ್ಯಮೇವಜಯತೆ ಶುಭ ಹಾರೈಕೆಗಳೊಂದಿಗೆ.”

■



ಸಂಜೀವ ಭಟ್

ಜಾಗತೀಕರಣ (Globlisation) ಎಂಬೀ ಕರಣತ್ರಯಗಳು, ಮಲತ್ರಯಗಳಾಗಿ ಕಾಡತೊಡಗಿವೆ. ಭಾರತದಂತಹ ಬಡದೇಶಗಳು ಈ ಕರಣತ್ರಯಗಳ ಕಪಿಮುಷ್ಟಿಗೆ ಸಿಲುಕಿ ನಲುಗತೊಡಗಿವೆ. ಉದಾರೀಕರಣವೆಂದರೆ ಅದು ವ್ಯಾಪಾರೀಕರಣವೇ ಆಗಿದೆ. ಅಮೇರಿಕದಂತಹ ಶ್ರೀಮಂತ ರಾಷ್ಟ್ರಗಳ ವ್ಯಾಪಾರೀಕರಣದಲ್ಲಿ ಭಾರತದಂತಹ ಬಡ ರಾಷ್ಟ್ರಗಳು ತತ್ತರಿಸಿ ಹೋಗುತ್ತವೆ. ಇದನ್ನೇ ಅವರು ಸುಂದರ ಹೆಸರಿನಲ್ಲಿ ಉದಾರೀಕರಣವೆನ್ನುತ್ತಾರೆ. ಇನ್ನು ಖಾಸಗೀಕರಣವಿರುವುದು ಬಂಡವಾಳ ಶಾಹಿಗಳ ಅನುಕೂಲಕ್ಕಾಗಿ. ಬಂಡವಾಳಶಾಹಿಗಳಿಗೆ ಜಗತ್ತಿನಾದ್ಯಂತ ನೆಲೆ ಕಲ್ಪಿಸಿ ಕೊಡುವುದೇ ಖಾಸಗೀಕರಣದ ಮುಖ್ಯ ಉದ್ದೇಶವಾಗಿದೆ. ಇನ್ನು ಜಾಗತೀಕರಣವೆಂಬ ಸುಂದರ ಪದದೊಳಗೆ ಜ್ವಾಲಮುಖಿಯೇ ತುಂಬಿಕೊಂಡಿದೆ. ಅದು ಜಾಗತೀಕರಣದ ಹೆಸರಿನಲ್ಲಿ ನಡೆಯುವ ಸಾಮ್ರಾಜ್ಯ ಶಾಹಿಗಳ ಅಟ್ಟಹಾಸವಾಗಿದೆ. ಈ ಮೂರು ಕೂಡಿ ಮನುಷ್ಯನನ್ನು ಸರಕನ್ನಾಗಿ ಮಾರ್ಪಡಿಸಿವೆ. ಇದರಿಂದ ಭಾರತದಂತಹ ಬಡದೇಶಗಳಲ್ಲಿದ್ದ ಜನಪದ ಸಂಸ್ಕೃತಿ ಮಾಯವಾಗಿ ಸರಕು ಸಂಸ್ಕೃತಿ ಪ್ರಧಾನವಾಗತೊಡಗಿದೆ. ಮಾರುವ-ಕೊಳ್ಳುವ-ಆಳುವ-ಮೆರೆಯುವ ಸಾಮ್ರಾಜ್ಯಶಾಹಿಗಳ ಕುತಂತ್ರವೇ ಜಾಗತೀಕರಣ. ಇಂತಹ ಜಾಗತೀಕರಣಕ್ಕೆ ಬುದ್ಧ-ಬಸವ-ಗಾಂಧಿ ಕೂಡಿಕೊಂಡು ಮುಖಾಮುಖಿಯಾಗಬೇಕಾಗಿದೆ. ಭಸ್ಮಾಸುರನ ಗುಣಹೊಂದಿರುವ ಈ ಜಾಗತೀಕರಣಕ್ಕೆ ದೇಸಿಯತೆ-ಸ್ಥಳಿಯತೆ-ಜಾನಪದ-ಅನುಭಾವ ಇವು ಮುಖಾಮುಖಿಯಾಗಬೇಕಾಗಿದೆ. ಆಗ ಮಾತ್ರ ನಾವು ಉಸಿರಾಡಲು ಸಾಧ್ಯವಾಗುತ್ತದೆ, ಇಲ್ಲದೆ ಹೋದರೆ ಭಾರತದಂತಹ ಬಡ ರಾಷ್ಟ್ರಗಳು ಇದರ ಹಿಡಿತಕ್ಕೆ ಸಿಕ್ಕಿ ಉಸಿರುಗಟ್ಟಿ ಸಾಯುತ್ತವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅಮೇರಿಕೀಕರಣವೇ-ಜಾಗತೀಕರಣವಾಗಿದೆ.

ಜಾಗತೀಕರಣಕ್ಕೆ ಪರ್ಯಾಯವಾಗಿ ದೇಸಿಕರಣವನ್ನು ಹೇಳಲಾಗುತ್ತದೆ. ದೇಸಿಕರಣದಲ್ಲಿ ಸ್ಥಳೀಯ ಸಂಸ್ಕೃತಿ, ಸ್ಥಳೀಯ ಕೈಗಾರಿಕೆಗಳು ಮತ್ತು ಸ್ಥಳೀಯ ಜ್ಞಾನ ಇವು ಮುಖ್ಯವಾಗುತ್ತವೆ. ಜಾಗತೀಕರಣವು ಸ್ಥಳೀಯವಾದುದನ್ನು ತುಚ್ಛೀಕರಿಸಿದರೆ, ದೇಸೀಕರಣವು ಸ್ಥಳೀಯವಾದುದನ್ನು ಉಳಿಸಿ ಬೆಳೆಸುತ್ತದೆ. ಹೀಗೆ ದೇಸೀಕರಣವು ಬೆಳೆದು ನಿಲ್ಲುವಲ್ಲಿ ಈ ನೆಲದ ಅನುಭಾವ ಪರಂಪರೆಯೂ ಕಾರಣವಾಗಿದೆ. ಇಂತಹ ಅನುಭಾವದ ನೆಲೆಗಳನ್ನು ಜನಪರವಾಗಿಸಿದ ಬುದ್ಧ ಈ ಸಮಾಜ ಕಂಡ ಮಹಾ ದಾರ್ಶನಿಕ, ದೇವರ ಬಗೆಗೆ ಗೊಂದಲ ಹುಟ್ಟಿಸದೆ, ತಾನಿರುವವರೆಗೆ ಮನುಷ್ಯರ ಬಗೆಗೆ ಚಿಂತಿಸಿದ. ಬಡವರ ಕಣ್ಣೀರಿನಲ್ಲಿ, ಅಸಹಾಯಕರ ಸಂಕಟ ಪ್ರಸಂಗಗಳಲ್ಲಿ ತನ್ನನ್ನು ಗುರುತಿಸಿಕೊಂಡ. ಕಾಡಿಗೆ ಹೋಗಿ ತಪಸ್ಸು ಮಾಡಿದರೂ ಸಿಗದ ಶಾಂತಿ, ಆತನಿಗೆ ನಾಡಿನ ಬಡವರ ಕಣ್ಣೀರೊರೆಸುವುದರಲ್ಲಿ ಸಿಕ್ಕಿತು. ಬುದ್ಧನ ಅನುಭಾವ ದೇವರಿಗೆ ಸಂಬಂಧಿಸಿದ್ದಲ್ಲ, ಸಾಮಾನ್ಯ ಮನುಷ್ಯನಿಗೆ ಸಂಬಂಧಿಸಿದ್ದಾಗಿದೆ. ಸಂಸಾರದಿಂದ ಪಾರಾಗಿ ಮೋಕ್ಷ ಹೊಂದುವ ಆಧ್ಯಾತ್ಮ ಸಾಧನೆ ಬುದ್ಧನದಲ್ಲ, ಬದಲಾಗಿ ಸಂಸಾರದೊಳಗಿದ್ದು ಗೆದ್ದು ನಿಲ್ಲುವ ಸತ್ಯದ ದರ್ಶನ ಅದಾಗಿದೆ. ಅಂತೆಯೇ ಭಾರತೀಯ ಆಧ್ಯಾತ್ಮವಾದಿಗಳಿಗಿಂತ, ಬುದ್ಧನ ಆಧ್ಯಾತ್ಮ ವಿಶೀಷ್ಟವಾಗಿ ಕಾಣಿಸುತ್ತದೆ. ಭಾರತದ ಅನೇಕ ಅಧ್ಯಾತ್ಮಿವಾದಿಗಳು ಇಹವನ್ನು ತೊರೆದು, ಪರವನ್ನು ಕಾಣಲು ಹಾತೊರೆದರೆ, ಬುದ್ಧ ಇಹದಲ್ಲಿದ್ದುಕೊಂಡೇ, ಪರದ ಆನಂದವನ್ನು ಪಡೆಯಬೇಕೆಂದು ಹೇಳುತ್ತಾನೆ. ಸಹನೆ-ಶಾಂತಿ-ಅಹಿಂಸೆ ಬುದ್ಧ ಹೇಳಿದ ಜೀವನ ಮೌಲ್ಯಗಳು. ಮನುಷ್ಯನನ್ನು ಸಮುದಾಯದೊಂದಿಗೆ ಬೇರ್ಪಡಿಸದೆ, ಸಮುದಾಯದ ಮೂಲಕ ಬೆಳೆವ ಮಾರ್ಗವನ್ನು ಬುದ್ಧ ಹೇಳಿದ. ಅಂತೆಯೇ "ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ"ಯೆಂಬುದು ಜನಜನಿತ ಮಂತ್ರವಾಗಿದೆ.

ನಿಸರ್ಗದಲ್ಲಿರುವ ಸಂಪತ್ತನ್ನು ಜಾಗತೀಕರಣ ನಿರ್ಮೂಲನಗೊಳಿಸಿದರೆ, ನಿಸರ್ಗ ಸಂಪತ್ತನ್ನು ಬೆಳೆಸಲು ಬುದ್ಧ ಹೇಳುತ್ತಾನೆ. ಜಾಗತೀಕರಣವು, ಪರಿಸರವನ್ನು ನಾಶಗೊಳಿಸುವತ್ತ ಮುಖಮಾಡಿದರೆ, ಬೋಧಿವೃಕ್ಷದ ಸಂಕೇತದ ಮೂಲಕ ಬುದ್ಧ ಪರಿಸರ ಸ್ನೇಹಿವಾಗಿ ಬೆಳೆಯುತ್ತಾನೆ. ಜಾಗತೀಕರಣವು ಮನುಷ್ಯನಿಗೆ ಮಾತ್ರ ಬೆಲೆ ಕೊಟ್ಟರೆ, ಬುದ್ಧ ಇಡೀ ಜೀವಸಂಕುಲ ಮುಖ್ಯವೆಂದು ಹೇಳುತ್ತಾನೆ. ಬುದ್ಧನ ಇದೇ ಸಂದೇಶವನ್ನು ಹನ್ನೆರಡನೇ ಶತಮಾನದಲ್ಲಿ ಹೇಳಿದ ಬಸವಣ್ಣ "ಸಕಲ ಜೀವರಾಶಿಗಳಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗಮದೇವ' ಎಂದು ವಿವರಿಸುತ್ತಾನೆ. ಚಂದ್ರಶೇಖರ ನಂಗಲಿಯವರು ತಮ್ಮ ಲೇಖವೊಂದರಲ್ಲಿ ಹೇಳಿದಂತೆ ಜಾಗತೀಕರಣವು ಶೋಕಸ್ತಂಭದ ಸಂಕೇತವಾದರೆ, ಬೌದ್ಧ ದರ್ಶನ ಅಶೋಕ ಸ್ತಂಭದ ಬೆಳವಣಿಗೆಯಾಗಿದೆ. ಅಶೋಕನ ಚಕ್ರ ಚಲನೆಶೀಲತೆಯ ಗುರುತಾಗಿದೆ. ಆದ್ದರಿಂದ ಜಾಗತೀಕರಣ ಸ್ಥಗಿತತೆಯನ್ನು ಹೇಳಿದರೆ, ಬೌದ್ಧ ದರ್ಶನ ಚಲನಶೀಲತೆಯನ್ನು ಕಲಿಸುತ್ತದೆ. "ಹಾಸಿಗೆಯಿದ್ದಷ್ಟು ಕಾಲು ಚಾಚು" ಮತ್ತು "ಅತಿಯಾಸೆಯೇ ದುಃಖಕ್ಕೆ ಮೂಲಕಾರಣ"ವೆಂದು ಬುದ್ಧ ಹೇಳಿದರೆ, "ಯಾರದಾದರೂ ಹಾಸಿಗೆಯಲ್ಲಿ ಕಾಲು ಚಾಚು" ಹಾಗೂ "ಅತಿಯಾಸೆಯೇ ಬದುಕಿನ ಮೂಲ"ವೆಂದು ಜಾಗತೀಕರಣ ಹೇಳುತ್ತದೆ. ದಯೆ, ಅಂತಃಕರಣದ ತಾಯಿಪ್ರೀತಿ ಬೌದ್ಧ ದರ್ಶನದಲ್ಲಿ ಕಾಣಿಸಿದರೆ, ದೌರ್ಜನ್ಯ-ದುರಾಸೆಗಳು ಜಾಗತೀಕರಣದಲ್ಲಿವೆ. ಬೌದ್ಧ ದರ್ಶನ ದೇಹಕ್ಕಿಂತ ಮನಸ್ಸು ಕಟ್ಟುವದಕ್ಕೆ ಪ್ರಾಮುಖ್ಯತೆ ನೀಡಿದರೆ, ಜಾಗತೀಕರಣವು ಮನಸ್ಸನ್ನು ಮಾಯಾ ಕುದುರೆಯನ್ನಾಗಿಸಿಕೊಂಡು ದೈಹಿಕ-ಬೊಜ್ಜಿಗೆ ಕಾರಣವಾಗುತ್ತದೆ. ಆದರೆ ಇಂದು ಬುದ್ಧನ ದರ್ಶನವನ್ನು ಕೇವಲ ಧಾರ್ಮಿಕಾಚರಣೆಗಳಿಗೆ ಮೀಸಲಾಗಿರಿಸುವ ಅಪಾಯ ಕಾಣಿಸುತ್ತದೆ. ಇಂತಹ ಸ್ಥಗಿತತೆಗಳನ್ನು ಮೀರುವದರ ಮೂಲಕ ಬೌದ್ಧ ದರ್ಶನವನ್ನು ವರ್ತಮಾನದಲ್ಲಿ ಬೆಳೆಸಬೇಕಾಗಿದೆ.

■

ಮೌಢ್ಯವನ್ನು ಸಮರ್ಥಿಸುವ ಜಾತಿವಾದಿಗಳು

(7ನೇ ಪುಟದಿಂದ)

ಬಾಳೆ ಎಲೆ ಬಿಸಾಡುವಂತೆ ಬಿಸಾಡಿ ಎಲ್ಲವೂ ಮುಗಿದು ಹೋದ ಕಾಲದಲ್ಲಿ ತಪ್ಪೊಪ್ಪಿಕೆಯ ಅನೈತಿಕತೆಯ ಮಾತನಾಡುತ್ತದೆ.

ಇಂತಹ ದಿವಾಳಿ ಎದ್ದ ಸರ್ಕಾರ ಅತ್ಯಂತ ಕ್ಷುಲ್ಲಕ ಮಡೆಸ್ನಾನದಂತಹ ಆಚರಣೆಯನ್ನು ನಿಷೇಧಿಸಲು ಆಗದಷ್ಟು ಕೂಡ ಆಳುವ ವರ್ಗ ನಿಸ್ಸಾಹಾಯಕವಾಗಿರುತ್ತದೆ. ಇನ್ನು ಇದು ಹಾದಿ ತಪ್ಪಿದ ಸಮಾಜವನ್ನು ಸರಿ ದಾರಿಗೆ ತರುತ್ತದೆ ಎನ್ನುವುದು ಕನ್ನಡಿಯೊಳಗಣ ಗಂಟು. ತಮ್ಮ ಆತ್ಮದ ಸೊಲ್ಲನ್ನು ಆಲಿಸುವ ಆತ್ಮವೇ ಇಲ್ಲದ ರಾಜ್ಯ ಹಾಗೂ ರಾಜಕಾರಣ ನಮ್ಮದು ಎನ್ನುವುದು ಇದರಿಂದ ಸಾಬೀತಾಗಿದೆ. ನೈಜೀರಿಯ ದೇಶದ ಹೆಮ್ಮೆಯ ಲೇಖಕ ವೊಲೆ ಷೋಯಿಂಕ ವ್ಯವಸ್ಥೆಯ, ಪ್ರಭುತ್ವದ ದಬ್ಬಾಳಿಕೆಗಳಿಗೆ, ಸಮಾಜದ ಅನಿಷ್ಟಗಳಿಗೆ ತನ್ನನ್ನು ತಾನು ಗುರಿಯಾಗಿಸಿಕೊಂಡು ಅದರ ವಿರುದ್ಧ ಹೋರಾಡುತ್ತಾನೆ, ಸಮಾಜಕ್ಕೆ ತನ್ನ ಕತ್ತು ಕೊಡುತ್ತಾನೆ. ವ್ಯವಸ್ಥೆಯ ಅಸಮಾನತೆ ವಿರುದ್ಧದ ತನ್ನ ಈ ಹೋರಾಟದಲ್ಲಿ ಅನೇಕ ಬಾರಿ ಜೈಲುವಾಸಿಯಾಗುತ್ತಾನೆ. ದೇಶಭ್ರಷ್ಟನಾಗಿ ಅಲೆಯುತ್ತಾನೆ. ಇವೆಲ್ಲದರ ಮಧ್ಯೆಯೂ ತನ್ನ ಚಿತ್ತ ಸ್ವಾಸ್ಥ ಕೆಡಿಸಿಕೊಳ್ಳದೆ ಮತ್ತೊಂದು ಜೀವಂತ ತಲೆಮಾರನ್ನು ರೂಪಿಸುತ್ತಾನೆ. ಇಷ್ಟೊಂದು ನೋವುಗಳನ್ನು ಹೊತ್ತ ಲೇಖಕ ಆ ದೇಶದ ಸಾಕ್ಷಿಪ್ರಜ್ಞೆಯಂತೆ ಬುದುಕುತ್ತಿರುತ್ತಾನೆ. ಇದು ಈ ಸಂದರ್ಭದಲ್ಲಿ ನಮಗೆಲ್ಲಾ ಸಮಾಜಕ್ಕೆ ಕತ್ತು ಕೊಡುವ, ಆ ಮೂಲಕ ನಮ್ಮ ಇರುವಿಕೆಗೆ ಅರ್ಥವಂತಿಕೆಯನ್ನು ತಂದುಕೊಳ್ಳಬೇಕಾಗಿದೆ ಎಂದು ನಮಗೆಲ್ಲಾ ಪದೇ ಪದೇ ಎಚ್ಚರಿಸುತ್ತದೆ.

ಏಕೆಂದರೆ ಕನ್ನಡದ ಪ್ರತಿಭಾವಂತ ಲೇಖಕಿ ಎಚ್. ನಾಗವೇಣಿಯವರು ಬರೆದ ಅಪೂರ್ವ ಕಾದಂಬರಿ "ಗಾಂಧಿ ಬಂದ" ಪ್ರಕಟವಾಗಿ ಅನೇಕ ವರ್ಷಗಳ ನಂತರ, ಅದು ನಾಟಕವಾಗಿ ಅನೇಕ ಪ್ರದರ್ಶನಗಳನ್ನು ಕಂಡ ನಂತರ ಅನಗತ್ಯವಾಗಿ ವಿವಾದಕ್ಕೆ ಈಡಾಗಿದೆ. ಮತ್ತೊಮ್ಮೆ ಪುರೋಹಿಶಾಹಿ, ವೈದಿಕ ವರ್ಗಗಳ ಪಿತೂರಿಯಿಂದಾಗಿ ಮತ್ತೊಮ್ಮೆ ಶೂದ್ರ ಸಮುದಾಯ ತಮ್ಮನ್ನು ತಾವು ವಿನಾಕಾರಣವಾಗಿ ಈ ಪ್ರಜಾಪ್ರಭುತ್ವಕ್ಕೆ ವಿರೋಧಿಗಳಾಗಿ ಬಿಂಬಿಸಿಕೊಂಡಿದ್ದಾರೆ. ಹಾಗೆ ನೋಡಿದರೆ ವಿಶ್ವಕರ್ಮ ಸಮಾಜದವರು ತಮ್ಮ ಮಕ್ಕಳಿಗೆ ಓದಲಿಕ್ಕೆ ಕೊಡಲೇಬೇಕಾದಂತಹ ಅತ್ಯಂತ ಅರ್ಥಪೂರ್ಣ ಕೃತಿ ಈ "ಗಾಂಧಿ ಬಂದ" ಕಾದಂಬರಿ. ಆದರೆ ಸ್ವಲ್ಪ ನಿಂತು, ಧ್ಯಾನಿಸಿ ಮುನ್ನಡೆಯಬಹುದಾದ ಎಲ್ಲಾ ಸಾಧ್ಯತೆಗಳನ್ನೂ ಕಳೆದುಕೊಂಡ ಇವರು ಪ್ರಜ್ಞಾವಂತರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಈ ವಿಶ್ವಕರ್ಮ ವರ್ಗಗಳು ತಮ್ಮ ಜಡ್ಡುಗಟ್ಟಿದ ಸಾಂಪ್ರದಾಯಿಕ ಚಿಂತನೆಗಳಿಂದ, ತಾವಾಗಿ ನಿರ್ಮಿಸಿಕೊಂಡ ಸ್ಥಾವರದ ಪ್ರಪಂಚದಿಂದ ಹೊರ ಬಂದು ಬೆಳಕಿನಡೆಗೆ ಸಾಗಲೇಬೇಕು. ಅನ್ಯ ಮಾರ್ಗವೇ ಇಲ್ಲ. ಏಕೆಂದರೆ ಹುಂಬರಂತೆ ಇವರು ವೈದಿಕ ವರ್ಗಗಳು ತೋಡಿದ ಹಳ್ಳಕ್ಕೆ ಬಿದ್ದರೆ ಮುಂದಿನ ತಲೆಮಾರು ಇವರಿಗೆ ದಿನನಿತ್ಯವೂ ಹಿಡಿಶಾಪ ಹಾಕುತ್ತದೆ.

ಇವರು ಬಸವಣ್ಣ ಹೇಳಿದ "ಶೆಟ್ಟಿಯೆಂಬೆನೆ ಸಿರಿಯಾಳನ, ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಆನು ಹಾರವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ" ತತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲವೂ ತಂತಾನೆ ತಿಳಿಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮ ಸಾಹಿತ್ಯದ ಪ್ರಗತಿಪರ ಬಳಗ, ಪ್ರಜ್ಞಾವಂತ ಲೇಖಕರು ನಾಗವೇಣಿಯವರ ಸಂಪೂರ್ಣ ಬೆಂಬಲಕ್ಕೆ ನಿಂತಿದ್ದಾರೆ. ಎಷ್ಟಾದರೂ ಕನ್ನಡದ ವೈಚಾರಿಕ ಪ್ರಜ್ಞೆಯ ಹರಹು, ಸಾಮಾಜಿಕ ನ್ಯಾಯದ ಬುನಾದಿ ಬಹಳ ದೊಡ್ಡದು ಹಾಗೂ ಗಟ್ಟಿಯಾದದ್ದು. ಅದು ಅಳಿಯಲು ಒಪ್ಪಿಕೊಳ್ಳುವುದೇ ಇಲ್ಲ.

■

ಎರಡು ವರ್ಷಗಳ ಹಿಂದೆ ಡಿ.ಆರ್.ನಾಗರಾಜ್ ಅವರ 'ಫ್ಲೇಮಿಂಗ್ ಫೀಟ್' ಕೃತಿಯ ಪುಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡುತ್ತ ಚಿಂತಕ ಶಿವ್‌ವಿಶ್ವನಾಥ್ ಗಾಂಧಿ ಕುರಿತು ಡಿ.ಆರ್. ಹೇಳಿದ ಪುಟ್ಟ ಕತೆಯೊಂದನ್ನು ಅವತ್ತು ಹೇಳಿದರು. ಆ ಕತೆ ಹೀಗಿದೆ: 'ಅನೇಕ ದಿನಗಳ ಉಪವಾಸದಿಂದ ದಣಿದು ಸುಸ್ತಾಗಿದ್ದ ಗಾಂಧಿ ಸಬರಮತಿ ಆಶ್ರಮದಲ್ಲಿದ್ದ ತಮ್ಮ ಅನುಯಾಯಿಗಳ ತೀವ್ರ ಒತ್ತಡದಿಂದಾಗಿ ಉಪವಾಸ ಕೊನೆಗೊಳಿಸುವ ನಿರ್ಧಾರ ಮಾಡುತ್ತಾರೆ. ನಾಳೆ ಮುಂಜಾನೆ ಆಶ್ರಮದಲ್ಲಿರುವ ಭಂಗಿ ಜಾತಿಗೆ ಸೇರಿದ ಹುಡುಗ ತನ್ನ ಕೈಯಾರ ಕುಡಿಸುವ ಕಿತ್ತಳೆ ಹಣ್ಣಿನ ರಸ ಸೇವಿಸಿ ತನ್ನ ಉಪವಾಸ ಕೊನೆಗೊಳಿಸುವುದಾಗಿ ಗಾಂಧಿ ಹೇಳುತ್ತಾರೆ. ಉಪವಾಸ ಕೊನೆಗೊಳಿಸುವ ಗಾಂಧಿ ಮಾತನ್ನು ಕೇಳಿ ಅಲ್ಲಿದ್ದವರಿಗೆಲ್ಲ ಖುಷಿಯಾಗುತ್ತದೆ. ಮರುದಿನ ನಡೆದದ್ದೇ ಬೇರೆ. ತನ್ನ ತಾಯಿಗೆ ಉಷಾರಿಲ್ಲದ ಕಾರಣ ಭಂಗಿ ಜಾತಿಗೆ ಸೇರಿದ ಆ ಹುಡುಗ ಇವತ್ತು ಆಶ್ರಮಕ್ಕೆ ಬಂದಿಲ್ಲವೆಂದು ಹೇಳಿ ಆಶ್ರಮದ ಹಿರಿಯರೊಬ್ಬರು ಗಾಂಧಿಗೆ ಹಣ್ಣಿನ ರಸ ಕೊಡುತ್ತಾರೆ. ಗಾಂಧಿ ಸುತ್ತಲೂ ಕಣ್ಣಾಯಿಸುತ್ತಾರೆ, ಅಲ್ಲೆಲ್ಲೂ ಆ ಹುಡುಗ ಕಾಣುವುದಿಲ್ಲ. ಆ ದಿನ ರಾತ್ರಿ ಆ ಹುಡುಗನಿಂದ ಕಿತ್ತಳೆ ಹಣ್ಣಿನ ರಸ ಕುಡಿಯಲಾಗದ ತಮ್ಮ ದೌರ್ಭಾಗ್ಯಕ್ಕೆ ತಾವೇ ಮರುಗಿ ಗಾಂಧಿ ನಿದ್ರೆಯಿಲ್ಲದೆ ನರಳುತ್ತಾರೆ. ಸಬರಮತಿ ಆಶ್ರಮದ ಎಲ್ಲರೂ ಅವತ್ತು ಗಾಂಧಿ ಉಪವಾಸ ಕೊನೆಗೊಳಿಸಿದ ಸಂತೋಷಕ್ಕೆ ನೆಮ್ಮದಿಯಿಂದ ನಿದ್ರೆ ಮಾಡುತ್ತಾರೆ.' ಕೊನೆಗೆ ಮೂರು ಪ್ರಶ್ನೆಗಳು ಕಣ್ಣಮುಂದೆ ಬಂದು ನಿಲ್ಲುತ್ತವೆ. ನಿಜಕ್ಕೂ ಅವತ್ತು ಆ ಬಾಲಕನ ತಾಯಿಯ ಆರೋಗ್ಯ ಸರಿಯಿರಲಿಲ್ಲವೇ? ಅಥವಾ ಗಾಂಧಿಗೆ ಭಂಗಿ ಜಾತಿಗೆ ಸೇರಿದ ಮನುಷ್ಯನೊಬ್ಬ ಹಣ್ಣಿನ ರಸ ಕೊಡುವುದು ಇಷ್ಟವಿಲ್ಲದ 'ಗಾಂಧಿವಾದಿ'ಗಳೇ ಆ ಬಾಲಕನನ್ನು ಅವತ್ತು ಆಶ್ರಮಕ್ಕೆ ಬರದಂತೆ ತಡೆದರೇ? ಅವತ್ತು ಆ ಭಂಗಿ ಹುಡುಗನನ್ನು ಮುಟ್ಟಲಾಗದೇ ಗಾಂಧಿ ಅನುಭವಿಸಿದ ನೋವು ಇವತ್ತು ಇಂಡಿಯಾ ಅನುಭವಿಸುತ್ತಿದೆಯೇ?

ಕಳೆದ ಹದಿನೈದು ದಿನಗಳಿಂದ ಪ್ರಜಾವಾಣಿ ಸಂಪಾದಕರಾದ ಕೆ.ಎನ್. ಶಾಂತಕುಮಾರ್ ತಮ್ಮ ಸಹೋದ್ಯೋಗಿಗಳ ಮೂಲಕ ಹಿರಿಯರಾದ ದೇವನೂರ ಮಹಾದೇವರನ್ನು ಏಪ್ರಿಲ್ 14ರ ಪ್ರಜಾವಾಣಿ ವಿಶೇಷ ಸಂಚಿಕೆಗೆ ಅತಿಥಿ ಸಂಪಾದಕರಾಗುವಂತೆ ಒಪ್ಪಿಸುವ ಪ್ರಯತ್ನಕ್ಕೆ ಸಿಕ್ಕು ಹೈರಾಣಾಗಿದ್ದರು. ಶೋಷಿತರ ಸಾಕ್ಷಿಪ್ರಜ್ಞೆಯಂತಿರುವ ದೇವನೂರರನ್ನು ಇಡೀ ಪ್ರಜಾವಾಣಿ ತಂಡ ಅತಿಥಿ ಸಂಪಾದಕರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿತ್ತು. ಸಾಮಾನ್ಯವಾಗಿ ಯಾವುದಾದರೂ ಕಾರ್ಯಕ್ರಮಕ್ಕೋ ಅಥವಾ ಯಾವುದಾದರೂ ಪತ್ರಿಕೆಗೋ ಲೇಖನ ಬರೆಯಲು ಒಪ್ಪಿಕೊಂಡು ನಂತರ ಯಾಕಾದರೂ ಒಪ್ಪಿಕೊಂಡೆನೋ ಎಂದು ಚಡಪಡಿಸುವ ದೇವನೂರರು ಬರಹಕ್ಕೆ ನಿಂತರೆ ಮಹಾಜಿಪುಣ ಎಂಬುದು ಅವರನ್ನು ಬಲ್ಲ ಎಲ್ಲರಿಗೂ ಗೊತ್ತಿರುವಂಥದ್ದೇ.

'ಭಾಷೆಯೊಂದು ಮೌಲ್ಯವಾಗುವುದು ಅದು ಸತ್ಯಕ್ಕೆ ಹತ್ತಿರ ಹತ್ತಿರ ಹೋದಾಗ; ಸತ್ಯದಿಂದ ದೂರ ಹೋಗಿ ತೀರಾ ಸುಂದರವೂ ಪರಿಷ್ಕೃತವೂ ಆದಾಗ ಅಲ್ಲ' ಎಂಬ ಲಂಕೇಶರದೊಂದು ಮಾತಿದೆ. ವರ್ತಮಾನದ ಇವತ್ತಿನ ತಲ್ಲಣಗಳ ಹೊತ್ತಿನಲ್ಲಿ ಈ



ಶೋಷಿತರ ಆತ್ಮಗೌರವ ಮತ್ತು ಪ್ರಜಾವಾಣಿ

ಕೆ.ಎಲ್ ಚಂದ್ರಶೇಖರ್ ಐಜೂರ್

ಮಾತುಗಳು ಪ್ರಜಾವಾಣಿಯ ಕಳೆದ 65 ವರ್ಷಗಳ ನಡಿಗೆಯ ಕುರಿತು ಹೇಳಿದಂತಿದೆ. ಸತ್ಯದಿಂದ ದೂರ ಉಳಿದು, ಸುದ್ದಿಯನ್ನು ರೋಚಕಗೊಳಿಸುವ, ಓದುಗರ ನಾಲಿಗೆ ತಣಿಸಲು ಅನುವಾಗುವಂತಹ ಸಂಚಿಕೆಗಳನ್ನು ಮಾತ್ರ ರೂಪಿಸುವ, ನಯ ನಾಜೂಕು ತುಂಬಿಕೊಂಡ ನವಿರು ಸಾಹಿತ್ಯದ ಅಬ್ಬರದಲ್ಲಿ ನೆಲಮೂಲದ ಸಂಕಟಗಳನ್ನು ಮರೆಯುವ ವ್ಯಕ್ತಿತ್ವವನ್ನು 'ಪ್ರಜಾವಾಣಿ' ರೂಢಿಸಿಕೊಳ್ಳದ ಕಾರಣಕ್ಕಾಗಿಯೇ ಇವತ್ತು ಶೋಷಿತರ ಪರವಾಗಿ ನಿಲ್ಲುವ ನಾಡಿನ ಅತಿ ನಂಬಿಕಾರ್ಹ ಪತ್ರಿಕೆಯಾಗಿದೆ. ಕನ್ನಡದ ಉಳಿದ ದಿನಪತ್ರಿಕೆಗಳು ಸನಾತನಿಗಳ ಮುಖವಾಣಿಯಂತೆ, ಕೋಮುವಾದಿಗಳ ಕರಪತ್ರದಂತೆ ಚಲಾವಣೆಯಲ್ಲಿರುವಾಗ ಪ್ರಜಾವಾಣಿ ಓದುಗರೆಡೆಗಿನ ತನ್ನ ವಿಶ್ವಾಸಕ್ಕೆ ಕೊಂಚವೂ ಪೆಟ್ಟು ತಾಗದಂತೆ ತನ್ನ ಭಾಷೆಯ ಘನತೆ ಹಾಗೂ ಪತ್ರಿಕಾ ಎಥಿಕ್ಸನ್ನು ಉಳಿಸಿಕೊಂಡಿದೆ.

ಎಲ್ಲೋ ಕಾಲದ ಮರೆಯಲ್ಲಿ ಅನಾಮಿಕವಾಗಿ ಉಳಿದುಹೋಗಿದ್ದ ಕುದ್ಮುಲ್ ರಂಗರಾಯರಂತಹ ಅಪರೂಪದ ವ್ಯಕ್ತಿತ್ವವನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟು ನಾಡಿಗೆಲ್ಲ ಪರಿಚಯಿಸಿದ್ದು ಇದೇ ಪ್ರಜಾವಾಣಿ. ತೀರಾ ಈಚೆಗೆ ಭಾರತ ಸಂವಿಧಾನದ ನಿಜವಾದ ಆಶಯಗಳನ್ನು ತಿರುಚಲು ಯತ್ನಿಸಿದ ಬಲಪಂಥೀಯ ವಲಯದ ಸೈತಾನರ ನಡೆಗಳನ್ನು ಖಂಡಿಸಿ ಬರೆದ ಲೇಖನ ಮತ್ತು ಮುಗ್ಧಮಕ್ಕಳ ಪಠ್ಯಪುಸ್ತಕಗಳಿಗೆ ಕೋಮುನಂಜು



‘ಭಾಷೆಯೊಂದು ಮೌಲ್ಯವಾಗುವುದು ಅದು ಸತ್ಯಕ್ಕೆ ಹತ್ತಿರ ಹತ್ತಿರ ಹೋದಾಗ; ಸತ್ಯದಿಂದ ದೂರ ಹೋಗಿ ತೀರಾ ಸುಂದರವೂ ಪರಿಷ್ಕೃತವೂ ಆದಾಗ ಅಲ್ಲ’ ಎಂಬ ಲಂಕೇಶರದೊಂದು ಮಾತಿದೆ. ವರ್ತಮಾನದ ಇವತ್ತಿನ ತಲ್ಲಣಗಳ ಹೊತ್ತಿನಲ್ಲಿ ಈ ಮಾತುಗಳು ಪ್ರಜಾವಾಣಿಯ ಕಳೆದ 65 ವರ್ಷಗಳ ನಡಿಗೆಯ ಕುರಿತು ಹೇಳಿದಂತಿದೆ. ಸತ್ಯದಿಂದ ದೂರ ಉಳಿದು, ಸುದ್ದಿಯನ್ನು ರೋಚಕಗೊಳಿಸುವ, ಓದುಗರ ನಾಲಿಗೆ ತಣಿಸಲು ಅನುವಾಗುವಂತಹ ಸಂಚಿಕೆಗಳನ್ನು ಮಾತ್ರ ರೂಪಿಸುವ, ನಯ ನಾಜೂಕು ತುಂಬಿಕೊಂಡ ನವಿರು ಸಾಹಿತ್ಯದ ಅಬ್ಬರದಲ್ಲಿ ನೆಲಮೂಲದ ಸಂಕಟಗಳನ್ನು ಮರೆಯುವ ವ್ಯಕ್ತಿತ್ವವನ್ನು ‘ಪ್ರಜಾವಾಣಿ’ ರೂಢಿಸಿಕೊಳ್ಳದ ಕಾರಣಕ್ಕಾಗಿಯೇ ಇವತ್ತು ಶೋಷಿತರ ಪರವಾಗಿ ನಿಲ್ಲುವ ನಾಡಿನ ಅತಿ ನಂಬಿಕಾರ್ಹ ಪತ್ರಿಕೆಯಾಗಿದೆ.

ಕೆ.ಎನ್ ಶಾಂತಕುಮಾರ್

ತುಂಬಿ ವಿಷ ಉಣಿಸಲು ಯತ್ನಿಸಿದ ರಾಜ್ಯ ಸರ್ಕಾರದ ಎಡಬಿಡಂಗಿತನವನ್ನು ವಿರೋಧಿಸಿ ಬರೆದ ಡಾ.ಸಿ.ಎಸ್.ದ್ವಾರಕಾನಾಥರ ಲೇಖನಗಳನ್ನು ನಿರ್ಭಿಡೆಯಿಂದ ಪ್ರಕಟಿಸಿದ ಪ್ರಜಾವಾಣಿ ತನ್ನ ಓದುಗಪರ ಮತ್ತು ಸತ್ಯದ ಪರ ನಿಲ್ಲುವ ನಿಲುವನ್ನು ಮತ್ತೆಮತ್ತೆ ಗಟ್ಟಿಗೊಳಿಸಿಕೊಳ್ಳುತ್ತಲೇ ನಡೆಯುತ್ತಿದೆ.

ಮೊನ್ನೆ ಏಪ್ರಿಲ್ 14ರ ಅಂಬೇಡ್ಕರ್ ಜನ್ಮದಿನದ ಸಂದರ್ಭದಲ್ಲಿ ಹೊರಬಂದ ವಿಶೇಷ ಸಂಚಿಕೆ ಕೇವಲ ಮೂರು ದಿನಗಳಲ್ಲಿ ರೂಪುಗೊಂಡದ್ದು ಎಂದರೆ ಅನೇಕರು ನಂಬಲಾರರೇನೋ. ಇದಕ್ಕೆ ದೇವನೂರರ ಶ್ರಮ ಹಾಗೂ ಇಡೀ ಪ್ರಜಾವಾಣಿ ಸಿಬ್ಬಂದಿಯ ಬೆಂಬಲವೇ ಕಾರಣ. ಆದರೂ ಹೆಚ್ಚು ಹೆಣ್ಣುಮಕ್ಕಳ ಲೇಖನವನ್ನು ಒಳಗೊಳ್ಳದ ಕೊರತೆಯೊಂದು ದೇವನೂರರನ್ನು ಕಾಡುತ್ತಲೇ ಇತ್ತು. ಇಷ್ಟಾಗಿಯೂ ಈ ವಿಶೇಷ ಸಂಚಿಕೆಯನ್ನು ಮೆಚ್ಚಿಕೊಂಡು ನಾಡಿನ ಅನೇಕ ಸೃಜನಶೀಲ ಮನಸ್ಸುಗಳು ಪ್ರಜಾವಾಣಿಯೊಂದಿಗೆ ಸ್ಪಂದಿಸಿದವು. ಏಪ್ರಿಲ್ 18ರ ತನಕ ಓದುಗರ ಪತ್ರಗಳನ್ನು, ಅಭಿಪ್ರಾಯಗಳನ್ನು ಪ್ರಜಾವಾಣಿ ಪ್ರಕಟಿಸಿತು. ಶೋಷಿತರನ್ನು ಮುಟ್ಟದ ಮುಟ್ಟಿಸಿಕೊಂಡ ಮತ್ತು ಓದುಗರಿಗೆ ಮುಟ್ಟಿಸಿದ ಪ್ರಜಾವಾಣಿ ಪ್ರಯತ್ನ ನಾಡಿನ ಉದ್ದಗಲಕ್ಕೂ ಪ್ರಶಂಸೆಗೆ ಒಳಗಾಯಿತು. ದೇವನೂರರ ಲೇಖನವಂತೂ ನಾಡಿನ ಅನೇಕ ಸಾಂಸ್ಕೃತಿಕ ವಲಯಗಳಲ್ಲಿ ಒಂದು ಹೊಸ ಸಂಚಲನವನ್ನೇ ಉಂಟುಮಾಡಿತು.

ಹಿಂದೆ ದಿನಾಂಕ 16.01.2012ರಂದು ದಿನೇಶ್ ಅಮಿನ್‌ಮಟ್ಟು ತಮ್ಮ ಅಂಕಣದಲ್ಲಿ ಲೇಖನವೊಂದನ್ನು ಬರೆದು ವಿವೇಕಾನಂದರ ನಿಜವಾದ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದರು. ಭಾರತಮಾತೆ, ಭಗತ್ ಸಿಂಗ್, ವಿವೇಕಾನಂದ... ಮೊದಲಾದವರಿಗೆಲ್ಲ ಸಲೀಸಾಗಿ ಚೆಡ್ಡಿತೊಡಿಸಿ ತಮ್ಮ ದೇಶಪ್ರೇಮದ ವ್ಯಾಪಾರಗಳಲ್ಲಿ ಮುಳುಗಿಹೋಗಿರುವ ಕೋಮುವಾದಿಗಳು ಹಠಾತ್ ದೇಶಪ್ರೇಮ ಜಾಗೃತಗೊಳಿಸಿಕೊಂಡವರಂತೆ ಪ್ರಜಾವಾಣಿಯ ಅನೇಕ ಕಛೇರಿಗಳಿಗೆ ನುಗ್ಗಿ ದಾಂದಲೆ ನಡೆಸಿದ್ದರು. ಹಾಗೇ ದಾಂದಲೆಯಲ್ಲಿ ಭಾಗಿಯಾಗಿದ್ದ ಬಲಪಂಥೀಯ ಸಂಘಟನೆಗಳ ಕಿಡಿಗೇಡಿಗಳನ್ನು ಶಿವಮೊಗ್ಗದ ಪ್ರಜಾವಾಣಿ ಓದುಗರೇ ಪೊಲೀಸರಿಗೆ ಹಿಡಿದುಕೊಡುವಲ್ಲಿ ನೆರವಾಗಿದ್ದರು. ನಾಡಿನ ಅನೇಕ ಜನಪರ ಸಂಘಟನೆಗಳು ದಿನೇಶ್ ಅಮಿನ್‌ಮಟ್ಟು ಅವರೊಂದಿಗೆ ಪ್ರಜಾವಾಣಿಗೂ ನೈತಿಕ ಬೆಂಬಲ ಸೂಚಿಸಲು 20.01.2012ರಂದು ಮಹಾತ್ಮ ಗಾಂಧಿ ರಸ್ತೆಯ ಗಾಂಧಿ ಪ್ರತಿಮೆ ಎದುರು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು. ಪ್ರಜಾವಾಣಿಯೊಂದಿಗೆ ನಾಲ್ಕು-ಐದು ದಶಕಗಳ ‘ಸಂಬಂಜ’ವಿಟ್ಟುಕೊಂಡಿದ್ದ ಅನೇಕ ಜನಪರ ಹೋರಾಟಗಳ ನಾಯಕರು ಅವತ್ತು ದಿನೇಶರ ಬೆನ್ನಿಗೆ ನಿಲ್ಲುವ ಸಲುವಾಗಿ ಬೀದಿಗಿಳಿದಿದ್ದರು. ಪ್ರಜಾವಾಣಿ ಮತ್ತು ಅದರ ಓದುಗರ ಸಂಬಂಧ ದೊಡ್ಡದು ಎನ್ನುವ ಚಿತ್ರಣಗಳು ಅವತ್ತು ಪ್ರತಿಭಟನೆಯ ರೂಪದಲ್ಲಿ ಪ್ರಕಟಗೊಂಡಿತು.

ದೇವನೂರರು ಸಂಪಾದಿಸಿದ ಈ ವಿಶೇಷ ಸಂಚಿಕೆ ಪ್ರಕಟಗೊಂಡು ಇವತ್ತಿಗೆ ಐದು ದಿನಗಳಾಯಿತು. ಇದೇ ವಿಶೇಷ ಸಂಚಿಕೆಯಲ್ಲಿ ಸುದೇಶ ದೊಡ್ಡಪಾಳ್ಯರು ಬರೆದ ‘ಒಂದು ದಿನ ಅವರಲ್ಲೊಬ್ಬನಾಗಿ’ ಲೇಖನ ಪ್ರಕಟಗೊಂಡ ಮರುದಿನದಿಂದಲೇ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ‘ಕಪ್ಪಸೋಗೆ’ಯಲ್ಲಿ ಪೊಲೀಸ್ ತುಕಡಿಯೊಂದು ಬೀಡುಬಿಟ್ಟಿದೆಯೆಂಬ ಸುದ್ದಿಯೊಂದನ್ನು ನೆನ್ನೆ ರಾತ್ರಿಯಷ್ಟೆ ಗೆಳೆಯರೊಬ್ಬರು ಹೇಳಿದರು. ಜಾತಿಯನ್ನೇ ಉಸಿರಾಡುತ್ತಾ, ಜಾತಿಯನ್ನೇ ಮೈತುಂಬಾ ಹೊದ್ದುಕೊಂಡಿರುವ ಇಂಡಿಯಾದಲ್ಲಿ ‘ಕಪ್ಪಸೋಗೆ’ಯಂತಹ ಕುಗ್ರಾಮಗಳು ಅದೆಷ್ಟಿವೆಯೋ? ■

ಇನ್ನೂ ಮುಟ್ಟಿಸಿಕೊಳ್ಳದ ಭಾರತೀಯ ಮಾಧ್ಯಮಗಳು...

ಮೂಲ: ರಾಬಿನ್ ಜೆಫ್ರಿ
ಕನ್ನಡಕ್ಕೆ: ಕೆ.ಎಲ್ ಚಂದ್ರಶೇಖರ್ ಐಜೂರ್

1992ರಲ್ಲಿ ಹಾಗೆ ಸುಮ್ಮನೆ ಇಣುಕಿ ನೋಡಿದ್ದೆ, ಅವತ್ತೂ ಅಲ್ಲೊಬ್ಬ ದಲಿತ ಸಿಗಲಿಲ್ಲ; ಇವತ್ತೂ ಅಲ್ಲಿ ಸಿಗಲಾರ. ಅದು ಭಾರತೀಯ ಮಾಧ್ಯಮ ರಂಗ. ದಲಿತರನ್ನು ಇನ್ನೂ ಮುಟ್ಟಿಸಿಕೊಳ್ಳಲು ಹೆಣಗುತ್ತಿರುವ ಬೃಹತ್ ಮಾಧ್ಯಮ. ಇಂಡಿಯಾದ ಒಟ್ಟು ಜನಸಂಖ್ಯೆಯ ಶೇಕಡಾ ಇಪ್ಪತ್ತೈದರಷ್ಟಿರುವ ದಲಿತರ ಬದುಕನ್ನು ಸಣ್ಣ ಕುತೂಹಲಕ್ಕಾದರೂ ನೋಡುವುದಿರಲಿ, ಭಾರತೀಯ ಮಾಧ್ಯಮ ತನ್ನ ಸುದ್ದಿಮನೆಗಳಿಂದಲೇ ದಲಿತರನ್ನು ದೂರವಿಟ್ಟಿದೆ.

ದಲಿತರನ್ನು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಿಂದ ದೂರವಿಡಲು ಕಾರಣಗಳೇನು? ಇದಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ಭಾರತೀಯ ಸಂವಿಧಾನದ ಮೂಲಧರ್ಮವಾದ 'ಸಮಾನತೆ' ಮತ್ತು 'ಭ್ರಾತೃತ್ವ'ವನ್ನು ಈ ದೇಶದ ಎಲ್ಲ ರಂಗಗಳು ನಿರಾಕರಿಸಿರುವಂತೆ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮವೂ ನಿರಾಕರಿಸಿದೆ. ಹೀಗಾಗಿಯೇ ಮಾಧ್ಯಮದ ಮಂದಿ 'ಮಾಧ್ಯಮದಲ್ಲಿ ಭ್ರಾತೃತ್ವ' ಎಂದರೆ ದೂರ ಸರಿಯುತ್ತಾರೆ.

ಎರಡನೆಯದು, ಸುದ್ದಿಮನೆಗಳಲ್ಲಿರುವ ಮಂದಿ ಸದಾ ರೋಚಕತೆಗೆ ಮಣೆಹಾಕಿ ಹೆಚ್ಚು ಜನರನ್ನು ಆಕರ್ಷಿಸುವುದರತ್ತಲೇ ಗಮನಕೊಡುವುದರಿಂದ, ಮಾಧ್ಯಮದ ವ್ಯಾಪಾರಿ ಜಗತ್ತಿಗೆ ದೇಶದ ಕಾಲುಭಾಗದಷ್ಟಿರುವ ದಲಿತರು ಯಾವತ್ತೂ ಮಾರಾಟದ ಸರಕಾಗುವುದಿಲ್ಲ. ಸದಾ 'ಸಾರ್ವಜನಿಕ ಸಮ್ಮತಿ' ಉತ್ಪಾದಿಸುವುದರತ್ತಲ್ಲೇ ಹೆಚ್ಚು ಚಡಪಡಿಸುವ ಈ ಮಾಧ್ಯಮ, ಸಮಾಜದ ಅಂಚಿನಲ್ಲಿದ್ದು ದಿವ್ಯ ನಿರ್ಲಕ್ಷ್ಯಕ್ಕೊಳಗಾಗಿರುವ ದಲಿತರ ತಾರತಮ್ಯದ ಪ್ರಶ್ನೆಗಳನ್ನು ಇದುವರೆವಿಗೂ ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಪೂರ್ವ ಮತ್ತು ಈಶಾನ್ಯ ಭಾಗದ ಅನೇಕ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜನಪರ ಹೋರಾಟಗಳು ನಡೆದರೂ ಇಂಡಿಯಾದ ಪತ್ರಿಕೆಗಳಿಗೆ ಅವು ಸುದ್ದಿಯೇ ಅನ್ನಿಸಿಲ್ಲ.

ಮೂರನೆಯದು, ಬಹಳ ಹಿಂದೆ ಅಮೆರಿಕಾದ ಕಟ್ಟಾ ಮಾಧ್ಯಮದ ಮಂದಿ 'ಸುದ್ದಿ ಅನ್ನಿಸುವುದೆಲ್ಲ ಪ್ರಿಂಟಾಗಬೇಕು' ಎನ್ನುವ 'ನ್ಯೂ ಯಾರ್ಕ್ ಟೈಮ್ಸ್' ಪತ್ರಿಕೆಯ ಟ್ಯಾಗ್‌ಲೈನನ್ನು ಹೆಚ್ಚು ನಂಬಿಕೊಂಡಿದ್ದರು. ಆದರೆ ದೇಶದ ಕಾಲುಭಾಗದಷ್ಟು ಜನರನ್ನು ಅವರ ಮೇಲೆ ಯಾವುದಾದರೂ ಹಿಂಸೆ, ಬರ್ಬರ ಅನ್ನಿಸುವ ಕೃತ್ಯಗಳು ಜರುಗಿದ ಸಂದರ್ಭಗಳಲ್ಲಿ ಮಾತ್ರ ಮುಟ್ಟಿ ನಂತರ ಅವರನ್ನು ಮಾಧ್ಯಮದ ಗಡಿಗಳಿಂದಲೇ ದೂರ ನೂಕುವ ಪತ್ರಿಕೆಗಳು ಹೆಚ್ಚುಕಾಲ ನೆಲೆ ನಿಲ್ಲಲಾರವು ಎಂಬ ಪರಮಸತ್ಯ ಇದೇ ' ಮಾಧ್ಯಮದ ಮಂದಿಗೆ ಬಹುಬೇಗ ಗೊತ್ತಾಯಿತು.

ಭಾರತೀಯ ಮಾಧ್ಯಮಗಳಲ್ಲಿ ದಲಿತರ ಗೈರುಹಾಜರಿ ಕುರಿತ ಚರ್ಚೆಗಳು 1996ರಿಂದ ಹೆಚ್ಚು ಮುನ್ನೆಲೆಗೆ ಬರುತ್ತಿವೆ. ಖುದ್ದು ಒಬ್ಬ ಆಫ್ರೋ-ಅಮೆರಿಕನ್ ಆಗಿರುವ 'ವಾಷಿಂಗ್ಟನ್ ಪೋಸ್ಟ್'ನ ವರದಿಗಾರರಾದ ಕೆನ್ನೆತ್ ಜೆ.ಕೂಪರ್ ಮೊದಲಿಗೆ ದೆಹಲಿಯ ಮಾಧ್ಯಮದಲ್ಲಿ ದಲಿತರನ್ನು ಹುಡುಕುವ ಪ್ರಯತ್ನ ನಡೆಸಿದರು. ಅವರ ಹುಡುಕಾಟದಲ್ಲಿ ಅಂಥ ಲಾಭವೇನೂ ಆಗಲಿಲ್ಲ. ಕಡೆಗೆ ಅವರು ಬೇಸತ್ತು 'ಪಾಯ್‌ನೀರ್' ಪತ್ರಿಕೆಗೆ ಬರೆದ ತನಿಖಾ ಲೇಖನವನ್ನು ಬಿ.ಎನ್.ಉನಿಯಾಲ್ ಪ್ರಕಟಿಸಿದರು. ಲೇಖನದ ಕೊನೆಗೆ ಕೂಪರ್ ನೊಂದು ಬರೆದಿದ್ದರು: 'ನನ್ನ ಮೂವತ್ತು ವರ್ಷಗಳ ಜರ್ನಲಿಸ್ಟ್ ಬದುಕಿನಲ್ಲಿ ಒಬ್ಬೇ ಒಬ್ಬ ದಲಿತನನ್ನು ಇಂಡಿಯಾದ ಸುದ್ದಿಮನೆಗಳಲ್ಲಿ ನೋಡಲು ಸಾಧ್ಯವೇ ಆಗಲಿಲ್ಲ.'

ನಾನು 2000ದಲ್ಲಿ 'ಇಂಡಿಯಾದ ಪತ್ರಿಕಾ ಕ್ರಾಂತಿ' ಎಂಬ ಪುಸ್ತಕ ಬರೆದಾದ ನಂತರವೂ ಇಲ್ಲಿ ಅಂಥ ದೊಡ್ಡ ಬದಲಾವಣೆಗಳೇನೂ ಆಗಿಲ್ಲ. ಕೂಪರ್-ಉನಿಯಾಲ್ ತನಿಖಾ ವರದಿಯಲ್ಲಿ ಹೇಳಿರುವಂತೆ ಭಾರತದ ಮೂನ್ನೂರಕ್ಕೂ ಹೆಚ್ಚಿನ ಪತ್ರಿಕೆಗಳಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬೇ ಒಬ್ಬ ಪತ್ರಕರ್ತ ಸಿಗುವುದಿಲ್ಲ. ಆ ವರದಿಗೆ 2006ರಲ್ಲಿ ಹತ್ತು ವರ್ಷಗಳು ತುಂಬಿದವು. ಕಳೆದ ವರ್ಷವಷ್ಟೇ ತಮಿಳು ಪತ್ರಕರ್ತ ಜೆ.ಬಾಲಸುಬ್ರಹ್ಮಣ್ಯಮ್ ಇಂಗ್ಲಿಷ್ ದೈನಿಕವೊಂದರ ಸಂದರ್ಶನದಲ್ಲಿ ತಮಗಾದ ಹಸಿಹಸಿ ಅನುಭವಗಳನ್ನು 'ಎಕಾನಮಿಕ್ ಅ್ಯಂಡ್ ಪೊಲಿಟಿಕಲ್ ವೀಕ್ಲಿ'ಯಲ್ಲಿ ಬರೆದುಕೊಂಡಿದ್ದರು. ಬಾಲಸುಬ್ರಹ್ಮಣ್ಯಮ್ ದಲಿತ ಅನ್ನುವ ಕಾರಣಕ್ಕೆ ಹಾಗೂ ಅವರು ಸಂದರ್ಶನಕ್ಕೆ ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ದಲಿತರ ಪರವಾದ ಲೇಖನಗಳು ಅವರ ಪಾಲಿಗೆ ಆ ಇಂಗ್ಲಿಷ್ ದೈನಿಕದ ಬಾಗಿಲು ಸಂಪೂರ್ಣವಾಗಿ ಮುಚ್ಚುವಂತೆ ಮಾಡಿತು.

ಕೆನೆತ್ ಕೂಪರ್ ಈ ಸದ್ಯ ಬೋಸ್ಟನ್‌ನಲ್ಲಿ ನೆಲೆಗೊಂಡಿದ್ದು, ಆಫ್ರಿಕನ್-ಅಮೆರಿಕನ್ ಜನರ ಬದುಕನ್ನು ಬಿಂಬಿಸುತ್ತಿರುವ 'ಸೆಂಟ್ ಲೂಯಿಸ್ ಅಮೆರಿಕನ್' ಎಂಬ ಯಶಸ್ವಿ ಪತ್ರಿಕೆಗೆ ಸಂಪಾದಕರಾಗಿದ್ದಾರೆ. ಇಂಡಿಯಾದ ದಲಿತರು, ಆಫ್ರಿಕಾ-ಅಮೆರಿಕಾ ದೇಶಗಳ ಕಪ್ಪು ಜನಾಂಗದವರು ಒಂದೇ ಬಗೆಯ ತಾರತಮ್ಯ ಮತ್ತು ಅವಮಾನಗಳನ್ನು ಸಾಮಾಜಿಕವಾಗಿ ಅನುಭವಿಸಿದ್ದಾರೆ ಎಂಬುದು ನಮಗೆಲ್ಲ ಗೊತ್ತಿದೆ. ಎಬೋನಿ, ಎಸ್ಸೆನ್ಸ್, ಸೆಂಟ್ ಲೂಯಿಸ್ ಅಮೆರಿಕನ್ ಮತ್ತು ಚಿಕಾಗೋ ಡಿಫೆಂಡರ್ ತರಹದ ಪತ್ರಿಕೆಗಳು ಅಲ್ಲಿನ ಶೋಷಿತರನ್ನು ಹತ್ತಿರಕ್ಕೆ ಬಿಟ್ಟುಕೊಂಡಂತೆ ಇಂಡಿಯಾದ ಪತ್ರಿಕೆಗಳಿಗೇಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆ ಕಣ್ಣೆದುರು ಬಂದು ನಿಲ್ಲುತ್ತದೆ.

ಇದಕ್ಕೆ ಉತ್ತರವೂ ಇದೆ. ಇಂಡಿಯಾದ ದಲಿತರು ಮುಟ್ಟದ ಜಗತ್ತೊಂದನ್ನು ಅಮೆರಿಕಾದ ಶೋಷಿತರು 1920ರಲ್ಲಿ ಮುಟ್ಟಿದರು. ಬಹಳ ಮುಖ್ಯವಾಗಿ ಈ ದಶಕದಲ್ಲಿ ಕಪ್ಪು ಜನಾಂಗದಿಂದ ಮಧ್ಯಮ ವರ್ಗವೊಂದು ರೂಪುಗೊಂಡು ಅನೇಕ ಅಂಗಡಿ, ವ್ಯಾಪಾರ-ವಹಿವಾಟುಗಳ ಮಾಲೀಕತ್ವವನ್ನು ಪಡೆದುಕೊಂಡಿತ್ತು. ಮಧ್ಯಮ ವರ್ಗದ ಈ ಪುಟ್ಟ ಕಪ್ಪು ಜನಾಂಗವೇ ಮುಂದೆ ಕಪ್ಪು ಅಮೆರಿಕವಾಗಿ ತನ್ನ ಹೊಸ ಹುಟ್ಟನ್ನು ಪಡೆದುಕೊಂಡಿತು. ಈ ವರ್ಗ ತನ್ನ ಆರ್ಥಿಕ ಯಶಸ್ಸಿಗೆ ಆಯ್ದುಕೊಂಡದ್ದು ಪತ್ರಿಕೆಗಳ ಜಾಹೀರಾತು. ಜಾಹೀರಾತು ಪಡೆಯುವ ಸಲುವಾಗಿಯಾದರೂ ಅಮೆರಿಕಾದ ಪತ್ರಿಕೆಗಳು ಈ ಕಪ್ಪು ಮಧ್ಯಮ ವರ್ಗದ ಎದುರು ಮಂಡಿಯೂರಿ ನಿಂತಿತು. ಇಡೀ ಅಮೆರಿಕಾ ಉಸಿರಾಡುತ್ತಿದ್ದ ಇಂಗ್ಲಿಷ್ ಭಾಷೆಯನ್ನು ಅಲ್ಲಿನ ಶೋಷಿತರು ಕಷ್ಟಪಟ್ಟು ತಮ್ಮದಾಗಿಸಿಕೊಂಡರು. ಆ ಭಾಷೆಯ ಸಂಪರ್ಕದಿಂದಾಗಿ ಚರ್ಚ್‌ನ ಒಳಗೆ ನಡೆಯುತ್ತಿದ್ದ ವಿದ್ಯಮಾನಗಳೆಲ್ಲ ಹೊರಗಿದ್ದ ಶೋಷಿತರಿಗೆ ತಲುಪಿತು. ಇಂಥ ಹೊತ್ತಲ್ಲೇ ಅಲ್ಲೊಬ್ಬ ಮಾರ್ಟಿನ್ ಲೂಥರ್ ಕಿಂಗ್ ಹುಟ್ಟಿಕೊಂಡದ್ದು. ತಮ್ಮ ಚರ್ಮಗಳು ಎಷ್ಟೇ ಭಿನ್ನ ದನಿ ಹೊರಡಿಸಿದರೂ ಕಪ್ಪು ಅಮೆರಿಕಾದ ಆಳದಲ್ಲಿ ಹೆಚ್ಚು ಬಿರುಕು ಕಾಣಿಸಿಕೊಳ್ಳಲಿಲ್ಲ. ಆಫ್ರಿಕಾ ಮತ್ತು ಅಮೆರಿಕಾದಲ್ಲಿ ಈಗ ಜನಾಂಗೀಯ ತಾರತಮ್ಯ ಅನ್ನುವುದು ಮೊದಲಿನಂತೆ



'ನನ್ನ ಮೂವತ್ತು ವರ್ಷಗಳ ಜರ್ನಲಿಸ್ಟ್ ಬದುಕಿನಲ್ಲಿ ಒಬ್ಬೇ ಒಬ್ಬ ದಲಿತನನ್ನು ಇಂಡಿಯಾದ ಸುದ್ದಿಮನೆಗಳಲ್ಲಿ ನೋಡಲು ಸಾಧ್ಯವೇ ಆಗಲಿಲ್ಲ.'

ಕೆನ್ನೆತ್ ಜೆ. ಕೂಪರ್

ಆಫ್ರಿಕನ್-ಅಮೆರಿಕನ್ ಕಪ್ಪು ಜನ ತುಳಿದ ಕಷ್ಟದ ಹಾದಿಗಿಂತಲೂ ಇಂಡಿಯಾದಲ್ಲಿ ದಲಿತರ ಹಾದಿ ಕಡುಕಷ್ಟದಲ್ಲಿದೆ. ಇಲ್ಲಿ 'ಸಮಾನತೆ' ಮತ್ತು 'ಭ್ರಾತೃತ್ವ'ಗಳನ್ನು ಕಾಣುವುದು ಅಷ್ಟು ಸಲೀಸಲ್ಲ. ಇಲ್ಲಿ ಎಲ್ಲವೂ ಛಿದ್ರಗೊಂಡಿದೆ, ದಲಿತರಿಗೆ ಇಲ್ಲಿ ದಕ್ಕುವ ಸಂಪನ್ಮೂಲ ಕಮ್ಮಿಯಾದರೆ ತಾರತಮ್ಯ ಮಾತ್ರ ಮುಗಿಲು ಮುಟ್ಟಿದೆ. ಸಂವಿಧಾನದ ಆಶಯಗಳು ಅಷ್ಟು ಸುಲಭವಾಗಿ ಜಾರಿಯಾಗಲಾರವೇನೋ. ಸಾಮಾಜಿಕ ನ್ಯಾಯದ ಮೇಲೆ ರಾಷ್ಟ್ರದ ಸ್ವ-ಹಿತಾಸಕ್ತಿಗಳು ನಿಂತರೆ ಮಾತ್ರ ಮಾಧ್ಯಮದಲ್ಲಿ ಸ್ವಲ್ಪ ಪ್ರಮಾಣದಲ್ಲಾದರೂ ದಲಿತರನ್ನು ನಾವೆಲ್ಲ ಕಾಣಬಹುದೇನೋ.ಮಾಧ್ಯಮಗಳು ದಲಿತರನ್ನು ಮುಟ್ಟಿಸಿಕೊಂಡ ದಿನ ಈ ದೇಶದಲ್ಲಿ ಬದಲಾವಣೆಯ ಗಾಳಿ ಬೀಸಿತೆಂದೇ ಅರ್ಥ.



ರಾಬಿನ್ ಜೆಫ್ರಿ

ಗುಣಪಡಿಸಲಾಗದ ಗಾಯದಂತೇನೂ ಇಲ್ಲ.

ಮಾಧ್ಯಮದಲ್ಲಿ ದಲಿತರ ಪ್ರಾತಿನಿಧ್ಯದ ಪ್ರಶ್ನೆಗಳು ಬಂದಾಗಲೆಲ್ಲ ಇಂಡಿಯಾದ ಮಾಧ್ಯಮಗಳು ಎರಡು ಸಿದ್ಧ ಉತ್ತರಗಳನ್ನು ತಮ್ಮ ಬೆಂಬಲಕ್ಕೆ ಇಟ್ಟುಕೊಳ್ಳುತ್ತವೆ: 'ಒಳ್ಳೆಯ ಪತ್ರಕರ್ತ ಸುದ್ದಿಯ ವಸ್ತುನಿಷ್ಠತೆಯನ್ನು ನೋಡುತ್ತಾನೆಯೇ ಹೊರತು ಜಾತಿಯನ್ನಲ್ಲ' ಮತ್ತು 'ಮೀಸಲಾತಿ ಎನ್ನುವುದು ಆಧುನಿಕ ಭಾರತಕ್ಕೆ ಮಾರಕ, ಜಾತಿಯನ್ನು ಪಕ್ಕಕ್ಕಿಟ್ಟು ಪ್ರತಿಭೆಯನ್ನಷ್ಟೆ ಪರಿಗಣಿಸಬೇಕು'. ಬ್ರಿಟಿಷ್ ಆಳ್ವಿಕೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಇಲ್ಲಿನ ಪುರಾತನ ಶ್ರೀಮಂತರು 'ದಿ ಸ್ಟೇಟ್ಸ್‌ಮ್ಯಾನ್' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರೆಂದೇನಾದರೂ ತಿಳಿದಿರುವಿರಾ? ಖಂಡಿತ ಇಲ್ಲ. ದಿ ಹಿಂದೂ, ಅಮೃತಾ ಬಜಾರ್ ಪತ್ರಿಕಾ, ಹಿಂದೂಸ್ತಾನ್ ಟೈಮ್ಸ್, ಯಂಗ್ ಇಂಡಿಯಾ ಮೊದಲಾದ ಪತ್ರಿಕೆಗಳು ಇಲ್ಲಿನ ಶೋಷಿತರನ್ನು ಅಷ್ಟಾಗಿ ಪ್ರತಿನಿಧಿಸಲಿಲ್ಲ ಎಂಬುದನ್ನು ಆ ಪತ್ರಿಕೆಗಳು ದಕ್ಕಿಸಿಕೊಂಡ ವ್ಯಾಪಾರಿ ಯಶಸ್ಸಿನಿಂದಲೇ ಅಂದಾಜಿಸಬಹುದು. 'ನಿಮ್ಮ ಕೈಯಲ್ಲೊಂದು ಪತ್ರಿಕೆ ಇದ್ದರೆ ನೀವು ರಾತ್ರೋರಾತ್ರಿ ಒಬ್ಬ ಹೀರೋನನ್ನು ತಯಾರಿಸಬಹುದು' ಎಂಬ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಾತಿನಲ್ಲಿ ಹೆಚ್ಚು ಸತ್ಯವಿದೆ.

ಹಾಗಿದ್ದರೆ ಇಂಡಿಯಾದ ಮಾಧ್ಯಮಗಳಲ್ಲಿ ದಲಿತರನ್ನು ಕಾಣುವುದು ಹೇಗೆ? ಎರಡು ಸಲಹೆಗಳಿವೆ. ಬಹುಶಃ ಇವು ಉತ್ತರವಾಗಲಾರವು; ಆದರೆ ಇವೆರಡು ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಬಹುದು.

1978ರಲ್ಲಿ ಸುದ್ದಿಮನೆಯೊಳಗಿನ ಭಿನ್ನತೆಯನ್ನು ಗಣತಿ ಮಾಡಲು ಅಮೆರಿಕನ್ ಸೊಸೈಟಿ ಆಫ್ ನ್ಯೂಸ್ ಎಡಿಟರ್ಸ್(ASNE) ಎಂಬ ಸಂಸ್ಥೆಯೊಂದು ಸ್ಥಾಪನೆಯಾಯಿತು. ಅಮೆರಿಕಾದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 30ರಷ್ಟಿದ್ದರೂ ಆ ವರ್ಷ ಶೇಕಡಾ 4ರಷ್ಟು ಕಪ್ಪು ವರ್ಣೀಯರು ಅಲ್ಲಿನ ಸುದ್ದಿಮನೆಗಳಲ್ಲಿ ಕೆಲಸಮಾಡುತ್ತಿದ್ದರು. 2000ದ ಹೊತ್ತಿಗೆ ಗುರಿ ಶೇಕಡಾ 20 ಮುಟ್ಟಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ಆ ಗುರಿ ಮುಟ್ಟಲಿಲ್ಲ. 2011ರಲ್ಲಿ ಅಮೆರಿಕಾದ ಅಲ್ಪಸಂಖ್ಯಾತರೆಂದು ಕರೆಸಿಕೊಳ್ಳುವ ಕಪ್ಪು ವರ್ಣೀಯರು ಶೇಕಡಾ 13ರಷ್ಟು ಹುದ್ದೆಗಳನ್ನು ಅಮೆರಿಕಾದ ಸುದ್ದಿಮನೆಗಳಲ್ಲಿ ಪಡೆದುಕೊಂಡಿದ್ದರು. ಈಗ ಅಮೆರಿಕಾದ ಒಟ್ಟು ಜನಸಂಖ್ಯೆಯಲ್ಲಿ ಅಲ್ಲಿನ ಶೋಷಿತರು ಶೇಕಡಾ 36ರಷ್ಟಿದ್ದಾರೆ. ಇದರಲ್ಲಿ ಆಫ್ರಿಕನ್-ಅಮೆರಿಕನ್, ಲ್ಯಾಟಿನೋಸ್, ನೇಟಿವ್ ಅಮೆರಿಕನ್ಸ್ ಮತ್ತು ಏಷ್ಯಾದವರು ಸೇರಿದ್ದಾರೆ. ಈಗ ASNE ತನ್ನ ಗುರಿಯನ್ನು 2020ಕ್ಕೆ ನಿಗದಿಪಡಿಸಿಕೊಂಡಿದೆ.

ಬಹುಶಃ ಈ ತರಹದ ಗುರಿ ನಿಗದಿಪಡಿಸುವ ವಿಚಾರಗಳು ಇಂಡಿಯಾದಲ್ಲಿ ಕಷ್ಟ (ನೆನಪಿಡಿ, ಇಲ್ಲಿ 'ಗುರಿ'ಯನ್ನು ಕುರಿತು ಮಾತನಾಡುತ್ತಿದ್ದೇನೆ, 'ಮೀಸಲಾತಿ' ಅಥವಾ 'ಕೋಟಾ' ಕುರಿತಾಗಲಿ ಅಲ್ಲ). ಇಂಡಿಯಾದಲ್ಲಿ ಜಾತಿ ಅನ್ನುವುದು ತುಂಬಾ ಸೂಕ್ಷ್ಮವಾದ ಸಂಗತಿ. ಈ ದೇಶಕ್ಕೆ ಈಗ ಒಂದು ಸಾಮಾಜಿಕ ಅಕೌಂಟೆಬಲಿಟಿ ನಡೆಸುವ ಸಂಸ್ಥೆಯೊಂದರ ಅಗತ್ಯವಿದೆ. ಇದಕ್ಕೆ ದೊಡ್ಡ ಸಂಸ್ಥೆಯ ಅಗತ್ಯವಿದೆ. ಇಂಡಿಯಾದ ಸುದ್ದಿಮನೆಗಳಲ್ಲಿನ ಭಿನ್ನತೆ ಅಂದರೆ ಇಲ್ಲಿರುವ ದಲಿತರು, ಮುಸ್ಲಿಮರು ಮತ್ತು ಮಹಿಳೆಯರ ಸಂಖ್ಯೆಗಳನ್ನು ಒಟ್ಟುಗೂಡಿಸಿ ಲೆಕ್ಕಹಾಕಬೇಕಿದೆ. ಅನೇಕ ಮಾಧ್ಯಮ ಸಂಸ್ಥೆಗಳು ಇದನ್ನು ಖಂಡಿತ ಒಪ್ಪಲಾರವು. ಬೇಕಿದ್ದರೆ ಜಾತಿವಾರು ಪತ್ರಕರ್ತರ ಮಾಹಿತಿ ನೀಡಿದ ಮತ್ತು ನೀಡದ ಮಾಧ್ಯಮ ಸಂಸ್ಥೆಗಳ ಕುರಿತು ಸಾಮಾಜಿಕ ಆಡಿಟಿಂಗ್ ನಡೆಯಲಿ.

ಪಿರಮಿಡ್ ಆಕಾರದಲ್ಲಿರುವ ಇಂಡಿಯಾದ ಸಮಾಜದೊಳಗೆ ನಿಧಾನವಾಗಿಯಾದರೂ ಮಧ್ಯಮ ವರ್ಗವೆಂಬುದು ಬೆಳೆಯುತ್ತಿದೆ. ಪಿರಮಿಡ್‌ನ ತಳದಲ್ಲಿರುವ ದಲಿತರಿಗೆ ಅವರ ಜಗತ್ತನ್ನು ಅವರದೇ ಕಣ್ಣಿನಿಂದ ಪ್ರಕಟಪಡಿಸಲು ಅಮೆರಿಕಾದ ಎಬೋನಿ, ಎಸ್ಸೆನ್ಸ್‌ನಂತಹ ಪತ್ರಿಕೆಗಳ ಅಗತ್ಯವಿದೆ. ಈ ಎರಡು ಪತ್ರಿಕೆಗಳು ಕಪ್ಪು ಅಮೆರಿಕಾದ ಯಶಸ್ಸಿನ ಮುಖವಾಣಿಯಾಗಿವೆ.

ಭಾರತೀಯ ಮಾಧ್ಯಮಗಳು ದಲಿತರನ್ನು ಒಳಗೊಳ್ಳದ ಇದೇ ಸಂದರ್ಭದಲ್ಲಿ ದಲಿತಪರ ಕಾಳಜಿಯನ್ನು ಕೇಂದ್ರೀಕರಿಸಿ 'ನವಯಾನ' ಪ್ರಕಾಶನ ಹೊರತರುತ್ತಿರುವ ಅನೇಕ ಪುಸ್ತಕಗಳ ಕುರಿತು ನಾವು ಗಂಭೀರವಾಗಿ ನೋಡಬೇಕಿದೆ. ಈ ತರಹದ ಪ್ರಕಾಶನ ಸಂಸ್ಥೆಗಳು ಮಧ್ಯಮ ವರ್ಗದ ದಲಿತರ ಆರ್ಥಿಕ ಬೆಂಬಲದಿಂದ ಟ್ರಸ್ಟ್‌ನಂತೆ ಬೆಳೆಯಬೇಕಾದ ಅನಿವಾರ್ಯವಿದೆ. ಆದರೂ ಇಂಥ ಸಂಸ್ಥೆ ಕಟ್ಟಲು ಬರೀ ದಲಿತರ ಹಣವೇ ಸಾಲದು. ತಳ ಸಮುದಾಯಗಳ ಕುರಿತು ನಿಜವಾದ ಪ್ರೀತಿ ಹೊಂದಿರುವ ಎಲ್ಲ ಜಾತಿ ಸಮುದಾಯಗಳಿಂದಲೂ ಹಣ ಸಂಗ್ರಹಿಸಿ, ಸಾಧ್ಯವಾದರೆ ಸರ್ಕಾರದಿಂದ ಹಣದ ಸೌಲಭ್ಯ ಸಿಗುವುದಾದರೆ ಅಲ್ಲಿಂದಲೂ ಪಡೆದು ಅದನ್ನು ಟ್ರಸ್ಟ್‌ನಲ್ಲಿ ಕಾರ್ಪಸ್ ರೂಪದಲ್ಲಿ ಸಂಗ್ರಹಿಸಿ ಇಡಬೇಕಿದೆ. ಹೀಗೆ ಕೂಡಿಟ್ಟ ಹಣದಿಂದ ಮಾತ್ರ ಪ್ರಕಾಶನದಂತಹ ದೊಡ್ಡ ಸಂಸ್ಥೆಗಳನ್ನು ಕಟ್ಟಲು ಸಾಧ್ಯ.

ಮುದ್ರಣ ಮಾಧ್ಯಮವಾಯಿತು, ಈ ಟಿ.ವಿ. ಮಾಧ್ಯಮಗಳ ಕತೆ ಏನು? 1967ರಲ್ಲಿ ನಾನು ಮೊದಲ ಸಲ ಭಾರತಕ್ಕೆ ಬಂದಿದ್ದೆ. ಆ ಸಂದರ್ಭದಲ್ಲಿ ಟಲಿವಿಷನ್ ಮಾಧ್ಯಮದ ಕುರಿತು ಪಶ್ಚಿಮ ಕೆನಡಾದ ಸಣ್ಣ ಪತ್ರಿಕೆಯೊಂದಕ್ಕೆ ಲೇಖನ ಬರೆದಿದ್ದೆ. ಅಷ್ಟೊತ್ತಿಗಾಗಲೇ ನಾನು ಕೆನಡಾ ಮತ್ತು ಅಮೆರಿಕಾದ ಅನೇಕ ಟಿ.ವಿ. ಕಾರ್ಯಕ್ರಮಗಳನ್ನು ನೋಡಿದ್ದೆ. ಆಗ ಕಪ್ಪು ಮುಖಗಳೇ ನನಗೆ ಟಿ.ವಿ.ಯಲ್ಲಿ ಕಾಣಲಿಲ್ಲ. 1970ರಲ್ಲಿ ನಾನು ಉತ್ತರ ಅಮೆರಿಕಾಗೆ ಹಿಂತಿರುಗಿದಾಗ ಫ್ಲಿಪ್ ವಿಲ್ಸನ್ ಎಂಬ ಆಫ್ರಿಕನ್-ಅಮೆರಿಕನ್ ಹಾಸ್ಯ ಕಲಾವಿದ ಟಿ.ವಿ. ಶೋಗಳಲ್ಲಿ ಬಹಳ ಜನಪ್ರಿಯನಾಗಿರುವುದನ್ನು ಕಂಡೆ. ಮುಂದೆ ಅಮೆರಿಕಾ ನೆಲದಲ್ಲೇ ಅನೇಕ ನಾಟಕೀಯ ಬೆಳವಣಿಗೆಗಳು ನಡೆದವು. ಕಪ್ಪು ಜನರನ್ನು ಟಿ.ವಿ.ಯಲ್ಲಿ ನೋಡುವುದಕ್ಕೆ ಸಾಧ್ಯವೇ ಇಲ್ಲ ಎಂದುಕೊಂಡಿದ್ದ ಅಮೆರಿಕಾ ದೇಶವೇ 38 ವರ್ಷಗಳ ನಂತರ ಕಪ್ಪು ಜನಾಂಗಕ್ಕೆ ಸೇರಿದ ಅಧ್ಯಕ್ಷನನ್ನು ಪಡೆಯಿತು.

ಇಂಡಿಯಾದ ಟಿ.ವಿ. ಚಾನಲ್‌ಗಳಲ್ಲಿ ದಲಿತರು ಯಾವುದಾದರೂ ಕಾರ್ಯಕ್ರಮದ ನಿರೂಪಕರಾಗಿ ಕ್ಯಾಮರಾದ ಮುಂದೆ ಕಾಣಿಸಿಕೊಂಡಿದ್ದಾರೆಯೇ? ನನ್ನ ಸಂಪರ್ಕದಲ್ಲಿದ್ದ ಅನೇಕರನ್ನು ವಿಚಾರಿಸಿದೆ. ಇಲ್ಲ ಎಂಬ ಉತ್ತರ ಬಂತು. ಮಾಧ್ಯಮಗಳು ದಲಿತರನ್ನು ಮುಟ್ಟಿಸಿಕೊಂಡ ದಿನ ಈ ದೇಶದಲ್ಲಿ ಬದಲಾವಣೆಯ ಗಾಳಿ ಬೀಸಿತೆಂದೇ ಅರ್ಥ.

ನನಗನ್ನಿಸುತ್ತಿದೆ ಆಫ್ರಿಕನ್-ಅಮೆರಿಕನ್ ಕಪ್ಪು ಜನ ತುಳಿದ ಕಷ್ಟದ ಹಾದಿಗಿಂತಲೂ ಇಂಡಿಯಾದಲ್ಲಿ ದಲಿತರ ಹಾದಿ ಕಡುಕಷ್ಟದಲ್ಲಿದೆ. ಇಲ್ಲಿ 'ಸಮಾನತೆ' ಮತ್ತು 'ಭ್ರಾತೃತ್ವ'ಗಳನ್ನು ಕಾಣುವುದು ಅಷ್ಟು ಸಲೀಸಲ್ಲ. ಇಲ್ಲಿ ಎಲ್ಲವೂ ಛಿದ್ರಗೊಂಡಿದೆ, ದಲಿತರಿಗೆ ಇಲ್ಲಿ ದಕ್ಕುವ ಸಂಪನ್ಮೂಲ ಕಮ್ಮಿಯಾದರೆ ತಾರತಮ್ಯ ಮಾತ್ರ ಮುಗಿಲು ಮುಟ್ಟಿದೆ. ಸಂವಿಧಾನದ ಆಶಯಗಳು ಅಷ್ಟು ಸುಲಭವಾಗಿ ಜಾರಿಯಾಗಲಾರವೇನೋ. ಸಾಮಾಜಿಕ ನ್ಯಾಯದ ಮೇಲೆ ರಾಷ್ಟ್ರದ ಸ್ವ-ಹಿತಾಸಕ್ತಿಗಳು ನಿಂತರೆ ಮಾತ್ರ ಮಾಧ್ಯಮದಲ್ಲಿ ಸ್ವಲ್ಪ ಪ್ರಮಾಣದಲ್ಲಾದರೂ ದಲಿತರನ್ನು ನಾವೆಲ್ಲ ಕಾಣಬಹುದೇನೋ.

(ರಾಬಿನ್ ಜೆಫ್ರಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪೂರ್‌ನ ದಕ್ಷಿಣ ಏಷ್ಯಾ ಅಧ್ಯಯನ ಸಂಸ್ಥೆ ಮತ್ತು ಏಷ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂದರ್ಶಕ ಸಂಶೋಧನಾ ಪ್ರಾಧ್ಯಾಪಕರಾಗಿದ್ದಾರೆ. ಈ ಲೇಖನ ಜೆಫ್ರಿಯವರು 31ನೇ ಮಾರ್ಚ್ 2012ರಂದು ನವದೆಹಲಿಯ ರಾಜೇಂದ್ರ ಮಾಥೂರ್ ನೆನಪಿನ ಕಾರ್ಯಕ್ರಮದಲ್ಲಿ ಮಂಡಿಸಿದ ಭಾಷಣದ ಬರಹರೂಪ)

■

ನಮ್ಮ ಕಾಲದ ಬ್ರಹ್ಮ ರಾಕ್ಷಸ: ಅಮೇರಿಕಾದ ಸಾಮ್ರಾಜ್ಯಶಾಹಿ

— ರಘು

ಇಡೀ ಭೂಗೋಳದಲ್ಲೆಲ್ಲ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿ ವಿಶ್ವವನ್ನೆಲ್ಲ ತಾನೇ ನಿಯಂತ್ರಿಸುತ್ತಾ ತನ್ನ ಆದೇಶವನ್ನು ಧಿಕ್ಕರಿಸುವ ಜಗತ್ತಿನ ಯಾವುದೇ ರಾಷ್ಟ್ರದ ವಿರುದ್ಧ ಶಿಳ್ಳೆ ಹೊಡೆದು ಯುದ್ಧ ಸಾರುವ ಅಮೇರಿಕಾದ ಸಾಮ್ರಾಜ್ಯಶಾಹಿಯೇ ಇಂದಿನ ನಮ್ಮ ಕಾಲದ ಬ್ರಹ್ಮ ರಾಕ್ಷಸ. ಏಕೆಂದರೆ ಇದಕ್ಕೆ ಬಡ ದೇಶಗಳ ಬಡ ಜನತೆಯೇ ಆಹಾರ. ದ್ವಿತೀಯ ಮಹಾಯುದ್ಧಾ ನಂತರ ಕಾಲದಿಂದ ಇಲ್ಲಿಯವರೆಗೆ ಅದು ದೈತ್ಯ ರಾಕ್ಷಸನಾಗಿ ಬೆಳೆದು ನಂತು ವಿಶ್ವದ ದುಡಿಯುವ ಜನತೆಯನ್ನು, ಅದರಲ್ಲೂ ಮುಖ್ಯವಾಗಿ ಹಿಂದುಳಿದ ರಾಷ್ಟ್ರಗಳ ಜನತೆಯ ಬದುಕನ್ನು ಅಲ್ಲಿಯ ಆಳುವ ವರ್ಗಗಳೊಂದಿಗೆ ಕೈಜೋಡಿಸಿ ಹೊಸಕಿ ಹಾಕುತ್ತಿರುವ ಸಾಮ್ರಾಜ್ಯಶಾಹಿಯ ಸ್ವಭಾವವನ್ನು ಇಲ್ಲಿ ನಿರೂಪಿಸಲು ಯತ್ನಿಸಲಾಗಿದೆ.

ವಿಶ್ವದಲ್ಲಿ ಹೆಚ್ಚುತ್ತಿರುವ ಅಸಮಾನತೆಯು ಎಂಥಹವರಿಗೂ ಶಾಕ್ ನೀಡುತ್ತದೆ ವಿಶ್ವ ಜನಸಂಖ್ಯೆಯ 2 ಶೇಕಡಾ ಜನ ವಿಶ್ವದ ಸಂಪತ್ತಿನ ಅರ್ಧದಷ್ಟು ಒಡೆತನವನ್ನು ಹೊಂದಿದ್ದಾರೆ. ಜಿಡಿಪಿ(ಒಟ್ಟು ಆಂತರಿಕ ಆದಾಯ, ಅಂದರೆ ಪ್ರತಿಯೊಬ್ಬರ ಆದಾಯದ ಮೊತ್ತ) 48 ಅತಿ ಬಡದೇಶಗಳಲ್ಲಿ ವಿಶ್ವದ ಮೂರು ಅತಿ ಶ್ರೀಮಂತ ವ್ಯಕ್ತಿಗಳ ಒಟ್ಟು ಸಂಪತ್ತಿಗಿಂತ ಕಡಿಮೆಯಿದೆ. ವಿಶ್ವದ ಜನಸಂಖ್ಯೆಯ ಅತಿ ಬಡ 40 ಶೇಕಡಾ ಜನಸಂಖ್ಯೆಯ ಆದಾಯ ವಿಶ್ವ ಆದಾಯದ 5 ಶೇಕಡಾ ಮಾತ್ರ. ವಿಶ್ವದ ಜನಸಂಖ್ಯೆಯ ಅತಿ ಶ್ರೀಮಂತ 20 ಶೇ. ಮಂದಿ ವಿಶ್ವ ಆದಾಯದ ಮುಕ್ಕಾಲು ಪಾಲು ಹೊಂದಿದ್ದಾರೆ. ವಿಶ್ವದ 20 ಶೇ. ಅತ್ಯಂತ ಶ್ರೀಮಂತ ಜನರ ಸರಾಸರಿ ವಾರ್ಷಿಕ ಆದಾಯವು 20ಶೇ. ಅತ್ಯಂತ ಬಡ ಜನರ ವಾರ್ಷಿಕ ಆದಾಯ 50 ಪಾಲುಗಿಂತಲೂ ಹೆಚ್ಚಾಗಿದೆ. ಸಾಮ್ರಾಜ್ಯಶಾಹಿಯ ಕ್ರೂರ ಕಾರ್ಯಾಚರಣೆ ಇಂತಹ ಅಸಮಾನತೆಯನ್ನು ಇನ್ನಷ್ಟು ತೀವ್ರಗೊಳಿಸುತ್ತಿದೆ.

ಸಾಮ್ರಾಜ್ಯಶಾಹಿಯ ಹಂತಗಳು

ಬಂಡವಾಳಶಾಹಿಯು ಲಾಭಕ್ಕಾಗಿ ಯಾವುದೇ ಮಾರ್ಗವನ್ನು ಅನುಸರಿಸಲು ಹಿಂಜರಿಯುವುದಿಲ್ಲ. ಲಾಭಕ್ಕಾಗಿ ಇತರೆ ದೇಶಗಳನ್ನು ವಶಪಡಿಸಿಕೊಂಡು ಕೊಳ್ಳೆ ಹೊಡೆಯುವ ಬಂಡವಾಳಶಾಹಿಯ ಭಯಂಕರ ರೂಪವೇ ಸಾಮ್ರಾಜ್ಯಶಾಹಿ. ಇಪ್ಪತ್ತನೇ ಶತಮಾನದ ಆರಂಭದಿಂದೀಚೆಗೆ ಬಂಡವಾಳ ಶೇಖರಣೆ ಪ್ರಕ್ರಿಯೆಯಿಂದಾಗಿ ಕೈಗಾರಿಕೆ ಮತ್ತು ಬ್ಯಾಂಕುಗಳಲ್ಲಿ ಗುತ್ತೇದಾರಿ ಬಂಡವಾಳ ಬೆಳೆಯಲು ಕಾರಣವಾದ ಕಾಲವಾಗಿದೆ. ಕೈಗಾರಿಕೆ ಮತ್ತು ಬ್ಯಾಂಕು, ಇವೆರಡೂ ವಲಯಗಳಲ್ಲಿ ಬಂಡವಾಳವು ಜೊತೆಗೂಡಿದ್ದರಿಂದ "ಹಣಕಾಸು ಬಂಡವಾಳ" ಉಗಮವಾಯಿತು. ಅಭಿವೃದ್ಧಿ ಹೊಂದಿದ್ದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ, ಇವೆರಡೂ ವಲಯಗಳಲ್ಲಿ ಯಜಮಾನಿಕೆ ಹೊಂದಿದ್ದ 'ಕೆಲವೇ ಶ್ರೀಮಂತರು' ಹಾಗೂ ಪ್ರಭುತ್ವವು ಇದನ್ನು ನಿಯಂತ್ರಿಸುತ್ತಿದ್ದವು. ಈಗಾಗಲೇ ಸಂಪೂರ್ಣವಾಗಿ ಹಂಚಿಹೋಗಿದ್ದ ಪ್ರಪಂಚದಲ್ಲಿ "ಆರ್ಥಿಕ ಭೂಭಾಗ" ಕ್ಕಾಗಿ ಪ್ರತಿಸ್ಪರ್ಧಿ ಬಂಡವಾಳಿಗರ ನಡುವೆ ಹೋರಾಟ ನಡೆಯುತ್ತಿತ್ತು. ಈ ಹೋರಾಟವು ಅತ್ಯವಶ್ಯವಾಗಿ ಯುದ್ಧಗಳಾಗಿ ಸ್ಫೋಟಗೊಂಡು ಪ್ರತಿ ಯುದ್ಧನಿರತ ದೇಶದ ಕಾರ್ಮಿಕರಿಗೆ ನೀಡಿದ ಆಯ್ಕೆಗಳೆಂದರೆ: ತನ್ನ ಸಹವರ್ತಿ ಕಾರ್ಮಿಕರನ್ನು ಕೊಂದು ಹಾಕುವುದು, ಅಥವಾ ತಮ್ಮದೇ ಸ್ವಂತ ದೇಶಗಳ ಮರಣಶಯ್ಯೆಯಲ್ಲಿದ್ದ ಬಂಡವಾಳಶಾಹಿಯ ವಿರುದ್ಧ ತಮ್ಮ ಗನ್ನುಗಳನ್ನು ತಿರುಗಿಸಿ, ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜವಾದದೆಡೆಗೆ ಹೆಜ್ಜೆಹಾಕುವುದು.

ಬಂಡವಾಳಶಾಹಿಯ ಫ್ಯಾಸಿಸಂ ಮುಖವಾಡ:

ನಾವು ಅಲ್ಲಿಂದೀಚೆಗಿನ ಸಾಮ್ರಾಜ್ಯಶಾಹಿಯ ಮೂರು ವಿವಿಧ ಹಂತಗಳ ನಡುವಿರುವ ವ್ಯತ್ಯಾಸವನ್ನು ಗುರುತಿಸಬಹುದು. ಲೆನಿನ್‌ರವರ ವಿಶ್ಲೇಷಣೆಗೆ ಬಹಳ ನಿಖರವಾಗಿ ಸರಿಹೊಂದಿದ ಇದರ ಪ್ರಥಮ ಹಂತವೆಂದರೆ ದ್ವಿತೀಯ ಮಹಾಯುದ್ಧದ ಕ್ಲೈಮ್ಯಾಕ್ಸ್ : ಈಗಾಗಲೇ ಹಂಚಿಕೆಯಾಗಿರುವ ಪ್ರಪಂಚವನ್ನು ಪುನರ್-ಹಂಚಿಕೆ ಮಾಡಿಕೊಳ್ಳುವ ಸಲುವಾಗಿ ನಡೆಯುತ್ತಿದ್ದ ವಿವಿಧ ಹಣಕಾಸು ಬಂಡವಾಳಿಗರ ನಡುವಿನ ಕಾದಾಟವು ಯುದ್ಧಗಳಾಗಿ ಆಸ್ಫೋಟಿಸಿ ಸಮಾಜವಾದಿ ಕ್ಯಾಂಪ್ ರಚನೆಯಾಗುವಲ್ಲಿ ಕಾರಣವಾಯಿತು. ಲೆನಿನ್‌ರವರ ಮರಣದ ನಂತರ ಈ ಪ್ರಧಾನ ಲಕ್ಷಣವು ಬಹಿರಂಗಗೊಂಡು ಜರುಗಿದ ಘಟನಾವಳಿಗಳ ಹಾದಿಯೆಂದರೆ: ಬಂಡವಾಳಶಾಹಿ ಶಕ್ತಿಗಳ ಒಗ್ಗಟ್ಟಿಲ್ಲದ್ದರಿಂದ ಉಂಟಾದ ಅತೀವ ಆರ್ಥಿಕ ಬಿಕ್ಕಟ್ಟು (1930ರ ದಶಕದ ಮಹಾನ್ ಕುಸಿತ). ಇದು ದ್ವಿತೀಯ ಮಹಾಯುದ್ಧಕ್ಕೆ ಕಾರಣವಾದ ಫ್ಯಾಸಿಸಂ ಉಗಮಿಸಲು ಅವಶ್ಯ ಪರಿಸ್ಥಿತಿಗಳನ್ನು ಸೃಷ್ಟಿಸಿತು. ಫ್ಯಾಸಿಸಂ ನ್ನು ದಿಮಿತ್ರೆವ್‌ರವರ ಮಾತುಗಳಲ್ಲಿ ಹೇಳುವುದಾದರೆ "ಕಳೆದು ಹೋದ ಪ್ರದೇಶವನ್ನು ಮತ್ತೆ ಪಡೆಯಲು ಹವಣಿಸುವ ಹಣಕಾಸು ಬಂಡವಾಳ ವಿಭಾಗದ ಬಹಿರಂಗ ಭಯೋತ್ಪಾದನಾ ಸರ್ವಾಧಿಕಾರ" ಎಂದರ್ಥ.

ದ್ವಿತೀಯ ಮಹಾಯುದ್ಧವು ಕೆಲವೇ ಶ್ರೀಮಂತರ ಆಡಳಿತಾಧಿಕಾರ ಸ್ಥಾನವನ್ನು ಮಹತ್ತರವಾಗಿ ದುರ್ಬಲಗೊಳಿಸಿತು. ಯುದ್ಧ ಸಮಯದಲ್ಲಿ ಅಗಾಧ ತ್ಯಾಗ ಬಲಿದಾನಗೈದಿದ್ದ ಮುಂದುವರೆದ ದೇಶಗಳ ಕಾರ್ಮಿಕ ವರ್ಗವು ಇದರಿಂದ ಮತ್ತಷ್ಟು ಬಲಪಡಕೊಂಡಿತು ಮತ್ತು ಹಳೆಯ ಬಂಡವಾಳಶಾಹಿಗೆ ಹಿಂತಿರುಗಲು ನಿರಾಕರಿಸಿತು (ಇದರ ಚಿಹ್ನೆಯೆಂದರೆ ಬ್ರಿಟನ್ನಿನಲ್ಲಿ ಯುದ್ಧಾನಂತರ ಚುನಾವಣೆಗಳು ವಿನ್‌ಸ್ಟನ್ ಚರ್ಚಿಲ್ಲರ ಟೋರಿ ಪಕ್ಷದ ಸೋಲು ಮತ್ತು ಇಟಾಲಿಯನ್ ಹಾಗೂ ಫ್ರೆಂಚ್ ಕಮ್ಯುನಿಸ್ಟ್ ಪಕ್ಷಗಳ ಅಗಾಧ ಬೆಳವಣಿಗೆ). ಇದರ ಪರಿಣಾಮ ಸಮಾಜವಾದಿ ಬಣ ಗಣನೀಯವಾಗಿ ಬೆಳೆದಿತ್ತು ಮತ್ತು ಚೀನಾದ ಕ್ರಾಂತಿಯ ವಿಜಯದೊಂದಿಗೆ ಮತ್ತಷ್ಟು ಬೆಳೆಯಿತು.

ಈ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಯು ತಾನು ಉಳಿಯಬೇಕಾದರೆ ವಿನಾಯಿತಿಗಳನ್ನು ನೀಡಬೇಕಾಯಿತು. ಮತ್ತು ವಿಶೇಷವಾಗಿ ಎರಡು ವಿನಾಯಿತಿಗಳು ಮುಖ್ಯವಾದವು.

1) ವಸಾಹತುಗಳಿಗೆ ಸ್ವತಂತ್ರ ನೀಡುವುದು: ಇರಾನ್ ಮತ್ತು ಈಜಿಪ್ಟ್‌ಗಳಲ್ಲಿ ಕಂಡುಬಂದಂತೆ ಸಾಮ್ರಾಜ್ಯಶಾಹಿಯು ಔಪಚಾರಿಕವಾಗಿ ಹಿನ್ನಡೆ ಅನುಭವಿಸಿದರೂ ಮೂರನೇ ಜಗತ್ತಿನ ಸಂಪನ್ಮೂಲಗಳ ಮೇಲಿನ ತನ್ನ ಹಿಡಿತ ಬಿಡಲು ನಿರಾಕರಿಸಿತು. ಇರಾನ್‌ನಲ್ಲಿ ತೈಲವನ್ನು ರಾಷ್ಟ್ರೀಕರಣ ಮಾಡಿದಾಗ ಅಲ್ಲಿನ ನಾಯಕ ಮೊಸದೇಗ್‌ರನ್ನು ಅಮೇರಿಕಾದ ಸಿಐಎ ಪಿತೂರಿಯಿಂದ ಕೆಳಗಿಳಿಸಿತು ಮತ್ತು ಈಜಿಪ್ಟ್‌ನಲ್ಲಿ ನಾಯಕ ನಾಸೆರ್ ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದಾಗ ಆಂಗ್ಲೋ-ಫ್ರೆಂಚ್ ಆಕ್ರಮಣ ಆರಂಭಿಸಲಾಯಿತು.

2) ಬೇಡಿಕೆ ನಿರ್ವಹಣೆ ನೀತಿ ಜಾರಿ: ಸರ್ಕಾರದ ಮಧ್ಯಪ್ರವೇಶದಿಂದ ಮುಂದುವರೆದ ರಾಷ್ಟ್ರಗಳಲ್ಲಿ ಹೆಚ್ಚಿನ ಮಟ್ಟದ ಉದ್ಯೋಗ ಒದಗಿಸುವ "ಬೇಡಿಕೆ ನಿರ್ವಹಣೆ" ನೀತಿಯನ್ನು ಜಾರಿಗೆ ತರಲಾಯಿತು. ಈ ಹಿಂದೆ ಬಂಡವಾಳಶಾಹಿ ಆರ್ಥಿಕತೆಯಲ್ಲಿ ಅದುವರೆಗೂ ಇಂತಹ ನೀತಿಯಿರಲಿಲ್ಲ. ಡಾಲರ್ ಕರೆನ್ಸಿಯು "ಚಿನ್ನದಷ್ಟೆ ಸಮ" ಎನ್ನುವ ಒಂದು ಹೊಸ ಅಂತರಾಷ್ಟ್ರೀಯ ಹಣಕಾಸು ವ್ಯವಸ್ಥೆ ಮತ್ತು ಅದರಿಂದ ಬಂಡವಾಳದ ಹರಿವು ಮತ್ತು ವ್ಯಾಪಾರ ಹರಿವಿನ ಮೇಲೆ ಅಂಥಹ ನಿಯಂತ್ರಣ ಹೇರುವ ನೀತಿ ಜಾರಿಗೆ ಬಂದಿತು. ಇದು ಅಮೇರಿಕಾ ಸಾಮ್ರಾಜ್ಯಶಾಹಿಯ ಪ್ರಾಬಲ್ಯದ ಹೊಸ ವಾಸ್ತವತೆಯನ್ನು ಮತ್ತು ಹೊಸ ಸನ್ನಿವೇಶದಲ್ಲಿ ಸಾಮ್ರಾಜ್ಯಶಾಹಿಗಳ ನಡುವಿನ ಕಡುವೈರತ್ವ ಶಮನವನ್ನು ನಮಗೆ ತೋರಿಸಿಕೊಡುತ್ತದೆ.

ಡಾಲರ್ ಎಂದರೆ ಚಿನ್ನ:

ಎರಡನೇ ಹಂತದಲ್ಲಿ, ಡಾಲರ್ ಎಂದರೆ "ಚಿನ್ನಕ್ಕೆ ಸಮ" ಎನ್ನುವುದು ಅಮೇರಿಕಾ ಉಚಿತವಾದ ಮತ್ತು ಅಪರಿಮಿತ ಚಿನ್ನದ ಗಣಿಯನ್ನು ಪಡಕೊಂಡಂತಾಯಿತು: ಅದು ಹಣದ ನೋಟುಗಳನ್ನು ಪ್ರಿಂಟ್ ಮಾಡಿದರೆ ಆ ನೋಟು "ಚಿನ್ನಕ್ಕೆ ಸಮ"ವಾದ್ದರಿಂದ ಇಡೀ ವಿಶ್ವ ಅದನ್ನು

ಇಟ್ಟುಕೊಳ್ಳುವ ಅನಿವಾರ್ಯವಾಯಿತು. ಇದರಿಂದಾಗಿ ಅಮೇರಿಕಾ ನೋಟುಗಳನ್ನು ಪ್ರಿಂಟ್ ಹಾಕಿ ಪ್ರಪಂಚದೆಲ್ಲೆಡೆ ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ಹಣಕಾಸು ಒದಗಿಸಿ ಆಮೂಲಕ ಸೋವಿಯತ್ ಒಕ್ಕೂಟ ಮತ್ತು ಚೀನಾವನ್ನು ಸುತ್ತುವರೆಯಿತು. ಈ ನೋಟುಗಳು ಯೂರೋಪಿಯನ್ ಬ್ಯಾಂಕುಗಳಿಗೆ ಪ್ರವಾಹದಂತೆ ಹರಿದು ಬಂದು ಪ್ರಪಂಚದೆಲ್ಲೆಡೆ ವಿತರಣೆಯಾಗತೊಡಗಿದವು. ವಿಯೆಟ್ನಾಂ ಯುದ್ಧ ಸಮಯದಲ್ಲಿ ನೋಟುಗಳ ಚಂಡಮಾರುತ ಹೆಚ್ಚಿದಂತೆ ಈ ಬ್ಯಾಂಕುಗಳು ಅದನ್ನು ಮತ್ತಷ್ಟು ಸಾಲವಾಗಿ ವಿತರಿಸತೊಡಗಿದವು. ವಿಶ್ವ ಸಂಪತ್ತಿನ ಅತಿದೊಡ್ಡ ಭಾಗವನ್ನು ಹಿಡಿದಿಡುವ ರೂಪವಾಗಿ ಡಾಲರ್‌ನ ಪ್ರಖ್ಯಾತ ಸ್ಥಾನ ಹಾಗೆಯೇ ಉಳಿದುಕೊಂಡಿತು. ಆದರೆ ಬಂಡವಾಳ ನಿಯಂತ್ರಣವನ್ನು ಸಡಿಲಗೊಳಿಸುವುದು ಮತ್ತು ವಿಶ್ವದಾದ್ಯಂತ ಹಣಕಾಸಿನ ಹೆಚ್ಚಿದ ಚಲನೆಯು 'ಅಂತರಾಷ್ಟ್ರೀಯ ಹಣಕಾಸು ಬಂಡವಾಳ' ಎಂಬ ಹೊಸ ಶಕ್ತಿಯನ್ನು ಅಸ್ತಿತ್ವಕ್ಕೆ ತಂದಿತು.

ಆಧುನಿಕ ಸಾಮ್ರಾಜ್ಯಶಾಹಿಯ ಮೂರನೇ ಹಂತವು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯತೆಯಿಂದ ಎದ್ದುಕಾಣುತ್ತದೆ. ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ಜಾಗತೀಕರಣ ಪ್ರಕ್ರಿಯೆಯ, ಮತ್ತು ಮುಂದುವರೆದ ರಾಷ್ಟ್ರಗಳಲ್ಲಿ ಕೀನ್ಸ್‌ರವರ ಬೇಡಿಕೆ ನಿರ್ವಹಣೆ ನೀತಿಗಳ ಬದಲಿಗೆ ನವ-ಉದಾರವಾದಿ ನೀತಿಗಳ ಹಾಗೂ ತೃತೀಯ ಜಗತ್ತಿನಲ್ಲಿ ನೆಹರೂ-ಶೈಲಿಯ "ಯೋಜನೆ"ಗಳ ಹಿಂದಿರುವ ಚಾಲಕ ಶಕ್ತಿಯಾಗಿದೆ.

ಹಣಕಾಸು ಬಂಡವಾಳ ಆಗ ಮತ್ತು ಈಗ

ಮೂರನೇ ಹಂತದಲ್ಲಿ ಪ್ರತಿಯೊಂದು ಬಂಡವಾಳಶಾಹಿ ದೇಶದೊಳಗೆ ಹಣಕಾಸು ವಲಯವು ಅಗಾಧ ಬೆಳವಣಿಗೆ ಹೊಂದಿದೆ. ಪ್ರಪಂಚದಾದ್ಯಂತ ಅಗಾಧ ಹಣಕಾಸು ಹರಿವು ಈ ಹಿಂದಿನ "ಕೈಗಾರಿಕೀಕರಣ"ಕ್ಕೆ ಪರ್ಯಾಯವೆಂಬಂತೆ ಈಗ ಬಂಡವಾಳಶಾಹಿಯ "ಹಣಕಾಸು ಕೇಂದ್ರೀಕರಣ" ನಡೆದಿದೆ.

ಮೊದಲಿಗೆ, ಲೆನಿನ್‌ರವರು ಹಣಕಾಸು ಮತ್ತು ಕೈಗಾರಿಕೆಗಳ "ಒಗ್ಗೂಡುವಿಕೆ" ಕುರಿತು ಹೇಳಿದ್ದರು ಮತ್ತು ಹಣಕಾಸು ಬಂಡವಾಳವನ್ನು "ಬ್ಯಾಂಕುಗಳು ನಿಯಂತ್ರಿಸುವ ಹಾಗೂ ಕೈಗಾರಿಕೆಗಳು ದುಡಿಸಿಕೊಂಡಿರುವ ಬಂಡವಾಳ" ಎಂದು ಉಲ್ಲೇಖಿಸಿದ್ದರು. ಅಂದಿನ ಹಣಕಾಸು ಬಂಡವಾಳವು ರಾಷ್ಟ್ರೀಯ ಕಾರ್ಯತಂತ್ರವೊಂದನ್ನು ಹೊಂದಿತ್ತು ಮತ್ತು "ಆರ್ಥಿಕ ಭೂಭಾಗ"ವನ್ನು ವಿಸ್ತರಿಸುವ ಹಾಗೂ ಅದರ ಕೈಗಾರಿಕಾ ಸಾಮ್ರಾಜ್ಯ ನಿರ್ಮಿಸುವ ಅವಶ್ಯಕತೆಗಳನ್ನು ಪೂರೈಸುವ ಧೋರಣೆ ಹೊಂದಿತ್ತು.

ಕಾರ್ಯಾಚರಣೆಗಳು ಆವೊಂದು ರಾಷ್ಟ್ರದ "ಆರ್ಥಿಕ ಭೂಭಾಗ"ದ ವಿಸ್ತರಣೆಯೊಂದಿಗೆ ಸಂಬಂಧ ಹೊಂದಿದ್ದವು. ಆದರೆ ಇಂದಿನ ಹಣಕಾಸು ಬಂಡವಾಳವು ತನ್ನ ಉಗಮ ಸ್ಥಾನಗಳನ್ನು ನಿರ್ದಿಷ್ಟ ರಾಷ್ಟ್ರಗಳಲ್ಲಿ ಹೊಂದಿದ್ದರೂ, ಯಾವುದೇ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಹಜವಾಗಿ ಅಂಟಿಕೊಂಡಿಲ್ಲ. ಅದು ವಿಶ್ವದಾದ್ಯಂತ ಚಲನೆಯಲ್ಲಿದ್ದು ಅದರ ಉದ್ದೇಶಗಳು ಮತ್ತೊಂದು ದೇಶದಲ್ಲಿ ಉಗಮವಾಗಿರುವ ಹಣಕಾಸು ಬಂಡವಾಳದ ಉದ್ದೇಶಗಳಿಗೆ ಭಿನ್ನವಾಗಿಲ್ಲ. ಈ ಅರ್ಥದಲ್ಲಿ ರಾಷ್ಟ್ರೀಯ ಹಣಕಾಸು ಬಂಡವಾಳಗಳ ನಡುವೆ ವ್ಯತ್ಯಾಸಗಳನ್ನು ಕಾಣುವುದು ದಾರಿ ತಪ್ಪಿಸುತ್ತದೆ. ಆದ್ದರಿಂದ ನಾವು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಕುರಿತು ಮಾತನಾಡಬೇಕು, ಅದರ ಹುಟ್ಟು ಅದೆಲ್ಲಿಯೇ ಹಾಗಿರಲಿ, ಅದು ಯಾವುದೇ ನಿರ್ದಿಷ್ಟ ರಾಷ್ಟ್ರೀಯ ಹಿತಾಸಕ್ತಿಗಳಿಂದ ತನ್ನನ್ನು ಬೇರ್ಪಡಿಸಿಕೊಂಡಿರುತ್ತದೆ, ವಿಶ್ವವನ್ನೇ ತನ್ನ ಕಾರ್ಯಾಚರಣೆಯ ರಂಗಭೂಮಿಯನ್ನಾಗಿಸಿಕೊಂಡಿರುತ್ತದೆ, ಮತ್ತು ಕೈಗಾರಿಕೆಯಂತಹ ಯಾವುದೇ ನಿರ್ದಿಷ್ಟ ಚಟುವಟಿಕೆಯ ವಲಯಕ್ಕೆ ಅಂಟಿಕೊಂಡಿರುವುದಿಲ್ಲ.

ಮೂರನೆಯದಾಗಿ, ಅಂತಹ ಅಡೆತಡೆಯಿಲ್ಲದ ವಿಶ್ವ ಕಾರ್ಯಾಚರಣೆಗೆ ಅವಶ್ಯವಿರುವುದೇನೆಂದರೆ ವಿಶ್ವವನ್ನು ಪ್ರತ್ಯೇಕ ಬ್ಲಾಕ್‌ಗಳಾಗಿ ಅಥವಾ ಆರ್ಥಿಕ ಭೂಭಾಗಗಳಾಗಿ ವಿಭಜಿಸಬಾರದು. ಏಕೆಂದರೆ ಅಂತಹ ಭೂಭಾಗಗಳು ನಿರ್ದಿಷ್ಟ ದೇಶಗಳ ಸ್ವತ್ತುಗಳಂತೆ ಇತರರಿಗೆ ದೊರಕದಂತಿರುತ್ತವೆ. ಆದ್ದರಿಂದ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳು ಬಯಸುವುದೇನೆಂದರೆ ಸಾಮ್ರಾಜ್ಯಶಾಹಿ ನಡುವಿನ ಕಡುವೈರತ್ವ ಇರಬಾರದು. ಬಂಡವಾಳಶಾಹಿ ಶಕ್ತಿಗಳ ನಡುವೆ ಅಮೇರಿಕಾದ ಅಗಾಧ ಆರ್ಥಿಕ ಶಕ್ತಿ ಮತ್ತು ರಣನೀತಿಯ ಫಲವಾಗಿ ಯುದ್ಧಾನಂತರ ಅವಧಿಯಲ್ಲಿ ಇಂತಹ ಸಾಮ್ರಾಜ್ಯಶಾಹಿ ನಡುವಿನ ಕಡುವೈರತ್ವದ ಶಮನ ಆರಂಭವಾಯಿತು. ಇದು ಪ್ರಸಕ್ತ ಹಂತದ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಸ್ವಭಾವದಿಂದಾಗಿಯೇ ಇನ್ನೂ ಮುಂದುವರೆದಿದೆ.

ಇಡೀ ಭೂಗೋಳವನ್ನು ತನ್ನ ಅನಿಯಂತ್ರಿತ ಕಾರ್ಯಾಚರಣೆಗಳ ಕ್ಷೇತ್ರವನ್ನಾಗಿಸಿಕೊಳ್ಳಬೇಕಾದ ಅವಶ್ಯಕತೆಯಿಂದಾಗಿ ತನ್ನೊಳಗಿರುವ ಅಂತಹ ಸಂಘರ್ಷಗಳನ್ನು ಜಾಗತಿಕ ಬಂಡವಾಳವು ಹದ್ದುಬಸ್ತಿನಲ್ಲಿಟ್ಟಿದೆ. ಈ ಆಂತರಿಕ ಸಂಘರ್ಷಗಳು ಮುಂದುವರೆದ ಬಂಡವಾಳಶಾಹಿ ದೇಶಗಳ ಅಥವಾ ಅವುಗಳ ಪರವಾಗಿ ಅವುಗಳ ನಡುವೆ ಬಹಿರಂಗ ಯುದ್ಧಗಳು ಸ್ಫೋಟಗೊಳ್ಳುವುದು ಸದ್ಯದ ಭವಿಷ್ಯತ್ತಿನಲ್ಲಿ ಕಾಣಬರುತ್ತಿಲ್ಲ.

ಡಾಲರ್ ಕರೆನ್ಸಿಯು "ಚಿನ್ನದಷ್ಟೆ ಸಮ" ಎನ್ನುವ ಒಂದು ಹೊಸ ಅಂತರಾಷ್ಟ್ರೀಯ ಹಣಕಾಸು ವ್ಯವಸ್ಥೆ ಮತ್ತು ಅದರಿಂದ ಬಂಡವಾಳದ ಹರಿವು ಮತ್ತು ವ್ಯಾಪಾರ ಹರಿವಿನ ಮೇಲೆ ನಿಯಂತ್ರಣ ಹೇರುವ ನೀತಿ ಜಾರಿಗೆ ಬಂದಿತು. ಇದು ಅಮೇರಿಕಾ ಸಾಮ್ರಾಜ್ಯಶಾಹಿಯ ಪ್ರಾಬಲ್ಯದ ಹೊಸ ವಾಸ್ತವತೆಯನ್ನು ಮತ್ತು ಸಾಮ್ರಾಜ್ಯಶಾಹಿಗಳ ನಡುವಿನ ಕಡುವೈರತ್ವ ಶಮನವನ್ನು ನಮಗೆ ತೋರಿಸಿಕೊಡುತ್ತದೆ.

ಆದರೆ ಇಂದಿನ ಹಣಕಾಸು ಬಂಡವಾಳವು ಯಾವುದೇ ವಿಶೇಷಾರ್ಥದಲ್ಲೂ ಕೇವಲ ಕೈಗಾರಿಕೆಗೆ ಮಾತ್ರವೇ ಗಂಟು ಹಾಕಿಕೊಂಡು ಉಳಿದಿಲ್ಲ. ಅದು ಕ್ಷಿಪ್ರ, ಜೂಜುಕೋರ, ಲಾಭಕ್ಕಾಗಿ ವಿಶ್ವದೆಲ್ಲೆಡೆ ಚಲನೆಯಲ್ಲಿದೆ, ಅಂತಹ ಲಾಭ ಗಳಿಕೆ ಯಾವ ವಲಯದಲ್ಲಿ ಸಿಕ್ಕರೂ ಚಿಂತೆಯಿಲ್ಲ. ಹಣಕಾಸು ಬಂಡವಾಳವು ಇಂದು ಕೈಗಾರಿಕಾ ಬಂಡವಾಳಕ್ಕಿಂತ ಬಲಾಢ್ಯವಾಗಿದೆ. ಹಣಕಾಸು ಬಂಡವಾಳವು ಕೈಗಾರಿಕೆಗಳಲ್ಲಿ ಹೂಡಲ್ಪಟ್ಟು ಉದ್ಯೋಗವಕಾಶ ಹೆಚ್ಚಿಸುವ ಗುರಿಗಿಂತ ಲಾಭವೇ ಪ್ರಧಾನವೆನಿಸಿ ಬೇರೆ ಸಟ್ಟಾ ವ್ಯವಹಾರಗಳಲ್ಲಿ ತೊಡಗಿಸಲ್ಪಡುತ್ತಿದೆ. ಹಣಕಾಸು ರೂಪದ ಬಂಡವಾಳಕ್ಕೆ ಉತ್ಪಾದನೆಯಲ್ಲಿ ಯಾವುದೇ ವಿಶೇಷ ಆಸಕ್ತಿಯಿಲ್ಲ. ಇದನ್ನು "ಹಣಕಾಸು ಕೇಂದ್ರೀಕರಣ" ಪ್ರಕ್ರಿಯೆ ಎನ್ನಲಾಗುತ್ತದೆ. ಇದು ಬಂಡವಾಳವು ಹಣಕಾಸು ರೂಪದಲ್ಲಿ ಅಗಾಧ ಬೆಳವಣಿಗೆ ಹೊಂದಿ ಕ್ಷಿಪ್ರ ಜೂಜುಕೋರ ಲಾಭಕ್ಕಾಗಿ ತಹತಹಿಸುತ್ತದೆ. ಉದಾಹರಣೆಗೆ, ಸ್ವಿಟ್ಜರ್ಲೆಂಡಿನ ಅಂತರಾಷ್ಟ್ರೀಯ ಇತ್ಯರ್ಥಗಳ ಬ್ಯಾಂಕ್‌ನ ಪ್ರಕಾರ 2008ರ ವೇಳೆಗೆ, ವಿಶ್ವಾದ್ಯಂತ ಎಲ್ಲ ಸಟ್ಟಾ ವ್ಯವಹಾರಗಳ ಮುಖಬೆಲೆ 680 ಟ್ರಿಲಿಯನ್(ಲಕ್ಷ ಕೋಟಿ) ಡಾಲರುಗಳು ಇತ್ತು. 2002ರಲ್ಲಿ ಇದು 106 ಟ್ರಿಲಿಯನ್ ಇತ್ತು ಮತ್ತು ಕೇವಲ ಎರಡು ದಶಕಗಳ ಹಿಂದೆ ಇದ್ದದ್ದು ಅತ್ಯಲ್ಪ. ಆದರೆ ವಿಶ್ವದ ವಾಸ್ತವ ಆರ್ಥಿಕವು 65 ಟ್ರಿಲಿಯನ್ ಡಾಲರ್‌ಗಳು (1 ಟ್ರಿಲಿಯನ್ ಡಾಲರ್ ಎಂದರೆ ರೂ. 55 ಲಕ್ಷ ಕೋಟಿ). ಮತ್ತು ವಿಶ್ವದ ಶೇರು ಮಾರುಕಟ್ಟೆಗಳಲ್ಲಿ ನಡೆಯುವ ವಾಸ್ತವಿಕ ಶೇರು ವ್ಯಾಪಾರದ ಮೊತ್ತ (100 ಟ್ರಿಲಿಯನ್ ಡಾಲರುಗಳು) ವಾಸ್ತವಿಕ ಆರ್ಥಿಕತೆಗಿಂತ ಆರು ಪಟ್ಟು ದೊಡ್ಡದು.

ಎರಡನೆಯದಾಗಿ, ಲೆನಿನ್‌ರವರ ಕಾಲದಲ್ಲಿ ಹಣಕಾಸು ಬಂಡವಾಳವು ತನ್ನ ನೆಲೆಯನ್ನು ಒಂದು ನಿರ್ದಿಷ್ಟ ದೇಶದೊಳಗೆ ಹೊಂದಿದ್ದು, ಅದರ ಅಂತರಾಷ್ಟ್ರೀಯ

ಇಂದಿನ ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ರಾಷ್ಟ್ರೀಯ ಹಣಕಾಸು ಬಂಡವಾಳಗಳ ವ್ಯಾಪ್ತಿಗೂ ಆಚೆಗೆ ವಿಸ್ತರಿಸಿದ್ದು, ಬೆರಳೆಣಿಕೆಯಷ್ಟು ಶಕ್ತಿಯುತ ದೇಶಗಳಿಗೆ ಮಾತ್ರವೇ ಸೀಮಿತವಾಗಿ ಉಳಿದಿಲ್ಲ. ಇದು ತೃತೀಯ ಜಗತ್ತಿನ ದೇಶಗಳನ್ನು ಒಳಗೊಂಡಂತೆ ವಿವಿಧ ರಾಷ್ಟ್ರೀಯ ಉಗಮದ ಹಣಕಾಸು ಬಂಡವಾಳಗಳನ್ನು ಹೊಂದಿದ್ದು, ತನ್ನ ಸ್ವಂತ ಹಿತಾಸಕ್ತಿಗಾಗಿ ಇಡೀ ಭೂಗೋಳದೆಲ್ಲೆಡೆ ಚಲಿಸುತ್ತಿದ್ದು, ಯಾವೊಂದು ನಿರ್ದಿಷ್ಟ ರಾಷ್ಟ್ರೀಯ ಬಂಡವಾಳಶಾಹಿ ಹಿತಾಸಕ್ತಿಯನ್ನು ಹೊಂದಿಲ್ಲ. ಉದಾಹರಣೆಗೆ, ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನಾದ್ಯಂತ ಲಾಭ ಅರಸುತ್ತಿರುವಂತೆಯೇ ನಮ್ಮ ದೇಶದ ಅಂಬಾನಿ ಮತ್ತು ಟಾಟಾ ಕಂಪನಿಗಳು ಕೂಡ ಅವುಗಳೊಂದಿಗೆ ಒಡಗೂಡಿ ಹೊರ ದೇಶಗಳಲ್ಲಿ ಲಾಭ ಅರಸುತ್ತಿವೆ.

ಎರಡನೆಯದಾಗಿ, ಸಾಮ್ರಾಜ್ಯಶಾಹಿಯ ಒಡನಾಡಿಯಾಗಿ ಯುದ್ಧಗಳು ಇರುತ್ತವೆನ್ನುವ ಲೆನಿನ್ನರ ಮಾತುಗಳು ಅವರ ಕಾಲದಂತೆ ಇಂದಿಗೂ ಕೂಡ ಅನ್ವಯಿಸುತ್ತವೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಡುವೆ ವಿಶ್ವ ಮಹಾಯುದ್ಧಗಳು ಸದ್ಯಕ್ಕೆ ಸಂಭವಿಸದೇ ಇರಬಹುದು; ಆದರೆ ಸಾಮ್ರಾಜ್ಯಶಾಹಿ ಪ್ರಕ್ರಿಯೆಯಿಂದ ಉಂಟಾಗುವ ವಿವಿಧ ರೀತಿಯ ಯುದ್ಧಗಳು ಇರಾಕ್ ಯುದ್ಧ, ಆಫ್ಘಾನಿಸ್ತಾನದಲ್ಲಿ ಯುದ್ಧ ಮತ್ತು ಈ ಮುಂಚಿನ ಬಾಲ್ಕನ್‌ನಲ್ಲಿಯ ಯುದ್ಧದ ಉದಾಹರಣೆಗಳು ಮುಂದುವರೆದಿವೆ.

ಆಕರಗಳು:

1. ನೋಟ್ಸ್ ಆನ್ ಕಂಟೆಂಪೋರರಿ ಇಂಪೀರಿಯಲಿಸಂ, ಪ್ರೊ. ಪ್ರಭಾತ್ ಪಟ್ನಾಯಕ್, ಮಾರ್ಕ್ಸಿಸಂ.
2. ಇಂಪೀರಿಯಲಿಸಂ-ದ ಹೈಯೆಸ್ಟ್ ಸ್ಟೇಜ್ ಆಫ್ ಕ್ಯಾಪಿಟಲಿಸಂ, ಲೆನಿನ್
3. ಸ್ವಿಟ್ಜರ್ಲೆಂಡಿನ ಅಂತರಾಷ್ಟ್ರೀಯ ಇತ್ಯರ್ಥಗಳ ಬ್ಯಾಂಕ್ ವೆಬ್‌ಸೈಟ್.

■

ಅಂಬೇಡ್ಕರರನ್ನು ಹೇಗೆ ಓದಬೇಕು?

ಓದುವುದೆಂದರೆ

ರೀಡಿಂಗ್ ಎಂಬುದರ ಸ್ವರೂಪ, ಕಾರ್ಯವಿಧಾನ ಹಾಗೂ ಅದರ ಪರಿಣಾಮಗಳನ್ನು ಕುರಿತು ಸ್ವತಂತ್ರವಾದ ಜ್ಞಾನಶಿಸ್ತು ಬೆಳೆದಿದೆ; ಬೆಳೆಯುತ್ತಿದೆ. ಮುಖ್ಯವಾಗಿ ಗತಿತಾರ್ಕಿಕ ತತ್ವಶಾಸ್ತ್ರ, ಸಮಾಜವಾದಿ ರಾಜಕೀಯಶಾಸ್ತ್ರ ಈ ಜ್ಞಾನಶಿಸ್ತುಗಳ ನೆರವು ಪಡೆದ ಆಧುನಿಕ ಭಾಷಾವಿಜ್ಞಾನದ ತಿಳುವಳಿಕೆಗಳು ಇದಕ್ಕೆ ಮುಖ್ಯ ಬುನಾದಿಯಾಗಿವೆ. ಎರಡನೇ ಸಾಮ್ರಾಜ್ಯಶಾಹಿ ಯುದ್ಧದ ನಂತರ ಈ ಜ್ಞಾನಶಿಸ್ತು ಹಲವು ಕವಲುಗಳಾಗಿ ಬೆಳೆದಿದ್ದು, ಅತ್ಯಂತ ಸೂಕ್ಷ್ಮವೂ ಮತ್ತು ಆಳವೂ ಆದ ನೆಲೆಯನ್ನು ಪಡೆದುಕೊಂಡಿದೆ. ಈ ದೃಷ್ಟಿಯಿಂದ ರೀಡಿಂಗ್ ಅಥವಾ ಓದುವುದು ಎಂಬುದು ತನ್ನ ಸಾಂಪ್ರದಾಯಿಕವಾದ ಹಳೆಯ ತಾತ್ವಿಕತೆಯನ್ನು ಕಳೆದುಕೊಂಡಿದೆ. ಇದಕ್ಕೆ ಆ ಮೂರೂ ಶಾಸ್ತ್ರಗಳಲ್ಲಿ ನಡೆದಿರುವ ಅಪಾರ ಪರಿಶ್ರಮವು ಬುನಾದಿಯಾಗಿದೆ. ಫ್ರೆಡರಿಕ್ ಎಂಗೆಲ್ಸ್ ಅವರ 'ಡೈಯಲೆಕ್ಟಿಕ್ ಇನ್ ನೇಚರ್', ಮಾವೋ ಅವರ ಕಾಂಟ್ರಡಿಕ್ಷನ್, ಇ.ಎಚ್. ಕಾರ್ ಅವರ ವಾಟ್ ಈಸ್ ಹಿಸ್ಟರಿ, ಸೂಸನ್ ಸೊಟಾಂಗ್ ಅವರ ಎಗೆನ್ಸ್ಟ್ ರೀಡಿಂಗ್ ಮುಂತಾದುವು ಇದನ್ನು ಶಕ್ತಿಶಾಲಿಯಾಗಿ ಬೆಳೆಸಿವೆ; ಬೆಳೆಸುತ್ತಿವೆ.

ಓದು ಎಂಬುದು ಒಂದು ಕೆಲಸ. ಇದು ಮಾನಸಿಕವಾದ, ಬೌದ್ಧಿಕವಾದ, ಭಾವನಾತ್ಮಕವಾದ ಹಾಗೂ ಭೌತಿಕವಾದ ಕೆಲಸ. ಈ ಕೆಲಸಕ್ಕೆ ಇನ್ನೂ ಹಲವು ಮುಖಗಳು, ಸಂಕೀರ್ಣ ಮುಖಗಳಿರಲು ಸಾಧ್ಯ. ಓದುವುದನ್ನು ಕೇವಲ ಅಕ್ಷರ ಬರವಣಿಗೆಗೆ ಸೀಮಿತ ಮಾಡಬೇಕಿಲ್ಲ. ಒಂದು ಸನ್ನಿವೇಶ, ಒಂದು ಘಟನೆ ಅಥವಾ ಇವುಗಳ ಸರಣಿಗೆ ಬರುವಂತಹ ಸಂಕೀರ್ಣ ರೂಪದ ಪ್ರತಿಕ್ರಿಯೆಯ ಒಟ್ಟಾರೆ ಗುಚ್ಛವನ್ನು ಓದು ಎಂದು ಕರೆಯಬಹುದು. ಇದು ಭಾಷಿಕವಾಗಿ ಅಭಿವ್ಯಕ್ತಿ ಪಡೆಯಬಹುದು; ಅಥವಾ ಪಡೆಯದೆಯೂ ಇರಬಹುದು. ಪ್ರತಿಕ್ರಿಯೆ ಮಾತ್ರ ಪ್ರಾಥಮಿಕವಾದುದು. ಓದುವುದನ್ನು ಅಕ್ಷರ ಬರವಣಿಗೆಗೆ ಮಾತ್ರ ಸೀಮಿತ ಮಾಡಲು ಬರುವುದಿಲ್ಲ. ಅಕ್ಷರ ಓದಲು ಬಾರದವರೂ ಕೂಡ ಸಾಮಾಜಿಕ ಚಟುವಟಿಕೆಗಳಿಗೆ ಪ್ರತಿಕ್ರಿಯಿಸುತ್ತಾರೆ; ಬೆಲೆ ಕಟ್ಟುತ್ತಾರೆ. ಇದೆಲ್ಲವೂ ಒಟ್ಟಾಗಿ ಓದು ಎಂಬ ಕೆಲಸದ ವ್ಯಾಪ್ತಿಯಲ್ಲಿ ಬರುತ್ತದೆ.

ಓದು ಎಂಬುದು ಭೌತಿಕ ಕೆಲಸವೂ ಹೌದು. ಭೌತಿಕ ಕೆಲಸದ ಸಾಮಾನ್ಯ ಸ್ವರೂಪ ಏನೆಂದರೆ, ಮಾಡುವ ಕೆಲಸದಿಂದ ವಸ್ತುಗಳ ರೂಪ ಮತ್ತು ಸ್ವರೂಪಗಳನ್ನು ಬದಲಾಯಿಸುವುದು. ವಸ್ತುಗಳ ರೂಪ ಮತ್ತು ಸ್ವರೂಪಗಳನ್ನು ಬದಲಾಯಸದೆ ಇದ್ದರೆ ಕೆಲಸವನ್ನು ಮಾಡಿಲ್ಲ ಎಂದೇ ಅರ್ಥ. ಕೆಲಸವನ್ನು ಮಾಡಿದೆ ಎಂದರೆ ವಸ್ತುಗಳ ರೂಪ ಮತ್ತು ಸ್ವರೂಪಗಳನ್ನು ಬದಲಾಯಿಸಿದೆ ಎಂದೆ ಅರ್ಥ. ವಸ್ತುಗಳ ಮೂಲ ರೂಪವನ್ನು ತಮ್ಮ ಹಿತಾಸಕ್ತಿ ಹಾಗೂ ಉದ್ದೇಶಗಳಿಗೆ ಅನುಗುಣವಾಗಿ ಬದಲಾಯಿಸಲಾಗುತ್ತದೆ. ಹೀಗೆ ಬದಲಾಯಿಸುವ ಪ್ರಕ್ರಿಯೆಯನ್ನೆ ಕೆಲಸ ಎಂದು ಕರೆಯಲಾಗುತ್ತದೆ. ಈ ಮಾತನ್ನು ಓದು ಎಂಬ ಕೆಲಸಕ್ಕೂ ಅನ್ವಯಿಸಿ ನೋಡಬಹುದು. ಬರವಣಿಗೆ ಎಂಬುದು ತನ್ನ ಪಾಡಿಗೆ ತಾನಿರುತ್ತದೆ. ಅದನ್ನು ಓದುವ ಮೂಲಕ ಅದು ಬದಲಾಗುತ್ತದೆ. ಹೊಸದಾಗಿ ಅದು ರೂಪು ಪಡೆಯುತ್ತದೆ. ಬರವಣಿಗೆಯು ಓದಿನ ಮೂಲಕ ಬದಲಾಗದಿದ್ದರೆ ಅಲ್ಲಿ ಓದು ನಡೆದಿಲ್ಲವೆಂದೇ ಹೇಳಬೇಕು. ಬರವಣಿಗೆಯೊಂದು ಹೊಸರೂಪ ಪಡೆದಿದ್ದರೆ ಅಲ್ಲಿ ಅದನ್ನು ಓದಲಾಗಿದೆ ಎಂದು ಹೇಳಬೇಕು. ಇದು ಎಲ್ಲಾ ಬರವಣಿಗೆಗೂ ಅನ್ವಯಿಸುತ್ತದೆ. ಈ ದೃಷ್ಟಿಯಿಂದ ಬರವಣಿಗೆಯಲ್ಲಿ ಎಲ್ಲರಿಗೂ ಅನ್ವಯವಾಗುವ, ಎಲ್ಲರಿಗೂ ಒಂದೇ ರೀತಿಯಲ್ಲಿ ಒಪ್ಪಿಗೆಯಾಗುವ ಸಿದ್ಧಮಾದರಿಯ ಅರ್ಥವಿವರಣೆಗಳು ಇರುವುದಿಲ್ಲ. ಪ್ರತಿಯೊಂದು ಓದಿನಲ್ಲೂ, ಓದುಗರ ಹಿತಾಸಕ್ತಿ, ಉದ್ದೇಶ ಹಾಗೂ ಧೋರಣೆಗೆ ಅನುಗುಣವಾಗಿ ಇದು ಬದಲಾಗುತ್ತಾ ಹೋಗುತ್ತದೆ. ಓದು ಎಂಬುದು ಒಂದು ಬಗೆಯಲ್ಲಿ ಹೊಸ ಬಗೆಯ ನಿರ್ಮಾಣ; ಸೃಷ್ಟಿಕಾರ್ಯ. ಓದಿನ ಹಿತಾಸಕ್ತಿ, ಉದ್ದೇಶ ಹಾಗೂ ಧೋರಣೆಗಳು ಓದುಗರ ರಾಜಕೀಯ ಹಿತಾಸಕ್ತಿಯನ್ನು ಅವಲಂಬಿಸಿರುತ್ತವೆ. ಕೆಲವೊಮ್ಮೆ ಓದುಗರ ಪ್ರಜ್ಞೆಯಲ್ಲಿ ಯಾವ ಹಿತಾಸಕ್ತಿಯನ್ನು ಹೊರಗಿನಿಂದ ಹೇರಲಾಗಿರುತ್ತದೊ ಅದನ್ನು ಅವಲಂಬಿಸಿರುತ್ತದೆ. ಒಂದು ಬರವಣಿಗೆಯು ಓದಿನ ಮೂಲಕ ಯಾವ ರೂಪ ತಾಳಿದೆ ಎಂಬುದನ್ನು ಪರೀಕ್ಷಿಸುವ ಮೂಲಕ, ಆ ಬರವಣಿಗೆಯನ್ನು ಯಾವ ಉದ್ದೇಶಕ್ಕೆ ಮತ್ತು ಯಾರ ಉದ್ದೇಶಕ್ಕೆ ಓದಲಾಗಿದೆ ಎಂಬುದನ್ನು ಅರಿಯಬಹುದು.

ಒಂದು ಪ್ರಶ್ನೆಯ ಒಂದು ಮುಖ ಮತ್ತು ಒಂದು ಪ್ರಶ್ನೆಯ ಹಲವು ಮುಖಗಳು ಹಾಗೂ ಹಲವು ಮುಖಗಳ ಒಂದು ಪ್ರಶ್ನೆ

ಅಂಬೇಡ್ಕರರನ್ನು ಹೇಗೆ ಓದಬೇಕು ಎಂಬುದು ಒಂದು ಮುಖ್ಯ ಪ್ರಶ್ನೆ. ಆದರೆ ಈ ಪ್ರಶ್ನೆ ತನ್ನಷ್ಟಕ್ಕೆ ತಾನು ಸ್ವತಂತ್ರ ಪ್ರಶ್ನೆಯಲ್ಲ. ಈ ಪ್ರಶ್ನೆ ತನ್ನೊಳಗೆ ಹಲವು ಮುಖಗಳ ಪ್ರಶ್ನೆಗಳನ್ನು ಒಳಗೊಂಡಿದೆ. ಅಂಬೇಡ್ಕರರನ್ನು ಯಾಕೆ ಓದಬೇಕು, ಯಾವ ಉದ್ದೇಶಕ್ಕೆ, ಯಾವ ಕಾರಣಕ್ಕೆ, ಯಾವ ಪರಿಣಾಮಕ್ಕೆ, ಯಾವ ಹಿತಾಸಕ್ತಿಗೆ ಓದಬೇಕು ಎಂಬ ಕೆಲವು ಪ್ರಶ್ನೆಗಳನ್ನು ಇದು ಒಳಗೊಂಡಿದೆ. ಅದರ ಜೊತೆಗೆ ಅಂಬೇಡ್ಕರರನ್ನು ಯಾರು ಓದಬೇಕು ಎಂಬ ಮತ್ತೊಂದು ಪ್ರಶ್ನೆಯನ್ನೂ ಇದು ಒಳಗೊಂಡಿದೆ. ಇಲ್ಲಿ ಯಾರು ಎಂಬುದು ವರ್ಗ, ಜಾತಿ, ಲಿಂಗ ಮುಂತಾದ ಅಸಮಾನತೆಗಳನ್ನು ಒಳಗೊಂಡಿರಬಹುದು. ಅಥವಾ ಈ ವರ್ಗ ಸಮೂಹಗಳ ಸಂಕೀರ್ಣ ಹಿತಾಸಕ್ತಿಗಳನ್ನೂ ಒಳಗೊಂಡಿರಬಹುದು.

ಅಂಬೇಡ್ಕರರನ್ನು ಹೇಗೆ ಓದಬೇಕು ಎಂಬುದನ್ನು ಕೇವಲ ಒಂಟಿ ಪ್ರಶ್ನೆಯಾಗಿ ನಿರೂಪಿಸಿ ಚರ್ಚಿಸುವುದು ಒಂದು ವಿಧಾನ. ಆದರೆ ಅಂಬೇಡ್ಕರರನ್ನು ಯಾವ ಉದ್ದೇಶಕ್ಕೆ, ಯಾರ ಹಿತಾಸಕ್ತಿಗೆ ಓದಬೇಕು ಎಂಬುದನ್ನು ಒಳಗೊಂಡಂತೆ ಚರ್ಚಿಸುವುದು ಮತ್ತೊಂದು ವಿಧಾನ. ಇದರಲ್ಲಿ ಮೊದಲನೇ ವಿಧಾನವನ್ನು ಯಾಂತ್ರಿಕ ಗ್ರಹಿಕೆ ಎಂದು ಕರೆಯಬಹುದು. ಎರಡನೆಯದನ್ನು ಸಮಗ್ರ ಗ್ರಹಿಕೆ ಎಂದು ಕರೆಯಬಹುದು. ಸಮಗ್ರ ಗ್ರಹಿಕೆಗೆ ಹಲವು ದಾರಿಗಳಿವೆ; ಹಲವು ಸಾಧ್ಯತೆಗಳಿವೆ. ಆದರೆ ಯಾಂತ್ರಿಕ ಗ್ರಹಿಕೆಗೆ ಈ ಸಾಧ್ಯತೆಗಳಿಲ್ಲ.

ಈ ದೃಷ್ಟಿಯಲ್ಲಿ ಒಂದು ಪ್ರಶ್ನೆಯ ಚರ್ಚೆಗೆ ಕೇವಲ ಒಂದೇ ಮುಖವಿರುತ್ತದೆ ಎಂದು ಸರಳೀಕರಿಸಬಾರದು. ಬದಲಾಗಿ ಒಂದು ಪ್ರಶ್ನೆಯ ಚರ್ಚೆಗೆ ಹಲವು ಮುಖಗಳಿರುತ್ತವೆ ಹಾಗೂ ಒಂದು ಪ್ರಶ್ನೆಯನ್ನು ಹಲವು ಮುಖಗಳ ಮೂಲಕ ಚರ್ಚಿಸಬಹುದು; ಚರ್ಚಿಸಬೇಕು. ಹಾಗಾಗಿ ಅಂಬೇಡ್ಕರರನ್ನು ಹೇಗೆ ಓದಬೇಕು ಎಂಬುದನ್ನು ಅಂಬೇಡ್ಕರರನ್ನು ಯಾರು ಓದಬೇಕು

ಮತ್ತು ಯಾಕೆ ಓದಬೇಕು ಎಂಬ ಪ್ರಶ್ನೆಗಳೆ ನಿರ್ಧರಿಸುತ್ತವೆ. ಅಥವಾ ಅಂಬೇಡ್ಕರರನ್ನು ಹೇಗೆ ಓದಬೇಕು ಎಂಬುದು, ಯಾರು ಹಾಗೂ ಯಾಕೆ ಓದಬೇಕು ಎಂಬುದನ್ನು ಒಳಗೊಂಡಿರುತ್ತದೆ.



■ **ಅಂಬೇಡ್ಕರರನ್ನು ರೂಪಿಸಿದ ಚರಿತ್ರೆ**

ಅಂಬೇಡ್ಕರರನ್ನು ಕೇವಲ ಭಾರತದ ಚೌಕಟ್ಟಿನಲ್ಲಿ ಗ್ರಹಿಸುವುದು ಒಂದು ಸೀಮಿತ ಕ್ರಮ. ಆದರೆ ಅಂಬೇಡ್ಕರರನ್ನು ಕೇವಲ ಇಂಡಿಯಾಕ್ಕೆ ಸೀಮಿತ ಮಾಡದೆ, ಜಾಗತಿಕ ಚರಿತ್ರೆಯ ಸಾಮಾನ್ಯ ನಡಿಗೆಯಲ್ಲಿ ಗ್ರಹಿಸಬೇಕು. ಮುಖ್ಯವಾಗಿ ಮೊದಲನೇ ಸಾಮ್ರಾಜ್ಯಶಾಹಿ ಯುದ್ಧ ಹಾಗೂ ಎರಡನೇ ಸಾಮ್ರಾಜ್ಯಶಾಹಿ ಯುದ್ಧಗಳ ನಡುವಿನ ಕಾಲಾವಧಿಯಲ್ಲಿ ಅಂಬೇಡ್ಕರರು ರೂಪುಗೊಂಡರು. ಈ ಎರಡು ಯುದ್ಧಗಳ ನಡುವಿನ ಕಾಲಾವಧಿಯು ಜಾಗತಿಕ ಚರಿತ್ರೆಯಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದಿ ಶಕ್ತಿಗಳ ಮಹಾನ್ ಸಂಘರ್ಷದ ಕಾಲ. ಜಾಗತಿಕ ಮಟ್ಟದ ರಾಜಕೀಯ ಆರ್ಥಿಕ ಬೆಳವಣಿಗೆಯ ಬಿಸಿ ಇಂಡಿಯಾಕ್ಕೂ ತಾಗಿತ್ತು. ಆಗ ಇಂಡಿಯಾದಲ್ಲಿ ವಸಾಹತು ವಿರೋಧಿ ಹಲವು ಹೋರಾಟಗಳು ಸಾಗಿದ್ದವು. ಬಂಡವಾಳಶಾಹಿ, ಭೂಮಾಲಿಕ ವರ್ಗಹಿತಾಸಕ್ತಿಯ ಹೋರಾಟ ಮುಂಚೂಣಿಯಲ್ಲಿತ್ತು. ಅದೇ ಕಾಲಕ್ಕೆ ಆದಿವಾಸಿ ಅಲೆಮಾರಿಗಳು, ಕಾರ್ಮಿಕರು ಈ ಹಿತಾಸಕ್ತಿಗಳ ವಿರುದ್ಧ ಹೋರಾಟ ಮಾಡುತ್ತಿದ್ದರು. ಈ ಸಂಘರ್ಷಗಳ ಲಾಭ ಪಡೆದು ಸನಾತನವಾದಿ ಹಿತಾಸಕ್ತಿಯ ಆಲೋಚನೆಗಳನ್ನು ರೂಪಿಸುವ ಕೆಲಸವೂ ನಡೆಯುತ್ತಿತ್ತು. ರಷ್ಯಾ, ಚೈನಾ ಮುಂತಾದ ದೇಶಗಳಲ್ಲಿ ಸಮಾಜವಾದಿ ಶಕ್ತಿಗಳು ಸಮಾಜವನ್ನು ಸಮಗ್ರವಾಗಿ ಬದಲಾಯಿಸುವ ಕ್ರಾಂತಿಕಾರಿ ಚಳುವಳಿಗಳನ್ನು ನಡೆಸುತ್ತಿದ್ದವು. ಅದೇ ಕಾಲಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಸುಲಿಗೆಯ ವಿಧಾನವನ್ನು ಬದಲಾಯಿಸಿಕೊಳ್ಳಲು ಬಂಡವಾಳಶಾಹಿ ಸಂಸದೀಯ ವ್ಯವಸ್ಥೆಯನ್ನು ಜಾರಿಗೊಳಿಸುವ ಕೆಲಸದಲ್ಲಿ ತೊಡಗಿದ್ದವು.

ಅಖಿಲ ಭಾರತೀಯ ಮಟ್ಟದ ಲಿಖಿತ ಬರವಣಿಗೆಗಳು ಸಾಮಾಜಿಕ ಅಸಮಾನತೆ ಮತ್ತು ಅಪಮಾನಗಳನ್ನು ಹುಟ್ಟುಹಾಕುವುದರ ಜೊತೆಗೆ ಅವನ್ನು ನಿರಂತರವಾಗಿ ಕಾಯ್ದುಕೊಂಡು ಬರುತ್ತಿವೆ ಎಂದು ಅಂಬೇಡ್ಕರ್ ಭಾವಿಸಿದರು. ಅದಕ್ಕಾಗಿ ಅವನ್ನು ಆಳವಾಗಿ ಅಧ್ಯಯನ ಮಾಡಿದರು. ಅವುಗಳನ್ನು ಕಟುವಾಗಿ ವಿಮರ್ಶಿಸಿದರು. ಊಳಿಗಮಾನ್ಯಶಾಹಿಯ ಸಾಮಾಜಿಕ ಸಂಬಂಧಗಳ ವಿರುದ್ಧ ಹಲವು ಹೋರಾಟಗಳನ್ನು ನಡೆಸಿದರು. ಊಳಿಗಮಾನ್ಯಶಾಹಿಯ ಬರ್ಬರ ದಮನಕ್ಕೆ ಒಳಗಾಗಿರುವ ಅಸ್ಪೃಶ್ಯರು ಅದರಿಂದ ಬಿಡುಗಡೆಯಾಗಬೇಕಾದರೆ, ಅವರಿಗೆ ಬಂಡವಾಳಶಾಹಿ ಅನಿವಾರ್ಯವೆಂದು ಬಗೆದರು. ಹಳ್ಳಿಗಳು ಅಪಮಾನ ಮತ್ತು ಅಸ್ಪೃಶ್ಯತೆಯ ಕೂಪಗಳು. ಅದಕ್ಕಾಗಿ ದಲಿತರು ಹಳ್ಳಿಗಳನ್ನು ತೊರೆಯಬೇಕೆಂದು ಅವರು ಆಲೋಚಿಸಿದರು.

ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್, ಅದು ಜಾರಿಗೆ ಬಂದ ಮೇಲೆ ಇದರ ಮೂಲಕ ಅಪಮಾನ ಮತ್ತು ಅಸಮಾನತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲವೆಂದರು. ದೇಶದ ಇಡೀ ಸಂಪತ್ತು ರಾಷ್ಟ್ರೀಕರಣವಾಗಬೇಕು ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವ ವಿಫಲವಾದರೆ ಕಮ್ಯೂನಿಸಂನ ಯಾವುದೇ ರೂಪ ಅಗತ್ಯವೆಂದು ಅವರು ಪ್ರತಿಪಾದಿಸಿದರು. ಕಮ್ಯೂನಿಸಂನ ವಿರೋಧಿಯಂತೆ ಕಾಣುವ ಅಂಬೇಡ್ಕರ್ ಮಾರ್ಕ್ಸ್‌ವಾದವನ್ನು ಅತ್ಯಂತ ಆಳವಾಗಿ ಹಾಗೂ ಅಷ್ಟೇ ಖಚಿತವಾಗಿ ಅಧ್ಯಯನ ಮಾಡಿದ್ದರು. ಸೈದ್ಧಾಂತಿಕವಾಗಿ ಅವರು ಇದರ ವಿರೋಧಿಯಾಗಿರಲಿಲ್ಲ. ಅವರ ಬಹುತೇಕ ಬರವಣಿಗೆಗಳ ಹಿಂದಿನ ಗ್ರಹಿಕೆಯ ಸ್ವರೂಪ ಮತ್ತು ವಿಷಯ ಮಂಡನೆಯ ವಿಧಾನ ಇದನ್ನು ಎತ್ತಿತೋರಿಸುತ್ತದೆ.

ಅಂಬೇಡ್ಕರರು ರೂಪಿಸಿದ ಚರಿತ್ರೆಯನ್ನು ಮುಖ್ಯವಾದ ಮೂರು ಅಂಶಗಳ ಮೂಲಕ ಗುರುತಿಸಬಹುದು. 1. ಅಧ್ಯಯನಗಳ ಮೂಲಕ, 2. ಸಂಘಟನೆ ಹಾಗೂ ಹೋರಾಟಗಳ ಮೂಲಕ, 3. ಸಂಸದೀಯ ಮಾರ್ಗದ ಮೂಲಕ. ಅಂಬೇಡ್ಕರರ ಇಡೀ ಅಧ್ಯಯನಗಳು ಒಂದು ಕಡೆ ವಸ್ತುಸ್ಥಿತಿಗೆ ಕಾರಣಗಳನ್ನು ಹುಡುಕಲು ಪ್ರಯತ್ನಿಸಿವೆ. ಆ ಕಾರಣಗಳನ್ನು ಹುಡುಕುತ್ತಾ ಅವರು ಸಮಸ್ಯೆಯ ಚಲನಶೀಲ ಸ್ವರೂಪವನ್ನು ಗ್ರಹಿಸಿದ್ದಾರೆ. ಎಂ.ಕೆ. ಗಾಂಧಿ ಅವರಿಗೆ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅಷ್ಟೊಂದು ಗಂಭೀರ ಸಮಸ್ಯೆಗಳು ಕಾಣಲಿಲ್ಲ. ಅವರು ಬ್ರಿಟಿಶ್ ವಸಾಹತುಶಾಹಿಯಲ್ಲಿ ಮಾತ್ರವೇ ಭಾರತದ ಸಮಸ್ಯೆಯನ್ನು ಗ್ರಹಿಸಿದರು. ಭಾರತದ ಸಾಮಾಜಿಕ ಸ್ಥಿತಿಯ ಬಗ್ಗೆ ಬಹುತೇಕ ತಟಸ್ಥ ನಿಲುವನ್ನು ತಾಳಿದರು. ಆದರೆ ಅಂಬೇಡ್ಕರರು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲೇ ಗಂಭೀರ ಸಮಸ್ಯೆಗಳನ್ನು ಗುರುತಿಸಿದರು. ಜೊತೆಗೆ ಈ ಸಮಸ್ಯೆಗಳಿಗೆ ಕಾರಣಗಳಿವೆ; ಆ ಕಾರಣಗಳನ್ನು ಬದಲಾಯಿಸಬಹುದು ಎಂದು ಅವರು ಆಲೋಚಿಸಿದರು. ಸಮಸ್ಯೆಗಳನ್ನು ಇಲ್ಲದಂತೆ ಮಾಡುವುದು ಎಂದರೆ ಅದರ ಕಾರಣಗಳನ್ನು ಇಲ್ಲದಂತೆ ಮಾಡುವುದು ಎಂದೇ ಅರ್ಥ. ಅಂಬೇಡ್ಕರರಿಗೆ ಈ ವಿಧಾನದಲ್ಲಿ ಅತ್ಯಂತ ಶಕ್ತಿಶಾಲಿಯಾದ ನಂಬಿಕೆ ಇತ್ತು.

ಅಂಬೇಡ್ಕರರನ್ನು ಹೇಗೆ ಓದಬೇಕು ಎಂಬುದನ್ನು ಕೇವಲ ಒಂಟಿ ಪ್ರಶ್ನೆಯಾಗಿ ನಿರೂಪಿಸಿ ಚರ್ಚಿಸುವುದು ಒಂದು ವಿಧಾನ. ಆದರೆ ಅಂಬೇಡ್ಕರರನ್ನು ಯಾವ ಉದ್ದೇಶಕ್ಕೆ, ಯಾರ ಹಿತಾಸಕ್ತಿಗೆ ಓದಬೇಕು ಎಂಬುದನ್ನು ಒಳಗೊಂಡಂತೆ ಚರ್ಚಿಸುವುದು ಮತ್ತೊಂದು ವಿಧಾನ. ಇದರಲ್ಲಿ ಮೊದಲನೇ ವಿಧಾನವನ್ನು ಯಾಂತ್ರಿಕ ಗ್ರಹಿಕೆ ಎಂದು ಕರೆಯಬಹುದು. ಎರಡನೆಯದನ್ನು ಸಮಗ್ರ ಗ್ರಹಿಕೆ ಎಂದು ಕರೆಯಬಹುದು. ಸಮಗ್ರ ಗ್ರಹಿಕೆಗೆ ಹಲವು ದಾರಿಗಳಿವೆ; ಹಲವು ಸಾಧ್ಯತೆಗಳಿವೆ. ಆದರೆ ಯಾಂತ್ರಿಕ ಗ್ರಹಿಕೆಗೆ ಈ ಸಾಧ್ಯತೆಗಳಿಲ್ಲ.

ಊಳಿಗಮಾನ್ಯಶಾಹಿ ಗರ್ಭದಲ್ಲಿ ಹುಟ್ಟಿದ ಬಂಡವಾಳಶಾಹಿಯು ತಿರುಗಿ ಅದೇ ಊಳಿಗಮಾನ್ಯಶಾಹಿಯ ಮೇಲ್‌ಸ್ತರದ ಮೌಲ್ಯಗಳನ್ನು ಬದಲಾಯಿಸಬಹುದು ಎಂಬ ಭ್ರಮೆಯನ್ನು ಉಂಟುಮಾಡಿತ್ತು. ಬಂಡವಾಶಾಹಿ ವೈಚಾರಿಕತೆಯು ಇದನ್ನು ಬಲವಾಗಿ ನಂಬಿತ್ತು.

■ **ಅಂಬೇಡ್ಕರರು ರೂಪಿಸಿದ ಚರಿತ್ರೆ**

ಅಂಬೇಡ್ಕರರು ಊಳಿಗಮಾನ್ಯಶಾಹಿಯ ಜಾತಿ ಅಸ್ಪೃಶ್ಯತೆಯ ಕ್ರೂರಾತಿಕ್ರೂರ ಕೂಪದಿಂದ ಬಂದಿದ್ದರು. ಹಾಗಾಗಿ ಇದನ್ನು ಹೇಗಾದರೂ ಮಾಡಿ ತೊಡೆದುಹಾಕಬೇಕು ಎಂಬುದು ಅಂಬೇಡ್ಕರರನ್ನು ಹುಟ್ಟಿಸಿದ ಅಸ್ಪೃಶ್ಯ ಸಮಾಜದ ತೀವ್ರವಾದ ಒಳ ಒತ್ತಡವಾಗಿತ್ತು. ಅಂಬೇಡ್ಕರರು ಶರೀರ ರಚನಾಶಾಸ್ತ್ರ, ಮಾನವಕುಲಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರದಂತಹ ಆಧುನಿಕ ಜ್ಞಾನಶಿಸ್ತುಗಳನ್ನು ಆಳವಾಗಿ ಹಾಗೂ ಸಮಗ್ರವಾಗಿ ಅಧ್ಯಯನ ಮಾಡಿದರು. ಇವುಗಳ ನೆರವಿನಿಂದ ಇಂಡಿಯಾದ ಸಾಮಾಜಿಕ ರಚನೆಯನ್ನು ಅರ್ಥಮಾಡಿಕೊಂಡರು. ಜಾತಿ ಅಸ್ಪೃಶ್ಯತೆಗಳ ಅಸಮಾನತೆಗಳು ಭಾರತೀಯ ಸಮಾಜದ ಚಾಲಕ ಶಕ್ತಿಗಳಾಗಿ ಅವರಿಗೆ ಕಂಡವು. ಹಾಗಾಗಿ ಸಾಮಾಜಿಕ ಅಪಮಾನವು ಕೇವಲ ಒಂದು ಸಾಮಾಜಿಕ ಸಂಗತಿಯಾಗಿರದೆ ಇಂಡಿಯಾದ ಅಸಂಖ್ಯ ಜನರನ್ನು ಅದು ದಮನಿಸಿದೆ, ಹತ್ತಿಕ್ಕಿದೆ ಮತ್ತು ತುಳಿದಿದೆ ಎಂದು ತೀರ್ಮಾನಿಸಿದರು. ಇದನ್ನು ಬದಲಾಯಿಸಬೇಕಾದರೆ ತುಳಿತಕ್ಕೊಳಗಾಗಿರುವವರು ಮಾತ್ರವಲ್ಲ; ತುಳಿಯುವವರೂ ಕೂಡ ಬದಲಾಗಬೇಕು ಎಂದು ಅವರು ಆಲೋಚಿಸಿದರು. ಅಂದರೆ ಬದಲಾವಣೆಯು ಎರಡೂ ಕಡೆ ನಡೆಯಬೇಕು ಎಂಬುದು ಅಂಬೇಡ್ಕರರ ಮೂಲ ಗ್ರಹಿಕೆಯಾಗಿತ್ತು.

■ **ಅಂಬೇಡ್ಕರ್ ಮತ್ತು ವರ್ಗ ಹೋರಾಟದ ಪರಿಕಲ್ಪನೆ**

'ಅಂಬೇಡ್ಕರ್ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿರಲಿಲ್ಲ. ಅವರು ವರ್ಗ ಹೋರಾಟ ಮಾಡಲಿಲ್ಲ'. ಇಂತಹ ಹಲವು ಆರೋಪಗಳನ್ನು ಅಂಬೇಡ್ಕರರ ಮೇಲೆ ಹೊರಿಸಲಾಗಿದೆ. ಈ ರೀಡಿಂಗ್‌ನ ಸ್ವರೂಪ ಏನೆಂದರೆ ನಮ್ಮ ಅಪೇಕ್ಷೆ ಮತ್ತು ನಿರೀಕ್ಷೆಗಳನ್ನು ಬಲಾತ್ಕಾರವಾಗಿ ಅಂಬೇಡ್ಕರರ ಮೇಲೆ ಹೇರುವಂತಹದ್ದು. ಭಾರತದಲ್ಲಿ ಎಂ.ಎಲ್. ಪಕ್ಷ ಮತ್ತು ಎಂ.ಎಲ್.ಯೇತರ ಪಕ್ಷಗಳ ವರ್ಗಹೋರಾಟದ ಫಲಶ್ರುತಿ

ಏನಾಗಿದೆ? ಯಾಕೆ ಇವರು ಮಾಡಿದ ವರ್ಗಹೋರಾಟ ಫಲ ಕೊಡಲಿಲ್ಲ? ಆದರೆ ಇದೇ ಪ್ರಶ್ನೆಯನ್ನು ಅಂಬೇಡ್ಕರರ ತಲೆಗೆ ಕಟ್ಟಿ ಕೈತೊಳೆದುಕೊಳ್ಳುವ ವ್ಯರ್ಥಪ್ರಯತ್ನ ಸರಿಯಾದುದಲ್ಲ. ಅಂಬೇಡ್ಕರರು ಮಾಡಿದ ಹೋರಾಟಗಳನ್ನು ಮೌಲ್ಯಮಾಪನ ಮಾಡಬೇಕೇ ಹೊರತು ನಮ್ಮ ಅಪೇಕ್ಷೆಯ ಹೋರಾಟವನ್ನು ಅಂಬೇಡ್ಕರ್ ಮಾಡಲಿಲ್ಲ ಎಂದು ಆಪಾದನೆ ಹೊರಿಸುವುದು ಸರಿಯಾದ ವಿಧಾನವಲ್ಲ.

ಅಂಬೇಡ್ಕರರ ಆಲೋಚನೆಗಳನ್ನು ಒಂದು ಹಂತದವರೆಗೆ ರೂಪಿಸಿದ್ದು ಬಂಡವಾಳಶಾಹಿ ವೈಚಾರಿಕತೆಯೆ. ಆ ಕಾರಣಕ್ಕಾಗಿ ಅವರು ವರ್ಗಹೋರಾಟ ಮಾಡಲಿಲ್ಲ ಎಂಬ ತೀರ್ಮಾನ ಮಾತ್ರ ಸರಳವಾದುದು. ಸಾಮಾಜಿಕ ಚಲನಶೀಲತೆಯಲ್ಲಿ ವರ್ಗಗಳ ಸ್ವರೂಪ, ಅದರ ಗುಣಸ್ವಭಾವ ನಿರಂತರವಾಗಿ ಬದಲಾಗುತ್ತಿದೆ. ಅದನ್ನು ಅಸೆಸ್ ಮಾಡುವುದೇ ಕಷ್ಟ ಎನ್ನುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಇದನ್ನು ಮರುವಿಮರ್ಶೆ ಮಾಡುವ ಅಗತ್ಯವಿದೆ.

■ ಅಭಿಮಾನ, ಸ್ವಾಭಿಮಾನ, ಗೌರವ, ಪೂಜ್ಯಭಾವ

ಕಳೆದ ಶತಮಾನದ 60–70ರ ದಶಕದ ನಂತರ ಭಾರತದ ಕೆಲವು ಕಡೆಗಳಲ್ಲಿ ಶಿಕ್ಷಣ ಪಡೆದ ದಲಿತರು ಸಂಘಟಿತರಾಗಿ ತಮ್ಮ ಮೇಲಿನ ದೌರ್ಜನ್ಯಗಳ ವಿರುದ್ಧ ಮತ್ತು ತಮ್ಮ ಹಕ್ಕು ಹಾಗೂ ಸೌಲಭ್ಯಗಳಿಗೆ ಹೋರಾಟ ಶುರುಮಾಡಿದರು. ಅಂತಹ ಸದರ್ಭದಲ್ಲಿ ಅಂಬೇಡ್ಕರರನ್ನು ತಮ್ಮ ಹೋರಾಟಗಳಿಗೆ ಸ್ಫೂರ್ತಿ ಎಂದು, ಮಾರ್ಗದರ್ಶಕ ಶಕ್ತಿ ಎಂದು ಆ ಸಂಘಟನೆಗಳು ಪರಿಗಣಿಸಿದವು. ಅಲ್ಲಿಂದ ಮುಂದೆ ದಲಿತ ಸಮುದಾಯದ ಇಂತಹ ಸಂಘಟನೆಗಳು ಹಾಗೂ ಬುದ್ಧಿಜೀವಿಗಳು ಅಂಬೇಡ್ಕರರ ಬಗ್ಗೆ ಅಭಿಮಾನ, ಗೌರವ ಹಾಗೂ ಪೂಜ್ಯಭಾವನೆಗಳನ್ನು ತಾಳಿದವು. ಅಂಬೇಡ್ಕರರ ಬರವಣಿಗೆಗಳನ್ನು ಅಧ್ಯಯನ ಮಾಡಿದವರು, ಅವರನ್ನು ಕುರಿತು ವಿವಿಧ ಪ್ರಕಾರದ ಬರವಣಿಗೆ ಮಾಡಿದರು. ಅಂಬೇಡ್ಕರ್ ತಮಗೆ ಸ್ವಾಭಿಮಾನದ ಸಂಕೇತವೆಂದು ಪರಿಗಣಿಸಿದರು. ಅಂಬೇಡ್ಕರರನ್ನು ಭಾರತದ ಸಾಮಾಜಿಕ ಹಾಗೂ ರಾಜಕೀಯ ಚರಿತ್ರೆಯ ಭಾಗವಾಗಿ ಪರಿಗಣಿಸಿದರು. ಇದು ಒಂದು ದಿಕ್ಕಿನ ಬೆಳವಣಿಗೆ. ಇದಕ್ಕೆ ವಿರುದ್ಧವಾಗಿ ಮತ್ತೊಂದು ದಿಕ್ಕಿನ ಬೆಳವಣಿಗೆ ಕೂಡ ನಡೆಯಿತು. ಅಂಬೇಡ್ಕರರು ಬದುಕಿದ್ದಾಗ ಎಂ.ಕೆ. ಗಾಂಧಿಯವರನ್ನು ಮತ್ತು ಭಾರತದ ಕಾಂಗ್ರೆಸ್ ಪಕ್ಷವನ್ನು ಕಟುವಾಗಿ ಟೀಕಿಸಿದ್ದರು. ಜೊತೆಗೆ ಅವರ ಆಳವಾದ ಅಧ್ಯಯನಗಳು ಭಾರತದ ಕೆಲವು ಲಿಖಿತ ಪಠ್ಯಗಳನ್ನು ಅದರಲ್ಲೂ ರಾಮಾಯಣ, ಮಹಾಭಾರತಗಳನ್ನು ಕಟುವಾಗಿ ವಿಮರ್ಶೆ ಮಾಡಿದ್ದರು. ಅಂತಹವರು ಈಗ ಶೋಷಿತ, ದಲಿತ ಸಂಘಟಿತ ಸಮುದಾಯಗಳಿಗೆ ಸ್ಫೂರ್ತಿಯಾದುದು ಶೋಷಕ ಶಕ್ತಿಗಳಿಗೆ ನುಂಗಲಾರದ ತುತ್ತಾಯಿತು. ಹಾಗಾಗಿ ಅಂತಹ ಶಕ್ತಿಗಳು ಅಂಬೇಡ್ಕರರನ್ನು ಹಾಗೂ ಅವರ ಬರವಣಿಗೆಗಳನ್ನು ಕೆಟ್ಟ ಪದಗಳಲ್ಲಿ ಟೀಕಿಸತೊಡಗಿದವು. ಇದಕ್ಕೆ ವಿರುದ್ಧವಾಗಿ ದಲಿತ ಬುದ್ಧಿಜೀವಿಗಳು ಹಾಗೂ ದಲಿತ ಪರ ಬುದ್ಧಿಜೀವಿಗಳು ಅದನ್ನು ಬಲವಾಗಿ ವಿರೋಧಿಸಿದರು. ಅಂದು ದಲಿತ ಸಂಘಟನೆಗಳು ಹಾಗೂ ಹೋರಾಟಗಳು ನಿರ್ಮಾಣ ಮಾಡಿದ ಅಂಬೇಡ್ಕರರ ಮೇಲಿನ ಅಭಿಮಾನ, ಗೌರವಗಳು ಹಾಗೆಯೇ ಮುಂದುವರಿದಿವೆ. ಆದರೆ ಇದು ಮುಂದುವರಿಯುತ್ತಿರುವ ಸ್ವರೂಪ ಮಾತ್ರ ಬಹಳ ಸೋಜಿಗವೆನಿಸುತ್ತಿದೆ. ಮೊದಲ ಹಂತದಲ್ಲಿ ಅಂಬೇಡ್ಕರರ ಮೇಲಿದ್ದ ಅಭಿಮಾನವು ಈಗ ಮೂಢ ಅಭಿಮಾನವಾಗಿ ಹಾಗೂ ಅಂಧ ಅಭಿಮಾನವಾಗಿ ರೂಪಾಂತರ ಹೊಂದಿದೆ. ಆಳುವ ವರ್ಗಗಳು ಇದನ್ನು ಯಶಸ್ವಿಯಾಗಿ ದುರುಪಯೋಗಪಡಿಸಿಕೊಳ್ಳುತ್ತಿವೆ.



ಕಳೆದ ಶತಮಾನದ 90ರ ದಶಕದಲ್ಲಿ ಅಂಬೇಡ್ಕರರಿಗೆ ಭಾರತರತ್ನ ಪ್ರಶಸ್ತಿ ಕೊಡಬೇಕೆಂದು ಒತ್ತಾಯಿಸಲಾಯಿತು. ಜೊತೆಗೆ ಅವರ ಹುಟ್ಟುಹಬ್ಬವನ್ನು ರಾಷ್ಟ್ರೀಯ ರಜೆ ದಿನವನ್ನಾಗಿ ಪರಿಗಣಿಸಬೇಕೆಂಬ ಒತ್ತಾಯವನ್ನು ಇಡಲಾಯಿತು. ಇವೆರಡೂ ಫಲಿಸಿದವು. ಅದರ ಹಿಂದಿನ ಉದ್ದೇಶ ಸಕಾರಾತ್ಮಕವಾಗಿತ್ತು. ಆದರೆ ಅದರ ಪರಿಣಾಮ ಮಾತ್ರ ಬಹಳ ಯಾಂತ್ರಿಕವಾಗಿದೆ. ಒಂದು ಕಾಲದಲ್ಲಿ ಅಂಬೇಡ್ಕರ್ ಜನ್ಮದಿನಾಚರಣೆಯನ್ನು ದಲಿತ ಹಾಗೂ ಪ್ರಗತಿಪರ ಶಕ್ತಿಗಳು ಒಟ್ಟಾಗಿ ಆಚರಿಸುತ್ತಿದ್ದವು. ಅದು ಅವುಗಳ ಒಡಲೊಳಗಿನ ಒತ್ತಡವಾಗಿತ್ತು. ಆದರೆ ಈಗ ಅದನ್ನು ಕೇವಲ ಸರಕಾರಿ ಯಾಂತ್ರಿಕ ಕಾರ್ಯಕ್ರಮವನ್ನಾಗಿ ಮಾರ್ಪಡಿಸಲಾಗಿದೆ.

■ ಅಂಬೇಡ್ಕರ್ ವೋಟ್‌ಬ್ಯಾಂಕ್ ರಾಜಕಾರಣ

ದಲಿತ ಸಮುದಾಯಗಳಿಗೆ ಅಂಬೇಡ್ಕರರ ಮೇಲೆ ಭಾವನಾತ್ಮಕವಾದ ಪ್ರೀತಿ ಹಾಗೂ ಗೌರವಗಳಿರುವುದನ್ನು ಆಳುವ ವರ್ಗಗಳು ಸ್ಪಷ್ಟಮಾಡಿಕೊಂಡವು. ಇದನ್ನು ದುರುಪಯೋಗ ಮಾಡಿಕೊಳ್ಳಲು ಸಂಚು ರೂಪಿಸಿದವು. 70–80ರ ದಶಕಗಳಲ್ಲಿ ದಲಿತ ಸಂಘಟನೆ ಹಾಗೂ ಹೋರಾಟಗಳು ಸಾಮಾಜಿಕ ನ್ಯಾಯಕ್ಕಾಗಿ ರಾಜಿರಹಿತವಾದ ಹೋರಾಟ ಮಾಡುತ್ತಿದ್ದವು. ಆ ಕಾಲದ ಸಂಘಟನೆಯ ಶಕ್ತಿ, ಕಾರ್ಯಕರ್ತರ ಬದ್ಧತೆ ಹಾಗೂ ತ್ಯಾಗಗಳು ಇಂದಿಗೂ ಸ್ಮರಿಸುವಂತಹವು. ಆ ಕಾಲದಲ್ಲಿ ದಲಿತ ಸಂಘಟನೆಗಳು ಭೂಮಾಲಿಕ ವರ್ಗವು ದಲಿತರ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳ ವಿರುದ್ಧ ಹೋರಾಡತೊಡಗಿದವು. ಮುಂದೆ ಅದು ದಲಿತರು ಭೂಮಿಗಾಗಿ ಹೋರಾಡುವಂತಹ ವಾತಾವರಣವನ್ನು ನಿರ್ಮಾಣ ಮಾಡುವ ಪ್ರಬಲ ಸೂಚನೆಗಳು ಕಾಣತೊಡಗಿದವು. ಮತ್ತೊಂದು ಕಡೆ ಸಾಮ್ರಾಜ್ಯಶಾಹಿ ಲೂಟಿ ಭಾರತದ ದುಡಿಯುವ ವರ್ಗಗಳನ್ನು ಮತ್ತಷ್ಟು ಕೂಪಕ್ಕೆ ತಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಆಗ ದಲಿತ ಸಂಘಟನೆಗಳನ್ನು ಅವು ನಡೆಸುತ್ತಿದ್ದ ಹೋರಾಟದಿಂದಲೆ ನಯವಾಗಿ ಬೇರ್ಪಡಿಸುವ ಕೆಲಸವನ್ನು ಆಳುವ ವರ್ಗಗಳು ಮಾಡಿದವು. ಪರಿಣಾಮವಾಗಿ ದಲಿತ ಸಂಘಟನೆಗಳು ಕೇವಲ ಹೋರಾಟ ಮಾಡಿದರೆ ಸಾಲದು, ಅವು ಆಳುವ ವರ್ಗದ ರಾಜಕೀಯ ಪಕ್ಷಗಳಾಗಿ ಬದಲಾಗಬೇಕು. ಆಗ ತಮ್ಮ ಹಕ್ಕುಗಳಿಗಾಗಿ ಮತ್ತಷ್ಟು ಪರಿಣಾಮಕಾರಿಯಾಗಿ ಹೋರಾಡಬಹುದು ಎಂಬ ಭ್ರಮೆಯನ್ನು ದಲಿತ ಸಂಘಟನೆಗಳ ಮೇಲೆ ಬಿತ್ತಲಾಯಿತು. ಪರಿಣಾಮವಾಗಿ ಬಹುತೇಕ ದಲಿತ ಸಂಘಟನೆಗಳು ರಾಜಕೀಯ ಪಕ್ಷಗಳಾಗಿ ಮಾರ್ಪಟ್ಟವು. ಈ ಒಟ್ಟು ಪ್ರಕ್ರಿಯೆಯನ್ನು ಎನ್.ಜಿ.ಓ. ವೈಚಾರಿಕತೆಯು ಆಲಂಕಾರಿಕ ಪದಗಳಲ್ಲಿ ವೈಭವೀಕರಿಸಿತು. ಇದು ಸಮಗ್ರ ದಲಿತರ ಅಂತರಾಳದ ಆಯ್ಕೆ ಎಂಬಂತೆ ಅದನ್ನು ಬಣ್ಣಿಸಲಾಯಿತು. ಕೊನೆಗೆ ಉತ್ತರ ಪ್ರದೇಶದಲ್ಲಿ ಅದು ಅಧಿಕಾರದ ಗದ್ದುಗೆಯನ್ನೂ ಏರಿತು. ಆದರೆ ಅಧಿಕಾರದ ಸ್ವರೂಪ ಮಾತ್ರ ಭೂಮಾಲೀಕ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿತ್ತು. ಹಾಗಾಗಿ ಅಲ್ಲಿಯ ಕಾರ್ಯಕ್ರಮಗಳು ಶೋಷಿತರನ್ನು, ದಲಿತರನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡಲಿಲ್ಲ. ಈಗ ಅಲ್ಲಿಯ ಪರಿಸ್ಥಿತಿ ಏನಾಗಿದೆ ಎಂಬುದನ್ನು ಪರಾಮರ್ಶಿಸಬಹುದು.

■ ಅಂಬೇಡ್ಕರ್ ಅನುಕರಣೆ

ಮೊದಲ ಹಂತದಲ್ಲಿ ಅಂಬೇಡ್ಕರರ ಬಗೆಗಿದ್ದ ಅಭಿಮಾನವು ಮುಂದೆ ಅಂಬೇಡ್ಕರರನ್ನು ಅನುಕರಣೆ ಮಾಡುವಂತೆ ಮಾಡಿತು. ಅದು ಅಂಬೇಡ್ಕರರನ್ನು ಆಳವಾಗಿ ಅಧ್ಯಯನ ಮಾಡದಂತೆ ಹಾಗೂ ಅವರನ್ನು ವಿಮರ್ಶಾತ್ಮಕವಾಗಿ ಗ್ರಹಿಸದಂತೆ ಮಾಡಿತು. ಅಂಬೇಡ್ಕರರು ತಮ್ಮ ಕಾಲದ ಒತ್ತಡಗಳಿಗೆ ಅನುಗುಣವಾಗಿ ಮಾಡಿದ ಹೋರಾಟಗಳನ್ನು ಎಲ್ಲಾ ಕಾಲಕ್ಕೂ ಆದರ್ಶವೆಂದು ತಿಳಿಯುವಂತೆ ಮಾಡಿತು. ಈ ಹಿಂದಿನ ಎನ್‌ಡಿಎ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ, ಅದು ಸಂವಿಧಾನ ಪರಾಮರ್ಶೆ ಮಾಡಲು ಮುಂದಾಯಿತು. ಆಗ 'ಭಾರತದ ಸಂವಿಧಾನವನ್ನು ಅಂಬೇಡ್ಕರ್ ಬರೆದಿರುವುದರಿಂದ ಅದರಲ್ಲಿ ಯಾವುದೇ ಕೊರತೆಗಳಿಲ್ಲ' ಎಂದು ಕೊಂಡಾಡುವಂತಹ ಕೆಲಸ ನಡೆಯಿತು. ಆದರೆ ಭಾರತದ ಸಂವಿಧಾನದ ವ್ಯಾಪ್ತಿಯಲ್ಲೆ ಇಂದು ಶೋಷಿತ, ದಮನಿತ ಮುಂತಾದವರ ಬದುಕುವ ಹಕ್ಕನ್ನೂ ಕೂಡ ಕಿತ್ತುಕೊಳ್ಳಲಾಗಿದೆ. ಅನ್ಯಾಯ ಮಾಡಿದವರಿಗೆ ಯಾವ ಶಿಕ್ಷೆಯೂ ಆಗುತ್ತಿಲ್ಲ. ಇದನ್ನೆಲ್ಲ ಆಗ ಗಂಭೀರವಾಗಿ ಕೇಳಲಿಲ್ಲ. ಅದಕ್ಕೆ ಅಂಬೇಡ್ಕರರ ಮೇಲಿದ್ದ ಒಣ ಅಭಿಮಾನ ಮತ್ತು ಯಾಂತ್ರಿಕ ಅನುಕರಣೆಯ ಪ್ರಜ್ಞೆ

ಕಾರಣವಾಗಿತ್ತು.

■ ಅಂಬೇಡ್ಕರ್ ಅನ್ವಯ

ಅಂಬೇಡ್ಕರರ ಆಲೋಚನೆಗಳನ್ನು ಹಾಗೂ ಅವರ ಹೋರಾಟದ ಮಾದರಿಗಳನ್ನು ಅನ್ವಯ ಮಾಡುವುದು ಹೇಗೆ ಎಂಬುದನ್ನು ಕುರಿತು ಚರ್ಚೆ ಮಾಡುವ ಅಗತ್ಯವಿದೆ. ಇದಕ್ಕೆ ಮೊದಲು ಅನ್ವಯ ಮಾಡುವುದರ ಸ್ವರೂಪ ಹೇಗಿರುತ್ತದೆ ಎಂಬುದನ್ನು ನಿರೂಪಿಸಿಕೊಳ್ಳಬೇಕು. ಏಂಗೆಲ್ಸ್ ಮತ್ತು ಮಾರ್ಕ್ಸ್ ಜರ್ಮನಿ ದೇಶದವರು. ಅಲ್ಲಿಯ ಬಂಡವಾಳಶಾಹಿ ಕೈಗಾರಿಕಾ ಬೆಳವಣಿಗೆಯನ್ನು ಆಧರಿಸಿ ಅವರು ರಾಜಕೀಯ ಅರ್ಥಶಾಸ್ತ್ರವನ್ನು ಅಭಿವೃದ್ಧಿಪಡಿಸಿದರು. ಅದನ್ನು ಲೆನಿನ್ ರಷ್ಯಾದಲ್ಲಿ ಅನ್ವಯ ಮಾಡಿದರು. ಲೆನಿನ್ ಅವರು ಮಾರ್ಕ್ಸ್ ಮತ್ತು ಏಂಗೆಲ್ಸರನ್ನು ಪೂಜೆ ಮಾಡಲಿಲ್ಲ, ಅವರ ಬಗ್ಗೆ ಕೇವಲ ಭಾವನಾತ್ಮಕವಾದ ಪೂಜ್ಯಭಾವನೆಯನ್ನು ತಾಳಲಿಲ್ಲ. ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಆಧರಿಸಿ ರಚನೆ ಮಾಡಿದ್ದ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅರೆ ಊಳಿಗಮಾನ್ಯಶಾಹಿ ವ್ಯವಸ್ಥೆಯಲ್ಲಿ ರಚನಾತ್ಮಕವಾಗಿ ಬದಲಾಯಿಸಿ ಅನ್ವಯ ಮಾಡಿದರು. ಅದೇ ಕೆಲಸವನ್ನು ಚೈನಾದಲ್ಲಿ ಮಾವೊ ಮಾಡಿದರು. ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಈ ಇಬ್ಬರು ಯಾಂತ್ರಿಕವಾಗಿ ಅನುಕರಣೆ ಮಾಡಲಿಲ್ಲ. ಸಿದ್ಧಾಂತವೊಂದನ್ನು ಕಾರ್ಯಾಚರಣೆಗೆ ತರುವುದು ಎಂದರೆ ವಸ್ತುನಿಷ್ಠ ಚಲನಶೀಲ ಪರಿಸ್ಥಿತಿಗೆ ಅದನ್ನು ಬದಲಾಯಿಸುವುದು ಎಂದೇ ಅರ್ಥ.

ಭಾರತದ ವಸ್ತುನಿಷ್ಠ ಚಲನಶೀಲ ಪರಿಸ್ಥಿತಿಗೆ ಅಂಬೇಡ್ಕರರ ಆಲೋಚನೆಗಳನ್ನು ಅನ್ವಯಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಅನೇಕರು ಅನೇಕ ರೀತಿಗಳಲ್ಲಿ ಎದುರಿಸಿದ್ದಾರೆ. ಅಂಬೇಡ್ಕರರ ಮೇಲಿನ ಅಭಿಮಾನದ ಉತ್ಸಾಹದಲ್ಲಿ ದೇಶದ ಇಡೀ ಸಂಪತ್ತು ಹಾಗೂ ರಾಜ್ಯಾಧಿಕಾರವನ್ನು ಕುರಿತ ಅಂಬೇಡ್ಕರರ ಆಲೋಚನೆಗಳನ್ನು ಸಂಪೂರ್ಣ ಮೂಲೆಗೆ ತಳ್ಳಲಾಗಿದೆ. ದಲಿತ ಹಿತಾಸಕ್ತಿಯ ಶಕ್ತಿಗಳು ಆ ಪ್ರಶ್ನೆಯನ್ನು ಎತ್ತದಂತೆ ಆಳುವ ವರ್ಗಗಳು ಯಶಸ್ವಿ ಹುನ್ನಾರ ನಡೆಸಿವೆ. ಅದರ ಜಾಗದಲ್ಲಿ ಬೌದ್ಧಧರ್ಮದ ಪರ್ಯಾಯವನ್ನು ಮುಂದಿಟ್ಟಿವೆ. ಅಷ್ಟು ಮಾತ್ರವಲ್ಲ; ಅದು ಕೇವಲ ಅಭಿಮಾನ ಹಾಗೂ ಅನುಕರಣೆಯ ರೂಪದಲ್ಲಿ ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಲಾಗಿದೆ. ಇದು ನಿಜ ದಲಿತರಿಗೆ ಒಂದು ಬಗೆಯಲ್ಲಿ ಅಪಾಯಕಾರಿ ಸ್ಥಿತಿಯೆ ಹೌದು.

ಅಂಬೇಡ್ಕರರ ಮೇಲಿನ ಅಭಿಮಾನದ ಉತ್ಸಾಹದಲ್ಲಿ ದೇಶದ ಇಡೀ ಸಂಪತ್ತು ಹಾಗೂ ರಾಜ್ಯಾಧಿಕಾರವನ್ನು ಕುರಿತ ಅಂಬೇಡ್ಕರರ ಆಲೋಚನೆಗಳನ್ನು ಸಂಪೂರ್ಣ ಮೂಲೆಗೆ ತಳ್ಳಲಾಗಿದೆ. ದಲಿತ ಹಿತಾಸಕ್ತಿಯ ಶಕ್ತಿಗಳು ಆ ಪ್ರಶ್ನೆಯನ್ನು ಎತ್ತದಂತೆ ಆಳುವ ವರ್ಗಗಳು ಯಶಸ್ವಿ ಹುನ್ನಾರ ನಡೆಸಿವೆ. ಅದರ ಜಾಗದಲ್ಲಿ ಬೌದ್ಧಧರ್ಮದ ಪರ್ಯಾಯವನ್ನು ಮುಂದಿಟ್ಟಿವೆ. ಅಷ್ಟು ಮಾತ್ರವಲ್ಲ; ಅದು ಕೇವಲ ಅಭಿಮಾನ ಹಾಗೂ ಅನುಕರಣೆಯ ರೂಪದಲ್ಲಿ ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಲಾಗಿದೆ. ಇದು ನಿಜ ದಲಿತರಿಗೆ ಒಂದು ಬಗೆಯಲ್ಲಿ ಅಪಾಯಕಾರಿ ಸ್ಥಿತಿಯೆ ಹೌದು.

■ ಅಂಬೇಡ್ಕರರ ಆಲೋಚನ ವಿಧಾನ

ಅಂಬೇಡ್ಕರರು ಏನನ್ನು ಕುರಿತು ಆಲೋಚನೆ ಮಾಡಿದರು ಎಂಬುದರ ಬಗ್ಗೆ ಸಾಕಷ್ಟು ಚರ್ಚೆಗಳು, ಬರವಣಿಗೆಗಳು ಪ್ರಕಟವಾಗಿವೆ. ಆದರೆ ಅವರು ಹೇಗೆ ಆಲೋಚನೆ ಮಾಡಿದರು ಎಂಬುದರ ಬಗ್ಗೆ ಅಷ್ಟಾಗಿ ಅಧ್ಯಯನಗಳು ನಡೆದಂತೆ ಕಾಣುವುದಿಲ್ಲ. ಹಾಗಾಗಿ ಅವರ ಆಲೋಚನ ವಿಧಾನದ ಸ್ವರೂಪ ಯಾವುದು ಎಂಬುದನ್ನು ವಿವರಿಸಿಕೊಳ್ಳುವ ಅಗತ್ಯವಿದೆ.

ಅಂಬೇಡ್ಕರರು ತಮ್ಮ ಕಾಲದ ಎಲ್ಲಾ ಪ್ರಮುಖ ಜ್ಞಾನಶಿಸ್ತುಗಳನ್ನು ಆಳವಾಗಿ ಅಧ್ಯಯನ ಮಾಡಿದವರು. ತಮ್ಮ ಅಧ್ಯಯನ ಹಾಗೂ ಬರವಣಿಗೆಗೆ ಆ ಎಲ್ಲಾ ಜ್ಞಾನಶಿಸ್ತುಗಳನ್ನು ಶಕ್ತಿಶಾಲಿಯಾಗಿ ಬಳಸಿಕೊಂಡಿದ್ದಾರೆ. ಅವರ ಬಹುತೇಕ ಅಧ್ಯಯನಗಳ ಗ್ರಹಿಕೆ ಹಾಗೂ ನಿರೂಪಣೆಯ ಸ್ವರೂಪ ಗತಿತಾರ್ಕಿಕವಾದುದು. ಇದನ್ನು ಅಂಬೇಡ್ಕರರು ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಆಳವಾದ ಅಧ್ಯಯನದಿಂದಲೆ ಪಡೆದಿದ್ದಾರೆ. ಅವರ 'ಅಸ್ಪೃಶ್ಯರು' ಬರವಣಿಗೆ ಇದಕ್ಕೊಂದು ಶಕ್ತಿಶಾಲಿ ಉದಾಹರಣೆ. ಅವರ ಬಹುತೇಕ ಅಧ್ಯಯನಗಳಲ್ಲಿ ಈ ವಿಧಾನವನ್ನು ಗುರುತಿಸಬಹುದು.

'ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್' ಬರವಣಿಗೆಯನ್ನು ವಿವರಿಸುವ ಮೂಲಕ ಇದನ್ನು ಮನದಟ್ಟು ಮಾಡಿಕೊಳ್ಳಬಹುದು. 'ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧನನ್ನು ಹೋಲಿಸಿದರೆ ತಮಾಷೆಯಾಗಬಹುದು. ಇವರಿಬ್ಬರ ನಡುವೆ 2381 ವರ್ಷಗಳ ಅಂತರವಿದೆ. ಬುದ್ಧ ಜನಿಸಿದ್ದು ಕ್ರಿಪೂ. 563ರಲ್ಲಿ. ಮಾರ್ಕ್ಸ್ ಕ್ರಿಶ. 1818ರಲ್ಲಿ. ಬುದ್ಧ ತೀರಾ ಪ್ರಾಚೀನನಾದವನು. ಮಾರ್ಕ್ಸ್ ತೀರಾ ಅರ್ವಾಚೀನ. ಬುದ್ಧನಿಂದ ಮಾರ್ಕ್ಸ್‌ವಾದಿ ಏನನ್ನು ಕಲಿಯಬಲ್ಲ? ಮಾರ್ಕ್ಸ್‌ವಾದಿಗೆ ಬುದ್ಧ ಏನು ಬೋಧಿಸಲು ಸಾಧ್ಯ? ಇಬ್ಬರನ್ನೂ ಅಧ್ಯಯನ ಮಾಡಿರುವುದರಿಂದ ಇವರಿಬ್ಬರನ್ನು ತುಲನೆ ಮಾಡಬೇಕೆಂಬ ಮಹತ್ವಾಕಾಂಕ್ಷೆ ನನ್ನಲ್ಲಿ ಉಂಟಾಗಿದೆ'.

■ ಬುದ್ಧನ ತತ್ವ

* ಧರ್ಮದ ಕೆಲಸ ಪ್ರಪಂಚದ ಪುನರ‍್ರಚನೆ ಮತ್ತು ಸುಖಸಂವರ್ಧನೆ ಮಾಡುವುದು; ಅದರ ಆದಿ ಮತ್ತು ಅಂತ್ಯವನ್ನು ವಿವರಿಸುವುದಲ್ಲ.
* ಆಸ್ತಿಯ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರವೂ ಮತ್ತೊಂದು ವರ್ಗಕ್ಕೆ ದುಃಖವೂ ಉಂಟಾಗುತ್ತದೆ.
* ಸಮಾಜದ ಒಳಿತಿಗಾಗಿ ಈ ದುಃಖವನ್ನು ಹೋಗಲಾಡಿಸಬೇಕಾದರೆ ಅದರ ಕಾರಣವನ್ನು ಹೋಗಲಾಡಿಸಬೇಕು.
* ಯಾವುದೂ ಸನಾತನವಲ್ಲ ಅಥವಾ ಶಾಶ್ವತವಲ್ಲ. ಎಲ್ಲವೂ ಪರಿವರ್ತನಶೀಲವಾದುದು. ಇರುವಿಕೆ ಎಂದರೆ ಸದಾ ಆಗುವಿಕೆ.

■ ಮಾರ್ಕ್ಸ್‌ನ ಮೂಲ ಸಿದ್ಧಾಂತ

* ತತ್ವಜ್ಞಾನದ ಉದ್ದೇಶ ಪ್ರಪಂಚವನ್ನು ಪುನರ‍್ರಚನೆ ಮಾಡುವುದು. ವಿಶ್ವದ ಮೂಲವನ್ನು ವಿವರಿಸುವುದಲ್ಲ.
* ಸಮಾಜ ಒಡೆಯರು ಮತ್ತು ದುಡಿಮೆಗಾರರು ಎಂದು ಎರಡು ವರ್ಗಗಳಾಗಿ ಇಬ್ಭಾಗವಾಗಿದೆ. ದುಡಿಮೆಗಾರರ ಶ್ರಮದ ಫಲವಾಗಿ ಬಂದ ಹೆಚ್ಚಿಗೆ ಮೌಲ್ಯವನ್ನು ದುರುಪಯೋಗ ಮಾಡುವ ಮಾಲಿಕರು ಶ್ರಮಜೀವಿಗಳನ್ನು ಶೋಷಣೆ ಮಾಡುತ್ತಾರೆ.
* ಉತ್ಪಾದನಾ ಸಾಧನಗಳನ್ನು ರಾಷ್ಟ್ರೀಕರಣ ಗೊಳಿಸುವುದರಿಂದ ಅಂದರೆ ಖಾಸಗಿ ಆಸ್ತಿಯನ್ನು ತೊಡೆದು ಹಾಕುವುದರಿಂದ ಈ ಶೋಷಣೆಯನ್ನು ನಿಲ್ಲಿಸಬಹುದು.
* ಕಾರ್ಮಿಕರ ಸಂಖ್ಯೆ ಮಾಲೀಕರ ಸಂಖ್ಯೆಗಿಂತ ಹೆಚ್ಚಾಗಿರುವುದರಿಂದ ಕೂಲಿಕಾರರು ರಾಜ್ಯಶಕ್ತಿಯನ್ನು ವಶಪಡಿಸಿಕೊಂಡು ಶ್ರಮಜೀವಿಗಳ ಪ್ರಭುತ್ವವನ್ನು ಸ್ಥಾಪಿಸುತ್ತಾರೆ.

'ಬುದ್ಧನ ವಿಧಾನ ಮಾನವರ ಮನಸ್ಸನ್ನು, ಅವರ ಸ್ವಭಾವವನ್ನು ಬದಲಾಯಿಸುವುದಾಗಿತ್ತು. ಮಾನವರು ಏನನ್ನೇ ಮಾಡಿದರೂ ಒತ್ತಾಯವಿಲ್ಲದೆ ಮಾಡುವುದಾಗಿತ್ತು. ಮಾನವರ ಸ್ವಭಾವವನ್ನು ಬದಲಾಯಿಸಲು ಅವನಿಗಿದ್ದ ಮುಖ್ಯ ವಿಧಾನ ಧಮ್ಮ ಮತ್ತು ಧಮ್ಮದ ನಿರಂತರ ಬೋಧನೆಯಾಗಿತ್ತು.

'ಸೋದರತ್ವ ಅಥವಾ ಸ್ವಾತಂತ್ರ್ಯ ಇಲ್ಲದಿದ್ದರೆ ಸಮಾನತೆಗೆ ಬೆಲೆಯಿಲ್ಲ. ಬುದ್ಧನ ಮಾರ್ಗವನ್ನು ಅನುಸರಿಸುವುದರಿಂದ ಮಾತ್ರ ಈ ಮೂರು ತತ್ವಗಳು ಜೊತೆಜೊತೆಯಾಗಿ ಬಾಳಬಲ್ಲವು. ಕಮ್ಯುನಿಸಂ ಯಾವುದಾದರೂ ಒಂದನ್ನು ಕೊಡುತ್ತದೆ, ಎಲ್ಲವನ್ನೂ ಅಲ್ಲ.

ಅಂಬೇಡ್ಕರರು ಮಾರ್ಕ್ಸ್‌ವಾದಿ ತತ್ವಜ್ಞಾನವನ್ನು ಹೊರದೇಶದ ಸಿದ್ಧಾಂತವೆಂದು ಬಹಿಷ್ಕರಿಸಲಿಲ್ಲ. ಆದರೆ ಈ ದೇಶದ ಮೂಲಭೂತವಾದಿ ಶಕ್ತಿಗಳು ಮತ್ತು ಕೆಲವು ದಲಿತ ಶಕ್ತಿಗಳು ಮಾರ್ಕ್ಸ್‌ವಾದಿ ತತ್ವಜ್ಞಾನವನ್ನು ಹೊರದೇಶದ ಸಿದ್ಧಾಂತವೆಂದು ಬಹಿಷ್ಕರಿಸುತ್ತಿದ್ದಾರೆ. ಇದರಲ್ಲಿ ಇಬ್ಬರಿಗೂ ವ್ಯತ್ಯಾಸವೇ ಇಲ್ಲ. ಅಂಬೇಡ್ಕರರು ಮಾರ್ಕ್ಸ್‌ವಾದಿ ತತ್ವಜ್ಞಾನದ ಮೂಲಕ ಅಂದರೆ ಗತಿತಾರ್ಕಿಕ ತತ್ವಜ್ಞಾನದ ಮೂಲಕ ಬುದ್ಧನ ತತ್ವಗಳನ್ನು ಅರ್ಥಮಾಡಿಕೊಂಡಿದ್ದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಂಬೇಡ್ಕರರು ಗತಿತಾರ್ಕಿಕ ವಿಧಾನದಿಂದ ಬುದ್ಧನನ್ನು ಓದಿದ್ದರು. ಹಾಗಾಗಿ ಅಂಬೇಡ್ಕರರ ಆಲೋಚನ ವಿಧಾನ ಗತಿತಾರ್ಕಿಕ ವಿಧಾನವೇ ಆಗಿದೆ. ಆದ್ದರಿಂದ ಅಂಬೇಡ್ಕರರನ್ನೂ ಕೂಡ ಗತಿತಾರ್ಕಿಕ ವಿಧಾನದ ಮೂಲಕ ಓದಬೇಕು. ■

ವಿಸ್ಮೃತಿ, ಜಾತಿಗಳ ಹುಡುಕಾಟ ಹಾಗೂ ಮೀಸಲಾತಿ: ಒಂದು ಚರ್ಚೆ



೨೦ ಕಾಲಮಾನ

ಡಾ. ಮುಜಾಫ್ಫರ್ ಅಸ್ಸಾದಿ

ಇಂದಿನ ಸಂದರ್ಭದಲ್ಲಿ ನಾಲ್ಕು ಪ್ರಮುಖವಾದ ಚರ್ಚೆಗಳು ನಡೆಯುತ್ತಿವೆ: ಅಲ್ಪ ಸಂಖ್ಯಾತರಲ್ಲಿ ಅದರಲ್ಲೂ ಮುಸ್ಲಿಮರಲ್ಲಿ ಜಾತಿಯ ನೆನಪುಗಳಿಲ್ಲದ ಅಥವಾ ವಿಸ್ಮೃತಿ ಇರುವ ಸಂದರ್ಭದಲ್ಲಿ ಜಾತಿಗಳನ್ನು ಯಾಕೆ ಪುನಃಶ್ಚೇತನಗೊಳಿಸಬೇಕು? ಅಥವಾ ನಿರ್ಮಿಸಬೇಕು? ಎರಡನೇದಾಗಿ, ಅವರಲ್ಲಿರುವ ಜಾತಿಗಳನ್ನು ಗುರುತಿಸಬೇಕೆ? ಮುಸ್ಲಿಮರಿಗೆ ಹಿಂದುಳಿದ ವರ್ಗದೊಳಗೆ ಮೀಸಲಾತಿ ನೀಡಬೇಕೆ? ಅಥವಾ ಅವರಿಗೆ ಪ್ರತ್ಯೇಕವಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ ಮೀಸಲಾತಿ ನೀಡಬೇಕೆ?

ಈ ಚರ್ಚೆಗಳು ಆರಂಭಗೊಂಡದ್ದು ಸಾಚಾರ್ ವರದಿ ನಂತರವೆಂದೇ ಹೇಳಬಹುದು. ಪ್ರಾರಂಭದಲ್ಲಿ ಈ ಚರ್ಚೆ ಅಲ್ಪಸಂಖ್ಯಾತರ "ಅಭಿವೃದ್ಧಿ ಕೊರತೆ," ಅಭಿವೃದ್ಧಿಯ ರಾಜಕಾರಣ, ವ್ಯವಸ್ಥೆಯ ತಾರತಮ್ಯತೆ ಇತ್ಯಾದಿ ಸುತ್ತಾ ಕೇಂದ್ರೀಕೃತವಾಗಿತ್ತು. ಇದೇ ಸಂದರ್ಭದಲ್ಲಿ ಸಾಚಾರ್ ವರದಿ ಎತ್ತಿ ತೋರಿಸಿದ ಮೂರು ಜಾತಿಗಳ ಕುರಿತು ಸಮುದಾಯದೊಳಗೆ ಹಾಗೂ ಹೊರಗೆ ಗಂಭೀರವಾದ ಚರ್ಚೆಗಳಾಗಲೇ ಇಲ್ಲ. ಯಾವಾಗ ಕೇಂದ್ರ ಸರಕಾರ ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗದ ಕೋಟಾದೊಳಗೆ ಶೇಕಡಾ 4.5 ಕೋಟಾವನ್ನು ನಿರ್ಧರಿಸಿತೋ ಆವಾಗ ಜಾತಿಗಳ ಅಸ್ಮಿತೆಯ ಪ್ರಶ್ನೆ ಹಾಗೂ ಚರ್ಚೆ ಉದ್ಭವಿಸಿತು. ಅಷ್ಟು ಮಾತ್ರವಲ್ಲದೇ ಜಾತಿಗಳ ನೆನಪುಗಳಿಲ್ಲದ ಸಂದರ್ಭದಲ್ಲಿ ಜಾತಿಗಳನ್ನು ಹೇಗೆ ನಿರ್ಮಿಸಬಹುದು ಎಂಬ ಕುತೂಹಲಕಾರಿ ಪ್ರಶ್ನೆ ಕೂಡ ಉದ್ಭವಿಸಿತು. ಎರಡನೇದಾಗಿ ಜಾತಿಗಳನ್ನು ರಾಜಕೀಯ ಅಸ್ಮಿತೆಗಾಗಿ ಅಥವಾ ಐಡೆಂಟಿಟಿಗಾಗಿ ನಿರ್ಮಿಸಬೇಕೆ? ಅಥವಾ ಸಾಮಾಜಿಕ ಕಾರಣಗಳಿಗಾಗಿ ನಿರ್ಮಿಸಬೇಕೆ ಎಂಬ ಗೊಂದಲ ಕೂಡ ಹುಟ್ಟಿಕೊಂಡಿತ್ತು. ಅಷ್ಟು ಮಾತ್ರವಲ್ಲದೆ ಚರ್ಚೆಗಳು ಐಡೆಂಟಿಟಿಯ ವಿಷಯಕ್ಕೆ ಮಾತ್ರ ಸೀಮಿತಗೊಳ್ಳಲಿಲ್ಲ, ಹೊರತು ಅದು "ಗುರುತಿಸುವಿಕೆ ರಾಜಕಾರಣ"ವನ್ನು ಒಳಗೊಳ್ಳುತ್ತಾ ಹೋಯಿತು ಹಾಗೂ ಅದರ ಭಾಗವಾಗುತ್ತಾ ಹೋಯಿತು. ಇಲ್ಲಿ ರಾಜಕೀಯ ವ್ಯವಸ್ಥೆ ಜಾತಿಗಳನ್ನು ಗುರುತಿಸಬೇಕಾಗಿರುವುದು ಅತೀ ಮುಖ್ಯವೆಂಬ ವಾದವನ್ನು ಮುಂದಿಡಲಾಯಿತು. ಈ ಗುರುತಿಸುವಿಕೆಗೆ ಬೇರೆ ಬೇರೆ ರೂಪಕಗಳಿದ್ದರೂ, ಮೀಸಲಾತಿ ಒಂದು ಪ್ರಮುಖ ಸಾಧನ ವೆಂಬ ತೀರ್ಮಾನಕ್ಕೂ ಬರಲಾಯಿತು. ಆದಕಾರಣವೇ ಮೀಸಲಾತಿ ಚರ್ಚೆ ಐಡೆಂಟಿಟಿ ರಾಜಕಾರಣದಿಂದ ಆರಂಭಗೊಂಡು "ಗುರುತಿಸುವಿಕೆ" ರಾಜಕಾರಣದ ತನಕ ವಿಸ್ತೃತವಾಯಿತೆಂದರೂ ತಪ್ಪೇನಿಲ್ಲ.

ಅಲ್ಪ ಸಂಖ್ಯಾತರಲ್ಲಿ ಜಾತಿಗಳಿಲ್ಲ ಎಂಬ ವಾದ ಹೊಸತೇನಲ್ಲ. ಇದಕ್ಕೆ ಮೂರು ಕಾರಣಗಳನ್ನು ನೀಡಲಾಗುತ್ತದೆ: ಧರ್ಮ "ಕಬೀಲಾ" "ಖೋಮ್"ಗಳನ್ನು ಒಪ್ಪಿಕೊಳ್ಳುತ್ತದೆಯೇ ಹೊರತು ಜಾತಿಗಳನ್ನಲ್ಲ, ಎರಡನೇದಾಗಿ, ಧರ್ಮದ ಅಂತಿಮ ಗುರಿ "ಮುಸ್ಲಿಂ ಉಮ್ಮಾ"ಗಳನ್ನು ನಿರ್ಮಿಸುವುದೇ ಹೊರತು ಜಾತಿಗಳನ್ನಲ್ಲ, ಮೂರನೇದಾಗಿ, ಹೊಸ ಅಸ್ಮಿತೆ ಸಂದರ್ಭದಲ್ಲಿ ಮತಾಂತರ ಪೂರ್ವದ ಪರಂಪರೆ, ಇತಿಹಾಸದ ನೆನಪುಗಳನ್ನು ಕಳೆದುಕೊಳ್ಳಲೇ ಬೇಕಾದ ಅನಿವಾರ್ಯತೆ ಇದೆ. ಇವೆಲ್ಲಾ ಕಾರಣಕ್ಕಾಗಿ ಅಲ್ಪಸಂಖ್ಯಾತರಲ್ಲಿ ಅದರಲ್ಲೂ ಮುಸ್ಲಿಮರಲ್ಲಿ ಜಾತಿಗಳ ಪರಂಪರೆ ಇಲ್ಲ ಹಾಗೂ ಜಾತಿಯ ನೆನಪುಗಳಿಲ್ಲ ಎಂಬ ತೀರ್ಮಾನಕ್ಕೆ ಕೂಡಲೇ ಬರಲಾಗುತ್ತದೆ.

ಇದರರ್ಥ ಮುಸ್ಲಿಮರಲ್ಲಿ ಜಾತಿಯ ಹುಡುಕಾಟ ಹಾಗೂ ಚರ್ಚೆ ಇರಲಿಲ್ಲವೆಂದಲ್ಲ. ಈ ಚರ್ಚೆಯ ಸಂದರ್ಭದಲ್ಲಿ ಎರಡು ಅಂಶಗಳು ನಮಗೆ ಮತ್ತೆ ಮತ್ತೆ ಮುಖಾಮುಖಿಯಾಗುತ್ತವೆ: ಒಂದೆಡೆ ಗ್ರಂಥ, ಸಂಪ್ರದಾಯ ಹಾಗೂ ಶಾಸ್ತ್ರಬದ್ಧ ರಿಲಿಜಿಯನ್, ಮತ್ತೊಂದೆಡೆ ಸ್ಥಾನೀಯ ಪರಂಪರೆ, ನಂಬಿಕೆ, ಸಾಮಾಜಿಕ ಸಂಬಂಧ ಹಾಗೂ ಪರಂಪರೆಗಳನ್ನೊಳಗೊಂಡ ಸಮುದಾಯ. ಇಸ್ಲಾಂನಲ್ಲಿ ಜಾತಿಯ ಕುರಿತು ಚರ್ಚೆಗಳು ಸೂಕ್ಷ್ಮವಾಗಿ ಬಹಳ ಹಿಂದೇನೆ ಆರಂಭಗೊಂಡರೂ, ಅದಕ್ಕೆ ಆದ್ಯತೆ ದೊರೆತದ್ದು 19ನೇ ಶತಮಾನದಲ್ಲಿ. ಅದರ ಮೂಲ ಇರುವುದು "ಕುಫ" ಎಂಬ ವಿಷಯದಲ್ಲಿ. ವಾಸ್ತವವಾಗಿ ಇದೊಂದು ವೈರುದ್ಧಮಯವಾದ ಸನ್ನಿವೇಷ: ಒಂದೆಡೆ ಜಾತಿಯ ನೆನಪುಗಳನ್ನು ಮರೆಯುತ್ತಾ ಮುಸ್ಲಿಂ "ಉಮ್ಮಾ"ವನ್ನು ನಿರ್ಮಿಸುವ ಯತ್ನ. ಮತ್ತೊಂದೆಡೆ ಜಾತಿಯ ನೆಲೆಗಟ್ಟುಗಳ ಹುಡುಕಾಟದ ಕಾಲ. ವಾಸ್ತವವಾಗಿ ಸಮುದಾಯದೊಳಗೆ ಜಾತಿಗಳ ಕುರಿತು ಮೊತ್ತ ಮೊದಲ ಬಾರಿಗೆ ಬೆಳಕು ಚೆಲ್ಲಿದ್ದು 14ನೇ ಶತಮಾನದಲ್ಲಿ ಮಹಮ್ಮದ್ ಬಿನ್ ತುಘಲಕನ ದರ್ಬಾರಿನಲ್ಲಿದ್ದ ಇಸ್ಲಾಮಿಕ್ ಪಂಡಿತ ಜಿಯಾವುದ್ದೀನ್ ಬರನಿ. ಅವನ "ಫತ್ವ-ಈ ಜಹಂಗದಾರಿ" ಜಾತಿಗಳ ನಡುವಿನ ತಾರತಮ್ಯಗಳನ್ನು ಪುಷ್ಟೀಕರಿಸುತ್ತದೆ. ಅವನೊಬ್ಬ ಇಸ್ಲಾಮಿಕ್ "ಮನು". ಯಾಕೆಂದರೆ ಅವನು ಮುಸ್ಲಿಮರಲ್ಲಿದ್ದ ಮೇಲ್ಜಾತಿಗಳಾದ ಅಶ್ರಫ್ ಪರವಾಗಿ ನಿಂತವನು ಹಾಗೂ ಅವರ ಯಜಮಾನಿಕೆಗೆ ಒತ್ತು ನೀಡಿದವನು. ಅವನ ಪ್ರಕಾರ ಕೆಳಜಾತಿಗಳಾದ ಅಜ್ಲಫ್‌ಗಳು "ನಾಯಿಗಳು, ಹಂದಿಗಳು ಹಾಗೂ ಕರಡಿಗಳು". ಅವರನ್ನು ಜ್ಞಾನದ ಪರಿಧಿಯಿಂದ ಹೊರಗಿಡಬೇಕೆಂದು ವಾದಿಸುತ್ತಾನೆ. ಖ್ಯಾತ ಐತಿಹಾಸಕಾರ ತಾರ ಚಂದ್ ತಮ್ಮ ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾದಲ್ಲಿ ಈ ರೀತಿಯಾಗಿ ವಾದಿಸುತ್ತಾರೆ "All census reports (of India) before 1931 used to give a long list of Muslim castes and there is no doubt whatsoever that in the 18th century, the Muslim inhabitants in India followed the pattern that of the Hindu society... This was un-Islamic but an awakening against it was impossible at that time"

ಜಾತಿಯ ಕುರಿತು ಉಲ್ಲೇಖ ಸಿಗುವುದು ವಿವಿಧ ಜನಗಣತಿಗಳಲ್ಲಿ ಮಾತ್ರವಲ್ಲದೇ, ಸರಕಾರದ ಕೆಲವು ರಿಪೋರ್ಟ್‌ಗಳಲ್ಲಿ. 1919ರಲ್ಲಿ ಅಂದಿನ ಮೈಸೂರು ಸಂಸ್ಥಾನ ತಂದ "ಕಾಸ್ಟ್ ಆಂಡ್ ಟ್ರೈಬ್ ಇನ್ ಮೈಸೂರು" ಸೂಕ್ಷ್ಮವಾಗಿ ಪಿಂಡಾರಿ, ಪಿಂಜಾರಿ ಇತ್ಯಾದಿ ಜಾತಿಗಳ ಕುರಿತು ಪ್ರಸ್ತಾವನೆಯನ್ನು ಮಾಡುತ್ತದೆ. ಸ್ವಾತಂತ್ರೋತ್ತರ ಕಾಲಾವಧಿಯಲ್ಲಿ ಬಂದ ಪೀಪಲ್ಸ್ ಆಫ್ ಇಂಡಿಯಾ ಪ್ರೊಜೆಕ್ಟ್ ಕೂಡ ಜಾತಿಯ ಅಸ್ತಿತ್ವವನ್ನು ಎತ್ತಿ ತೋರಿಸುತ್ತದೆ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಅನಿವಾರ್ಯ: ಮುಸ್ಲಿಮರಲ್ಲಿ ಕಟ್ಟುನಿಟ್ಟಾಗಿರುವ ಜಾತಿ ವ್ಯವಸ್ಥೆ ಹಾಗೂ ಜಾತಿ ಪ್ರಜ್ಞೆ ಇದೆಯೇ? ಅಥವಾ ಶಿಥಿಲಗೊಂಡಿರುವ ಚೌಕಟ್ಟುಗಳಿವೆ? ಜಾತಿಯ ಕುರಿತಂತೆ ವಿಸ್ಮೃತಿ ಅಥವಾ ನೆನಪುಗಳಿಲ್ಲದ ಸಂದರ್ಭದಲ್ಲಿ ಜಾತಿ ಪ್ರಮುಖವಾಗುವುದೇ ಇಲ್ಲ, ಅಲ್ಲಿ ಜಾತಿ ತೆಳು ಪದರವಾಗಿ ಹರಡಿರುತ್ತದೆ. ಉಳಿದ ಸಂದರ್ಭದಲ್ಲಿ ಜಾತಿ ವ್ಯವಸ್ಥೆಯ ಗಟ್ಟಿತನವನ್ನು ಹಾಗೂ ಪ್ರಜ್ಞೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಿಂದುಗಳಲ್ಲಿರುವ ಜಾತಿಗಳಿರುವಂತೆ ಮುಸ್ಲಿಮರಲ್ಲಿಯೂ ಜಾತಿ ವ್ಯವಸ್ಥೆ ಇರುವುದು ವಾಸ್ತವ. ಮತಾಂತರ ಪೂರ್ವದ ಜಾತಿವ್ಯವಸ್ಥೆ ಮತಾಂತರದ ನಂತರವೂ ಮುಂದುವರೆಯುತ್ತಾ ಹೋಗುತ್ತಿರುವುದನ್ನು ಭಾರತದ ಉದ್ದಗಲಕ್ಕೂ ನೋಡಬಹುದು. ಇದಕ್ಕೆ ಕಾರಣ ಬಹು ಸಂಖ್ಯಾತ ಭಾರತದ ಮುಸ್ಲಿಮರು ಮೂಲತಃವಾಗಿ ಹಿಂದುಗಳು ಎಂಬುವುದನ್ನು ಮರೆಯಬಾರದು. ಹಿಂದುಗಳಲ್ಲಿ ನಾಲ್ಕು ಜಾತಿಗಳು ಪ್ರಮುಖವಾಗಿದ್ದರೆ, ಅಲ್ಪಸಂಖ್ಯಾತರಲ್ಲಿ ಮೂರು ಪ್ರಮುಖವಾದ ಜಾತಿಗಳಿವೆ. ಇದನ್ನು "ಝಾತ್" ಎಂದೆಲ್ಲಾ ಕರೆಯುತ್ತಾರೆ. ಈ ಚೌಕಟ್ಟಿನೊಳಗೆ ಉಳಿದ ಜಾತಿಗಳಿರುವುದು ಕೂಡ ಅಷ್ಟೇ ವಾಸ್ತವ. ಮೊದಲನೇದಾಗಿ, ಮೇಲ್ಜಾತಿಗೆ ಸೇರಿದ ಅಶ್ರಫ್‌ಗಳಿದ್ದಾರೆ. ಇದರಲ್ಲಿ ಶೇಖ್, ಸಯ್ಯದ್, ಮೋಘಲ್ ಹಾಗೂ ಪಠಾಣ್ ಎಂಬ ನಾಲ್ಕು ಜಾತಿಗಳನ್ನು ಸೇರಿಸಬಹುದು. ಇವರಲ್ಲಿಯೂ ಶ್ರೇಣಿಕೃತ ವ್ಯವಸ್ಥೆ ಇದೆ. ಇವರಲ್ಲಿ ಸಯ್ಯದ್ ಜಾತಿಗಳು ತಮ್ಮನ್ನು ತಾವು ಅತೀ ಶ್ರೇಷ್ಠ ಜಾತಿಗೆ ಸೇರಿದವರು ಅಥವಾ "ಊಂಚಿ ಝಾತ್" ಎಂದು ಕರೆದುಕೊಳ್ಳುತ್ತಾರೆ. ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಯ್ಯದ್ ಜಾತಿ ನಂತರ ಶೇಖ್, ಮೋಘಲ್ ಹಾಗೂ ಪಠಾಣ್ ಬರುತ್ತಾರೆ. ಸಯ್ಯದ್‌ಗಳು ತಮ್ಮ ಮೂಲವನ್ನು

ಹಿಂದುಗಳಲ್ಲಿರುವಂತೆ ಮುಸ್ಲಿಂ ಜಾತಿಗಳಲ್ಲಿ ಜಾತಿಯ ಸ್ಥಾನಮಾನದ ಕುರಿತು ತಾಕಲಾಟಗಳಿವೆ. ಇದು ಸಂಸ್ಕೃತೀಕರಣದ ತಾಕಲಾಟವೂ ಹೌದು. ಕೆಳ ಜಾತಿಗಳು ಮೇಲ್ಜಾತಿಯ ಸ್ಥಾನಮಾನಕ್ಕಾಗಿ ಮಾಡುವ ಕಸರತ್ತು ಇಲ್ಲಿ ಸ್ಪಷ್ಟ. ಇದಕ್ಕೆ ಉತ್ತರ ಪ್ರದೇಶದ ಕಿದ್ವಾಯಿ, ಹರಿಯಾಣದ ಮೇವಾಟಿ ಅಥವಾ ಮಿಯೋಗಳನ್ನು ಉದಾಹರಣೆಯಾಗಿ ಅಥವಾ ನಿದರ್ಶನವಾಗಿ ನೀಡಬಹುದು.

ಪ್ರವಾದಿಯ ಕುಟುಂಬದೊಂದಿಗೆ ಗುರುತಿಸಿದರೆ, ಶೇಖ್‌ಗಳು ತಮ್ಮ ಮೂಲವನ್ನು ಅರಬ್ ಸಂಸ್ಕೃತಿಯಲ್ಲೂ, ಮೋಘಲರು ಸೆಂಟ್ರಲ್ ಏಷ್ಯಾದಲ್ಲೂ, ಪಠಾಣರು ಅಫಘಾನಿಸ್ಥಾನದಲ್ಲೂ ಹುಡುಕುತ್ತಾರೆ. ಈ ಜಾತಿಗಳು ಅರಸೊತ್ತಿಗೆಯೊಂದಿಗೆ ನಿಕಟ ಸಂಬಂಧವನ್ನು ಹಾಗೂ ಆಳುವ ವರ್ಗದ ಭಾಗವಾಗಿದ್ದವರು. ಭೂ ಸಂಬಂಧಿ ವಿಷಯಗಳ ಸಂದರ್ಭದಲ್ಲಿ ಅಶ್ರಫ್‌ಗಳನ್ನು ಜಾಜ್‌ಮಾನ್‌ಗಳೆಂದು, ಅವರ ಕೆಳಗೆ ಗೇಣಿದಾರರಾಗಿ, ಬಿಟ್ಟಿ ಚಾಕರಿಗಳನ್ನು ಮಾಡುತ್ತಿದ್ದ ವ್ಯಕ್ತಿಗಳನ್ನು ಕಾಮಿನ್‌ಗಳೆಂದು ಕರೆಯುವ ಪರಿಪಾಠ ಇತ್ತು ಎಂದರೂ ತಪ್ಪಾಗಲಾರದು.

ಅಶ್ರಫೇತರಲ್ಲಿ ಹಿಂದೂ ಧರ್ಮದಿಂದ ಮತಾಂತರಗೊಂಡ ಹಿಂದುಳಿದ ವರ್ಗಗಳನ್ನು ಹಾಗೂ ದಲಿತರನ್ನು ಗುರುತಿಸಬಹುದು. ಇಲ್ಲಿಯೂ ಶ್ರೇಣೀಕೃತ ವ್ಯವಸ್ಥೆ ಇರುವುದನ್ನು ಬಹಳಷ್ಟು ಸಲ ಗುರುತಿಸಲಾಗುತ್ತದೆ. ವಿಚಿತ್ರವೆಂದರೆ ಉತ್ತರ ಭಾರತದಲ್ಲಿರುವ ಗೋತ್ರ ಪದ್ಧತಿ ಇಂದಿಗೂ ಅಲ್ಪಸಂಖ್ಯಾತ ಹಿಂದುಳಿದ ವರ್ಗಗಳಲ್ಲಿ ಚಾಲ್ತಿಯಲ್ಲಿದೆ. ಇದು ಜಾಟ್ ಮುಸ್ಲಿಮರಲ್ಲಿ ಪ್ರಮುಖವಾಗಿ ಕಂಡು ಬಂದರೂ, ಅದು ಉತ್ತರಭಾರತ ಹಾಗೂ ಪಶ್ಚಿಮ ಪಾಕಿಸ್ತಾನದಲ್ಲಿ ಈಗಲೂ ನೋಡಬಹುದು. 1911ರ ಜನಗಣತಿ 150ಕ್ಕೂ ಹೆಚ್ಚು ಗೋತ್ರಗಳಿರುವುದನ್ನು ದಾಖಲಿಸಿತ್ತು. ಅವುಗಳಲ್ಲಿ ಪ್ರಮುಖವೆಂದರೆ ಔಲಕ್, ಬಜ್ವ ಬಾಲ್, ಚಾಹಲ್, ಚಾದರ್, ಗಿಲ್, ಧರಿವಾಲ್, ಧಿಲ್ಲಾನ್, ಹಂಜ್ರ, ಹುಂಡಾಲ್, ಖಲೋನ್, ಸೋಹಾಲ್ ಬೈನ್ಸ್, ಸಮ್ರ, ವಿರ್ಕ್ ಇತ್ಯಾದಿ. ಇವತ್ತಿಗೂ ಈ ಗೋತ್ರಗಳಲ್ಲಿ ಸ್ವಗೋತ್ರ ಮದುವೆ ನಿಷಿದ್ಧ.

ಗೋತ್ರ ಪದ್ಧತಿಯೊಂದಿಗೆ ಹುಟ್ಟಿಕೊಂಡದ್ದು ಜಾತಿ ಪಂಚಾಯತಿಗಳು. ಸರಕಾರಿ ಪಂಚಾಯತಿಗಳಿಂತಲೂ ಅತ್ಯಂತ ಶಕ್ತಿಶಾಲಿಯಾಗಿರುವ ಹಾಗೂ ಪರ್ಯಾಯ ಸಂಸ್ಥೆಗಳೆಂದರೆ ಜಾತಿ ಪಂಚಾಯತ್‌ಗಳು. ಪ್ರತೀಯೊಂದು ಜಾತಿ ತನ್ನ ಜಾತಿ ಪಂಚಾಯತಿಗಳ ಮೂಲಕ ಸಮುದಾಯವನ್ನು ನಿಯಂತ್ರಣದಲ್ಲಿಡುತ್ತದೆ. ಜಾತಿ ಪಂಚಾಯಿತಿ ಅಶ್ರಫೇತರಲ್ಲಿ ಅದರಲ್ಲೂ ಹಿಂದುಳಿದ ವರ್ಗಗಳಲ್ಲಿ ದಟ್ಟವಾಗಿದೆ ಎಂದರೂ ತಪ್ಪಲ್ಲ. ಇದು "ಬಿರಾದರಿ" ಎಂಬ ಸಾಮಾಜಿಕ ವ್ಯವಸ್ಥೆಯ ಒಂದು ಭಾಗ. ಈ ಜಾತಿ ಪಂಚಾಯತ್‌ಗಳು ಅಂತರ್ ಜಾತಿಯ ಸಂಬಂಧಗಳನ್ನು, ಗೋತ್ರದ ಸಮಸ್ಯೆಗಳನ್ನು, ವಿವಿಧ ಭಿನ್ನಾಭಿಪ್ರಾಯಗಳನ್ನು ಪರಿಹರಿಸುತ್ತದೆ. ದುರಂತವೆಂದರೆ ಈ ಜಾತಿ ಪಂಚಾಯತ್‌ಗಳ ತೀರ್ಮಾನವೇ ಅಂತಿಮ. ಯಾರು ಕೂಡ ಅದರ ತೀರ್ಮಾನವನ್ನು ಧಿಕ್ಕರಿಸಲು ಸಾಧ್ಯವಿಲ್ಲ. ಇದು ಅದರ ಶಕ್ತಿಯನ್ನು ಕೂಡ ಎತ್ತಿ ತೋರಿಸುತ್ತದೆ.

ಈ ಶ್ರೇಣೀಕೃತ ವ್ಯವಸ್ಥೆಯ ಒಂದು ಪ್ರಮುಖ ಅಂಶವೆಂದರೆ ಮಡಿ–ಮೈಲಿಗೆ. ಶೂದ್ರ ಹಾಗೂ ಅತೀ ಶೂದ್ರರ ನಡುವೆ ಇರುವ ಮಡಿ ಮೈಲಿಗೆ ಅಲ್ಪಸಂಖ್ಯಾತರಲ್ಲೂ ಇದೆ ಎಂಬುದು ವಾಸ್ತವ. ಉತ್ತರ ಪ್ರದೇಶದಲ್ಲಿ ಮಿರಾಸಿಗಳು (ಹಾಡುಗಾರರು) ತಮ್ಮನ್ನು ತಾವು ನಾಯಿಸ್(ಕೌರಿಕ) ಜಾತಿಗಳಿಂದ ಮೇಲ್ಜಾತಿಗಳೆಂದು ವಾದಿಸುತ್ತಾರೆ. ಯಾಕೆಂದರೆ ಮಿರಾಸಿ ಮಹಿಳೆಯರು ಅಶ್ರಫ್ ಮಹಿಳೆಯೊಂದಿಗೆ ಮಡಿ–ಮೈಲಿಗೆಯ ತಕರಾರುಗಳಿಲ್ಲದೇ ಹಾಡುಗಳನ್ನು ಹಾಡಬಹುದು ಎಂಬ ಒಂದೇ ಒಂದು ಕಾರಣ ಇಲ್ಲಿ ಪ್ರಮುಖವಾಗುತ್ತದೆ. ಅದೇ ರೀತಿ ಧೋಬಿ, ಹಲಾಲ್ಖೋರ್, ಕಾಟಿ ಎಂಬುದು ಕೂಡ ಒಂದು ಅಶುದ್ಧ ಕಸುಬು ಎಂಬ ಪರಿಕಲ್ಪನೆ ಇದೆ. ವಿಚಿತ್ರವೆಂದರೆ ಇವುಗಳು ಕೆಲವೊಮ್ಮೆ ವರ್ಗಗಳ ರೂಪಕಗಳಾಗಿ ಪರಿವರ್ತಿತವಾಗುತ್ತವೆ. ಒಂದಂತೂ ಸ್ಪಷ್ಟ: ದಲಿತ ಮುಸ್ಲಿಮರಲ್ಲಿ ಈಗಲೂ ಕೆಲವು ಜಾತಿಗಳು ಮತಾಂತರ ಪೂರ್ವ ಕಸುಬುಗಳಾದ ಮಲ ಹೊರುವ ಪದ್ಧತಿ, ಸತ್ತ ಜಾನುವಾರುಗಳನ್ನು ಸುಲಿಯುವ ಕಸಬು, ಸ್ಮಶಾನದಲ್ಲಿ ಹೆಣಗಳನ್ನು ಹೂಳುವ ಕಸುಬುಗಳನ್ನು ಉಳಿಸಿರುವುದು ಅಷ್ಟೇ ವಾಸ್ತವ. ದಲಿತ ಮುಸ್ಲಿಮರಿಗಾಗಿಯೇ ಸೀಮಿತಗೊಂಡ ಮಸೀದಿಗಳಿವೆ, ಸ್ಮಶಾನಗಳಿವೆ. ಈ ಜಾತಿಗಳು ಅಶ್ರಫ್‌ರವರನ್ನು ಮುಟ್ಟಬಾರದೆಂಬ ಸಾಮಾಜಿಕ ನಿರ್ಬಂಧಗಳು ಈಗಲೂ ಚಾಲ್ತಿಯಲ್ಲಿವೆ. ಇಲ್ಲಿರುವ ವಿಶಿಷ್ಟತೆ ಎಂದರೆ ಮೈಲಿಗೆಯಿಂದ ಶುದ್ಧೀಕರಣಗೊಳ್ಳಲು ಸುಧೀರ್ಘ ಶಾಸ್ತ್ರೋಕ್ತ ಸಂಪ್ರದಾಯವನ್ನು ಅನುಸರಿಸಬೇಕಾಗಿಲ್ಲ. ಒಂದು ಸ್ನಾನ ಸಾಕು. ಮತ್ತೊಂದು ವಿಚಿತ್ರವೆಂದರೆ ಈ ಮಡಿ–ಮೈಲಿಗೆಗಳಲ್ಲಿ ವ್ಯಕ್ತಿ ಮಾತ್ರ ಹೊಣೆಗಾರನಾಗುತ್ತಾನೇ ಹೊರತು ಇಡೀ ಸಮುದಾಯವಲ್ಲ. ಆದಕಾರಣ ದಲಿತ– ಮುಸ್ಲಿಂ ಹಾಗೂ ಮೇಲ್ಜಾತಿಯ ಮುಸ್ಲಿಮರ ನಡುವೆ ಭೀಕರವಾದ ಘರ್ಷಣೆ ಅಥವಾ ತಿಕ್ಕಾಟಗಳ ನಿದರ್ಶನಗಳು ದೊರೆಯುವುದಿಲ್ಲ. ಚಿಕ್ಕ ಪುಟ್ಟ ತಿಕ್ಕಾಟಗಳಷ್ಟೇ ಕಂಡು ಬರುತ್ತವೆ.



ಹಿಂದುಗಳಲ್ಲಿರುವಂತೆ ಮುಸ್ಲಿಂ ಜಾತಿಗಳಲ್ಲಿ ಜಾತಿಯ ಸ್ಥಾನಮಾನದ ಕುರಿತು ತಾಕಲಾಟಗಳಿವೆ. ಇದು ಸಂಸ್ಕೃತೀಕರಣದ ತಾಕಲಾಟವೂ ಹೌದು. ಕೆಳ ಜಾತಿಗಳು ಮೇಲ್ಜಾತಿಯ ಸ್ಥಾನಮಾನಕ್ಕಾಗಿ ಮಾಡುವ ಕಸರತ್ತು ಇಲ್ಲಿ ಸ್ಪಷ್ಟ. ಇದಕ್ಕೆ ಉತ್ತರ ಪ್ರದೇಶದ ಕಿದ್ವಾಯಿ, ಹರಿಯಾಣದ ಮೇವಾಟಿ ಅಥವಾ ಮಿಯೋಗಳನ್ನು ಉದಾಹರಣೆಯಾಗಿ ಅಥವಾ ನಿದರ್ಶನವಾಗಿ ನೀಡಬಹುದು. ಕಿದ್ವಾಯಿಗಳು ತಮ್ಮನ್ನು ತಾವು ಸಯ್ಯದ್ ಜಾತಿಗೆ ಸೇರಿದ ಶ್ರೇಷ್ಠರೆಂದೂ ವಾದಿಸಿದರೂ, ಬಹಳಷ್ಟು ಸಂದರ್ಭದಲ್ಲಿ ಅವರನ್ನು ಶೇಖ್ ಜಾತಿಯ ಉಪ ಜಾತಿಯ ರೂಪವಾಗಿ ಚಿತ್ರಿಸಲಾಗುತ್ತದೆ.

ಇದಕ್ಕೆ ಸರಿಯಾಗಿ ಮತ್ತೊಂದು ಸಮಸ್ಯೆ ಇದೆ. ಅದು ಜಾತಿಯ ಸ್ಥಾನಮಾನದ ಸಮಸ್ಯೆ. ಒಂದು ಪ್ರಾಂತ್ಯದಲ್ಲಿ ಒಂದು ಜಾತಿ ಹಿಂದುಳಿದ ಜಾತಿಯಾಗಿರುತ್ತದೆ ಮತ್ತೊಂದು ಪ್ರಾಂತ್ಯದಲ್ಲಿ ಅದರ ಸಾಮಾಜಿಕ ಸ್ಥಾನಮಾನ ಬೇರೆಯಾಗಿರುತ್ತದೆ. ಉತ್ತರ ಪ್ರದೇಶ ಹಾಗೂ ಬಿಹಾರಿನ ತೇಲಿಗಳು (ಹಿಂದುಗಳ ಗಾಣಿಗರು) ಬೇರೆ ಪ್ರಾಂತ್ಯದಲ್ಲಿ ಶೇಖ್ ಮನ್ಸೂರಿಗಳಾಗುತ್ತಾರೆ. ವಾಸ್ತವವಾಗಿ ಸಾಮಾಜಿಕವಾಗಿ ತೇಲಿಗಳು ತಮ್ಮನ್ನು ತಾವು ಮೇಲ್ಜಾತಿಯ ಶೇಖ್‌ಗಳೆಂದು ಗುರುತಿಸುತ್ತಾರೆ. ಇವರಿಗಿರುವ ಇನ್ನೊಂದು ಸಮಸ್ಯೆಯೆಂದರೆ ಉಪ–ಜಾತಿಗಳ ಸಮಸ್ಯೆ. ಉತ್ತರ ಪ್ರದೇದಲ್ಲಿ ತೇಲಿಗಳಲ್ಲಿ ನಾಲ್ಕು ಉಪ–ಜಾತಿಗಳಿವೆ: ತುರ್ಕಿಯಾ, ಲಕಸ್ನ, ದೊಅಸ್ನಮ ಹಾಗೂ ದೆಸೆ. ದೆಹಲಿಯಲ್ಲಿ ಎರಡು ಉಪಜಾತಿಗಳಿವೆ–ತೇಲಿ ಹಾಗೂ ತೇಲಿ ದುನಿಯಾ. ಹರಿಯಾಣದಲ್ಲಿ ಅನೆ ಎಂಬ ಉಪ ಜಾತಿ ಇದೆ.

ಈ ಎಲ್ಲಾ ಜಾತಿಗಳು ಬರೇ ಉರ್ದು ಭಾಷಿಕರೆಂದರೂ ಸುಳ್ಳಾಗುತ್ತದೆ. ಬಿಹಾರದ ತೇಲಿಗಳು ಮೂಲತಃವಾಗಿ ಟರ್ಕಿಗಳೆಂದು ಹೇಳಿದರೂ ಅವರ ವ್ಯವಹಾರಿಕ ಭಾಷೆ ಭೋಜ್‌ಪುರಿ. ಹರಿಯಾಣದಲ್ಲಿ ಅವರ ವ್ಯವಹಾರಿಕ ಭಾಷೆ ಹರಿಯಾಣ್ವಿ.

ಜಾತಿ ಸಂಖ್ಯೆಗಳ ರಾಜಕಾರಣ ಇವತ್ತಿಗೂ ಮುಗಿಯದ ಅಧ್ಯಾಯ. ಇದಕ್ಕೆ ಕಾರಣ ಜಾತಿಗಳ ಸಂಖ್ಯೆಯಲ್ಲಿ ನಿರ್ಧಿಷ್ಟವಿಲ್ಲದಿರುವುದು ಒಂದು ಕಾರಣವಾದರೆ, ಮತ್ತೊಂದೆಡೆ ಜಾತಿಗಳು ಸರಕಾರಿ ಪಟ್ಟಿಯಲ್ಲಿ ಬರಲು ಪ್ರಯತ್ನಿಸುತ್ತಿರುವುದು ಮತ್ತೊಂದು ಕಾರಣ. ವಾಸ್ತವವಾಗಿ ದಲಿತ–ಮುಸ್ಲಿಂ ಹಾಗೂ ಮುಸ್ಲಿಂ–ಹಿಂದುಳಿದ ವರ್ಗದ ಸಂಖ್ಯೆಯಲ್ಲಿ ಒಂದು ನಿರ್ಧಿಷ್ಟತೆ ಇಲ್ಲ. ಅದು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಾ ಹೋಗುತ್ತದೆ. ಪಂಜಾಬ್‌ನಲ್ಲಿ 9 ಜಾತಿಗಳನ್ನು ಹಿಂದುಳಿದ ವರ್ಗಗಳೆಂದು ಗುರುತಿಸಿದರೆ, ಮಹಾರಾಷ್ಟ್ರದಲ್ಲಿ 20, ಮಧ್ಯಪ್ರದೇಶದಲ್ಲಿ 37, ಹರಿಯಾಣ 7, ಗುಜರಾತ್ 34, ದೆಹಲಿ 20, ಬಿಹಾರ್ 31, ಉತ್ತರ ಪ್ರದೇಶ 40, ಪಶ್ಚಿಮ ಬಂಗಾಲದಲ್ಲಿ 54 ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಸಾಚಾರ್ ವರದಿ ಪ್ರಕಾರ 31.7% ಜನಸಂಖ್ಯೆ ಹಿಂದುಳಿದ ವರ್ಗಗಳಿಗೆ ಸೇರಿದ್ದವು. ವಾಸ್ತವವಾಗಿ ಹಿಂದುಳಿದ ವರ್ಗಗಳ ಪಟ್ಟಿ ಕೇಂದ್ರ ಸರಕಾರದ ಪಟ್ಟಿಯೂ ಹೌದು. ಇದರರ್ಥ ಹಿಂದುಳಿದ ವರ್ಗಗಳ ಪಟ್ಟೀಕರಣದ ರಾಜಕಾರಣ ಮುಗಿದಿದೆ ಎಂದರ್ಥವಲ್ಲ. ಬಹಳಷ್ಟು ಹಿಂದುಳಿದ ವರ್ಗಗಳು ರಾಜ್ಯದ ಪಟ್ಟಿಯಲ್ಲಿದ್ದರೂ, ಕೇಂದ್ರದ ಪಟ್ಟಿಯೊಳಗೆ ಸೇರಿಲ್ಲ. ವಾಸ್ತವವಾಗಿ ಇಲ್ಲೊಂದು ಸಮಸ್ಯೆ ಇದೆ. ಆ ಸಮಸ್ಯೆ ಮಂಡಲ್ ಆಯೋಗದ ಕಾಲದಿಂದಲೇ ಆರಂಭಗೊಂಡಿತ್ತು.

ಆಯೋಗ ಹಿಂದುಳಿದ ವರ್ಗ ಹಾಗೂ ದಲಿತ–ಮುಸ್ಲಿಂರನ್ನು ಬೇರ್ಪಡಿಸದೇ ಎಲ್ಲರನ್ನೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿದ್ದು ಸಮಸ್ಯೆಗೆ ಕಾರಣವಾಯಿತು. ಆದಕಾರಣ ದಲಿತ–ಮುಸ್ಲಿಮರ ನಿಖರವಾದ ಪಟ್ಟಿ ದೊರೆಯುವುದೇ ಇಲ್ಲ. ಇದರ ಫಲಶ್ರುತಿ ಎಂದರೆ ದಲಿತ ಮುಸ್ಲಿಂ ಪಟ್ಟಿಯಲ್ಲಿ ಜಾತಿಗಳನ್ನು ಸೇರಿಸಲು ಜಾತಿಗಳ ಕಸರತ್ತು. ಇದು ಐಡೆಂಟಿಟಿ ರಾಜಕಾರಣದ ಒಂದು ಭಾಗ. ಹರಿಯಾಣದ ನಿಯೋಗಳು ತಮ್ಮನ್ನು ಪರಿಶಿಷ್ಟ ಪಂಗಡದೊಳಗೆ ಸೇರಿಸಲು ಯತ್ನಿಸುತ್ತಿರುವುದನ್ನು ಇಲ್ಲಿ ದಾಖಲಿಸಬೇಕು. ವಿಚಿತ್ರವೆಂದರೆ ಲಕ್ಷದ್ವೀಪದಲ್ಲಿರುವ ಎಲ್ಲಾ ಮುಸ್ಲಿಮರು ಪರಿಶಿಷ್ಟ ಪಂಗಡ ಪಟ್ಟಿಯೊಳಗೆ ಬರುತ್ತಾರೆ.

ಇದು ಗುರುತಿಸುವಿಕೆ ರಾಜಕಾರಣದ ಹೊಸ ಮುಖವನ್ನು ಎತ್ತಿತೋರಿಸುತ್ತದೆ.

ಇದೇ ಸಂದರ್ಭದಲ್ಲಿ ಮತ್ತೊಂದು ಚರ್ಚೆ ಇದೆ. ದಕ್ಷಿಣ ಭಾರತದಲ್ಲಿ ಈ ರೀತಿಯ ಜಾತಿಯ ಚೌಕಟ್ಟುಗಳು ನಿರ್ಮಾಣಗೊಂಡಿವೆಯೇ? ಜಾತಿಗಳ ನೆನೆಪುಗಳು ಕರ್ನಾಟಕದಲ್ಲಿ, ಕೇರಳದಲ್ಲಿ ಎಷ್ಟು ಗಟ್ಟಿಯಾಗಿವೆ? ವಾಸ್ತವವಾಗಿ ಜಾತಿಯ ವಿಸ್ಮೃತಿ ಕರ್ನಾಟಕ ಅಥವಾ ದಕ್ಷಿಣ ಭಾರತದಲ್ಲಿ ದಟ್ಟವಾಗಿದೆಯೇ ಹೊರತು ಉತ್ತರ ಭಾರತದಲ್ಲಿ ಅಲ್ಲ. ಕರ್ನಾಟದಲ್ಲಿ ಜಾತಿಯ ಗುರುತಿಸುವಿಕೆ ಬಹಳ ಹಿಂದಯೇ ಆಗಿತ್ತು. ವಾಸ್ತವವಾಗಿ ಮುಸ್ಲಿಮರನ್ನು ಒಂದೆಡೆ ಸಮಷ್ಟಿ ಸಮುದಾಯವಾಗಿ ಹಾಗೂ ಇನ್ನೊಂದೆಡೆ ಹಿಂದುಳಿದ ವರ್ಗವಾಗಿ ಗುರುತಿಸುವ ಪ್ರಕ್ರಿಯೆ ಆರಂಭಗೊಂಡದ್ದು 1910ರ ದಶಕದ ಮಿಲ್ಲರ್ ಆಯೋಗದಿಂದಲೇ ಎಂದು ಹೇಳಬಹುದು. ತದನಂತರ ಹಾವನೂರ್ ಆಯೋಗ ಜಾತಿಗಳನ್ನು ಹಿಂದುಳಿದ ವರ್ಗದಲ್ಲಿ ಗುರುತಿಸಿದ್ದನ್ನು ಮರೆಯಬಾರದು. ಆದರೆ ಅದು "ದಲಿತ ಮುಸ್ಲಿಂ" ಎಂಬ ಅಸ್ಮಿತೆಗಳನ್ನು ಗುರುತಿಸಲೇ ಇಲ್ಲ. ಇವತ್ತು ಕೇಂದ್ರ ಸರಕಾರದ ಪಟ್ಟಿಯಲ್ಲಿ ಕರ್ನಾಟಕದ ಹತ್ತು ಹಲವು ಮುಸ್ಲಿಂ ಜಾತಿಗಳಿವೆ: ಬಾಗ್ಬಾನ್, ಬ್ಯಾರಿ, ಚೌಶ್, ಚಪ್ಪರ್ ಬಂದ, ಕೊಡಗು ಮಾಪಿಳ್ಳ, ಕೊಂಕಣಿ ಮುಸ್ಲಿಂ, ಮಾಪಿಳ್ಳ, ನವಾಯತ್, ಹಾಗೂ ಸಿದ್ದಿ, ವಾಸ್ತವವಾಗಿ ಮುಸ್ಲಿಂ ಸಿದ್ದಿಗಳು ಪರಿಶಿಷ್ಟ ಪಂಗಡದ ಭಾಗವಾಗಿದ್ದಾರೆ.

ಜಾತಿಯ ವಿಷಯ ಈಗ ಸಂಘಟಿತವಾದ ಹೋರಾಟದ ರೂಪವನ್ನು ಪಡೆಯುತ್ತಿದೆ. ಬಿಹಾರ್‌ನಲ್ಲಿ ಈಗಾಗಲೇ ಎರಡು ಸಂಘಟನೆಗಳು ದಲಿತ–ಮುಸ್ಲಿಮರಿಗಾಗಿ ಕೆಲಸ ಮಾಡುತ್ತಿದೆ: ಅದರಲ್ಲಿ ಆಲ್ ಇಂಡಿಯಾ ಯನೈಟೆಡ್ ಮುಸ್ಲಿಂ ಮೋರ್ಚ ಹಾಗೂ ಆಲ್ ಇಂಡಿಯಾ ಪಾಸ್ಮಂಡ ಮುಸ್ಲಿಂ ಮಹಜ್. ಮಹಾರಾಷ್ಟ್ರದಲ್ಲೂ ಒಂದು ಸಂಘಟನೆ ಅಖಿಲ ಮಹಾರಾಷ್ಟ್ರ ಖಾಟಿಕ್ ಸಮಾಜ್ (Akhil Maharastra Khatik Samaj (AMKS) ಈ ನಿಟ್ಟಿನಲ್ಲಿ ಹೋರಾಟ ನಡೆಸುತ್ತಿದೆ. ಮೊದಲಿನ ಎರಡು ಸಂಘಟನೆಗಳು ಮೀಸಲಾತಿಯ ಅವಶ್ಯಕತೆಯನ್ನು ಎತ್ತಿ ಹಿಡಿದರೆ, ಕಾಟಿಕ್ ಸಮಾಜ ದಲಿತ–ಮುಸ್ಲಿಮರನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲು ಯತ್ನ ಮಾಡುತ್ತಿದೆ. ಅದರಲ್ಲೂ ಜಾತಿಗಳಾದ ನಾರ್, ಬಕ್ಕೋ, ಬಟಿಯಾರ, ಕುಂಜ್ರ, ಧುನಿಯ, ಕಲಾಲ್, ದಫಾಲಿ, ಹಲಾಲ್ಖೋರ್, ಧೋಬಿ ಲಾಲ್ಬೆಗಿ, ಗೋರ್ಕಣ್, ಮೀರ್ಶಿಕರ್, ಚೀಕ್, ರಂಘ್, ದರ್ಜಿ, ಮೋಚಿ, ಮುಖ್ರಿಸ್, ಹಾಗೂ ಗರುಡಿಸ್ಮ ಇತ್ಯಾದಿಗಳನ್ನು ಪರಿಶಿಷ್ಟ ಜಾತಿಯೊಳಗೆ ಸೇರಿಸಲು ಯತ್ನ ಮಾಡುತ್ತಿದೆ. ವಾಸ್ತವವಾಗಿ 1950ರ ರಾಷ್ಟ್ರಪತಿಯ ಆರ್ಡರ್ ಈ ಜಾತಿಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಿಂದ ಧರ್ಮ(ರಿಲಿಜಿಯನ್)ದ ಕಾರಣಕ್ಕಾಗಿ ಹೊರಗಿಟ್ಟಿತ್ತು. ಈ ವರ್ಗಗಳು 1935ರ ಸುಮಾರಿಗೆ ಸರಕಾರದ "ಅತ್ಯಂತ ಹಿಂದುಳಿದ ವರ್ಗ"ಗಳ ಪಟ್ಟಿಯಲ್ಲಿ ಸೇರಿದ್ದವು. 1950ರ ಆರ್ಡರ್ ಅವರನ್ನು ಈ ರೀತಿಯ ಪಟ್ಟಿಯಿಂದ ಹೊರಗಿಟ್ಟಿತ್ತು. ಇವತ್ತು ಮುಸ್ಲಿಂರಲ್ಲಿ ಕಡಿಮೆಯೆಂದರೆ 35 ದಲಿತ ಜಾತಿಗಳಿರುವುದನ್ನು ಕುಮಾರ್ ಸುರೇಶ್ ಸಿಂಘ್ ಸಮಿತಿ ಈಗಾಗಲೇ ಉಲ್ಲೇಖಿಸಿದೆ. ಅಲ್ಲದೇ ಮತಾಂತರ ಪೂರ್ವದ ಕಸುಬುಗಳನ್ನು ಮಾಡುತ್ತಿರುವುದನ್ನು ಅದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಸಾಚಾರ್ ವರದಿಯಲ್ಲಿ ದಲಿತ ಜಾತಿಗಳ ಪಟ್ಟಿಯಿಲ್ಲ. ಮುಸ್ಲಿಂ–ಹಿಂದುಳಿದ ವರ್ಗಗಳ ಆರ್ಥಿಕ ಸ್ಥಾನಮಾನದ ಉಲ್ಲೇಖವಿದೆ. ಸಾಚಾರ್ ವರದಿಯನ್ನು ಉಲ್ಲೇಖಿಸುವುದಾದರೆ,

"[... The incidence of poverty is highest among Muslim-OBC (38%) followed by Muslim General (35%) [...] Overall, the conditions of Muslim-OBCs are worse than those of Muslim-General [...] Within the Muslim community a larger percentage of Muslim OBCs fall in low income category as compared to Muslim-General [...] Within Muslims, Muslim-OBCs are slightly lagging behind the Muslim-General in high income group."

ಈ ಎಲ್ಲಾ ಅಂಶಗಳು ಇನ್ನೊಂದು ಚರ್ಚೆಗೆ ದಾರಿ ಮಾಡಿಕೊಡುತ್ತಿದೆ: ಮುಸ್ಲಿಮರಿಗೆ ಧರ್ಮಧಾರಿತ(ರಿಲಿಜಿಯನ್)ವಾಗಿ ಹಾಗೂ ಪ್ರತ್ಯೇಕವಾಗಿ ಮೀಸಲಾತಿಯನ್ನು ನೀಡಬೇಕೆ? ಅಥವಾ ಸಮಾಜೋ–ಆರ್ಥಿಕ ವರ್ಗವಾಗಿ ಗುರುತಿಸಿ ಮೀಸಲಾತಿಯನ್ನು ನೀಡಬೇಕೆ? ಅಥವಾ ಸಮುದಾಯವನ್ನು ಎರಡು ಪ್ರವರ್ಗಗಳಾಗಿ ವಿಭಜಿಸಿ ಕರ್ನಾಟಕ ಮಾದರಿಯಂತೆ ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಗುರುತಿಸಬೇಕೆ? ಭಾರತದಲ್ಲಿ ಧರ್ಮಧಾರಿತವಾದ ಮೀಸಲಾತಿ ಇಲ್ಲ. ಇದು ವಾಸ್ತವ. ಆದರೂ 1956ರಲ್ಲಿ ಸಿಖ್ ದಲಿತರಿಗೆ ಮೀಸಲಾತಿ ನೀಡಲಾಯಿತು. ಅದೇ ರೀತಿ ನವ ಬೌದ್ಧರಿಗೆ 1990ರಲ್ಲಿ ಮೀಸಲಾತಿಯನ್ನು ನೀಡಲಾಯಿತು. ಇವೆರಡು ಸಂದರ್ಭಗಳಲ್ಲಿ ನವ–ಬೌದ್ಧರನ್ನು ಹಾಗೂ ಸಿಖ್ ಧರ್ಮವನ್ನು ಹಿಂದೂ ಧರ್ಮದ ಭಾಗವಾಗಿ ನೋಡಲಾಯಿತು. ಇವತ್ತು ಈ ರಾಜಕಾರಣವನ್ನು ದಲಿತ–ಮುಸ್ಲಿಮರು ಪ್ರಶ್ನಿಸುತ್ತಿದ್ದಾರೆ. ಅದೇ ಸಂದರ್ಭದಲ್ಲಿ ಮೀಸಲಾತಿಗೆ ಕರ್ನಾಟಕ ಯಾಕೆ ಮಾದರಿ ಆಗಬಾರದೆಂಬ ವಾದವೂ ಬೆಳೆಯುತ್ತಿದೆ. ಅದೇ ಸಂದರ್ಭದಲ್ಲಿ ಶೇಕಡಾವಾರು ಮೀಸಲಾತಿ ಕುರಿತು ಜಿಜ್ಞಾಸೆ ಇದೆ. ಒಂದೆಡೆ ಮುಸ್ಲಿಮರ ಮೀಸಲಾತಿ ಶೇಕಡಾ 4.5 ರಿಂದ ಶೇಕಡಾ 10ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಇದೆ. ಇನ್ನು ಕೆಲವೆಡೆ ಮೀಸಲಾತಿಯ ಬೇಡಿಕೆ ಪ್ರಮಾಣ ಜನಸಂಖ್ಯಾಧಾರಿತವಾಗಿರಬೇಕೆಂಬ ಬೇಡಿಕೆಯೂ ಇದೆ. ಅಲ್ಲದೇ ಕೇಂದ್ರ ಹಾಗೂ ರಾಜ್ಯಗಳಲ್ಲಿ ಬೇರೆ ಬೇರೆ ಪ್ರಮಾಣದ ಮೀಸಲಾತಿ ಇರಬೇಕೆಂಬ ವಾದವೂ ಬೆಳೆಯುತ್ತಿದೆ.

ಇವೆಲ್ಲಕ್ಕಿಂತಲೂ ಮುಖ್ಯವಾಗಿರುವುದು ಜಾತಿಗಳ ನೆನಪುಗಳಿಲ್ಲದವರಲ್ಲಿ ಜಾತಿಗಳ ನೆನಪುಗಳನ್ನು ಹೇಗೆ ಪುನಃಶ್ಚೇತನಗೊಳಿಸುವುದು? ಜಾತಿಗಳ ನೆನಪುಗಳನ್ನು ಯಾವ ತಲೆಮಾರಿನಿಂದ ಹಾಗೂ ಯಾವ ಆಧಾರದ ಮೇಲೆ ಆರಂಭಿಸಬೇಕು? ಜಾತಿಗಳನ್ನು ತತ್‌ಕ್ಷಣದ ತಲೆಮಾರಿನ ಕಸಬುಗಳಿಂದ ಸೃಷ್ಟಿಸಬೇಕೆ? ಅಥವಾ ಇತಿಹಾಸವನ್ನು ಕೆದಕಿ ಸೃಷ್ಟಿಸಬೇಕೇ? ಇತ್ಯಾದಿ ಗೊಂದಲಗಳು ಸಾಕಷ್ಟಿವೆ. ಆದರೆ ಜಾತಿಗಳನ್ನು ಸಾಮಾಜಿಕ ಕಾರಣಗಳಿಗಿಂತಲೂ ರಾಜಕೀಯ ಕಾರಣಗಳಿಗಾಗಿ ನಿರ್ಮಿಸಬೇಕೆಂಬ ವಾದ ಬಹಳ ಗಟ್ಟಿಯಾಗುತ್ತಿದೆ. ಯಾಕೆಂದರೆ ಐಡೆಂಟಿಟಿ ರಾಜಕೀಯದಲ್ಲಿ ಗುರುತಿಸುವಿಕೆ ಅಂಶ ಬಹಳ ಮುಖ್ಯ ಹಾಗೂ ಇಂದಿನ ಅವಶ್ಯಕತೆಗಳಲ್ಲಿ ಒಂದು. ಇಲ್ಲದಿದ್ದರೆ ಸಮುದಾಯಗಳು ಪುನಃಹ ಪುನಃಹ ಅಂಚಿಗೆ ತಳ್ಳುವ ಸಾಧ್ಯತೆಗಳು ತೀರಾ ಹೆಚ್ಚು. ಆದಕಾರಣ ಜಾತಿಗಳ ವಿಸ್ಮೃತಿಗಳ ನಡುವೆ ಜಾತಿಗಳ ಹುಡುಕಾಟ ಹಾಗೂ ನಿರ್ಮಿತಿ ಅನಿವಾರ್ಯವಾಗುತ್ತಿದೆ. ■

ಜಾತಿಗಳನ್ನು ಸಾಮಾಜಿಕ ಕಾರಣಗಳಿಗಿಂತಲೂ ರಾಜಕೀಯ ಕಾರಣಗಳಿಗಾಗಿ ನಿರ್ಮಿಸಬೇಕೆಂಬ ವಾದ ಬಹಳ ಗಟ್ಟಿಯಾಗುತ್ತಿದೆ. ಯಾಕೆಂದರೆ ಐಡೆಂಟಿಟಿ ರಾಜಕೀಯದಲ್ಲಿ ಗುರುತಿಸುವಿಕೆ ಅಂಶ ಬಹಳ ಮುಖ್ಯ ಹಾಗೂ ಇಂದಿನ ಅವಶ್ಯಕತೆಗಳಲ್ಲಿ ಒಂದು. ಇಲ್ಲದಿದ್ದರೆ ಸಮುದಾಯಗಳು ಪುನಃಹ ಪುನಃಹ ಅಂಚಿಗೆ ತಳ್ಳುವ ಸಾಧ್ಯತೆಗಳು ತೀರಾ ಹೆಚ್ಚು. ಆದಕಾರಣ ಜಾತಿಗಳ ವಿಸ್ಮೃತಿಗಳ ನಡುವೆ ಜಾತಿಗಳ ಹುಡುಕಾಟ ಹಾಗೂ ನಿರ್ಮಿತಿ ಅನಿವಾರ್ಯವಾಗುತ್ತಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿಯಲ್ಲಿ ಸರ್ಕಾರದ ವಿಶಿಷ್ಟ ಸಾಧನೆ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದೆ. ಬೇರೆ ಬೇರೆ ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕಾಗಿ 2011-12 ನೇ ಸಾಲಿನ ದಾಖಲೆ ಮೊತ್ತದ 326 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯ

- *ಹೊಸದಾಗಿ ವೃಂದ ಮತ್ತು ನಿಯಮಾವಳಿ ರೂಪಿಸಿ 1726 ಹೊಸ ಹುದ್ದೆಗಳ ನೇಮಕಾತಿಗೆ ಕ್ರಮ.*
- *ಹಿಂದುಳಿದ ವರ್ಗಗಳ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿದ್ದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಅಧಿಕೃತವಾಗಿ ಬೇರ್ಪಡಿಸಿ 12 ಜಿಲ್ಲೆಗಳಲ್ಲಿ* ***"ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ"*** *ಎಂಬ ಹೊಸ ಹುದ್ದೆಯನ್ನು ಸೃಜಿಸಲಾಗಿದೆ. ಉಳಿದ 18 ಜಿಲ್ಲೆಗಳಲ್ಲಿಯೂ ಸಹ ಹೊಸ ಹುದ್ದೆಗಳನ್ನು ಸೃಜಿಸಲು ಕ್ರಮ ವಹಿಸಲಾಗಿದೆ.*

ವಿದ್ಯಾರ್ಥಿ ವೇತನ:

- ಸುಮಾರು 5 ಲಕ್ಷ ವಿದ್ಯಾರ್ಥಿಗಳಿಗೆ ರೂ. 178 ಕೋಟಿಗಳಷ್ಟು ವಿದ್ಯಾರ್ಥಿ ವೇತನವನ್ನು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ವಿತರಿಸಿದೆ.

ಸಮುದಾಯ ಭವನ/ಶಾದಿಮಹಲ್ ನಿರ್ಮಾಣ:

- 150 ಸಂಸ್ಥೆಗಳಿಗೆ ಶಾದಿಮಹಲ್/ಸಮುದಾಯ ಭವನ ನಿರ್ಮಿಸಲು ರೂ. 36.00 ಕೋಟಿ ಅನುದಾನ ಮಂಜೂರು ಮಾಡಲಾಗಿರುತ್ತದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ:

- ನಿರ್ಮಾಣಗೊಳ್ಳುತ್ತಿರುವ 22 ನೂತನ ವಸತಿ ಶಾಲೆಗಳಿಗೆ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ. 52.00 ಕೋಟಿಗಳಷ್ಟು ಅನುದಾನ ಒದಗಿಸಲಾಗಿದೆ.

ಅಲ್ಪಸಂಖ್ಯಾಂತರ ವಸತಿ ನಿಲಯ:

- ಅಲ್ಪಸಂಖ್ಯಾಂತರ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ನಿಲಯಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಹೆಚ್ಚುವರಿ ಹಂತಸ್ತಿನ ನಿರ್ಮಾಣಕ್ಕೆ ರೂ. 60.00 ಕೋಟಿ ಅನುದಾನವನ್ನು ಒದಗಿಸಲಾಗಿದೆ.

ಕೌಶಲ್ಯ ಅಭಿವೃದ್ಧಿ ಯೋಜನೆ:

- 18,364 ಫಲಾನುಭವಿಗಳಿಗೆ ರೂ. 15.40 ಕೋಟಿ ಮೊತ್ತದ ಪ್ರಯೋಜನ ಪಡೆದಿರುವರು.

ನೂತನ ಅಲ್ಪಸಂಖ್ಯಾಂತರ ವಸತಿ ನಿಲಯಗಳ ನಿರ್ವಹಣೆ:

- ರೂ 13.17 ಕೋಟಿ ವೆಚ್ಚದಲ್ಲಿ 8,399 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ನೀಡಲಾಗಿದೆ.

ಕಲಿಕಾ ಸಾಮಾಗ್ರಿಗಳು:

- ಅಲ್ಪಸಂಖ್ಯಾಂತರ ಶಾಲೆಗಳ ಗುಣಮಟ್ಟ ಹೆಚ್ಚಿಸಲು ರೂ. 371 ಲಕ್ಷ ವೆಚ್ಚದಲ್ಲಿ 3,675 ಶಾಲೆಗಳಿಗೆ ಕಲಿಕಾ ಸಾಮಾಗ್ರಿಗಳನ್ನು ಒದಗಿಸಲಾಗಿದೆ.

ಕಾನೂನು ಪದವೀಧರರಿಗೆ ಶಿಷ್ಯವೇತನ:

- ಹೊಸದಾಗಿ ನೋಂದಾಯಿಸಿದ 617 ಕಾನೂನು ಪದವೀಧರರಿಗೆ ಧನಸಹಾಯವಾಗಿ ರೂ. 91.30 ಲಕ್ಷ ವಿತರಿಸಿದೆ.
- ಐ.ಎ.ಎಸ್/ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಮತ್ತು ವಿದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಕಳುಹಿಸಲು ಸುಮಾರು ರೂ. 2.00 ಕೋಟಿ ಧನಸಹಾಯ ಮೀಸಲಿರಿಸಲಾಗಿದೆ.
- ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ಪ್ರಪ್ರಥಮಬಾರಿ ರೂ. 50.00 ಕೋಟಿ ಮೊತ್ತದ ಅನುದಾನ ಮೀಸಲಿಟ್ಟಿದೆ.

ಕರ್ನಾಟಕ ವಾರ್ತೆ
Karnataka Information

ಜಾತಿಗೊಂದೊಂದು ಗುಣಲಕ್ಷಣ, ವೃತ್ತಿ ಆರೋಪಿಸಿ ಮೊದಲೇ ಛಿದ್ರಗೊಂಡ ಶೋಷಿತ ಸಮುದಾಯಗಳು ಜಾತಿ ಹೆಸರಲ್ಲಿ ಒಂದೊಂದು ಮಠವನ್ನೂ ಹೊಂದುವುದು ಮತ್ತಷ್ಟು ಒಡೆಯುವ ಸೂಚನೆಯೇ. ಕೆಲ ವರ್ಷಗಳ ಕೆಳಗೆ ಚಿತ್ರದುರ್ಗದ ಮುರುಘಾಶರಣರು ತಳ ಸಮುದಾಯಗಳಿಗೊಂದೊಂದು ಮಠ, ಸ್ವಾಮಿಗಳನ್ನು ಸೃಷ್ಟಿಸಹೊರಟಾಗಲೂ ಅನುಮಾನ, ವಿರೋಧಗಳು ಕೇಳಿಬಂದಿದ್ದವು. ಶೋಷಿತ ಸಮುದಾಯಗಳು ಒಕ್ಕಟ್ಟಾದರೆ ಆಳುವವರಿಗೆ ಅದು ತಲೆನೋವು. ಅಸ್ಮಿತೆಯ ಹೆಸರಲ್ಲಿ ಅವು ಸಿಡಿದು ಚೂರುಗಳಾದರೆ ಅವರಿಗೆ ಒಳ್ಳೆಯದು. ಜಾತಿಗಳನ್ನು ಪ್ರತ್ಯೇಕಿಸಿ ಏಕಾಂಗಿಯನ್ನಾಗಿಸುವ ಪ್ರಯತ್ನಗಳನ್ನು ಒಳಗೊಳಗೇ ಆಳುವ ವರ್ಗ ಬೆಂಬಲಿಸುತ್ತದೆ.

ಸಾಮಾಜಿಕ ನ್ಯಾಯ ಹೋರಾಟ ಮತ್ತು ತಳಜಾತಿ ಮಠಗಳು-ದಿಟವೆಂಬ ಹುಸಿಯ ನಂಬಿ...

ಅಂಬೇಡ್ಕರ್ ಜಯಂತಿಯ ವೇಳೆ ಅವರನ್ನು ನೆನೆಯುವುದೆಂದರೆ ಸಾಮಾಜಿಕ ನ್ಯಾಯ ಹೋರಾಟದಲ್ಲಿ ಅಂಬೇಡ್ಕರ್ ತತ್ವಗಳನ್ನು ಒಳಗು ಮಾಡಿಕೊಂಡು ಮುನ್ನಡೆದ ಹೆಜ್ಜೆಗಳಿವೆಯೇ ಎಂದು ಹುಡುಕುವುದು. ಇತ್ತೀಚಿನ ಕೆಲ ಬೆಳವಣಿಗೆಗಳು ಹಳೆಯ ಪ್ರಶ್ನೆಗಳನ್ನು ಮತ್ತೆ ಮುನ್ನೆಲೆಗೆ ತಂದಿದ್ದು ಅಂಬೇಡ್ಕರರನ್ನು ಸಾವಿರಾರು ಪ್ರತಿಮೆಗಳಲ್ಲಿ, ಲೈಬ್ರರಿಯ ಕಪಾಟುಗಳಲ್ಲಿ, ಪಕ್ಷ ಸಿದ್ಧಾಂತ ಬಿರುದುಗಳ ಚೌಕಟ್ಟಿನಲ್ಲಿ ಬಂಧಿಸಿಟ್ಟಿದ್ದರ ಅಪಾಯಗಳು ಬಿಚ್ಚಿಕೊಳ್ಳತೊಡಗಿವೆ. ಸಮುದಾಯದ ಮುಂದಿನ ನಡೆಗಳ ದಿಕ್ಕು ಬದಲಿಸಬಲ್ಲಂಥ ಶಕ್ತಿಯಿರುವ ಕಾರಣದಿಂದ ಈ ಸೂಕ್ಷ್ಮ ವಿಚಾರಗಳ ಚರ್ಚೆ ಮುಖ್ಯವಾಗಿದೆ.

ಮೇಲ್ಜಾತಿಯವರು ಉಂಡುಬಿಟ್ಟ ಎಲೆಗಳ ಮೇಲೆ ಉರುಳಿ ಹರಕೆ ತೀರಿಸುವ ಅಮಾನವೀಯ ಹಾಗೂ ಅನಿಷ್ಟ ಪದ್ಧತಿ ಮಡೆಸ್ನಾನದ ಬಗ್ಗೆ ಇತ್ತೀಚೆಗೆ ಬಿಸಿಬಿಸಿ ವಾಗ್ವಾದಗಳಾಗುತ್ತಿವೆ. ಈ ವಿಲಕ್ಷಣ ಆಚರಣೆಯಲ್ಲಿ ಎರಡು ದುಷ್ಟತನಗಳು ಕಣ್ಣಿಗೆ ರಾಚುವಂತಿವೆ: ಒಂದು – ಬ್ರಾಹ್ಮಣರಿಗಾಗಿಯೇ ಪ್ರತ್ಯೇಕ ಭೋಜನ ಪಂಕ್ತಿ ಏರ್ಪಡಿಸುವುದು; ಎರಡು – ಅವರೆಲ್ಲ ಹೊಟ್ಟೆತುಂಬ ಉಂಡು ಬಿಟ್ಟ ಬಾಳೆಲೆ ಮೇಲೆ ಉಳಿದವರು ಉರುಳಿದರೆ ಚರ್ಮರೋಗ ನಿವಾರಣೆಯಾಗುತ್ತದೆಂಬ ಸುಳ್ಳುಕತೆ ಹಬ್ಬಿಸಿ ಜಾತಿ ಮೇಲರಿಮೆಯನ್ನು ಕಾಯ್ದುಕೊಳ್ಳುತ್ತಿರುವುದು. ಈ ಮೌಢ್ಯದ ಪರಮಾವಧಿಯನ್ನು ಸಮರ್ಥಿಸಲು ನ್ಯಾಯಾಧೀಶರು, ವೈದ್ಯರು, ಎಂಜಿನಿಯರರೇ ಮೊದಲಾದ 'ಕಲಿತ', ಸಮಾಜದ ಕೆನೆಪದರದ ಜನರೂ ಪಾಲ್ಗೊಂಡು ಮಡೆಸ್ನಾನ ವಿರೋಧ ವ್ಯಕ್ತಿಸ್ವಾತಂತ್ರ್ಯದ ಹರಣ ಎಂಬಂತೆ ಬಿಂಬಿಸಿದ್ದು ವರ್ತಮಾನದ ವಿಪರ್ಯಾಸವಾಗಿದೆ.

ಹಸಿದವನಿಗೆ ತುತ್ತು ಊಟ ನೀಡಿದಾಗ ಉಂಡ ಊಟದ ರುಚಿಗಿಂತ ನೀಡಿದವನ ಪ್ರೀತಿ ಮನಸ್ಸಿನಲ್ಲುಳಿಯಬೇಕು. ಹಾಗೆ ಹಂಚಿಕೊಂಡ ತೃಪ್ತಿಗೆ ಅರ್ಥವಿದೆ. ತನ್ನ ಆಹಾರ ತಾನು ತಯಾರಿಸಿಕೊಳ್ಳಲಾಗದ, ತಾನು ಯಾರಿಗೂ ಆಹಾರವಾಗದ, ಆಹಾರ ಸರಪಳಿಯ ಕೊನೆಯ ಕೊಂಡಿ ಮನುಷ್ಯನ ಆಹಾರ ಕುರಿತ ಧೋರಣೆಗಳು ತೀರ ವಿಚಿತ್ರ. ಆಹಾರ ಆಚರಣೆ, ಧೋರಣೆಗಳೇ ಸಂಸ್ಕೃತಿ, ಕಟ್ಟುಪಾಡುಗಳಾಗಿ; ಶ್ರೇಷ್ಠ-ಕನಿಷ್ಠ ಸಂಕೇತವಾಗಿ; ಊಟ ಮಾಡುವಾಗ ತನ್ನ ಜೊತೆ ಯಾರಿರಬೇಕು, ಯಾರಿರಬಾರದು ಎಂಬ ಲಕ್ಷ್ಮಣ ರೇಖೆಯನ್ನೆಳೆದು ಪಂಕ್ತಿಭೇದಕ್ಕೆ ಕಾರಣವಾಗಿದೆ. ಮಳೆ-ಬಿಸಿಲು-ಗಾಳಿಯಂತಹ ಪ್ರಕೃತಿಯ ಧಾತುಗಳಿರಲಿ, ಉತ್ತು ಬಿತ್ತಿ ಬೆಳೆವ ರೈತನಾಗಲೀ ಕಾಳಿನ ಮೇಲೆ ಮೊಹರು ಒತ್ತಲು ಸಾಧ್ಯವಿಲ್ಲ. ಆದರೆ ಹಣ ತಂದುಕೊಡುವ ಧಾನ್ಯದ ಮೇಲಿನ ಹಕ್ಕು ಮಾನವನ ಸಣ್ಣತನಗಳನ್ನು ಬಯಲುಮಾಡುತ್ತದೆ. ಪಕ್ಕ ಕುಳಿತವನಿಂದ ತನ್ನ ತುತ್ತಿಗೇನೂ ಕುತ್ತಿಲ್ಲ ಎಂದು ಗಟ್ಟಿಯಾದ ಮೇಲೂ ಮನುಷ್ಯ ತನ್ನ ಪಕ್ಕ ಯಾರು ಕೂರಬೇಕು, ಬಾರದು; ಯಾರಿಗೆ ಉಣ್ಣಲಿಕ್ಕಬೇಕು, ಯಾರಿಗಿಲ್ಲ ಎಂಬ ವಿಕೃತ ಜಿಜ್ಞಾಸೆಗೆ ಬಹಳಷ್ಟು ಸಮಯ-ಶಕ್ತಿ ಮೀಸಲಿಡುತ್ತಾನೆ. ಐದಾರು ತಾಸು ಹೊಟ್ಟೆ ತಣಿಸಬಹುದಾದ, ಮತ್ತೆ ಮತ್ತೆ ಮಾಡಲೇಬೇಕಾದ ಊಟವೆಂಬ ಕ್ಷಣಿಕ, ಅನಿವಾರ್ಯ ಸುಖದ ಪಾವಿತ್ರ್ಯತೆಯನ್ನು ತಾರತಮ್ಯ ನೀತಿ ಹಾಳುಮಾಡಿದೆ. ಒಂದಲ್ಲ ಒಂದು ರೀತಿಯ ಆಹಾರ ಪ್ರತ್ಯೇಕತೆ ಎಲ್ಲೆಡೆ ಜಾರಿಯಲ್ಲಿದ್ದರೂ ಭಾರತದಲ್ಲಿ ಅದರ ಆತ್ಯಂತಿಕ ದುಷ್ಟರೂಪ ಪಂಕ್ತಿಭೇದದ ಹೆಸರಲ್ಲಿ ಚಾಲ್ತಿಯಲ್ಲಿದೆ. ತಾರತಮ್ಯ, ಪಂಕ್ತಿಭೇದದ ಇನ್ನೊಂದು ರೂಪ ಮಡೆಸ್ನಾನ.

21ನೇ ಶತಮಾನಕ್ಕೆ ತಕ್ಕಂತೆ ಮೊಬೈಲು-ಕಂಪ್ಯೂಟರುಗಳಲ್ಲಿ ಜ್ಯೋತಿಷ್ಯ ಹೇಳುವುದನ್ನು ಕಲಿತ ಪುರೋಹಿತ ವರ್ಗ, ಉಂಡೆಲೆ ಮೇಲೆ ಉರುಳಿದರೆ ಚರ್ಮರೋಗ ಗುಣವಾಗುವುದೆಂಬ ನಂಬಿಕೆಯ ವೈಜ್ಞಾನಿಕತೆಯನ್ನು ಪ್ರಶ್ನಿಸಿಕೊಳ್ಳಲು ಮಾತ್ರ ತಯಾರಿಲ್ಲ. ಮಡೆಸ್ನಾನವಷ್ಟೇ ಅಲ್ಲ, ಧರ್ಮ ಧಾರ್ಮಿಕತೆಯ ಹೆಸರಲ್ಲಿ ನಡೆವ ಪ್ರತಿ ಆಚರಣೆಯಲ್ಲೂ ತಾರತಮ್ಯ, ಮೇಲ್ಜಾತಿ ಅಹಂ ಮತ್ತು ತಳಜಾತಿಯ 'ಕೀಳ' ಪ್ರಜ್ಞೆ ಪೋಷಿಸುವಿಕೆ ಎದ್ದು ಕಾಣುತ್ತದೆ. ಮಡೆಸ್ನಾನ ಮತ್ತಿತರ ಹರಕೆ-ಸೇವೆಗಳ ಹೆಸರಲ್ಲಿ ಶ್ರಮಿಕ ಜಾತಿಗಳನ್ನು ನಿರಂತರ ದಾಸ್ಯದಲ್ಲಿಡಲು ಮೇಲ್ಜಾತಿ ಮನಸ್ಸು ಪ್ರಯತ್ನಿಸುತ್ತಿರುವುದು ಸೂರ್ಯ ಸ್ಪಷ್ಟ. ಮಲೆಕುಡಿಯರು ಹಾಗೂ ಇನ್ನಿತರ ಕೆಲ ಭಕ್ತರು ಉಂಡೆಲೆ ಮೇಲೆ ಹೊರಳಲು ಬಿಡಿ ಎಂದು ತಾವೇ ಕೇಳುವುದು ನೋಡಿದರೆ ಶೋಷಿತ ಶೋಷಕನ ವಿಚಿತ್ರ ಸಮೀಕರಣ, ಶೋಷಕನ ಪ್ರಭಾವವಲಯದಿಂದ ಬಿಡಿಸಿಕೊಂಡು ಹೊರನಡೆಯಲು ಇರುವ ಗೊಂದಲಗಳ ಅರಿವಾಗುತ್ತದೆ. ಇಂದು ಯಾವುದೇ ವ್ಯಕ್ತಿ, ಜಾತಿ ಶೋಷಕನ ಸ್ಥಾನದಲ್ಲಿಲ್ಲ, ಬದಲಾಗಿ ಕೋಮುವಾದಿ ರಾಜಕಾರಣವೇ ವ್ಯವಸ್ಥೆಯ ರೂಪದಲ್ಲಿ ಶೋಷಕನ ಸ್ಥಾನದಲ್ಲಿದೆ. ಅದು ಶೋಷಿತನನ್ನು ಹೇಗೆ ಪಳಗಿಸಿಟ್ಟುಕೊಂಡಿದೆಯೆಂದರೆ ಅದಕ್ಕೆ ಬೇಕಾಗಿರುವುದನ್ನು ಶೋಷಿತನೇ ಬೇಡುವಂತಹ ಅಪ್ರಜ್ಞಾಪೂರ್ವಕ ಪರಿಸರ ನಿರ್ಮಾಣ ಮಾಡಿದೆ. ಶೋಷಿತನ ಚಿಂತನಾಧಾಟಿಯನ್ನೂ ತನಗೆ ಅನುಕೂಲಕರವಾಗಿಯೇ ರೂಪಿಸಿಕೊಂಡಿದೆ.

ಡಾ॥ ಎಚ್. ಎಸ್. ಅನುಪಮಾ

6

ಇದು ಮಡೆಸ್ನಾನವೆಂಬ ಬಿಕ್ಕಟ್ಟಿನ ಒಂದು ರೂಪವಾದರೆ ಮಡೆಸ್ನಾನ ವಿರೋಧೀ ಹೋರಾಟವೂ ಗೊಂದಲಗಳಿಂದ ಹೊರತಾಗಿಲ್ಲ. ಮಡೆಸ್ನಾನ-ಮಡೆಸ್ನಾನ ವಿರೋಧ ಎರಡರಲ್ಲೂ ಪ್ರಗತಿಪರತೆಯ ಗೊಂದಲಗಳು ಎದ್ದು ಕಾಣುವಂತಿವೆ.

ವ್ಯಕ್ತಿಯ ಘನತೆಯನ್ನು ನಾಶಮಾಡುವ ಮಡೆಸ್ನಾನ-ಪಂಕ್ತಿಭೇದದಂಥ ಅನಿಷ್ಟ ಪದ್ಧತಿಗಳನ್ನು ನಿಷೇಧಿಸಬೇಕೆಂದು ನಿಡುಮಾಮಿಡಿ ಶ್ರೀಗಳು ಸಮಾನ ಮನಸ್ಕ ವ್ಯಕ್ತಿ-ಸಂಘಟನೆಗಳನ್ನು ಒಟ್ಟುಗೂಡಿಸಿ ಪ್ರತಿಭಟನೆ ಸಮಾವೇಶ ನಡೆಸಿ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆ. ತಳಸಮುದಾಯಗಳಿಗೆ ಸೇರಿದ ನೂರಾರು ಸಾಧು-ಸ್ವಾಮಿಗಳು ನಿಡುಮಾಮಿಡಿಯವರ ನೇತೃತ್ವದ ಸಮಾವೇಶದಲ್ಲಿ ಹಾಜರಿದ್ದರು. ಆ ಸ್ವಾಮಿಗಳಲ್ಲಿ ಮಡೆಸ್ನಾನ,

ಪಂಕ್ತಿಭೇದದ ಕುರಿತು ಸ್ಪಷ್ಟ ವಿರೋಧ ಮೂಡಿಸಿ ತಮ್ಮ ಸಮುದಾಯಗಳು ಎದುರಿಸುತ್ತಿರುವ ಸಾಮಾಜಿಕ ತಾರತಮ್ಯದ ಕುರಿತು ಅವರನ್ನು ಎಚ್ಚರಿಸುವುದು ನಿಡುಮಾಮಿಡಿಯವರ ಉದ್ದೇಶವಾಗಿದ್ದರೆ; ವಿಷಯಾಧಾರಿತ ಹೋರಾಟವೊಂದಕ್ಕೆ ಎಲ್ಲ ಜಾತಿ–ಉಪಜಾತಿ–ಗುಂಪು–ಸಿದ್ಧಾಂತ–ಸಂಘಟನೆಗಳಿಗೆ ಸೇರಿದವರು ಒಂದೆಡೆ ಸೇರಿದ್ದರೆ ಅದು ಈ ಹೊತ್ತಿನ ಒಳ್ಳೆಯ ಬೆಳವಣಿಗೆ ಎನ್ನಬಹುದಿತ್ತು. ಆದರೆ ವಾಸ್ತವ ಹಾಗಿಲ್ಲ.

ಮಠಗಳೆಂಬ ಗಾಜಿನ ಮನೆಯಲ್ಲಿ ಕುಳಿತು ಕಾಲಿಗೆ ಬೀಳುವ ಮೊದಲೇ ಹರಸುವವರಂತೆ ಕೈಯೆತ್ತುವ ಸ್ವಾಮಿಗಳು ಸಾಮಾಜಿಕ ನ್ಯಾಯದ ಕುರಿತು ಮಾತನಾಡುವರೆಂದು ನಿರೀಕ್ಷಿಸಬಹುದೆ? ತಾವು ಪ್ರತಿನಿಧಿಸುವ ಸಮುದಾಯಗಳು ತೀವ್ರ ತಾರತಮ್ಯ ಅನುಭವಿಸುವಾಗ, ಸಾಮಾಜಿಕ ಅನ್ಯಾಯಕ್ಕೊಳಗಾದಾಗ ಈ ಸ್ವಾಮಿಗಳು ಬೀದಿಗಿಳಿದು ಪ್ರತಿಭಟಿಸುವರೆ? ಜಾತಿಪದ್ಧತಿಯ ಕುರಿತು, ಜಾತಿ ಶ್ರೇಣೀಕರಣದ ಕುರಿತು ಅವರ ನಿಲುವುಗಳೇನು? ಮಠವೆಂಬುದು ಧರ್ಮವೆಂಬ ಸಾಂಸ್ಥಿಕ ಚೌಕಟ್ಟಿನೊಳಗಿರುವ ಪಟ್ಟಭದ್ರ ವ್ಯವಸ್ಥೆ. ಮಠ ನಡೆಸುವುದೊಂದು ರಾಜೀ ಹೊಂದಾಣಿಕೆ. ಅಲ್ಲಿ ಯಾವ ಕ್ರಾಂತಿ–ಬದಲಾವಣೆಯನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಬಂಡೆದ್ದ ಸ್ವಾಮಿ ವಿವೇಕಾನಂದರನ್ನು ವೀರ ಸನ್ಯಾಸಿಯಾಗಿಸಿದ ಪುರೋಹಿತಶಾಹಿ ಪರಂಪರೆಯ ಪಳೆಯುಳಿಕೆ ಕಾವಿ ಬಣ್ಣದಲ್ಲಿದೆ. ಅದು ತನ್ನ ಅಸ್ತಿತ್ವ, ವೇಷ, ಬಣ್ಣಗಳಿಂದಲೇ ಅನುಯಾಯಿಗಳನ್ನು ಸೃಷ್ಟಿಸಿ ಅವರಲ್ಲಿ ಭ್ರಮೆ ಹುಟ್ಟಿಸುತ್ತದೆಯೇ ಹೊರತು ಅರಿವನ್ನಲ್ಲ. ಕಾವಿಧಾರಿಗಳು ಸಮಾನತೆ–ಸಾಮಾಜಿಕ ನ್ಯಾಯದಲ್ಲಿ ನಿಜವಾದ ನಂಬಿಕೆಯಿಟ್ಟು ತಮ್ಮ ಮಠ ಕ್ಷೇತ್ರಗಳಲ್ಲಿ ಅದನ್ನು ಅನುಷ್ಠಾನಕ್ಕೆ ತಂದಿದ್ದರೆ ಅದೇ ದೊಡ್ಡ ಸಾಮಾಜಿಕ ಬದಲಾವಣೆಗೆ ಮುನ್ನುಡಿಯಾಗುತ್ತಿತ್ತು.

ಆದರೆ ಇಂಥ ಪ್ರಗತಿಪರ ಕ್ರಮಗಳು ಬುಡವನ್ನೇ ಅಲುಗಾಡಿಸುವುದರಿಂದ ಅವರು ಆಳದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬಯಸುತ್ತಾರೆಂಬುದು ವಾಸ್ತವ. ಇದು ನಿಡುಮಾಮಿಡಿಯವರಿಗೂ ಅನುಭವ ವೇದ್ಯವಾಗಿರಬಹುದು. ಪ್ರತಿ ಸ್ವಾಮಿಯೂ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಭೌಗೋಳಿಕವಾಗಿ ಬಹು ಸಣ್ಣ ಸಮುದಾಯವನ್ನಷ್ಟೇ ಗಮನದಲ್ಲಿಟ್ಟುಕೊಂಡ ಹಿತಾಸಕ್ತಿಗಳು. ಅವರ ಪ್ರತಿ ಚರ್ಯೆ, ಕ್ರಿಯೆಯೂ ತಮ್ಮ ಸಮುದಾಯದ ಹಿತಾಸಕ್ತಿ ಕಾಪಾಡುವುದರಲ್ಲಿರುತ್ತದೆಯೇ ಹೊರತು ವಿಶಾಲ ಸಮೂಹವೊಂದರ ಭಾಗ ತಾವು ಎಂದು ಭಾವಿಸುವುದರಲ್ಲಿ ತೊಡಕುಗಳಿರುತ್ತವೆ.

ಜಾತಿಗೊಂದು ಮಠ ಮತ್ತು ಅದಕ್ಕೊಬ್ಬ ಸ್ವಾಮಿ ತಳಸಮುದಾಯಗಳ ಅಸ್ಮಿತೆಯ ಪ್ರಶ್ನೆಗೊಂದು ಸಮರ್ಥ ಉತ್ತರವಾಗಿ ಕಾಣಬಹುದು. ಇದುವರೆಗೆ ಆಳುವ ವರ್ಗಕ್ಕೆ ಹತ್ತಿರವಿದ್ದ ಮೇಲ್ಜಾತಿ ಬಲಿಷ್ಠ ಮಠಗಳು, ಮತ್ತವು ದಕ್ಕಿಸಿಕೊಳ್ಳುತ್ತಿದ್ದ ಸವಲತ್ತುಗಳಿಗೆ ಪರ್ಯಾಯವಾಗಿ ನಿರ್ಲಕ್ಷಿತ ಸಮುದಾಯಗಳೂ ತಮ್ಮ ಸಂಸ್ಕೃತಿ ಚಹರೆಗಳನ್ನು ಜಾತಿ ಮಠಗಳ ಮೂಲಕ ಉಳಿಸಿಕೊಳ್ಳುವ ಪ್ರಯತ್ನವಾಗಿಯೂ ತೋರಬಹುದು. ಆದರೆ ಧರ್ಮವೊಂದರ ಚೌಕಟ್ಟಿನೊಳಗೆ ಹುಟ್ಟುವ ಇಂಥ ಸಾಂಸ್ಥಿಕ ಸನ್ನೆಗಳು ಎಷ್ಟರಮಟ್ಟಿಗೆ ಆ ಸಮುದಾಯಗಳ ಬಿಡುಗಡೆಯ ದಾರಿಯನ್ನು ತೋರಿಸಿಯಾವು ಎನ್ನುವುದು ಸಂದೇಹಾಸ್ಪದ. ಜಾತಿಯ ಸೀಮಿತ ಚೌಕಟ್ಟಿನೊಳಗೆ ಸ್ವಾಮಿಗಳ ಸುತ್ತ ಒಂದು ಬಣ ಬೆಳೆಯುತ್ತದೆ. ಅದು ತಮ್ಮ ನೆಲೆ ಉಳಿದವರಿಗಿಂತ ಎಷ್ಟು ಅನನ್ಯ ಎಂದು ಸ್ಪರ್ಧಾತ್ಮಕವಾಗಿ ತೋರಿಸಿಕೊಳ್ಳಲು ಯತ್ನಿಸುತ್ತದೆ. ಅಂಥ ಬಣಗಳ ಕೈಬೊಂಬೆಯಾಗಿ ಕಾವಿ ಮೂರ್ತಿಗಳಿರುತ್ತವೆ. ಹೀಗಿರುತ್ತ ಪ್ರಗತಿಪರ ಸ್ವಾಮಿಗಳ ಪ್ರಗತಿಪರತೆಯ ಕುರಿತೇ ಅನುಮಾನಗಳೇಳುತ್ತವೆ.

ಜಾತಿಯನ್ನು ಎಷ್ಟರಮಟ್ಟಿಗೆ, ಯಾವುದಕ್ಕೆ ಬಳಸಿಕೊಳ್ಳಬೇಕೆಂಬ ಬಗ್ಗೆ ಎಲ್ಲರಿಗೂ ಗೊಂದಲಗಳಿವೆ. ಜಾತಿಯ ಕಾರಣದಿಂದ ತನಗಾದ ತಾರತಮ್ಯ ಗುರುತಿಸಲು ಹಾಗೂ ಅದಕ್ಕೆ ಪರಿಹಾರ ಪಡೆಯಲು ಅಪ್ಪಿಕೊಳ್ಳುವ ಜಾತಿ ಅಸ್ಮಿತೆ ನಂತರವೂ ಅಂಟಿಕೊಳ್ಳುತ್ತದೆ. ಇದರಿಂದ ಬಿಡಿಸಿಕೊಳ್ಳುವುದೇನೂ ಸುಲಭವಲ್ಲ. ಸೀಮಿತ ದೃಷ್ಟಿಕೋನ ರೂಪಿಸುವ, ಮಾನವೀಯ ನಂಬಿಕೆಗಳನ್ನೇ ಮೊಟಕುಗೊಳಿಸುವ ಜಾತೀಯತೆ ತುಂಬ ಅಪಾಯಕಾರಿ. ಅದು ಜಾತಿಗುಂಪುಗಳನ್ನು ತೀರ ಸಣ್ಣ, ಏಕಾಂಗಿ, ಅಸಹಾಯಕ ಗುಂಪುಗಳನ್ನಾಗಿ ಪರಿವರ್ತಿಸುತ್ತದೆ. ಜಾತಿವಿನಾಶದ ಮಾತೇ ಕೇಳಿಬರದ, ಧಾರ್ಮಿಕ ಉದ್ದೇಶಗಳಿಗಾಗಿ ನಡೆಯುವ ಶಕ್ತಿಪಾತ ಸಾಮಾಜಿಕ ಸುಧಾರಣೆಯಾಗಿ ರೂಪುಗೊಳ್ಳದ ಕಾಲಘಟ್ಟದಲ್ಲಿ, ಈ ದಿನಗಳಲ್ಲಿ ಹೊಸದಾಗಿ ಬಲಗೊಳ್ಳತೊಡಗಿರುವ ಜಾತಿ ಅಸ್ಮಿತೆಗಳು ಪ್ರಬಲ ಜಾತಿಗಳ ಸ್ಥಾನಭದ್ರ ಮಾಡುವ ಊರುಗೋಲಾಗಲಾರವೆಂದು ಭರವಸೆಯಿಡುವುದು ಹೇಗೆ?

ಜಾತಿಗೊಂದೊಂದು ಗುಣಲಕ್ಷಣ, ವೃತ್ತಿ ಆರೋಪಿಸಿ ಮೊದಲೇ ಛಿದ್ರಗೊಂಡ ಶೋಷಿತ ಸಮುದಾಯಗಳು ಜಾತಿ ಹೆಸರಲ್ಲಿ ಒಂದೊಂದು ಮಠವನ್ನೂ ಹೊಂದುವುದು ಮತ್ತಷ್ಟು ಒಡೆಯುವ ಸೂಚನೆಯೇ. ಕೆಲ ವರ್ಷಗಳ ಕೆಳಗೆ ಚಿತ್ರದುರ್ಗದ ಮುರುಘಾಶರಣರು ತಳ ಸಮುದಾಯಗಳಿಗೊಂದೊಂದು ಮಠ, ಸ್ವಾಮಿಗಳನ್ನು ಸೃಷ್ಟಿಸಹೊರಟಾಗಲೂ ಅನುಮಾನ, ವಿರೋಧಗಳು ಕೇಳಿಬಂದಿದ್ದವು. ಶೋಷಿತ ಸಮುದಾಯಗಳು ಒಕ್ಕಟ್ಟಾದರೆ ಆಳುವವರಿಗೆ ಅದು ತಲೆನೋವು. ಅಸ್ಮಿತೆಯ ಹೆಸರಲ್ಲಿ ಅವು ಸಿಡಿದು ಚೂರುಗಳಾದರೆ ಅವರಿಗೆ ಒಳ್ಳೆಯದು. ಜಾತಿಗಳನ್ನು ಪ್ರತ್ಯೇಕಿಸಿ ಏಕಾಂಗಿಯನ್ನಾಗಿಸುವ ಪ್ರಯತ್ನಗಳನ್ನು ಒಳಗೊಳಗೇ ಆಳುವ ವರ್ಗ ಬೆಂಬಲಿಸುತ್ತದೆ. ಹೀಗೆ ಹುಟ್ಟುವ ಸಣ್ಣ ಗುಂಪು ಪ್ರಜಾಪ್ರಭುತ್ವದಲ್ಲಿ ಒತ್ತಡಗುಂಪಾಗಿ ತಾತ್ಕಾಲಿಕವಾಗಿ ಮಣಿಸಬಹುದಾದ ಶಕ್ತಿ ಪಡೆಯಬಹುದೇ ಹೊರತು ಆಳುವ ವರ್ಗವಾಗಲು ಸಾಧ್ಯವಾಗದು. ಆಳುವ ವರ್ಗ ಕೋಮುವಾದಿಯಾಗಿದ್ದರಂತೂ ಇದನ್ನೆಲ್ಲ ಮೊದಲೇ ಯೋಚಿಸಿರುತ್ತದೆ. ಆದರೆ ಅಂಬೇಡ್ಕರ್ ಕಾವ್ಯವನ್ನು ತಲೆಮೇಲಿರಿಸಿ ಮೆರವಣಿಗೆ ಮಾಡಿದ ಮಠವಾಗಲೀ, ಗುಟ್ಟಾಗಿ ಒಬ್ಬೊಬ್ಬ ಸ್ವಾಮಿಯ ಪಾದಾರವಿಂದಗಳಿಗೆ ಶರಣಾಗಿ ರಾಜಕಾರಣಿಗಳ ಏಜೆಂಟರಂತೆ ವರ್ತಿಸುವ ಪ್ರಗತಿಪರ ಸಂಘಟನೆಗಳ ಮುಖಂಡರಾಗಲೀ ಈ ಸೂಕ್ಷ್ಮ ಯೋಚಿಸಿರುವರೆ?

ರಾಜಾಶ್ರಯ ಪಡೆದ, ದಲಿತರನ್ನು ದಲಿತರನ್ನಾಗಿಸಿದವರು ನಾವೇ ಎಂಬ ಪ್ರಜ್ಞೆಯಿಲ್ಲದೆ ವ್ಯವಸ್ಥೆಯ ಸಕಲ ಸವಲತ್ತುಗಳನ್ನೂ ಅನುಭವಿಸುತ್ತಿರುವ ಪೇಜಾವರ ಮತ್ತಿತರ 'ರಾಜಗುರು'ಗಳು ಈ ಎಲ್ಲ ನಡೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಪ್ರತಿನಡೆಗಳನ್ನು ಸದ್ದೇ ಇಲ್ಲದೆ ಸಿದ್ಧಗೊಳಿಸುತ್ತಿರುತ್ತಾರೆ. ಆ ಮಠಗಳೆದುರು ದಮನಿತ ಸಮುದಾಯಗಳ ಸ್ವಾಮಿಗಳು ಭದ್ರ ತಾತ್ವಿಕ ನೆಲೆಗಟ್ಟಿನ ಮೇಲೆ ಸೆಣಸಬೇಕಾಗುತ್ತದೆ. ದನಿಯೆತ್ತಿದವರಿಗೆ ಒಂದೊಂದು ಕಾಲೇಜು, ಸ್ಥಾನ, ಅನುದಾನ, ಪ್ರಶಸ್ತಿ, ಅಧಿಕಾರ ನೀಡಿ ಸುಮ್ಮನಿರಿಸುವ ಹುನ್ನಾರಗಳು ನಡೆಯುತ್ತಿರುವಾಗ ಅದೆಲ್ಲವನ್ನು ಎದುರಿಸಿ ನಿಲ್ಲಲು ನೈತಿಕ

ಬಲ ಅತಿ ಅಗತ್ಯವಾಗಿದೆ. ಈ ದೇಶದ ಸಾಮಾಜಿಕ ಸಮಸ್ಯೆಯಿರಲಿ, ಪರಿಹಾರ ಮಾರ್ಗಗಳೇ ಇರಲಿ ಅಧಿಕಾರಯುತವಾಗಿ ಅದನ್ನು ಟೀಕಿಸಬಲ್ಲ ಅರ್ಹತೆಯಿರುವುದು ದಲಿತ ದೃಷ್ಟಿಕೋನಕ್ಕೆ ಮಾತ್ರ. ಹೀಗಾಗಿ ದಲಿತ ಚೇತನಗಳ ನೈತಿಕತೆ ಇಡೀ ಸಮುದಾಯಕ್ಕೆ ಅವಶ್ಯವಾಗಿದೆ. ಈ ಎಚ್ಚರವೂ ದಲಿತ ಹೆಜ್ಜೆಗಳ ಹಿಂದಿರಬೇಕಾಗಿದೆ.

ಧರ್ಮದ ಹುನ್ನಾರಗಳು ವಾಸ್ತವದ ತಿಳಿವಿನ ಆಚೆಗೂ ವಿಸ್ತರಿಸಿಕೊಂಡಿರುತ್ತವೆ. ಅದನ್ನು ಗುರುತಿಸದೇ ಹಳೆಯ ಸೋಲುಗಳ ಹಳ್ಳ ತಗ್ಗು ಗುರುತಿಸದೇ ನಡೆದರೆ ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೇ. ಧರ್ಮಸೂಕ್ಷ್ಮಗಳು ಸೃಷ್ಟಿಸುವ ಸಮಸ್ಯೆಗಳಿಗೆ ಧರ್ಮವೇ ಉತ್ತರ ನೀಡಲಾರದು. ಹಾಗೆಂದು ಕಾನೂನೇ ಎಲ್ಲವನ್ನೂ ಸರಿಪಡಿಸಲಾರದು. ಕಾನೂನು ಜಾರಿ ಕೇವಲ ಸಾಂಕೇತಿಕ. ಕೋಮುವಾದಿ ಸರ್ಕಾರ ಮಡೆಸ್ನಾನ ನಿಷೇಧ-ಗೋ ಹತ್ಯಾ ನಿಷೇಧ ಎರಡನ್ನೂ ಒಂದೇ ಉಸಿರಿನಲ್ಲಿ ಜಾರಿಮಾಡುವ ಲಜ್ಜೆಗೇಡಿತನ ಹೊಂದಿರುತ್ತದೆ. ಆಳದಲ್ಲಿ ತಾರತಮ್ಯವನ್ನೇ ಉಸಿರಾಡುತ್ತಿದ್ದರೂ ಓಟಿನ ಆಸೆಗೆ 'ಹಿಂದೂ ನಾವೆಲ್ಲ ಒಂದು' ಎಂದು ಜಪಿಸುತ್ತಿರುತ್ತದೆ. ಇಂಥ ಸೀಳುಮನದ ರಾಜಕೀಯ ನಾಯಕರು ಕಾನೂನುಗಳಿಂದ ಯಾವ ಸಾಮಾಜಿಕ ಬದಲಾವಣೆಯನ್ನೂ ತರಲಾರರು.

ನೋವುಣ್ಣುವಾಗ ಒಂದಾಗಿದ್ದವರು ಸವಲತ್ತು ಅನುಭವಿಸುವ ಕಾಲ ಬಂದಾಗ ಅದನ್ನು ಪಡೆದುಕೊಳ್ಳಲು ಛಿದ್ರವಾಗುತ್ತಿರುವ; ಹೋಳಾದ ಪಾಲನ್ನು ಮತ್ತೆಮತ್ತೆ ಹೋಳಾಗಿಸುವ ಅವಸರದಲ್ಲಿ ದಕ್ಕಬೇಕಾದದ್ದು ಯಾರಿಗೂ ದಕ್ಕದೇ ವ್ಯರ್ಥವಾಗುತ್ತಿರುವ; ಸಂಖ್ಯೆಯ ಲೆಕ್ಕಾಚಾರ ನೆಚ್ಚಿದ ರಾಜಕಾರಣದ ಆಮಿಷಗಳಿಗೆ ಬಲಿಯಾಗುತ್ತಿರುವ ದುರಂತ ಕಣ್ಣೆದುರಿಗಿದೆ. ಅಷ್ಟೇ ಅಲ್ಲ, ಇವತ್ತು ಧಾರ್ಮಿಕತೆ ಮನಸ್ಸುಗಳನ್ನು ಒಡೆಯುತ್ತ, ನಡುವೆ ಅದೃಶ್ಯ ಗೋಡೆಗಳನ್ನೆಬ್ಬಿಸುತ್ತ, ಅನುಯಾಯಿತ್ವದ ಗುಲಾಮಗಿರಿಯನ್ನು ಉದ್ದೀಪಿಸುವಂತಿದೆ. ಹೀಗಾಗದಂತೆ ತಡೆಯಲು ಮಠ ಮತ್ತು ಸ್ವಾಮಿಗಳು ಯಾವ ಕ್ರಮ ಕೈಗೊಳ್ಳುವರೆನ್ನುವುದು ಮುಖ್ಯವಾಗುತ್ತದೆ. ಏಕೆಂದರೆ ಭಕ್ತಿ ಪ್ರತಿಭಟನೆಯ ಸೊಲ್ಲನ್ನು ಅಡಗಿಸುತ್ತದೆ. ಅಷ್ಟೇ ಅಲ್ಲ, ಭಕ್ತಿ-ಗೌರವ-ಕೃತಜ್ಞತೆಗಳು ಆಳದಲ್ಲಿ ಗುಲಾಮಗಿರಿಯನ್ನು ಪೋಷಿಸುತ್ತವೆ. ಅನುಯಾಯಿತ್ವ ಸೃಷ್ಟಿಸುವ ಅನೈಚ್ಛಿಕ ಪರಿಣಾಮ ಇದು. ಮಠಮಾನ್ಯಗಳೆಂದು ಮತ್ತೆ ಹಳೆಯ ರೋಗಗ್ರಸ್ತ ಬೇರುಗಳತ್ತ ಹೊರಳುತ್ತಿರುವ ಶೋಷಿತ ಸಮುದಾಯಗಳು ಈ ಎಚ್ಚರ ಹೊಂದಿರಬೇಕು. ಸಾವಿರಾರು ವರ್ಷಗಳಿಂದ ಶೋಷಿತ ಸಮುದಾಯಗಳ ಹಲವು ನೆಲೆಯ ಬಿಡುಗಡೆಯ ಪ್ರಯತ್ನಗಳನ್ನು ನುಂಗಿ ನೀರು ಕುಡಿದು ಯಥಾಸ್ಥಿತಿ ಹಾಗೇ ಮುಂದುವರೆಯುವಂತೆ ಮಾಡಿದ ಸಮಾಜ ಇದು. ವಿಶಾಲ ತಾತ್ವಿಕ ತಳಹದಿಯ ಮೇಲೆ ಜರುಗಿದ ಭಕ್ತಿ ಚಳುವಳಿಯೂ ಇದಕ್ಕೆ ಹೊರತಾಗಲಿಲ್ಲ. ಹೀಗಿರುತ್ತ ಧರ್ಮದ ತಂಪು ನೆರಳಿನಲ್ಲಿ ಬೆಳೆವ ಅಣಬೆಗಳಾಗಿರುವ ಮಠಗಳು ಶೋಷಿತನ ದಿಕ್ಕೆಟ್ಟ ಸಾಮಾಜಿಕ ಬದುಕನ್ನು ನೇರ್ಪಡಿಸುವ ಚೈತನ್ಯ ಹೊಂದಿವೆಯೆಂದು ನಂಬಬಹುದೆ? ಇದಕ್ಕಿಂತ ಕ್ರೂರ ತಾರತಮ್ಯದ ಆಚರಣೆಗಳು ಸಮಾಜದಲ್ಲಿವೆ. ಸಾಮಾಜಿಕ ಸಮಸ್ಯೆಗಳ ಭಾರ ಮಡೆಸ್ನಾನಕ್ಕಿಂತ ಹಿರಿದಾಗಿದೆ. ಉದ್ಯೋಗ, ಶಿಕ್ಷಣ, ಆರೋಗ್ಯ ಪಡೆದುಕೊಳ್ಳುವಲ್ಲಿ ಹಿಂದುಳಿದ ನೂರಾರು ಜಾತಿಗಳ ಕೋಟ್ಯಂತರ ಜನರಿಗೆ ಮಡೆಸ್ನಾನ ನಿಷೇಧ ಕಾನೂನಿನಿಂದ ಏನಾದರೂ ಪ್ರಯೋಜನವಿದೆಯೆ? ಮಡೆಸ್ನಾನವನ್ನು ಹೋರಾಟದ ನೆಪ ಮಾತ್ರವಾಗಿಟ್ಟುಕೊಂಡು ಇನ್ನೂ ವಿಶಾಲ ನೆಲೆಗಟ್ಟಿನ ಪ್ರತಿಭಟನೆ ಆದಾಗದಿದ್ದಲ್ಲಿ ಇಡೀ ಹೋರಾಟವೇ ಹಾಸ್ಯಾಸ್ಪದವಾಗುವುದಿಲ್ಲವೆ?

ಇದೇ ಹೊತ್ತಿಗೆ ಮತ್ತೊಂದು ಬೆಳವಣಿಗೆಯ ಕುರಿತು ಪ್ರಸ್ತಾಪಿಸಬೇಕು. ಗುಲಬರ್ಗಾ ಜಿಲ್ಲೆ ಸನ್ನತಿಯಲ್ಲಿ ಉತ್ಖನನ ಕಾರ್ಯ ನಡೆಯುತ್ತಿದ್ದು ಅಶೋಕನ ಕಾಲದಲ್ಲಿ ಬೌದ್ಧ ತಾಣವಾಗಿದ್ದ, ಭೂಕಂಪದಲ್ಲಿ ನೆಲಸಮವಾಗಿದ್ದ ಸ್ತೂಪವೊಂದು ಪತ್ತೆಯಾಗಿದೆ. ಅಲ್ಲಿ ಇತ್ತೀಚೆಗೆ ಹಿಂದೂ ದೇವತೆಯ ವಿಗ್ರಹವೊಂದು ಇದ್ದಕ್ಕಿದ್ದಂತೆ ಕಾಣಿಸಿಕೊಂಡು ಪೂಜೆ ಪುನಸ್ಕಾರಗಳು ಶುರುವಾದವು. ಗುಲಬರ್ಗಾ ಬೌದ್ಧವಿಹಾರದ ಭಂತೇಜಿ ಮೂರ್ತಿ ಅಲ್ಲಿಡುವುದನ್ನು ವಿರೋಧಿಸಿ ಪ್ರತಿಭಟಿಸಿದಾಗ ಬಂಧಿಸಲ್ಪಟ್ಟರು. ಈಗ ಅಲ್ಲಿನ ದಲಿತರಲ್ಲೇ ಬೌದ್ಧರು, ಬೌದ್ಧರಲ್ಲದವರು ಎಂದು ಎರಡು ಬಣಗಳಾಗಿ ಅನಪೇಕ್ಷಿತ ಬೆಳವಣಿಗೆಗಳು ಸಂಭವಿಸುತ್ತಿವೆಯೆಂದು ಆ ಭಾಗದ ದಲಿತ ಮಿತ್ರರೊಬ್ಬರು ನೊಂದು ಹೇಳುತ್ತಿದ್ದರು. ಹಿಂದೂ ಧರ್ಮದ ಚೌಕಟ್ಟಿನ ಹೊರಗೆ ನಿಂತು ಬೌದ್ಧ ಸನ್ಯಾಸಿ ನಡೆಸುತ್ತಿರುವ ಸಂಘರ್ಷ, ಹಿಂದೂ ಧರ್ಮದ ಒಳನಿಂತೇ ಮಠ-ಸ್ವಾಮಿಗಳು ನಡೆಸುತ್ತಿರುವ ಸಂಘರ್ಷ – ಈ ವೈರುಧ್ಯ ಒಂದೇ ಸಮುದಾಯದ ಜನರನ್ನು ಗೊಂದಲಕ್ಕೀಡುಮಾಡದೆ? ದಲಿತ ಕ್ರಿಶ್ಚಿಯನ್, ದಲಿತ ಮುಸ್ಲಿಂ, ದಲಿತ ಸಿಖ್ ಎಂದು ದಲಿತ ಸಮುದಾಯ ಧರ್ಮದ ನೆರಳಲ್ಲಿ ಭಾಗವಾಗಿದೆ. ಬೌದ್ಧ ಧರ್ಮ, ಬುದ್ಧನೆಡೆಗಿನ ನಡಿಗೆ ಸಾಂಕೇತಿಕಗೊಳ್ಳುತ್ತಿರುವಾಗ ರಾಜಕಾರಣಿಗಳಿಂದ ಪ್ರೇರಿತವಾದ ಬೌದ್ಧ ದಲಿತ-ಬೌದ್ಧರಲ್ಲದ ದಲಿತ ಎಂಬ ಇಬ್ಭಾಗ ಸಮುದಾಯಕ್ಕೆ ಮುಳುವಾಗದೆ?

'ನಾನು ಹಿಂದೂ ಎಂದು ಕರೆದುಕೊಳ್ಳಬಯಸುವುದಿಲ್ಲ. ಯಾವ ವ್ಯವಸ್ಥೆ ನನ್ನನ್ನು ಕೀಳಾಗಿ ಕಂಡಿದೆಯೋ ಅದರ ಬಗ್ಗೆ ನಾನೇಕೆ ಹೆಮ್ಮೆ ಪಡಲಿ? ಜಾತಿವ್ಯವಸ್ಥೆ ಹೀಗೇ ಮುಂದುವರೆಯುವುದಾದರೆ ದೇವಾಲಯ ಪ್ರವೇಶದಿಂದ ಏನೂ ಲಾಭವಿಲ್ಲ. ಅಸ್ಪೃಶ್ಯರು ಆರ್ಥಿಕ, ಶೈಕ್ಷಣಿಕ, ರಾಜಕೀಯ ಉನ್ನತಿ ಸಾಧಿಸಿದರೆ ದೇವಾಲಯ ಪ್ರವೇಶ ತಾನೇ ತಾನಾಗಿ ಸಾಧ್ಯವಾಗುತ್ತದೆ. ಬಹಿಷ್ಕೃತರು ಜಾತಿ ವ್ಯವಸ್ಥೆಯ ಉಪ ಉತ್ಪನ್ನಗಳು. ಜಾತಿ ವ್ಯವಸ್ಥೆ ಇರುವ ತನಕ ಅವರೂ ಇರುತ್ತಾರೆ. ಜಾತಿಪದ್ಧತಿ ನಾಶವಾಗದೇ ಅವರ ಉದ್ಧಾರ ಸಾಧ್ಯವೇ ಇಲ್ಲ. ಹಿಂದೂ ನಂಬಿಕೆಯಿಂದ ಜಾತಿಯೆಂಬ ಹೇಯ ಮತ್ತು ಕ್ರೂರ ತತ್ವವನ್ನು ತೆಗೆದುಹಾಕುವವರೆಗೆ ಹಿಂದೂ ಧರ್ಮ ಉಳಿಯುವುದಿಲ್ಲ' ಎಂದು ಘೋಷಿಸಿದ್ದರು ಅಂಬೇಡ್ಕರ್. ಅವರ ಚಿಂತನೆಗಳ ಹೆಸರಿನಲ್ಲಿ ನಡೆಯುವ ಸಂಘಟನೆಗಳು ಈ ಪ್ರಶ್ನೆ ಕೇಳಿಕೊಳ್ಳಬೇಕು: ಹಿಂದೂ ಧರ್ಮದಿಂದ ಹೊರನಡೆಯುವುದೇ ಬಿಡುಗಡೆಯ ಮಾರ್ಗ ಎಂದು ನಂಬಿ ಬುದ್ಧನೆಡೆಗೆ ನಡೆದ ಅಂಬೇಡ್ಕರ್ ಹಾಗೂ ಹಿಂದೂ ತಳಜಾತಿ ಮಠಗಳ ಸ್ವಾಮಿಗಳನ್ನು ಹೇಗೆ ಒಟ್ಟೊಟ್ಟಿಗೆ ಕೊಂಡೊಯ್ಯುವುದು?

ಮೇಲಿನ ಎಲ್ಲ ಪ್ರಶ್ನೆಗಳಿಗೆ ಮುಖಾಮುಖಿಯಾಗುವುದೆಂದರೆ ಅಂಬೇಡ್ಕರ್ ಚಿಂತನೆಗಳಿಗೆ ಮುಖಾಮುಖಿಯಾದಂತೆಯೇ. ಧರ್ಮ, ಮಠ, ಧಾರ್ಮಿಕತೆ, ಅಸ್ಪೃಶ್ಯತೆ, ಬೌದ್ಧಧರ್ಮ ಮುಂತಾದ ಸೂಕ್ಷ್ಮ ವಿಷಯಗಳ ಕುರಿತು ಮತ್ತೊಮ್ಮೆ ಯೋಚಿಸಲೇಬೇಕಾದ, ನಡೆದುಬಂದ ದುರ್ಗಮ ಹಾದಿಯನ್ನೊಮ್ಮೆ ಪರಿಶೀಲಿಸಲೇಬೇಕಾದ ತುರ್ತು ಇಂದಿದೆ.

*****

ಜಗದ ಪ್ರತಿಯೊಂದು ಅರ್ಥಪೂರ್ಣ ಕ್ರಿಯೆಯೂ ಮುಟ್ಟುವಿಕೆಯ ಮೇಲೇ ನಿಂತಿದೆ. ಮುಟ್ಟಿದರಷ್ಟೇ ಅರಿವು, ಮುಟ್ಟದಿದ್ದರೆ ಸಾವು. ಮುಟ್ಟದೇ ಮುಟ್ಟಿಸಿಕೊಳ್ಳದೇ ಇರುವುದರ ಮೀಮಾಂಸೆಯಲ್ಲೇ ಬದುಕು ಸವೆಸುವ ಮೇಲ್ಜಾತಿ ಮನಸ್ಸುಗಳಿಗೆ ಮುಟ್ಟುವಿಕೆಯ ಸರಳ ತಾತ್ವಿಕತೆ ಅರ್ಥವಾಗಿದ್ದರೆ ಅಸ್ಪೃಶ್ಯತೆ ಈ ನೆಲದಲ್ಲಿರುತ್ತಿರಲಿಲ್ಲ. ಅಂತಃಕರಣದ ಸ್ಪರ್ಶವನ್ನೇ ಒಪ್ಪದ ಸಾಮಾಜಿಕ, ಧಾರ್ಮಿಕ ವಾತಾವರಣದಲ್ಲಿ ಆಧ್ಯಾತ್ಮ, ಮಠಗಳು ಮತ್ತು ಸಾಮಾಜಿಕ ನ್ಯಾಯ ಒಟ್ಟೊಟ್ಟು ಹೋಗಲಾರವು. ತಳ ಸಮುದಾಯಗಳು ಸಾವಿರಾರು ವರ್ಷಗಳಿಂದ ಹಸಿವೆ, ಅಸ್ಪೃಶ್ಯತೆ, ತಾರತಮ್ಯವನ್ನು ಸಹಿಸಿಕೊಂಡು ಬದುಕಿವೆ. ಅಕ್ಷರವಿಲ್ಲದ ಲೋಕದಲ್ಲಿ ಅವಮಾನ, ಕೀಳರಿಮೆಯ ಸೋಂಕಿಲ್ಲದ ಅರಿವನ್ನು ಕಾಪಿಟ್ಟುಕೊಂಡು ತಲೆಮಾರಿನಿಂದ ತಲೆಮಾರಿಗೆ ಸಾಗಿಸಿವೆ.

ಮಠಗಳೆಂಬ ಗಾಜಿನ ಮನೆಯಲ್ಲಿ ಕುಳಿತು ಕಾಲಿಗೆ ಬೀಳುವ ಮೊದಲೇ ಹರಸುವವರಂತೆ ಕೈಯೆತ್ತುವ ಸ್ವಾಮಿಗಳು ಸಾಮಾಜಿಕ ನ್ಯಾಯದ ಕುರಿತು ಮಾತನಾಡುವರೆಂದು ನಿರೀಕ್ಷಿಸಬಹುದೆ? ತಾವು ಪ್ರತಿನಿಧಿಸುವ ಸಮುದಾಯಗಳು ತೀವ್ರ ತಾರತಮ್ಯ ಅನುಭವಿಸುವಾಗ, ಸಾಮಾಜಿಕ ಅನ್ಯಾಯಕ್ಕೊಳಗಾದಾಗ ಈ ಸ್ವಾಮಿಗಳು ಬೀದಿಗಿಳಿದು ಪ್ರತಿಭಟಿಸುವರೆ? ಜಾತಿಪದ್ಧತಿಯ ಕುರಿತು, ಜಾತಿ ಶ್ರೇಣೀಕರಣದ ಕುರಿತು ಅವರ ನಿಲುವುಗಳೇನು? ಮಠವೆಂಬುದು ಧರ್ಮವೆಂಬ ಸಾಂಸ್ಥಿಕ ಚೌಕಟ್ಟಿನೊಳಗಿರುವ ಪಟ್ಟಭದ್ರ ವ್ಯವಸ್ಥೆ. ಮಠ ನಡೆಸುವುದೊಂದು ರಾಜೀ ಹೊಂದಾಣಿಕೆ. ಅಲ್ಲಿ ಯಾವ ಕ್ರಾಂತಿ–ಬದಲಾವಣೆಯನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.

ವ್ಯವಸ್ಥೆಯ ಎಲ್ಲ ದುಷ್ಪತನಗಳ ಅಂತಿಮ ಪರಿಣಾಮವನ್ನೆದುರಿಸಿದ್ದು ತಳಸಮುದಾಯಗಳೇ. ಧರ್ಮ ದೇವರುಗಳೂ ತಮ್ಮ ಪರವಾಗಿಲ್ಲವೆನ್ನುವುದು ಅವರ ಗಮನಕ್ಕೆ ಬಂದಿದೆ. ಕಾಲಕಾಲಕ್ಕೆ ದಮನಿಸುವ ಹೊಸ ಹತಾರಗಳನ್ನು ಸಮಾಜ ರೂಢಿಸಿಕೊಳ್ಳುತ್ತ ಬಂದಾಗ ತಮ್ಮ ಹೀನಾಯ ಬದುಕಿನ ಸಮಜಾಯಿಷಿಗೆ, ಸಮಾಧಾನಕ್ಕೆ ಬೇರೆಬೇರೆ ನೆಲೆಯ ತಾತ್ವಿಕತೆಗಳನ್ನು ಅರಸಿದ್ದಾರೆ. ಹುಟ್ಟಿಸಿದ ದೈವವನ್ನೇ ಪ್ರಶ್ನಿಸುತ್ತ, ದೈವವನ್ನೇ ಸಮಾನತೆಯ ಮೂಲ ಆಧಾರವಾಗಿ ಪರಿಗಣಿಸುತ್ತ, ಭಕ್ತಿ ಧರ್ಮದ ಪರಿಧಿಯೊಳಗೆ ಸಮಾನತೆ ಸಾಧಿಸಲು ಪ್ರಯತ್ನಿಸಿದ್ದಾರೆ.

ಆಧ್ಯಾತ್ಮಿಕ ನೆಲೆಯ ಪ್ರತಿಭಟನೆ ತಳಸಮುದಾಯಗಳು ಕಂಡುಕೊಂಡ ಹಳೆಯ ಹಾದಿ. ಆದರೆ ಆಧ್ಯಾತ್ಮಿಕ ನೆಲೆಯ ಹೋರಾಟಗಳು, ತಾತ್ವಿಕ ವಾಗ್ವಾದಗಳು ಕೊನೆಗೂ ಆ ಸಮುದಾಯಗಳನ್ನು ಎಲ್ಲಿ ನಿಲ್ಲಿಸಿದವೆಂಬುದನ್ನೂ ಗಮನಿಸಬೇಕು. ತಿರುಪ್ಪಾನ್ ಆಳ್ವಾರ್‌ರಿಂದ ಹಿಡಿದು ಇಂದಿನ ತನಕ ಭಕ್ತಿ ಶೋಷಿತನಲ್ಲಿ ವ್ಯಕ್ತಿಗತ ಬದಲಾವಣೆಯನ್ನುಂಟುಮಾಡಿ ಆತ ಘನತೆಯಲ್ಲಿ ನೋವನ್ನೆದುರಿಸಲು, ಆತ್ಮಗೌರವ ಗಳಿಸಿಕೊಳ್ಳಲು ಆಧ್ಯಾತ್ಮಿಕ ಶಕ್ತಿ ನೀಡಿದೆ. ಆದರೆ ಸಾಮಾಜಿಕವಾಗಿ ಆತನ ಸ್ಥಾನಮಾನ ಬದಲಾಗಲಿಲ್ಲ. ಚೊಕ್ಕಮೇಲ, ದಾಸಿಮಯ್ಯ, ಕನಕರನ್ನು ಇಡೀ ಸಮಾಜವೇ ಸ್ವೀಕರಿಸಿದರೂ ಅವರ ಸಮುದಾಯಗಳ ಸಾಮಾಜಿಕ ಸ್ಥಾನಮಾನ ಬದಲಾಗಲಿಲ್ಲ. ಭಕ್ತಿ ಚಳುವಳಿ ತಮಿಳುನಾಡಿನಲ್ಲಿ 7–9ನೇ ಶತಮಾನದಲ್ಲೇ ಶುರುವಾಯಿತು. ತಮಿಳುನಾಡಿನ ನಂದನಾರ್, ನಮ್ಮಾಳ್ವಾರ್‌ರನ್ನೂ ಸೇರಿದಂತೆ ಹಲವು ಭಕ್ತ ಕವಿಗಳು ಚಾತುರ್ವರ್ಣ್ಯದ ಬಗೆಗೆ, ಜಾತಿ ಅನಿಷ್ಟದ ಬಗೆಗೆ ಹಾಡಿದರು. ಅದಾದ 1300 ವರ್ಷಗಳ ನಂತರವೂ ಪೆರಿಯಾರ್ ಅದೇ ತಾರತಮ್ಯದ ವಿರುದ್ಧ ಗುಡುಗಬೇಕಾಯಿತು. ಇಂದೂ ಅಲ್ಲಿ ದ್ರಾವಿಡ ಪಕ್ಷವೋ, ಅದ್ರಾವಿಡ ಆಡಳಿತವೋ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆಯಾಗಿಲ್ಲ.



ಇವನ್ನೆಲ್ಲ ಆಳವಾಗಿ ಅಭ್ಯಸಿಸಿದ್ದ ಅಂಬೇಡ್ಕರ್ ಹಿಂದೂ ಧರ್ಮವಾಗಲೀ, ಹಿಂದೂ ಆಧ್ಯಾತ್ಮವಾಗಲೀ ಶೋಷಿತ ಸಮುದಾಯಗಳಿಗೆ ಬಿಡುಗಡೆಯ ದಾರಿಯಾಗಲಾರವು ಎಂದು ಸ್ಪಷ್ಟವಾಗಿ ನಂಬಿದ್ದರು. ಅಂಬೇಡ್ಕರ್ ತಮ್ಮ ಹೋರಾಟ ಶುರುಮಾಡಿದ್ದೂ ದೇವಾಲಯ ಪ್ರವೇಶ ಮತ್ತು ನೀರಿನ ಹಕ್ಕು ಹೋರಾಟದಿಂದ. ಆದರೆ ಶೋಷಿತ ಸಮುದಾಯವನ್ನು ಧಾರ್ಮಿಕ, ತಾತ್ವಿಕ ಹೋರಾಟಕ್ಕೆ ಅಣಿಗೊಳಿಸುವುದರ ಅಪಾಯವನ್ನು ಅವರು ಬಹುಬೇಗ ಮನಗಂಡರು. ಹೋರಾಟ ಮರೆತ ದನಿಗಳಿಗೆ ಜಾಗೃತಿ ಮೂಡಿಸಲು, ಸ್ವಾಭಿಮಾನ ಎಚ್ಚರಿಸಲಷ್ಟೆ ಅದು ಅಗತ್ಯ ಎಂಬ ನಿಲುವು ತಳೆದರು. ಭಕ್ತಿ ಮತ್ತು ಧಾರ್ಮಿಕತೆ ಸಾಂಸ್ಥಿಕ ರೂಪ ತಳೆದ ಕೂಡಲೇ ಸೃಷ್ಟಿಸುವ ಗುಲಾಮಗಿರಿಯ ಅರಿವೂ ಅವರಿಗಿತ್ತು. 'ಕುತ್ತಿಗೆಯ ಸುತ್ತಲಿನ ತುಳಸಿಮಾಲೆ ನಿಮ್ಮನ್ನು ಸಾಲಗಾರರ ಕೈಯಿಂದ ಪಾರು ಮಾಡುವುದಿಲ್ಲ. ರಾಮಭಜನೆ ಹಾಡಿದರೆ ಮನೆ ಬಾಡಿಗೆ ಕಡಿಮೆಯಾಗುವುದಿಲ್ಲ. ಪಂಢರಾಪುರ ಯಾತ್ರೆ ತಿಂಗಳ ಕೊನೆಗೆ ಸಂಬಳ ತರುವುದಿಲ್ಲ. ಬಹುಪಾಲು ಜನ ಅರ್ಥವಾಗದ ಬದುಕಿನ ನಿಗೂಢಗಳ ಕುರಿತು ಮೂಢನಂಬಿಕೆಗಳಲ್ಲಿ ಮುಳುಗಿರುವುದರಿಂದ ಕೆಲವರು ಅದೇ ಅವಕಾಶ ಬಳಸಿ ಸಮಾಜ ವಿರೋಧಿ ಕೆಲಸದಲ್ಲಿ ತೊಡಗಿದ್ದಾರೆ' ಎಂದು ಎಚ್ಚರಿಸಿದ್ದರು. ಧರ್ಮ ಮತ್ತು ಗುಲಾಮಗಿರಿ ಒಟ್ಟೊಟ್ಟಿಗೆ ನಡೆಯಲಾರವು ಎಂದು ಘೋಷಿಸಿ ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ಹಿಂದೂ ಧರ್ಮದ ಆಂತರಿಕ ಸಮಸ್ಯೆಯೆಂದು ಬಿಂಬಿಸದೇ ಅದನ್ನೊಂದು ನಾಗರಿಕ ಹಕ್ಕು ಹೋರಾಟವಾಗಿ ರೂಪಿಸಿದರು. ಗಾಂಧಿ ಮತ್ತು ಅಂಬೇಡ್ಕರ್ ದಾರಿಗಳ ನಡುವಿನ ತಾತ್ವಿಕ ವ್ಯತ್ಯಾಸ ಶುರುವಾಗುವುದು ಇಲ್ಲಿಯೇ.

*****

ಬಿತ್ತದೇ ಬೆಳೆ ಕೊಯ್ಯುವ, ಹನಿ ಬೆವರು ಹರಿಸದೇ ಫಸಲು ಕೊಯ್ಯುವ, ತಯಾರಿಕೆಯ ಕನಿಷ್ಠ ಶ್ರಮವಿಲ್ಲದೆ ಹಂಚಲು ಹೊರಡುವ ಬಂಡವಾಳಿಗ ಜಗತ್ತಿನಲ್ಲಿ ಶೋಷಿತ ಸಮುದಾಯಗಳು ಇನ್ನಷ್ಟು ತಬ್ಬಲಿಯಾಗುತ್ತಿವೆ. ಆರ್ಥಿಕ ಉದಾರೀಕರಣ ಮತ್ತು ಸಾಮಾಜಿಕ ನ್ಯಾಯ ಒಟ್ಟೊಟ್ಟಿಗೆ ಹೋಗಲಾರವೆಂಬ ಸತ್ಯ ಈಗ ಗೋಚರವಾಗತೊಡಗಿದೆ. ಶೋಷಣೆಯ ಹೊಸಬಗೆಯ ನೆಲೆಗಳನ್ನು ಗುರುತಿಸಿ ಹೋರಾಡಲು ಹೊಸ ಮಾರ್ಗ, ಹತಾರಗಳನ್ನು ಅನ್ವೇಷಿಸಬೇಕಾದ ಕಾಲ ಇದಾಗಿದೆ. ಹೀಗಿರುವಾಗ ವಸಾಹತುಶಾಹಿಗಳ ಒಡೆದು ಆಳುವ ನೀತಿಯ ಡೆಮಾಕ್ರಟಿಕ್ ವರ್ಷನ್ ಎನ್ನುವಂತೆ ದಮನಿತ ಸಮುದಾಯಗಳು ಪ್ರತ್ಯೇಕ ಅಸ್ಮಿತೆಗಾಗಿ ನಡೆಸುವ ಹೋರಾಟವನ್ನು ಬೆಂಬಲಿಸಲಾಗುತ್ತಿದೆ. ಶೋಷಿತ ಸಮುದಾಯಗಳ ಒಕ್ಕಟ್ಟು ಸೀಳುವ ಇಂಥ ನಡೆಗಳು ಆಳದಲ್ಲಿ ಕೋಮುವಾದಿ ಮೂಲಭೂತವಾದಿ ಶಕ್ತಿಗಳ ಉದ್ದೇಶ ಈಡೇರಿಸುವಂಥವೇ ಆಗಿರುತ್ತವೆ. ಜಾತಿ–ಧರ್ಮ ಪ್ರಜ್ಞೆಯಿಂದ ಎಚ್ಚೆತ್ತ, ಪರಸ್ಪರ ಕಾದಾಡುವ ತುಂಡು ಗುಂಪುಗಳಿರುವಷ್ಟು ದಿನ ಕೋಮುವಾದಿ ರಾಜಕಾರಣ ಸಬಲವಾಗಿರುತ್ತದೆ.

ಸಾವಿರಾರು ಅಂಬೇಡ್ಕರ್ ಪ್ರತಿಮೆಗಳನ್ನು ಉತ್ತರ ಪ್ರದೇಶ ರಾಜ್ಯದ ಮೂಲೆಮೂಲೆಯಲ್ಲಿ ನಿಲ್ಲಿಸಹೊರಟ ಮಾಯಾವತಿ ಗಾದಿಯಿಂದ ಕೆಳಗಿಳಿದಿದ್ದು ಹೋರಾಟದ ರಾಜಕಾರಣದಲ್ಲಿ ರಾಜಿ ರಾಜಕಾರಣ ಮತ್ತು ಕೋಮುವಾದ ನುಸುಳಿದ್ದರ ಸ್ಪಷ್ಟ ಪ್ರತಿಫಲ. ಅದಾದ ತಿಂಗಳು ಕಳೆಯುವುದರಲ್ಲಿ ಹಳ್ಳಿಯ ಮುಖಂಡನೊಬ್ಬ ದಲಿತನಿಗೆ ಮಲ ತಿನ್ನಿಸಿದ ಘಟನೆ ವರದಿಯಾಗಿದೆ. ಹಸಿದ ಹೊಟ್ಟೆಗೊಂದು ತುತ್ತುಣಿಸುವ ಯೋಗ್ಯತೆಯಿಲ್ಲದವರು ಬಾಯಿಗೆ ಮಲ ತುಂಬಿಯಾರು. ಅಂಥ ಕ್ರೂರ ಮನಸ್ಸುಗಳನ್ನು ಪ್ರತಿಮಾ ರಾಜಕಾರಣ ಗುರುತಿಸಿ ಶಿಕ್ಷಿಸುವುದಿಲ್ಲ, ಮನಃಪರಿವರ್ತನೆ ಮಾಡುವುದೂ ಇಲ್ಲ. ಅದು ಪ್ರತಿಮೆಯಂತೆಯೇ ಮುಗುಮ್ಮಾಗಿ ಉಳಿಯುತ್ತದೆ. ದಮನಿತರ ಬದುಕು ಇದ್ದಹಾಗೇ ಮುಂದುವರೆಯುತ್ತದೆ. ಈ ಐದು ವರ್ಷ ಯುಪಿಯಲ್ಲಿ ನಡೆದಿದ್ದು ಇದೇ. ಈ ಹಿನ್ನೆಲೆಯಲ್ಲಿ ಆತ್ಮಗೌರವದ ರಾಜಕಾರಣ ಮತ್ತು ರಾಜಕೀಯ ನೈತಿಕತೆಯ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಇದು. ಬಿಡುಗಡೆ ಬಯಸುವ ಶೋಷಿತನಿಗೆ ಹೋರಾಟ ಸಂಭ್ರಮದ ಜೊತೆಗೆ ಬಿಡುಗಡೆಯ ಭಯವನ್ನೂ (ಫಿಯರ್ ಆಫ್ ಫ್ರೀಡಂ) ತಂದುಕೊಡುತ್ತದೆ ಎನ್ನುತ್ತಾನೆ ಫ್ರೇರೆ. ಅದು ಸ್ವಾತಂತ್ರ್ಯದ ಭಯ. ಅದನ್ನು ಮೀರಲು ಪೂರ್ವ ತಯಾರಿ ಬೇಕಾಗುತ್ತದೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟ ಅಂಥ ಪೂರ್ವ ತಯಾರಿ ನೀಡುವಂಥವು. ಇಲ್ಲದಿದ್ದರೆ ಶೋಷಿತನ ಗುರಿ ಶೋಷಕನ ಸ್ಥಾನ ಅಲಂಕರಿಸುವುದೇ ಆಗಿಬಿಡುತ್ತದೆ. ಅಂಬೇಡ್ಕರ್ ಈ ಮೂರಕ್ಕೆ ಒತ್ತು ನೀಡಿದ್ದು ಇದೇ ಕಾರಣಕ್ಕೆ. 'ಎರಡನೇ ದರ್ಜೆ ಬ್ರಾಹ್ಮಣ'ರಾಗುವ ಅಪಾಯದಿಂದ (ಇದು ಅವರದೇ ಮಾತು) ದಲಿತರನ್ನು ಪಾರುಮಾಡಲು ಬ್ರಾಹ್ಮಣಿಕೆಯಲ್ಲದ ಪರ್ಯಾಯಗಳನ್ನೇ ಅವರು ಹುಡುಕಿದರು.

ಜಾತಿ ವ್ಯವಸ್ಥೆಯಿಂದ ಛಿದ್ರಗೊಂಡ ಈ ಸಾಮಾಜಿಕ ವ್ಯವಸ್ಥೆಗೆ ಬೇಕಿರುವುದು ಆತ್ಯಂತಿಕ ಬದಲಾವಣೆಯೇ ಹೊರತು ಸುಧಾರಣೆಯಲ್ಲ. ತಿಪ್ಪೆಯ ಮೇಲೆ ಮಹಲು ಕಟ್ಟುವುದರಿಂದ ಉಪಯೋಗವಿಲ್ಲ. ಇದನ್ನು ಅರ್ಧ ಶತಮಾನಕ್ಕಿಂತಲೂ ಮುಂಚೆಯೇ ಅಂಬೇಡ್ಕರ್ ಅರಿತಿದ್ದರು. ಮತಾಂತರದ ಅವರ ನಿರ್ಧಾರಕ್ಕೆ ಈ ತಿಳುವಳಿಕೆಯೇ ಕಾರಣವಾಗಿತ್ತು. ಶೋಷಿತ ಸಮುದಾಯಗಳು ಈ ನಿಟ್ಟಿನಲ್ಲಿ ಅಂಬೇಡ್ಕರರನ್ನು ಅರಗಿಸಿಕೊಳ್ಳದೇ ಹೋದರೆ ಆತ್ಮಗೌರವ, ಸ್ವಾಭಿಮಾನ, ಸಬಲೀಕರಣದ ಮಾತಿಗೆ ಅರ್ಥವಿಲ್ಲ. ಅಂಬೇಡ್ಕರ್ ತಾತ್ವಿಕತೆಯನ್ನು ಮುಂದುವರೆಸಿದಂತೆಯೂ ಆಗುವುದಿಲ್ಲ.

ವಾಸ್ತವದ ಇಂಥ ಎಲ್ಲ ಪ್ರಶ್ನೆ, ಸೂಕ್ಷ್ಮಗಳನ್ನು ಗಮನದಲ್ಲಿಟ್ಟುಕೊಂಡೇ ಪ್ರಗತಿಪರ ಮನಸ್ಸುಗಳು ಚಲಿಸಬೇಕು. ದೂರದ ಬೆಟ್ಟವನ್ನು ಪುಟ್ಟ ಹಕ್ಕಿಯ ಕಣ್ಣಿನಿಂದಲೂ ನೋಡುವ ಝೆನ್ ತಾತ್ವಿಕತೆ ಬೆಳೆಸಿಕೊಳ್ಳಬೇಕು. ■

ಸರ್ಕಾರಿ ಊಳಿಗಮಾನ್ಯ ಪದ್ಧತಿಯ ಕಡೆಗೆ

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಮಕ್ಕಳು ಮತ್ತು ಇತರ ಅವಲಂಬಿತರ ಭವಿಷ್ಯವನ್ನು ಗಟ್ಟಿ ಮಾಡುವುದು ತಂದೆ ತಾಯಿಗಳ ಅಥವಾ ಕುಟುಂಬದ ದೊಡ್ಡವರ ಜವಾಬ್ದಾರಿ. ಮೂವರು ಸಹೋದರಿಯರು ಮತ್ತು ನಾಲ್ವರು ಸಹೋದರರ ಪೈಕಿ ನನ್ನ ತಂದೆ ತಾಯಿಗಳಿಗೆ ನಾನೇ ಅತಿ ಕಿರಿಯವನು. ನಮ್ಮೆಲ್ಲರಿಗೂ ದೊಡ್ಡವನಾದ ನನ್ನ ಅಣ್ಣ 1969ರಲ್ಲಿ ಉತ್ತರ ಪ್ರದೇಶದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ನೇಮಕವಾದರು. ನನಗೆ ಅವರು ತಂದೆ ಇದ್ದಂತೆ. ನನ್ನ ತಂದೆ ಒಬ್ಬ ರೈತ ಮತ್ತು ತಾಯಿ ಗೃಹಿಣಿ.

ಹೀಗೆ ಏಳು ಮಕ್ಕಳ ಅಂದರೆ ನಾಲ್ಕು ಗಂಡು, ಮೂರು ಹೆಣ್ಣು ಮಕ್ಕಳ ಭವಿಷ್ಯವನ್ನು ಕಾಪಾಡುವ ಜವಾಬ್ದಾರಿ ನನ್ನ ಅಣ್ಣನ ಮೇಲಿತ್ತು. ಅವರ ಇತರೆ ಸಹೋದ್ಯೋಗಿಗಳು ಸಹ ತಮ್ಮ ಮಕ್ಕಳ ಮತ್ತು ಇತರ ಅವಲಂಬಿತರ ಭವಿಷ್ಯವನ್ನು ಗಟ್ಟಿಮಾಡುವ ಕಡೆ ಗಮನ ನೀಡಿದ್ದರು. ಒಂದು ವರ್ಷದ ಹಿಂದೆ ನಾನು ನನ್ನ ಅಣ್ಣನನ್ನು ಅವನ ಸಹೋದ್ಯೋಗಿಗಳಲ್ಲಿ ಯಾರಾದರೂ ತಮ್ಮ ಮಕ್ಕಳನ್ನು ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡಲು ಕಳುಹಿಸಿದ್ದರೆ ಎಂದು ಕೇಳಿದಾಗ ಅವರು 'ಯಾರೂ ಇಲ್ಲ' ಎಂದರು. ಹಾಗಾದರೆ ತಮ್ಮ ಮಕ್ಕಳ ಭವಿಷ್ಯಕ್ಕೆ ಅವರು ಏನನ್ನು ಮಾಡಿದರು ಎಂದು ಕೇಳಿದಾಗ 'ಅವರು ತಮ್ಮ ಮಕ್ಕಳ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟರು, ಜಮೀನು ಕೊಂಡರು ಮತ್ತು ಫ್ಲಾಟ್‌ಗಳನ್ನು ಕೊಂಡರು', ಎಂದರು. 'ನನ್ನ ಸಹೋದ್ಯೋಗಿಗಳ ಮಕ್ಕಳಲ್ಲಿ ಹೆಚ್ಚು ಜನರು ಸಬ್ ಇನ್ಸ್‌ಪೆಕ್ಟರ್‌ಗಳು, ಕಾನ್ಸ್‌ಟೇಬಲ್‌ಗಳು, ಶಾಲಾ ಉಪಾಧ್ಯಾಯರು ಮತ್ತು ಗುಮಾಸ್ತರು ಆದರು', ಎಂದೂ ಸೇರಿಸಿದರು.

ನನ್ನ ಅಣ್ಣ ನನ್ನ ಸ್ನಾತಕೋತ್ತರ ಪದವಿಗೆ ಅತ್ಯುತ್ತಮವಾದ ವಿಶ್ವವಿದ್ಯಾಲಯವನ್ನು ಆರಿಸಿಕೊಳ್ಳುವಂತೆ ಹೇಳಿದ್ದರು. ಅಲಹಾಬಾದ್ ವಿಶ್ವವಿದ್ಯಾಲಯ ನನ್ನ ಮೆಚ್ಚಿನ ಆಯ್ಕೆಯಾಗಿತ್ತು. ಆದರೆ 1977ರ ನಂತರದ ಪರಿಸ್ಥಿತಿಗಳಿಂದ ವಿಶ್ವವಿದ್ಯಾಲಯದ ವೇಳಾಪಟ್ಟಿ ಸರಿಹೊಂದಲಿಲ್ಲ. ನಾನು ಸ್ವಲ್ಪ ತಡವಾಗಿದ್ದೆ. ಆದ್ದರಿಂದ ಬಿ.ಟೆಕ್ ವಿದ್ಯಾರ್ಥಿಯಾಗಿದ್ದ ನನ್ನ ಸಹೋದರ ಸಂಬಂಧಿಯ ಸಲಹೆ ಮೇರೆಗೆ ನಾನು ದೆಹಲಿಗೆ ಹೋದೆ. ದೆಹಲಿಯಲ್ಲಿ ನಾನು ಜೆಎನ್‌ಯು ಸೇರಬೇಕೆಂದು ಅಲ್ಲಿಗೆ ಅರ್ಜಿ ಸಲ್ಲಿಸಿದೆ. ನಾಲ್ಕು ತಿಂಗಳಲ್ಲಿ ನನಗೆ ಪ್ರವೇಶ ದೊರೆಯಿತು. ಇದು ನಡೆದದ್ದು 1980ರಲ್ಲಿ.

ನಾನು ಜೆಎನ್‌ಯು ಸೇರಿದ ನಂತರ ನನ್ನ ಅಣ್ಣನ ಮೂರು ಮಕ್ಕಳು ನನ್ನನ್ನು ಹಿಂಬಾಲಿಸಿ ದೆಹಲಿಗೆ ಬಂದರು. ಮತ್ತು ದೆಹಲಿಯ ಹಿಂದೂ ಕಾಲೇಜಿನಲ್ಲಿ ಅಧ್ಯಯನ ಮಾಡಿದರು. ಅವರ ನಾಲ್ಕನೇ ಮಗ ಬೇರೆ ಕಡೆ ಬಿ.ಟೆಕ್ ಮಾಡಿದ. ಅವರ ಹಿರಿಯ ಮಗ ಡಾಕ್ಟರೇಟ್ ಮಾಡಿ ಈಗ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿದ್ದಾನೆ. ಅವರ ಎರಡನೆ ಮಗ ಹಡಗು ಉದ್ಯಮದಲ್ಲಿ ಕ್ಯಾಪ್ಟನ್ ಆಗಿ ಪ್ರಪಂಚ ಸುತ್ತುತ್ತಿದ್ದಾನೆ. ಅವರ ಮೂರನೆ ಮಗ ಸಾಕ್ಷ್ಯ ಚಿತ್ರ ತಯಾರಿಸುವವನಾಗಿದ್ದಾನೆ. ಅವರ ನಾಲ್ಕನೆ ಮಗ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಮುಂಬೈನ ದೊಡ್ಡ ಸಾಫ್ಟ್‌ವೇರ್ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದಾನೆ. ನನ್ನ ಅಣ್ಣನ ಮೊಮ್ಮಕ್ಕಳಿಬ್ಬರು ಇಂಗ್ಲೀಷ್ ಮಾಧ್ಯಮದಲ್ಲಿ ಓದುತ್ತಿದ್ದಾರೆ.

ಅವರ ಮೂರು ಹೆಣ್ಣು ಮಕ್ಕಳಿಗೆ ಏನಾಯಿತು? ಅವರ ಮೊದಲನೆಯ ಮಗಳು ಇಪ್ಪತ್ತಾರು ವರ್ಷಗಳ ಹಿಂದೆ ಒಬ್ಬ ಐ.ಐ.ಟಿ ಓದಿದವನನ್ನು ಮದುವೆ ಆದಾಗ ಬಿ.ಎ. ಎರಡನೇ ವರ್ಷದಲ್ಲಿದ್ದಳು. ಅವರ ಎರಡನೇ ಮಗಳು ಬಹುರಾಷ್ಟ್ರೀಯ ಕಂಪನಿ ಒಂದರ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಮದುವೆ ಆದಾಗ ಎಮ್.ಫಿಲ್ ಮುಗಿಸಿ, ಪಿ.ಹೆಚ್.ಡಿಗೆ ರಿಜಿಸ್ಟರ್ ಮಾಡಿದ್ದಳು. ಮೂರನೆ ಮಗಳು ಎಮ್.ಕಾಂ. ಮಾಡಿ ಬಹಳ ಹೆಸರುವಾಸಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುವ ಸಾಫ್ಟ್‌ವೇರ್ ಇಂಜಿನಿಯರ್‌ನನ್ನು ಮದುವೆ ಆದಳು. ಮದುವೆ ಸಮಯದಲ್ಲಿ ಅವನು ಲಂಡನ್‌ನಲ್ಲಿ ಕೆಲಸ ಮಾಡುತ್ತಿದ್ದನು.

ನನ್ನ ಅಣ್ಣ ನಗರದಲ್ಲಿ ಒಂದು ಮನೆ ಕಟ್ಟಲು ಸಾಧ್ಯವಾಗಲಿಲ್ಲ. ಅವನ ಬ್ಯಾಂಕ್ ಖಾತೆಯಲ್ಲಿ ಯಾವುದೇ ಉಳಿತಾಯವಿರಲಿಲ್ಲ. ಅವನು ತನಗಾಗಲಿ, ತನ್ನ ಮಕ್ಕಳಿಗಾಗಲಿ ನಿಗದಿತ ಠೇವಣಿ ಇಡಲಿಲ್ಲ. ಟಿ.ವಿ., ರೆಫ್ರಿಜರೇಟರ್ ಅಥವಾ ಫೋನ್ ಕನೆಕ್ಷನ್ ಇವುಗಳನ್ನು ಅವನು ಕೊಳ್ಳಲಾಗಲಿಲ್ಲ. ಅವನು ತನ್ನೆಲ್ಲಾ ಹಣವನ್ನೂ ನಮ್ಮ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದ. ಅದು ನಮಗೆ ಒಳ್ಳೆಯ ಜೀವನವನ್ನು ಮತ್ತು ಸ್ವಾತಂತ್ರ್ಯವನ್ನು ನೀಡಿತು. ಇದು ನನ್ನ ಅಣ್ಣನ ಹಣ ಹೂಡಿಕೆಯ ಸಂಕ್ಷಿಪ್ತ ಕಥೆ. ಅವರಿಗೆ ವಿದ್ಯಾಭ್ಯಾಸ ಒಂದು ಚಿನ್ನದ ಗಣಿಯಾಗಿ ಪರಿಣಮಿಸಿತು.

ರಾಷ್ಟ್ರ ತನ್ನ ಪ್ರಜೆಗಳ ಪೋಷಕನಾಗಿದ್ದಲ್ಲಿ ಅದು ಅತಿ ಹೆಚ್ಚು ಲಾಭ ಬರುವ ಕಡೆ ತನ್ನ ಬಂಡವಾಳ ಹೂಡಬೇಕು. ಭಾರತದ ಯಾವ ತಂದೆ ತಾಯಿಗಳು ತಮ್ಮ ಮಕ್ಕಳ ಶಿಕ್ಷಣದಲ್ಲಿ ಹಣ ಹಾಕಿದರೋ ಅವರು ತಮ್ಮ ಮಕ್ಕಳ ಭವಿಷ್ಯವನ್ನು ಗಟ್ಟಿ ಮಾಡಿಕೊಂಡರು. ರತನ್ ಟಾಟ ಕೂಡ ಯು.ಎಸ್ ನಲ್ಲೇ ಓದಿದವರು.

ರಾಷ್ಟ್ರ ಎಂಬುದು ಸಹ ಒಂದು ಅಮೂರ್ತ ಕಲ್ಪನೆ ಎಂದು ನನ್ನ ಓದುಗರಿಗೆ ಹೇಳಲು ಇಚ್ಛಿಸುತ್ತೇನೆ. ಸರ್ಕಾರಗಳು ಮಾಡುವ ಕೆಲಸವೇ ಸರ್ಕಾರ. ಸರ್ಕಾರಗಳ ಕೆಲಸಗಳು ರಾಷ್ಟ್ರದ ಕಲ್ಪನೆಯಾಗಿ ಮಾರ್ಪಾಡಾಗುತ್ತವೆ. ಅತ್ಯಧಿಕ ಮತಗಳನ್ನು ಪಡೆದ ರಾಜಕೀಯ ಪಕ್ಷಗಳು ಸರ್ಕಾರ ನಡೆಸುತ್ತವೆ. ಅಥವಾ ಮಿಶ್ರ ಸರ್ಕಾರಗಳನ್ನು ನಿಭಾಯಿಸುತ್ತವೆ. ಚುನಾವಣೆಯಲ್ಲಿ ಪಕ್ಷಗಳನ್ನು ಗೆಲ್ಲಿಸಲು ಚುನಾವಣಾ ಸಂಹಿತೆಗಳು ಕೆಲಸ ಮಾಡುತ್ತವೊ ಇಲ್ಲವೊ ಒಂದು ಸಾರಿ ಚುನಾಯಿತರಾದ ಮೇಲೆ ಅಧಿಕಾರಾರೂಢ ಪಕ್ಷಗಳು ತಮ್ಮ ಜಯಕ್ಕೆ ತಮ್ಮ ಚುನಾವಣಾ ಸಂಹಿತೆಗಳೆ ಕಾರಣ ಎಂದು ಒತ್ತಿ ಹೇಳುತ್ತವೆ.

ತಮ್ಮನ್ನು ಚುನಾಯಿಸಿದವರಿಗಾಗಿ ಇಂದಿನ ರಾಜಕೀಯ ಪಕ್ಷಗಳು ಏನನ್ನು ಮಾಡುತ್ತಿವೆ? ತಮಿಳುನಾಡಿನಲ್ಲಿ ನಾಲ್ಕು ದಶಕಗಳ ಹಿಂದೆ ಹುಟ್ಟಿಕೊಂಡ ಶಾಲಾ ಮಕ್ಕಳಿಗೆ ಉಚಿತ ಮಧ್ಯಾಹ್ನದ ಊಟ ನೀಡುವ ರೋಗ ಇಂದು ಭಾರತದುದ್ದಕ್ಕೂ ಪಸರಿಸಿದೆ. ಮಧ್ಯಾಹ್ನದ ಊಟ ನೀಡುವ ಈ ತಮಿಳುನಾಡಿನ ಅನುಭವ ಎಷ್ಟರ ಮಟ್ಟಿಗೆ ಫಲ ನೀಡಿದೆ?

ಈಗ ಗ್ರಾಮೀಣ ಉದ್ಯೋಗ ಖಾತರಿಯಿಂದ ಹಿಡಿದು ಆಹಾರ ಭದ್ರತೆ, ಉಚಿತ ಟಿ.ವಿ., ಉಚಿತ ಲ್ಯಾಪ್ ಟಾಪ್, ಎರಡು ರೂಪಾಯಿಯಿಂದ ನಾಲ್ಕು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಮುಂತಾದವು ರಾಜಕೀಯ ಪಕ್ಷಗಳು ತಮ್ಮ ಮತದಾರರಿಗೆ ನೀಡುವುದಾಗಿ ಭರವಸೆ ನೀಡುತ್ತ ಆಡುವ ಆಟಗಳು.

ಮತದಾರರು ಏನನ್ನು ಬೇಡುತ್ತಿದ್ದಾರೆ ಎಂಬುದರ ಕಲ್ಪನೆ ಏನಾದರೂ ಈ ಪಕ್ಷಗಳಿಗೆ ಇದೆಯೇ? ಉತ್ತರ ಪ್ರದೇಶದ ಕಡು ಬಡವ ಮತದಾರರನ್ನೆ ಕೆಲ ಪ್ರಶ್ನೆಗಳನ್ನು ಕೇಳೋಣ. 1) ಸರಿಯಾಗಿ ನಡೆಯುವ ಪ್ರಾಥಮಿಕ ಶಾಲೆಗಿಂತ, ನಿಮ್ಮ ಮಗುವಿಗೆ ಉಚಿತ ಲ್ಯಾಪ್ ಟಾಪ್ ಕೊಡುವುದನ್ನು ನೀವು ಬಯಸುತ್ತೀರ? 2) ಇಂಗ್ಲೀಷ್ ಶಿಕ್ಷಣಕ್ಕಿಂತ ಎರಡು ರೂಪಾಯಿಗೆ

ಒಂದು ಕೆ.ಜಿ. ಗೋಧಿ ಅಥವಾ ಅಕ್ಕಿ ಇವುಗಳನ್ನು ನೀವು ಬಯಸುತ್ತೀರ? 3) ಇಪ್ಪತ್ತನಾಲ್ಕು ಗಂಟೆಯೂ ಇರುವ ವಿದ್ಯುತ್‌ಗಿಂತಲೂ ರಾಮ ಮಂದಿರ ಕಟ್ಟುವುದನ್ನು ನೀವು ಬಯಸುತ್ತೀರ? ಉತ್ತರಗಳನ್ನು ನೀವೇ ಊಹಿಸಿಕೊಳ್ಳಿ.

ರಾಜಕೀಯ ಪಕ್ಷಗಳೇಕೆ ಮತದಾರರಿಗೆ ಏನು ಬೇಕೊ ಅದನ್ನು ನೀಡುವುದಿಲ್ಲ?. ಊಳಿಗಮಾನ್ಯ ಪದ್ಧತಿಯ ವಿಷಯ ಬರುವುದು ಇಲ್ಲಿಯೆ. ಪ್ರಪಂಚದಾದ್ಯಂತ ಊಳಿಗಮಾನ್ಯ ಪದ್ಧತಿ ತನ್ನನ್ನು ಕಾಪಾಡಿಕೊಳ್ಳಲು ಪೋಷಣೆಯನ್ನು ಆಯುಧವಾಗಿ ಉಪಯೋಗಿಸಿತು. 1947ರ ಭಾರತದಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಒಂದು ಆಡಿಗಾಗಿ ಧಣಿ 500 ರೂಪಾಯಿ ಬೆಲೆ ಬಾಳುವ ಒಂದು ಎಕರೆ ಜಮೀನು ನೀಡಬಲ್ಲವನಾಗಿದ್ದ. ತನ್ನ ಹೀನ ಸ್ಥಿತಿಯನ್ನು ನಿವೇದಿಸಿಕೊಳ್ಳುತ್ತಾ ತನ್ನ ಸ್ವಾತಂತ್ರ್ಯವನ್ನು ಅವನ ಕಾಲ ಬಳಿಯಿಟ್ಟು ಒಬ್ಬ ದಿನಗೂಲಿ ಕಾರ್ಮಿಕ ತಾನು ಬಯಸಿದ್ದಕ್ಕಿಂತ ಹೆಚ್ಚನ್ನು ಪಡೆದುಕೊಳ್ಳುತ್ತಿದ್ದ. ಆದರೆ ಅದೇ ಅವಶ್ಯಕತೆ ಹಕ್ಕಾಗಿ ಮಾರ್ಪಾಡುಗೊಂಡಾಗ ಅದು ಹಿಂಸೆಗೆ ಆಹ್ವಾನ ನೀಡುತ್ತದೆ.

ನಮ್ಮ ರಾಜಕೀಯ ಪಕ್ಷಗಳು ಮತದಾರರು ಏನನ್ನು ಕೇಳಲಿಲ್ಲವೊ ಅದನ್ನು ನೀಡುವುದಾಗಿ ಭರವಸೆ ನೀಡುತ್ತಾ, ಅವರು ತಮ್ಮ ಹಕ್ಕಾಗಿ ಏನನ್ನು ಕೇಳುತ್ತಿದ್ದಾರೊ ಅದನ್ನು ಅವರಿಂದ ಕಸಿದುಕೊಳ್ಳುತ್ತಾ ಒಂದು ರೀತಿಯ ಸರ್ಕಾರಿ ಊಳಿಗ ಮಾನ್ಯ ಪದ್ಧತಿಯ ಕಡೆಗೆ ನಡೆಯುತ್ತಿವೆಯೆ?

* * *

ಮಾರ್ಪಾಡು ಮಾಡಿಕೊಳ್ಳುವ ಅಪಾಯದಿಂದ ತಪ್ಪಿಸಿಕೊಳ್ಳಲು ಊಳಿಗಮಾನ್ಯ ಸಮಾಜಗಳು ಉಪಯೋಗಿಸುವ ಆಯುಧ ಎಂದರೆ ಪೋಷಕರಾಗಿ ಕಾಣಿಸಿಕೊಳ್ಳುವುದು ಎಂಬುದನ್ನು ಹಿಂದೆ ವಿವರಿಸಲಾಗಿದೆ. ಇಂದಿನ ಭಾರತದ ರಾಜಕೀಯ ಈ ಊಳಿಗಮಾನ್ಯ ಪದ್ಧತಿಯ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸುತ್ತಿದೆ. ರಾಜಕೀಯ ಪಕ್ಷಗಳು ಏನನ್ನು ಮಾಡುತ್ತಿವೆ ಅಥವಾ ಹೇಗೆ ನಡೆದುಕೊಳ್ಳುತ್ತಿವೆ ಎಂಬುದು ಕೊನೆಗೆ ಅಂದಿನ ರಾಜಕೀಯವಾಗುತ್ತದೆ. ಒಂದು ಸಾರಿ ಅಧಿಕಾರಕ್ಕೆ ಬಂದ ಮೇಲೆ ರಾಜಕೀಯ ಪಕ್ಷಗಳು ಏನನ್ನು ಜಾರಿಗೆ ತರುತ್ತವೆಯೊ ಅವು ರಾಜ್ಯದ ನೀತಿಗಳಾಗುತ್ತವೆ.

ಮತದಾರರಿಗೆ ಹಣ, ಬರಹ ಸಾಮಗ್ರಿ, ಲ್ಯಾಪ್ ಟಾಪ್ ಮುಂತಾದವುಗಳನ್ನು ನೀಡುವುದಾಗಿ ಭರವಸೆ ಕೊಡುವುದು ಪ್ರಜಾಪ್ರಭುತ್ವ ಎಂಬ ನಮ್ಮ ಉತ್ಕೃಷ್ಟ ಕಲ್ಪನೆಗೆ

ಇದೆಲ್ಲಾ ಪ್ರಾರಂಭವಾದದ್ದು ತಮಿಳುನಾಡಿನಲ್ಲಿ. ನಟನಾಗಿದ್ದ ಎಂ.ಜಿ.ರಾಮಚಂದ್ರನ್ ರಾಜಕಾರಣಕ್ಕೆ ಬಂದು ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಊಟ ನೀಡುವುದಾಗಿ ಭರವಸೆ ನೀಡಿದಾಗಿನಿಂದ ಈ ಮಾದರಿ ಪ್ರಾರಂಭವಾಯಿತು. ಈಗ ಅದು ಕನಿಷ್ಠ ಬೆಲೆಯಲ್ಲಿ ಅಕ್ಕಿ, ಉಚಿತ ಟಿ.ವಿ ಮುಂತಾದವುಗಳಾಗಿ ಬೆಳೆದು ನಿಂತಿದೆ.

ತಮಿಳುನಾಡಿನಲ್ಲಿ ಮಧ್ಯಾಹ್ನದ ಊಟದ ಯೋಜನೆ ಮಕ್ಕಳಲ್ಲಿನ ಪೌಷ್ಠಿಕ ಆಹಾರದ ಕೊರತೆ ಮತ್ತು ಮಧ್ಯದಲ್ಲಿಯೆ ಮಕ್ಕಳು ಶಾಲೆ ಬಿಡುವುದನ್ನು ನಿಲ್ಲಿಸುವ ಮಾರ್ಗವಾಗಿ ಉದ್ಭವಿಸಿತು. ಇಂದು ರಾಷ್ಟ್ರದ ಇತರ ರಾಜ್ಯಗಳಿಗೆ ಹೋಲಿಸಿದರೆ ತಮಿಳುನಾಡಿನ ಪರಿಸ್ಥಿತಿ ಏನು?

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೊರತರುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್.ಎಫ್.ಎಚ್.ಎಸ್.) ಭಾರತೀಯರಲ್ಲಿ ಪೌಷ್ಠಿಕಾಂಶದ ಮಟ್ಟವನ್ನು ಅಳೆಯಲು ಉಪಯೋಗವಾಗುವ ಮುಖ್ಯ ದಾಖಲೆ.

ಎನ್.ಎಫ್.ಎಚ್.ಎಸ್ – 3 ವರದಿಯಂತೆ ಬಾಡಿ ಮಾಸ್ ಇಂಡೆಕ್ಸ್ (ಬಿ.ಎಮ್.ಎಸ್)ನಲ್ಲಿ ತಮಿಳುನಾಡಿನ ಮಹಿಳೆಯರು ಭಾರತದ ಎಲ್ಲಾ ರಾಜ್ಯಗಳ ಪಟ್ಟಿಯಲ್ಲಿ 11ನೇ ಸ್ಥಾನದಲ್ಲಿದ್ದಾರೆ. ತಮಿಳುನಾಡಿನ ಪುರುಷರು 10ನೇ ಸ್ಥಾನದಲ್ಲಿದ್ದಾರೆ. ಅಂದರೆ ಭಾರತದ ಎಲ್ಲಾ ರಾಜ್ಯಗಳ ಆರೋಗ್ಯ ಸಮೀಕ್ಷೆಯಲ್ಲಿ ತಮಿಳುನಾಡು ಅತ್ಯುತ್ತಮ ರಾಜ್ಯವಲ್ಲ. ಮಕ್ಕಳ ಪೌಷ್ಠಿಕಾಂಶದ ಮಟ್ಟವನ್ನು ಪರಿಗಣಿಸಿದಾಗಲೂ ಇತರ ರಾಜ್ಯಗಳಿಗೆ ಹೋಲಿಸಿದರೆ ತಮಿಳುನಾಡು ಅತ್ಯುತ್ತಮ ರಾಜ್ಯವೇನಲ್ಲ.

ಎನ್.ಎಫ್.ಹೆಚ್.ಎಸ್.–3 ವರದಿಯಂತೆ ತಮಿಳುನಾಡಿನ ಮಕ್ಕಳು ಪೋಷಕಾಂಶ ಕೊರತೆಯ ಸೂಚಕದಲ್ಲಿನ ರಾಜ್ಯಗಳ ಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದ್ದಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಆರೋಗ್ಯದ ಸೂಚಕದಲ್ಲಿ ತಮಿಳುನಾಡಿನ ಮಕ್ಕಳು ಅತ್ಯುತ್ತಮ ಮಟ್ಟದಲ್ಲೇನೂ ಇಲ್ಲ. ಆದುದರಿಂದ ಈಗ ನಾವು ಕೇಳಬೇಕಾದ ಪ್ರಶ್ನೆ ಏನೆಂದರೆ ತಮಿಳುನಾಡಿನಲ್ಲಿ ಉಚಿತ ಊಟ ಮತ್ತು ಕನಿಷ್ಠ ಬೆಲೆಯಲ್ಲಿ ಅಕ್ಕಿ ನೀಡುವ ಈ ಯೋಜನೆಗಳ ಫಲಿತಾಂಶವೇನು?

ಮಕ್ಕಳು ಶಿಕ್ಷಣ ಮುಗಿಸದೆ ಶಾಲೆ ಬಿಡುವುದನ್ನು ತಡೆಗಟ್ಟುವುದರಲ್ಲಿಯಾದರೂ ತಮಿಳುನಾಡು ಒಂದು ಮಾದರಿ ರಾಜ್ಯವಾಗಿ ಹೊರಹೊಮ್ಮಿದೆಯೆ?

ಭಾರತ ಸರ್ಕಾರದ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಮಂತ್ರಾಲಯ ಭಾರತದ ಶಿಕ್ಷಣ ಕ್ಷೇತ್ರ ಆಧರಿಸಿದ ಅಂಕಿ ಅಂಶಗಳ ಒಂದು ವರದಿಯನ್ನು ಪ್ರತಿ ವರ್ಷ

ಊಳಿಗಮಾನ್ಯ ಪದ್ಧತಿ ತರುವ ತೀವ್ರ ವಿಪತ್ತುಗಳು

ವಿರುದ್ಧವಾದದ್ದು. ಪ್ರಪಂಚದಾದ್ಯಂತ ಪ್ರಜಾಪ್ರಭುತ್ವಗಳು ತಮ್ಮ ಪ್ರಜೆಗಳನ್ನು ಊಳಿಗಮಾನ್ಯ ಪದ್ಧತಿಯ ಘೋಷಣೆಯನ್ನೊಳಗೊಂಡಂತೆ ಎಲ್ಲ ರೀತಿಯ ಬಂಧನಗಳಿಂದ ಬಿಡುಗಡೆಗೊಳಿಸುತ್ತವೆ.



ಹರಿಯಾಣ ಪಂಜಾಬ್‌ಗಳ ಪರಿಸ್ಥಿತಿಯನ್ನೇ ನೋಡಿ. ದವಸ ಧಾನ್ಯಗಳಿಂದ ತುಂಬಿ ತುಳುಕುತ್ತಿರುವ ಈ ರಾಜ್ಯಗಳ ಮಕ್ಕಳಿಗೆ ಉಚಿತ ಮಧ್ಯಾಹ್ನದ ಊಟದ ಅವಶ್ಯಕತೆ ಇದೆಯೆ? ಮಧ್ಯಾಹ್ನದ ಊಟದ ಯೋಜನೆಯಲ್ಲಿ ಆದಾಯದ ಪರಿಮಿತಿ ಇರುವುದಿಲ್ಲ. ಪಂಜಾಬ್ ಮತ್ತು ಹರಿಯಾಣಗಳ ಎಲ್ಲಾ ತಂದೆ ತಾಯಿಗಳೂ ತಮ್ಮ ಮಕ್ಕಳಿಗೆ ಅವಶ್ಯಕ ಪೋಷಕಾಂಶವುಳ್ಳ ಆಹಾರವನ್ನು ನೀಡಲಾರರು ಎಂಬ ಇದರ ಹಿಂದಿನ ಊಹೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಹರಿಯಾಣ ಮತ್ತು ಪಂಜಾಬ್ ರಾಜ್ಯಗಳು ಅಲ್ಲಿನ ಮಕ್ಕಳಿಗೆ ಸರಿಯಾಗಿ ಅನ್ನ ಹಾಕಲಾಗದಿದ್ದಲ್ಲಿ ಭಾರತದಲ್ಲಿ ಯಾವುದೇ ಮಾದರಿಯ ಅಭಿವೃದ್ಧಿ ಯೋಜನೆ ಯಶಸ್ವಿಯಾಗುವುದಿಲ್ಲ. ಅಥವಾ ಗುಜರಾತನ್ನೇ ತೆಗೆದುಕೊಳ್ಳಿ, ಗುಜರಾತ್‌ನಲ್ಲೂ ಸಹ ಎಲ್ಲಾ ಮಕ್ಕಳಿಗೂ ಉಚಿತ ಮಧ್ಯಾಹ್ನದ ಊಟ ನೀಡಲಾಗುತ್ತದೆ. ಹಣದಿಂದ ಸಮೃದ್ಧವಾಗಿರುವ ಗುಜರಾತ್ ತನ್ನ ಮಕ್ಕಳಿಗೆ ಸರಿಯಾಗಿ ಆಹಾರ ನೀಡಲು ಸಾಧ್ಯವಾಗದಿದ್ದಲ್ಲಿ ಭಾರತದಲ್ಲಿ ಯಾವುದೇ ಮಾದರಿಯ ಆರ್ಥಿಕ ಬೆಳವಣಿಗೆ ಯಶಸ್ವಿಯಾಗುವುದಿಲ್ಲ.

ಹೊರತರುತ್ತದೆ. ಈ ವರದಿ ಶಿಕ್ಷಣ ಮುಗಿಸದೆ ಶಾಲೆ ಬಿಡುವ ಮಕ್ಕಳ ಬಗ್ಗೆಯೂ ಮಾಹಿತಿ ನೀಡುತ್ತದೆ.

1998ರ ಶಿಕ್ಷಣ ಕ್ಷೇತ್ರ ಆಧರಿಸಿದ ಅಂಕಿ ಅಂಶಗಳ ವರದಿಯಂತೆ ತಮಿಳುನಾಡು ಈ ವಿಚಾರದಲ್ಲಿಯೂ ಒಂದು ಆದರ್ಶ ರಾಜ್ಯವಾಗಿ ಕಂಡು ಬರುವುದಿಲ್ಲ. ಪ್ರಾಥಮಿಕ ಶಾಲಾ ಮಟ್ಟದಲ್ಲಿ ಶಾಲೆ ಸೇರಿದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.64.56 ವಿದ್ಯಾರ್ಥಿಗಳು ಹೈಸ್ಕೂಲ್ ಮಟ್ಟಕ್ಕೆ ಬರುವ ಮೊದಲೆ ಶಾಲೆ ಬಿಡುತ್ತಾರೆ. ಪಕ್ಕದ ಕೇರಳದಲ್ಲಿ ಇದೇ ಸೂಚಕಕ್ಕೆ ಸಂಬಂಧಿಸಿದ ಅಂಕಿ ಅಂಶಗಳು ಕೇವಲ ಶೇ.5 ಮಾತ್ರ.

ಉಚಿತ ಊಟದ ಯೋಜನೆ ಅದನ್ನು ಜಾರಿಗೆ ತಂದ ಉದ್ದೇಶಗಳನ್ನು ತುಂಬುವುದರಲ್ಲಿ ಸೋತಿದೆ ಎಂಬುದು ಈ ಸಾಕ್ಷ್ಯಗಳಿಂದ ಖಚಿತವಾಯಿತು. ಅನೇಕ ಇತರೆ ರಾಜ್ಯಗಳಿಗೆ ಹೋಲಿಸಿದರೆ ತಮಿಳುನಾಡು ಅನೇಕ ಅಂಶಗಳಲ್ಲಿ ಉತ್ತಮವಾಗಿದೆ. ಆದರೆ ಅದಕ್ಕೆ ನಾವು ತೆರುತ್ತಿರುವ ಬೆಲೆ ಏನು?

ನಮಗೆಲ್ಲರಿಗೂ ತಿಳಿದಿರುವಂತೆ ಉಣ್ಣುವ ತಟ್ಟೆಗಳು, ಬರೆಯುವ ಸ್ಲೇಟ್‌ಗಳ ಸ್ಥಳವನ್ನು ಆಕ್ರಮಿಸಿಕೊಂಡಿವೆ. ಅಕ್ಷರಗಳ ಸ್ಥಳವನ್ನು ಉಚಿತ ಆಹಾರ ಆಕ್ರಮಿಸಿಕೊಂಡಿದೆ. ಆದರೆ ಉಣ್ಣುವ ತಟ್ಟೆಗಳು ಪೌಷ್ಠಿಕಾಂಶದ ಕೊರತೆಯನ್ನು ದೂರಮಾಡಲು ಸಾಧ್ಯವಾಗಿಲ್ಲ. 1960ರ ಕೊನೆ ಭಾಗದಲ್ಲಿ ತಮಿಳುನಾಡಿಗಂಟಿದ ಈ ನೀತಿಯ ರೋಗ ಈಗ ದೊಡ್ಡ ವೈರಸ್ ಆಗಿ ಬೆಳೆದಿದೆ. ನಾವು ಚುನಾಯಿತರಾದರೆ ನಮ್ಮ ಸರ್ಕಾರವು ಆಹಾರ, ಟಿ.ವಿ

ಸೆಟ್ ಮುಂತಾದವುಗಳನ್ನು ನೀವೇ ಕೊಂಡು ನಿಮ್ಮ ಎದೆಯುಬ್ಬಿಸಿ ತಲೆ ಎತ್ತಿ ನಡೆಯುವ ಹಾಗೆ ನಿಮ್ಮನ್ನು ಸಶಕ್ತರನ್ನಾಗಿ ಮಾಡುತ್ತೇವೆ ಎಂದು ಯಾವುದೇ ಪಕ್ಷ ಭರವಸೆ ನೀಡುತ್ತಿಲ್ಲ.

ಒಳ್ಳೆಯ ಪ್ರಜಾಪ್ರಭುತ್ವ ತನ್ನ ಪ್ರಜೆಗಳಲ್ಲಿ ಆತ್ಮಗೌರವ ಬೆಳೆಸುತ್ತದೆ. ಒಳ್ಳೆಯ ಪ್ರಜಾಪ್ರಭುತ್ವ ತನ್ನ ಪ್ರಜೆಗಳಲ್ಲಿ ಸ್ವಾತಂತ್ರ್ಯ ಬೆಳೆಸುತ್ತದೆ. ಆದರೆ ಭಾರತದಲ್ಲಿ ಮಾತ್ರ ರಾಜಕೀಯ ಪಕ್ಷಗಳು ಸಮಾಜದಲ್ಲಿ ಅವಲಂಬನೆಯನ್ನು ಉತ್ತೇಜಿಸುತ್ತವೆ. ತಮ್ಮ ಪ್ರಜೆಗಳು ತಮ್ಮ ಪ್ರತಿಯೊಂದು ಅವಶ್ಯಕತೆಗೂ ಸರ್ಕಾರವನ್ನೇ ಅವಲಂಬಿಸುವ ಹಾಗೆ ಮಾಡುತ್ತಿವೆ.

ಇದು ನಮ್ಮನ್ನು ಎಲ್ಲಿಗೆ ಕೊಡೊಯ್ಯುತ್ತದೆ.? ನಾವು ಕಮ್ಯುನಿಸ್ಟ್ ರಾಷ್ಟ್ರಗಳ ಅನುಭವಗಳನ್ನು ನೋಡಿದ್ದೇವೆ. ಅಲ್ಲಿನ ಸರ್ಕಾರಗಳು ತಮ್ಮ ಪ್ರಜೆಗಳಿಗೆ ತಂದೆ ತಾಯಿಗಳು ಅವರ ಮಕ್ಕಳಿಗೆ ಹೇಗೊ ಹಾಗಿದ್ದುವು. ಆ ಮಾದರಿ ನೆಲ ಕಚ್ಚಿತು. ಉತ್ತರ ಕೊರಿಯ ಇನ್ನೂ ಆ ಕಮ್ಯುನಿಸ್ಟ್ ಮಾದರಿಯಲ್ಲಿಯೇ ಮುಂದುವರಿಯುತ್ತಿದೆ. ಆದರೆ ಸಾಮಾನ್ಯ ಉತ್ತರ ಕೊರಿಯನ್ನರು ಉಪವಾಸವಿದ್ದಾರೆ.

ಇಂದು ನಮ್ಮ ರಾಜಕೀಯ ಪಕ್ಷಗಳು ತಮ್ಮ ಮತದಾರರಿಗೆ ನೀಡುತ್ತಿರುವ ಸೌಲಭ್ಯಗಳು ಅವರ ಶಕ್ತಿಯನ್ನು ಹೀರಿಕೊಳ್ಳುತ್ತಿವೆ. ಮೂಲಭೂತ ಅವಶ್ಯಕತೆಗಳಿಗಾಗಿ ಅವರು ಸಾಲಾಗಿ ನಿಲ್ಲುವಂತೆ ಅವರಿಗೆ ತರಬೇತಿ ನೀಡಲಾಗುತ್ತಿದೆ. ಸರ್ಕಾರವೆ ಪ್ರಜೆಗಳಿಗೆ ಬೇಕಾದುದೆಲ್ಲವನ್ನೂ ಮಾಡುವುದಾಗಿದ್ದಲ್ಲಿ ಪ್ರಜೆಗಳು ತಮ್ಮ ಸ್ವಾತಂತ್ರ್ಯವನ್ನು ಅಡವಿಟ್ಟು ತಮ್ಮ ಬೇಕುಬೇಡಗಳಿಗೆ ಸರ್ಕಾರಿ ಸಂಸ್ಥೆಗಳನ್ನು ಕಾಯುವುದನ್ನು ಬಿಟ್ಟು ಮತ್ತೇನು ಮಾಡಬಲ್ಲರು.?

* * *

ಸಮಾಜದಲ್ಲಿ ವ್ಯಕ್ತಿಗಳ ಅಥವಾ ಸಾಮಾಜಿಕ ವರ್ಗಗಳ ಸ್ಥಳವನ್ನು ನಿರ್ಧರಿಸುವಲ್ಲಿ ಜೀವನ ಶೈಲಿ ಪಾತ್ರ ವಹಿಸುತ್ತದೆಯೇ? ಜನರ ಆರೋಗ್ಯ ಮಟ್ಟವನ್ನು ನಿರ್ಧರಿಸುವಲ್ಲಿ ಆಹಾರಾಭ್ಯಾಸ ಬಹುದೊಡ್ಡ ಪಾತ್ರ ವಹಿಸುತ್ತದೆ ಎಂಬುದು ನಮಗೆ ಚೆನ್ನಾಗಿ ಗೊತ್ತು. ಹೆಚ್ಚು ಶೋಧನೆಯಾಗದ ಈ ಪ್ರಶ್ನೆಯ ಬಗ್ಗೆ ಈಗ ಮಾತನಾಡೋಣ.

ಡಿ.ಐ.ಸಿ.ಸಿ.ಐ ತಂಡ ಇತ್ತೀಚೆಗೆ ರಾಜಸ್ಥಾನಕ್ಕೆ ಭೇಟಿ ನೀಡಿತ್ತು. ಜೈಪುರ–ಆಗ್ರಾ ರಸ್ತೆಯ ಬದಿಯ ಒಂದು ಹಳ್ಳಿಯಲ್ಲಿ ವಾಸ ಮಾಡುವ ದಲಿತರು ಡಿ.ಐ.ಸಿ.ಸಿ.ಐ ಅಧ್ಯಕ್ಷ ಮಿಲಿಂದ್ ಕಾಂಬ್ಳೆಯವರಿಗೆ ಸನ್ಮಾನಿಸಲು ಬಯಸಿದರು. ಅವರು ರಸ್ತೆ ಬದಿಯಲ್ಲಿಯೇ ಒಂದು ವೇದಿಕೆಯನ್ನು ಸಜ್ಜುಗೊಳಿಸಿದ್ದರು. ಬಹಳಷ್ಟು ಹಳ್ಳಿಗರು ನಮಗಾಗಿ ಕಾಯುತ್ತಿದ್ದರು. ಸ್ವಲ್ಪ ಮಾತುಕತೆ ನಂತರ ನಾವು ಅವರ ಹಳ್ಳಿಗೆ ಭೇಟಿ ನೀಡಲು ಇಚ್ಛಿಸಿದೆವು. ಅವರು ಸಂತೋಷದಿಂದ ಒಪ್ಪಿದರು. ಸುಮಾರು ಒಂದು ಮೈಲಿ ದೂರದಲ್ಲಿರುವ ಅವರ ಹಳ್ಳಿಯನ್ನು ಕೆಲ ನಿಮಿಷಗಳಲ್ಲಿ ನಾವು ತಲುಪಿದೆವು. ನಾವು ಎಂತಹ ಆಹಾರ ತಿನ್ನಲು ಬಯಸುತ್ತೇವೆ ಎಂದು ಅವರು ನಮ್ಮನ್ನು ಕೇಳಿದರು. 'ಯಾವ ಆಹಾರವಾದರೂ ಸರಿಯೆ, ಅದರಲ್ಲೂ ರಾಜಸ್ಥಾನಿ ತಿಂಡಿ ತೀರ್ಥಗಳಿದ್ದಲ್ಲಿ ಉತ್ತಮ', ಎಂದೆವು.

ನಮ್ಮ ಈ ಹಳ್ಳಿಯ ಭೇಟಿ ನಮಗೆ ಬಹಳಷ್ಟು ಅನುಭವ ಕಲಿಸಿತು. ನಲವತ್ತರ ಮೇಲೆ ವಯಸ್ಸಾದ ಹೆಚ್ಚು ಜನರು ದೋತಿ, ಕುರ್ತಾದಲ್ಲಿದ್ದು ಅವರು ಕ್ಷೌರ ಮಾಡಿಕೊಂಡಿರಲಿಲ್ಲ ಮತ್ತು ತಲೆ ಸರಿಯಾಗಿ ಬಾಚಿರಲಿಲ್ಲ. ಅವರು ಉದ್ಯೋಗ ಖಾತ್ರಿ ಯೋಜನೆಗೆ ಹೇಳಿ ಮಾಡಿಸಿದಂತಿದ್ದರು. ಇಪ್ಪತ್ತರ ಒಳಗಿನ ಎಲ್ಲಾ ಹುಡುಗರೂ ಪ್ಯಾಂಟ್ ಧರಿಸಿದ್ದರು. ಅವರಲ್ಲಿ ಮೂರನೇ ಒಂದು ಭಾಗ ಹುಡುಗರು ಜೀನ್ಸ್ ಧರಿಸಿದ್ದರು. ಹುಡುಗಿಯರು ಪಂಜಾಬಿ ಧಿರಿಸಿನಲ್ಲಿ ಸುಂದರವಾಗಿ ಕಾಣುತ್ತಿದ್ದರು. ಅವರೆಲ್ಲರೂ ಮಧ್ಯಮ ದರ್ಜೆ ಕುಟುಂಬಗಳಿಗೆ ಸೇರಿದವರಂತೆ ಕಾಣುತ್ತಿದ್ದರು.

ತಂದೆ ತಾಯಿಗಳು ಮತ್ತು ಮಕ್ಕಳು ಮೇಲ್ನೋಟಕ್ಕೆ ಬೇರೆ ಬೇರೆ ಆರ್ಥಿಕ ಮೂಲಗಳಿಂದ ಬಂದಂತಿದ್ದರು. ಈ ವೈರುಧ್ಯ ವ್ಯಕ್ತಿಗಳು ಮತ್ತು ಸಾಮಾಜಿಕ ವರ್ಗಗಳ ಮೇಲೆ ಜೀವನ ಶೈಲಿಯ ಪಾತ್ರವನ್ನು ಒತ್ತಿ ಹೇಳುತ್ತದೆ. 'ನಮ್ಮ ಪೀಳಿಗೆ ಮಾಯವಾದಂತೆ ದೋತಿ ಕುರ್ತಾ ಸಹ ಮಾಯವಾಗುತ್ತವೆ', ಹೊಸ ಪೀಳಿಗೆ ಪ್ಯಾಂಟ್ ಮತ್ತು ಜೀನ್ಸ್ ಧರಿಸಲು ಏಕೆ ಇಷ್ಟಪಡುತ್ತಾರೆ ಎಂಬ ಪ್ರಶ್ನೆಗೆ ದಲಿತ ಹಿರಿಯನೊಬ್ಬ ಹೇಳಿದ.

ಯುವತಿಯರು ಮತ್ತು ಅವರ ತಾಯಂದಿರಲ್ಲಿ, ಯುವಕರು ಮತ್ತು ಅವರ ತಂದೆಯವರಿಗಿಂತ ಈ ವ್ಯತ್ಯಾಸ ಹೆಚ್ಚು ಎದ್ದು ಕಾಣುತ್ತಿತ್ತು. ಹುಡುಗಿಯರು ಅಷ್ಟು ಚೆನ್ನಾಗಿ ಉಡುಪು ಧರಿಸಿದ್ದನ್ನು ನೋಡಿದರೆ ಅಷ್ಟು ಕೆಟ್ಟದಾಗಿ ಬಟ್ಟೆ ಹಾಕಿದ್ದ ತಾಯಂದಿರ ಮಕ್ಕಳೆ ಇವರು ಎಂಬುದನ್ನು ನಂಬಲು ಸಾಧ್ಯವೇ ಆಗುತ್ತಿರಲಿಲ್ಲ. ಇತ್ತೀಚೆಗೆ ಮದುವೆಯಾದ ಹೆಂಗಸರು ಅತ್ತೆಯರಿಗಿಂತ ಉತ್ತಮವಾಗಿಯೆ ಉಡುಪು ಧರಿಸಿದ್ದರು.

ನಾವು ಮಾತನಾಡುತ್ತಿದ್ದಂತೇ ನಮ್ಮನ್ನು ಊಟಕ್ಕೆ ಕರೆದರು. ನಮ್ಮನ್ನು ಮನೆಯೊಂದರ ಮೊದಲ ಮಹಡಿಗೆ ಕರೆದೊಯ್ದು ಊಟ ಬಡಿಸಲಾಯಿತು. ನಮಗೆ ತುಪ್ಪದಲ್ಲಿ ಬೇಯಿಸಿದ ಬಾಜ್ರಾ ರೊಟ್ಟಿ ಮತ್ತು ಆಲೂಗಡ್ಡೆ, ಟೊಮೆಟೊ, ಎಲೆಕೋಸಿನ ಪಲ್ಯ ಮತ್ತು ಗೊಜ್ಜು ಬಡಿಸಲಾಯಿತು. ಊಟ ತುಂಬಾ ರುಚಿಯಾಗಿತ್ತು.

ಆಹಾರವನ್ನು ಆರಿಸಿಕೊಳ್ಳುವುದೂ ಸಹ ಜೀವನ ಶೈಲಿಗೆ ಸಂಬಂಧಪಟ್ಟದ್ದು. ನಾನು ಬಾಜ್ರಾ ರೊಟ್ಟಿಯ ಬಗ್ಗೆ ಪ್ರಶ್ನೆ ಕೇಳಿದೆ. 'ನಾವು ಚಳಿಗಾಲದಲ್ಲಿ ಬಾಜ್ರಾ ರೊಟ್ಟಿ ತಿನ್ನುತ್ತೇವೆ', ಹಿರಿಯರೊಬ್ಬರು ಹೇಳಿದರು. 'ಆದರೆ ಮಕ್ಕಳು ಚಳಿಗಾಲದಲ್ಲೂ ಗೋಧಿ ರೊಟ್ಟಿಯನ್ನೇ ತಿನ್ನಲು ಇಚ್ಛಿಸುತ್ತಾರೆ', ಹಿರಿಯ ಮಹಿಳೆಯೊಬ್ಬರು ಹೇಳಿದರು. ಇದು ಭಾರತದ ಒಳಗೆ ಏನು ನಡೆಯುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಪ್ಯಾಂಟ್ ಮತ್ತು ಜೀನ್ಸ್ ಧರಿಸಲು ಇಚ್ಛಿಸುವ ದಲಿತ ಪೀಳಿಗೆ ಬಾಜ್ರಾ ರೊಟ್ಟಿಯನ್ನು ತಿನ್ನಲು ನಿರಾಕರಿಸುತ್ತದೆ. ದಲಿತ ಹಿರಿಯರು ನಮ್ಮ ಭೇಟಿ ಕಾಲದಲ್ಲಿ ತಿಳಿಸಿದಂತೆ ಎರಡು ದಶಕಗಳ ಹಿಂದೆ ವರ್ಷಪೂರ್ತಿ ಅವರು ಬಾಜ್ರಾ ರೊಟ್ಟಿ ತಿನ್ನುತ್ತಿದ್ದರು. ಜೊತೆಗೆ ಎರಡು ದಶಕಗಳ ಹಿಂದೆ ಯಾರಾದರೂ ಪ್ಯಾಂಟ್ ಧರಿಸಿದವರು ಕಂಡರೆ ಅದು ದೊಡ್ಡ ಸುದ್ದಿಯಾಗುತ್ತಿತ್ತು. ರಾಜಸ್ಥಾನದಲ್ಲಿ ಉಡುಪು ಧರಿಸುವ ವಿಚಾರದಲ್ಲಿ ಕಲಹಗಳಾಗಿರುವುದು ಇತಿಹಾಸ. ದಲಿತ ಸಮಾಜದ ತಳದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಇದು ತೋರಿಸುತ್ತದೆ.

ದಲಿತ ಹಿರಿಯರು ದಿನಕ್ಕೆ ಎರಡೊತ್ತಿನ ಊಟ ಮತ್ತು ಮೈಮುಚ್ಚುವಷ್ಟು ಬಟ್ಟೆ ಇವುಗಳಿಗಾಗಿಯೇ ಬಹಳಷ್ಟು ಹೋರಾಟ ಮಾಡಬೇಕಾದ ಹಿನ್ನೆಲೆಯಿಂದ ಬಂದವರು. ಅವರಲ್ಲಿ ಇಂದು ಹಣವಿದ್ದರೂ ತಾವೇಕೆ ಸಿಂಗರಿಸಿಕೊಳ್ಳಬೇಕು ಎಂಬುದಕ್ಕೆ ಕಾರಣಗಳಿಲ್ಲ. ಮುಖ್ಯವಾಹಿನಿ ಸಮಾಜಕ್ಕೆ ತಮ್ಮ ಹಿನ್ನೆಲೆ ತಿಳಿದಿದೆ ಮತ್ತು ತಮ್ಮ ಬಗ್ಗೆ ಅದು ತನ್ನದೇ ಆದ ಅಭಿಪ್ರಾಯ ಹೊಂದಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಆ ಕಲ್ಪನೆ ಮಹತ್ವದ ಬದಲಾವಣೆಯನ್ನೇನೂ ಹೊಂದುವುದಿಲ್ಲ. ಅವರ ಜೀವನ ಶೈಲಿಯಲ್ಲಿ ಬದಲಾವಣೆ ಇಲ್ಲದಿರುವುದಕ್ಕೆ ಇದು ಕಾರಣ.

1990ರ ನಂತರ ಜನಿಸಿದ ದಲಿತ ಪೀಳಿಗೆಗೆ ಅನ್ನಕ್ಕಾಗಿ ಪರದಾಡುವ ಒತ್ತಡವಿಲ್ಲ, ಅವರಿಗೆ ಆರಿಸಿಕೊಳ್ಳುವ ಅವಕಾಶವಿದೆ. 1990ರ ನಂತರ ಭಾರತ ಬಹಳ ಬದಲಾಗಿದೆ. ಬಹಳಷ್ಟು ಕೂಲಿಕಾರ್ಮಿಕರು ನಗರಗಳಿಗೆ ವಲಸೆ ಹೋಗಿರುವುದರಿಂದ ರಾಜಸ್ಥಾನದ ಗ್ರಾಮೀಣ ಭಾಗದಲ್ಲಿಯೂ ಸಹ ಕೆಲಸಗಾರರ ಕೊರತೆಯಿದೆ. ಅದು ಭೂಮಿ ಮತ್ತು ಕಾರ್ಮಿಕನ ನಡುವಿನ ಸಂಬಂಧವನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಈಗ ಕೆಲಸಗಾರರಿಗೆ ಹಣದ ರೂಪದಲ್ಲಿ ಕೂಲಿ ನೀಡಲಾಗುತ್ತಿದೆ. ಹಿಂದೆ ಕೆಲಸಗಾರರಿಗೆ ಸಾಮಗ್ರಿಗಳ ರೂಪದಲ್ಲಿ, ಮುಖ್ಯವಾಗಿ ದವಸಧಾನ್ಯಗಳನ್ನು ಕೂಲಿಯಾಗಿ ನೀಡಲಾಗುತ್ತಿತ್ತು. ಇದು ಕೆಲಸಗಾರರನ್ನು ಜಾತಿ ದಬ್ಬಾಳಿಕೆಯಿಂದ ತಕ್ಕಮಟ್ಟಿಗೆ

ಜೀವನ ಶೈಲಿಯ ವಿಚಾರಗಳು

ಬದಲಾವಣೆಯ ಚಾಲಕರು

ಬಿಡುಗಡೆಗೊಳಿಸಿದೆ. ಹೀಗಾಗಿ ದಲಿತ ಮುಂದಿನ ಪೀಳಿಗೆ ಸಮಾಜದ ಸಮ್ಮತಿಯನ್ನು ಪಡೆಯುವ ಕಡೆ ತನ್ನನ್ನು ತೊಡಗಿಸಿಕೊಂಡಿದೆ. ಸ್ವಂತ ಸಿಂಗಾರ ಇದರಲ್ಲಿ ಬಹುಮುಖ್ಯವಾಗಿದೆ. ಜೀವನ ಶೈಲಿಯ ಬದಲಾವಣೆ ಇದರ ಪರಿಣಾಮ.

ರಾಜಸ್ಥಾನದ ಈ ಹಳ್ಳಿಯ ದಲಿತರು ಮೇಲೇರುತ್ತಿರುವ ಹಾಗೆಯೆ ದಲಿತ ಚಳುವಳಿಗಳಲ್ಲಿ ಮಾತ್ರ ಜೀವನ ಶೈಲಿಯ ವಿಚಾರ ಅಂತಹ ಮಹತ್ವದ್ದೇ ಅಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಾಮಾನ್ಯ ದಲಿತ ಸ್ವಪ್ರಯತ್ನದಿಂದಲೇ ತನ್ನ ಜೀವನ ಸುಧಾರಿಸಿಕೊಳ್ಳುತ್ತಿದ್ದಾನೆ. ದಲಿತ ಚಳುವಳಿಗಳು ಮಾತ್ರ ಭೂತದಲ್ಲಿಯೇ ನಾಟಿಕೊಂಡಿವೆ.

* * *

ಕಥೆ ಹೀಗಿದೆ. ಒಂದು ದಶಕದ ಹಿಂದೆ ದಲಿತ ಯುವಕನೊಬ್ಬ ಮುಂಬೈಗೆ ಓಡಿ ಹೋದ. ಅಲ್ಲಿ ಪ್ಯಾಕ್ಟರಿಯೊಂದರಲ್ಲಿ ಸಣ್ಣ ಪುಟ್ಟ ಕೆಲಸ ಹಿಡಿದ. ಅವನ ತಮ್ಮ ಮರು ವರ್ಷ ಅವನನ್ನು ಹಿಂಬಾಲಿಸಿದ. ಈ ಕಥೆ ಪೂರ್ವ ಉತ್ತರ ಪ್ರದೇಶದ ಗ್ರಾಮೀಣ ಭಾಗಕ್ಕೆ ಸಂಬಂದಿಸಿದ್ದು.

ಒಂದೆರಡು ವರ್ಷಗಳ ನಂತರ ಈ ಇಬ್ಬರು ದಲಿತ ಸಹೋದರರು ರಜೆಯ ಮೇಲೆ ತಮ್ಮ ಹುಟ್ಟೂರಿಗೆ ಬಂದರು. ಅವರು ತಮ್ಮ ಜೊತೆಯಲ್ಲಿ ಒಂದು ಸಣ್ಣ ಕಪ್ಪು ಬಿಳುಪು ಟಿ.ವಿ ತಂದಿದ್ದರು. ಅದು ಹಳ್ಳಿಯಲ್ಲಿ ಒಂದು ದೊಡ್ಡ ಸುದ್ದಿಯಾಯಿತು. ಅಲ್ಲಿಯ ಮೇಲ್ಜಾತಿಯ ಭೂಮಾಲೀಕ ಕೂಡ ಈ ಟಿ.ವಿ. ಕಥೆ ಕೇಳಲು ಅವರಲ್ಲಿಗೆ ಬಂದ.

ಈ ದಲಿತರು ಟಿ.ವಿ. ಹೊಂದಿರುವುದು ಆ ಭೂಮಾಲೀಕನ ಪ್ರತಿಷ್ಠೆಯನ್ನು ಕೆಣಕಿತು. ಅವನು ತಾನೂ ಒಂದು ಟಿ.ವಿ. ಕೊಂಡುಕೊಳ್ಳದೆ ಬೇರೆ ದಾರಿ ಇರಲಿಲ್ಲ. ಅವನ ಮನೆಯ ಛಾವಣಿ ಮೇಲೆ ಒಂದು ಆ್ಯಂಟನಾ ಸ್ಥಾಪಿಸಲಾಯಿತು. ಭೂಮಾಲೀಕನ ಮನೆ ದೊಡ್ಡದಾಗಿದ್ದು ಅವನ ಟಿ.ವಿ. ಸಮಾಚಾರ ಕೂಡ ಹೆಚ್ಚು ಜನರಿಗೆ ಕಾಣಬರುವಂತಿತ್ತು. ಕೆಲ ಸಮಯದಲ್ಲಿಯೆ ಹಳ್ಳಿಗರು ತಮ್ಮ ಮಕ್ಕಳ ಮೂಲಕ ಟಿ.ವಿ.ಯ ಬಗ್ಗೆ ತಿಳಿದುಕೊಂಡರು. ಭೂಮಾಲೀಕನ ಹತ್ತಿರ ಟಿ.ವಿ. ಇರಲಿಲ್ಲ. ಆದರೆ ತನ್ನ ಗೌರವವನ್ನು ಕಾಪಾಡಿಕೊಳ್ಳಲು ಬರಿ ಆ್ಯಂಟಾನಾ ಸ್ಥಾಪಿಸಿದ್ದ.

> **ಜೀವನ ಶೈಲಿ ಬದಲಾವಣೆಯ ದೊಡ್ಡ ಪ್ರಚೋದಕನಾಗಿ ಕೆಲಸ ಮಾಡುವುದು ಹೀಗೆ? ಹಳ್ಳಿಗನೊಬ್ಬ ಟಿ.ವಿ. ಕೊಂಡರೆ ಉಳಿದ ಹಳ್ಳಿಗರು ಅದೇಕೊ ಭಯಬೀತರಾಗುತ್ತಾರೆ. ಹಳ್ಳಿಯಲ್ಲಿ ತಮ್ಮ ಅಂತಸ್ತು ಕಡಿಮೆಯಾಯಿತು ಎಂದುಕೊಳ್ಳುತ್ತಾರೆ. ಅದೇ ರೀತಿ ದಲಿತ ಯುವಕನೊಬ್ಬ ಜೀನ್ಸ್ ಧರಿಸಿದರೆ, ಇತರ ಯುವಕರು ಜೀನ್ಸ್ ಕೊಳ್ಳುವ ಒತ್ತಡದಲ್ಲಿ ಬೀಳುತ್ತಾರೆ.**

ಸಮಾಜದಲ್ಲಿ ಬದಲಾವಣೆಯನ್ನು ಪ್ರೇರೇಪಿಸಬಲ್ಲ ಅನೇಕ ವಿಧಾನಗಳಿವೆ. ನಾವು ಸಾಮಾನ್ಯವಾಗಿ ಶಿಕ್ಷಣದ ಮಹತ್ವವನ್ನು ಬಲ್ಲೆವು. ಉದ್ಯಮಶೀಲತೆ, ಸರ್ಕಾರದ ನೀತಿಗಳು, ಮಾರುಕಟ್ಟೆ ಮುಂತಾದವು ಬದಲಾವಣೆಯ ಮುಖ್ಯ ಚಾಲಕ ಶಕ್ತಿಗಳು.

ಆದರೆ ಬದಲಾವಣೆಯನ್ನು ಪ್ರಚೋದಿಸುವಲ್ಲಿ ಜೀವನ ಶೈಲಿಯ ಪಾತ್ರವನ್ನು ನಾವು ಇನ್ನೂ ಚರ್ಚಿಸಬೇಕಾಗಿದೆ ಮತ್ತು ಒಂದು ಸಿದ್ಧಾಂತವಾಗಿ ಅದನ್ನು ವಿಷದ ಪಡಿಸಬೇಕಾಗಿದೆ.

ಪೂರ್ವ ಉತ್ತರ ಪ್ರದೇಶದ ಈ ಟಿ.ವಿ. ಸೆಟ್ ಬಗ್ಗೆ ಕೇಳಿದ ಮೇಲೆ ನಾನು ಭೇಟಿ ಮಾಡಿದ ಹಳ್ಳಿಗಳಲ್ಲಿ ಟಿ.ವಿ ಸುತ್ತ ಪ್ರಶ್ನೆಗಳನ್ನು ಕೇಳುತ್ತೇನೆ.

ಪೂರ್ವ ಉತ್ತರ ಪ್ರದೇಶದ ಒಂದು ಹಳ್ಳಿಯ ಕಥೆಯನ್ನು ಕೇಳಿ. 2010ರಲ್ಲಿ ಆ ಹಳ್ಳಿಯಲ್ಲಿ ಯಾವೊಂದು ಮನೆಯಲ್ಲಿಯೂ ಟಿ.ವಿ. ಇರಲಿಲ್ಲ. ಜನವರಿ 2011ರಲ್ಲಿ ಒಬ್ಬರು ಟಿ.ವಿ. ಕೊಂಡುಕೊಂಡರು. ಕೆಲವು ತಿಂಗಳುಗಳಲ್ಲಿಯೆ ಹತ್ತು ಮನೆಗಳು ತಮ್ಮ ಚಾವಣಿ ಮೇಲೆ ಆ್ಯಂಟನಾ ಹಾಕಿ ಟಿ.ವಿ.ಕಾರ್ಯಕ್ರಮಗಳನ್ನು ನೋಡಿ ಖುಷಿ ಪಡಲು ಪ್ರಾರಂಭಿಸಿದರು.

ಜೀವನ ಶೈಲಿ ಬದಲಾವಣೆಯ ದೊಡ್ಡ ಪ್ರಚೋದಕನಾಗಿ ಕೆಲಸ ಮಾಡುವುದು ಹೀಗೆ? ಹಳ್ಳಿಗನೊಬ್ಬ ಟಿ.ವಿ. ಕೊಂಡರೆ ಉಳಿದ ಹಳ್ಳಿಗರು ಅದೇಕೊ ಭಯಬೀತರಾಗುತ್ತಾರೆ. ಹಳ್ಳಿಯಲ್ಲಿ ತಮ್ಮ ಅಂತಸ್ತು ಕಡಿಮೆಯಾಯಿತು ಎಂದುಕೊಳ್ಳುತ್ತಾರೆ. ಅದೇ ರೀತಿ ದಲಿತ ಯುವಕನೊಬ್ಬ ಜೀನ್ಸ್ ಧರಿಸಿದರೆ, ಇತರ ಯುವಕರು ಜೀನ್ಸ್ ಕೊಳ್ಳುವ ಒತ್ತಡದಲ್ಲಿ ಬೀಳುತ್ತಾರೆ.

ಉತ್ತರ ಪ್ರದೇಶದ ಗ್ರಾಮೀಣ ಭಾಗ ನಾನು ಕಂಡಂತೆ ತೀವ್ರ ಸ್ಪರ್ಧೆಯಲ್ಲಿದೆ. ಇಟ್ಟಿಗೆ ಮನೆಗಳನ್ನು ಕಟ್ಟಲು ಸ್ಪರ್ದೆ ನಡೆಯುತ್ತಿದೆ. ಅದು ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ನಮಗಾಗಲೆ ಅರಿವಾಗಿದೆ. ಒಂದು ಕುಟುಂಬ ತಮ್ಮ ಮಣ್ಣಿನ ಅಥವಾ ಹುಲ್ಲಿನ ಮನೆಯನ್ನು ಹೊಡೆದು ಇಟ್ಟಿಗೆ ಮನೆ ಕಟ್ಟಿದರೆ, ಉಳಿದೆಲ್ಲರ ಮೇಲೂ ಅತೀವ ಒತ್ತಡ ಬೀಳುತ್ತದೆ.

ಸಮಾಜದಲ್ಲಿ ಅಂತಸ್ತನ್ನು ಕೊಂಡುಕೊಳ್ಳುವುದಕ್ಕೆ ತೊಡಗಿಸಿಕೊಂಡಿರುವ ಗ್ರಾಮೀಣ ದಲಿತರು ತಮ್ಮ ಮಕ್ಕಳ ಮದುವೆಗೆ ಅನೇಕ ಕಾರುಗಳನ್ನು ಬಾಡಿಗೆಗೆ ಪಡೆಯುತ್ತಾರೆ. ಕೇವಲ ಒಂದು ಪೀಳಿಗೆಯ ಹಿಂದೆ ಹೆಚ್ಚು ದಲಿತ ವರರು ತಮ್ಮ ಮದುವೆಯ ಸಂದರ್ಭದಲ್ಲಿ ಸೈಕಲ್ ರಿಕ್ಷಾದಲ್ಲಿ ಅಥವಾ ಎತ್ತಿನ ಗಾಡಿಯಲ್ಲಿ ಬರುತ್ತಿದ್ದರು.

ಹಿಂದೆ ನಾನು ಹೇಳಿದ ರಾಜಸ್ತಾನದ ಹಳ್ಳಿಯ ನಿಜವಾಗಿಯೂ ಬಡತನದ ರೇಖೆಯ ಕೆಳಗಿರುವ ಕುಟುಂಬವೊಂದು ತಮ್ಮ ಒಬ್ಬನೆ ಮಗನ ಮದುವೆಗೆ ಮೂರು ಕಾರುಗಳನ್ನು ಬಾಡಿಗೆಗೆ ಪಡೆದಿತ್ತು. 'ಅವನ ತಂದೆ ಮತ್ತು ವರ ಕಾಮನ್‌ವೆಲ್ತ್ ಕ್ರೀಡೆಗಾಗಿ ದೆಹಲಿಯಲ್ಲಿ ಮೂರು ತಿಂಗಳ ಕಾಲ ಕೆಲಸ ಮಾಡಿದ್ದರು', ಎಂದು ಅವರು ಮೂರು ಕಾರುಗಳನ್ನು ಹೇಗೆ ಬಾಡಿಗೆಗೆ ಪಡೆದರು ಎಂದು ನಾನು ಕೇಳಿದಾಗ ಹಳ್ಳಿಗನೊಬ್ಬ ಹೇಳಿದ. ಒಂದು ತುಂಡು ಜಮೀನಿರುವ ದಲಿತ ಹಿರಿಯನೊಬ್ಬ , 'ಬರುವ ವರ್ಷ ನನ್ನ ಮಗನ ಮದುವೆಗೆ ನಾನು ಐದು ಕಾರುಗಳನ್ನು ಬಾಡಿಗೆಗೆ ತರುತ್ತೇನೆ,' ಎನ್ನುತ್ತಾನೆ. ನಿನಗೆಲ್ಲಿಂದ ಹಣ ಬರುತ್ತದೆಂದು ಕೇಳಿದಾಗ 'ನಾನು ಜೈಪುರಕ್ಕೆ ಹೋಗಿ ಕಟ್ಟಡ ನಿರ್ಮಾಣದಲ್ಲಿ ಕೆಲಸ ಮಾಡುತ್ತೇನೆ,' ಎನ್ನುತ್ತಾನೆ.

ಆದರೆ ಇದು ಹೇಗೆ ನಡೆಯುತ್ತದೆ? ಎಲ್ಲಿಂದ ಹಣ ಬರುತ್ತದೆ? ಕೇಂದ್ರ ಸರ್ಕಾರದ ಇಂದಿರಾ ಆವಾಸ್ ಯೋಜನೆ ಒಂದೇ ಇದರ ಹಿಂದಿನ ಗುಟ್ಟೆ?

ನನ್ನ ಮಗಳು ಖುಷಿ ಪ್ರಸಾದ್ ತನ್ನ ಸಹಪಾಠಿಯ ಮನೆಗೆ ಅವಳ ಹುಟ್ಟುಹಬ್ಬಕ್ಕೆ ಭೇಟಿ ನೀಡಿದ ದಿನದಿಂದ ಮತ್ತೆ ಮತ್ತೆ ನನ್ನನ್ನು ಇದೇ ಪ್ರಶ್ನೆ ಕೇಳುತ್ತಿದ್ದಾಳೆ. ಅವಳ ಪ್ರಶ್ನೆ 'ನಾನು ಒಂದು ಪ್ಲಾಟ್ ಸ್ಕ್ರೀನ್ ಟಿ.ವಿ. ಸೆಟ್ ಕೊಳ್ಳುವುದು ಯಾವಾಗ? 'ನಾನು ಯಾವಾಗ ಕಿಟಕಿ ಎ.ಸಿ. ಸೆಟ್‌ನ ತೆಗೆದು ಅಲ್ಲಿ ಸ್ಪ್ಲಿಟ್ ಎ.ಸಿ. ಸೆಟ್ ಹಾಕುತ್ತೇನೆ?' ಅವಳು ಮುಂದುವರೆಸುತ್ತಾಳೆ. ನಮ್ಮಲ್ಲಿ ಫ್ಲಾಟ್ ಟಿ.ವಿ. ಸೆಟ್ಟಾಗಲಿ; ಅಥವಾ ಸ್ಪ್ಲಿಟ್ ಎ.ಸಿ. ಆಗಲಿ ಇಲ್ಲದಿರುವುದರಿಂದ ಅವಳಿಗೆ ತಾನು ಹಿಂದೆ ಬಿದ್ದಿರುವುದಾಗಿ ಭಾಸವಾಗುತ್ತದೆ. ನಾನು ಈ ಎರಡು ಯಂತ್ರಗಳನ್ನು ಕೊಳ್ಳಬೇಕೆಂಬ ಒತ್ತಡದಲ್ಲಿ ಬಿದ್ದಿದ್ದೇನೆ. \ಆ ಕಾರಣದಿಂದ ನಾನು ಇನ್ನೂ ಕೆಲವು ಪಿ.ಹೆಚ್.ಡಿ ಪ್ರಬಂಧಗಳನ್ನು ಸಂಪಾದನೆ ಮಾಡಬೇಕಾಗುತ್ತದೆ. ಅಥವಾ ಇನ್ನೂ ಕೆಲವು ಲೇಖನಗಳನ್ನು ಬರೆಯಬೇಕಾಗುತ್ತದೆ.

ಗ್ರಾಮೀಣ ಪ್ರದೇಶದ ಕುಟುಂಬಗಳು ಮಣ್ಣಿನ ಮನೆಗಳನ್ನು ತೊರೆದು ಇಟ್ಟಿಗೆ ಮನೆಗಳನ್ನು ಕಟ್ಟುವ ಒತ್ತಡದಲ್ಲಿದ್ದಾರೆ. ಇದಕ್ಕೆ ಉತ್ತರ ಬೇರೆಲ್ಲೋ ಇದೆ ಒಂದೊ ಪಟ್ಟಣಕ್ಕೆ ಹೋಗಿ, ಅಥವಾ ನೀವಿರುವ ಸ್ಥಳದಲ್ಲಿಯೆ ತರಕಾರಿ ಮಾರುವರಾಗಿ.

ಆರ್ಥಿಕವಾಗಿ ಉತ್ತಮ ಮಟ್ಟದಲ್ಲಿರುವ ಕುಟುಂಬಗಳ ಜೀವನ ಶೈಲಿಯ ಬದಲಾವಣೆ ಬಡವರು ಸಹ ಅಂತಹ ಬದಲಾವಣೆಗಳನ್ನು ಅಳವಡಿಸಿಕೊಳ್ಳುವಂತೆ ಮಾಡುತ್ತಿದೆ. ಬಹಳ ದು:ಸ್ಥಿತಿಯಲ್ಲಿರುವ ಕುಟುಂಬಗಳು ರೈತಾಪಿ ಕೆಲಸಗಳನ್ನು ತೊರೆದು ನಗರಗಳಿಗೆ ಓಡುತ್ತಾರೆ ಅಥವಾ ಸಣ್ಣ ಪಟ್ಟಣಗಳಲ್ಲಿಯೆ ಸ್ಥಳೀಯವಾಗಿ ಇನ್ನೂ ಸ್ವಲ್ಪ ಹಣ ಸಂಪಾದಿಸುತ್ತಾರೆ. ಹೀಗೆ ಜೀವನ ಶೈಲಿ ಬದಲಾವಣೆಗಳು ದಲಿತರನ್ನು ಜಾತಿ ಆಧಾರಿತ ಕಸುಬುಗಳಿಂದ ಹೊರದೂಡುತ್ತಿವೆ. ಇಂತಹ ಪ್ರಚೋದನೆಯ ಹೊಸ ಜೀವನ ಶೈಲಿ ಜಾತಿ ಪದ್ದತಿಯಿಂದ ಸಹ ಬಿಡುಗಡೆಗೊಳಿಸುತ್ತದೆ.

ಈ ಬದಲಾವಣಾ ಪ್ರಚೋದಕಕ್ಕೆ ಹೆಚ್ಚು ಗಮನ ನೀಡುವುದು ಅವಶ್ಯಕ. ನಿಜವಾಗಿ ಹೇಳಬೇಕಾದರೆ ಈ ಹೊಸ ಬದಲಾವಣಾ ಪ್ರಚೋದನೆಯನ್ನು ಒಂದು ಸೈದ್ಧಾಂತಿಕ ನೆಲೆಯಲ್ಲಿ ನಿಲ್ಲಿಸಬೇಕಾದ ಅವಶ್ಯಕತೆ ಇದೆ.

ವಿದ್ವತ್ತಿನ ಸಂಕೇತ

ಆ ಊರಿನ ಒಬ್ಬ ಅನಕ್ಷರಸ್ಥ ವ್ಯಕ್ತಿಯೊಬ್ಬನಿಗೆ ಒಮ್ಮೆ ಸರ್ಕಾರದಿಂದ ಪತ್ರವೊಂದು ಬಂದಿತ್ತು. ಆತನಿಗೆ ಓದು ಬರಹ ಗೊತ್ತಿಲ್ಲದಿದ್ದುದರಿಂದ ಆ ಊರಿನ ವಿದ್ವಾಂಸನಾದ ಮುಲ್ಲಾ ನಸ್ರುದ್ದೀನನ ಬಳಿ ಆತ ಬಂದು ಆ ಪತ್ರವನ್ನು ಓದಿ ಹೇಳುವಂತೆ ಕೇಳಿಕೊಂಡ.

ಆ ಪತ್ರವನ್ನು ತೆಗೆದುಕೊಂಡು ನೋಡಿದ ಮುಲ್ಲಾನಿಗೆ ಆ ಪತ್ರದ ಭಾಷೆ ತಿಳಿದಿರಲಿಲ್ಲ. ಅದನ್ನು ಹಿಂದೆ ಮುಂದೆ ತಿರುಗಿಸಿನೋಡಿ, 'ಕ್ಷಮಿಸು, ನನಗೆ ಈ ಪತ್ರವನ್ನು ಓದಲು ಬರುವುದಿಲ್ಲ' ಎಂದು ಹೇಳಿದ.

ಆ ಪತ್ರದಲ್ಲಿ ಏನೋ ಮಹತ್ತರವಾದದ್ದಿರಬಹುದೆಂದು ಕುತೂಹಲದಿಂದ ಬಂದಿದ್ದ ಆ ವ್ಯಕ್ತಿಗೆ ನಿರಾಸೆಯಾಯಿತು ಜೊತೆಗೆ ಸಿಟ್ಟೂ ಸಹ ಬಂದಿತು. 'ನೀನೆಂಥಾ ವಿದ್ವಾಂಸ! ನಾಚಿಕೆಯಾಗಬೇಕು ನಿನಗೆ ವಿದ್ವತ್ತಿನ ಸಂಕೇತವಾದ ಆ ರುಮಾಲು ಧರಿಸಿರಲು' ಎಂದ.

ಆ ಮಾತನ್ನು ಕೇಳಿಸಿಕೊಂಡ ನಸ್ರುದ್ದೀನ್ ತನ್ನ ತಲೆಯ ಮೇಲಿದ್ದ ರುಮಾಲನ್ನು ತೆಗೆದು ಆ ವ್ಯಕ್ತಿಯ ತಲೆಯ ಮೇಲಿರಿಸಿ, 'ತಗೋ, ಈ ರುಮಾಲು ನಿನಗೆ ಜ್ಞಾನವನ್ನು ಕೊಡುತ್ತದೆ ಎನ್ನುವುದಾದರೆ ನೀನೇ ಆ ಪತ್ರವನ್ನು ಓದಿಕೋ' ಎಂದ.



ಡಾ. ಜೆ. ಬಾಲಕೃಷ್ಣ

ಕಟ್ಟಿದ ಕಲ್ಲು, ಬಿಚ್ಚಿದ ನಾಯಿ

ಮುಲ್ಲಾ ನಸ್ರುದ್ದೀನ್ ಯಾವುದೋ ಕೆಲಸದ ನಿಮಿತ್ತ ಪರ ಊರಿಗೆ ಹೋಗಬೇಕಾಯಿತು. ಆತ ಆ ಊರು ತಲುಪುವಷ್ಟರಲ್ಲಿ ಕತ್ತಲಾಗಿತ್ತು ಹಾಗೂ ಹಿಮಭರಿತ ವಿಪರೀತ ಚಳಿಯಿತ್ತು. ಆತ ಛತ್ರವೊಂದನ್ನು ಅರಸುತ್ತಿರುವಾಗ ಯಾವುದೋ ನಾಯಿ ಮುಲ್ಲಾನನ್ನು ಕಂಡು ಬೊಗಳ ತೊಡಗಿತು. ಆತ ಅದನ್ನು ಉದಾಸೀನ ಮಾಡಿ ಮುಂದೆ ಹೊರಟಂತೆ ಅದು ಬೊಗಳುತ್ತಾ ಆತನನ್ನು ಹಿಂಬಾಲಿಸುತ್ತಾ ಬಂದಿತು. 'ಈ ನಾಯಿ ನನ್ನನ್ನು ಬಿಡುವುದಿಲ್ಲ' ಎಂದುಕೊಂಡು ಅದನ್ನು ಓಡಿಸಲು ಮುಲ್ಲಾ ಕೆಳಗೆ ಬಿದ್ದಿದ್ದ ಕಲ್ಲೊಂದನ್ನು ಎತ್ತಿಕೊಳ್ಳಲು ಹೋದ. ಆದರೆ ಆ ಕಲ್ಲು ಥಂಡಿಯ ಹಿಮದಿಂದಾಗಿ ಮಣ್ಣಿನಲ್ಲಿ ಹೂತುಹೋಗಿ ಕೀಳಲು ಬರುತ್ತಿರಲಿಲ್ಲ. 'ಎಂಥಾ ವಿಚಿತ್ರ ಊರಿದು! ಕಲ್ಲುಗಳನ್ನು ಕಟ್ಟಿಹಾಕಿರುತ್ತಾರೆ, ನಾಯಿಗಳನ್ನು ಬಿಚ್ಚಿ ರಸ್ತೆಗೆ ಬಿಟ್ಟಿರುತ್ತಾರೆ!' ಎಂದು ಗೊಣಗಿದ.

ದೇವರ ಗುಲಾಮ

ಮುಲ್ಲಾ ನಸ್ರುದ್ದೀನ್ ದೇವರು ಧರ್ಮದ ಬಗ್ಗೆ ಜನರಿಗೆ ಪ್ರವಚನ ನೀಡುತ್ತ ಸಿಗುವ ಅಲ್ಪಸ್ವಲ್ಪ ಹಣದಿಂದ ಜೀವನ ಸಾಗಿಸುತ್ತಿದ್ದ. ಅವನು ಸಂಪಾದಿಸುತ್ತಿದ್ದುದು ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಆದರೂ ತನ್ನ ಕೆಲಸದಲ್ಲಿ ಮಗ್ನನಾಗಿ ಕಷ್ಟಪಟ್ಟು ಜೀವನ ಸಾಗಿಸುತ್ತಿದ್ದ. ಒಂದು ದಿನ ಹೋಟೆಲೊಂದರಲ್ಲಿ ಅತಿ ಕಡಿಮೆ ಬೆಲೆಯ ರೊಟ್ಟಿ ಹಾಗೂ ಬೇಳೆ ಸಾರು ತಿನ್ನುತ್ತ ಹೋಟೆಲಿಗೆ ಬಂದು ಹೋಗುವ ಇತರರನ್ನು ಗಮನಿಸುತ್ತಿದ್ದ. ಆತ ನೋಡುತ್ತಿದ್ದಂತೆ ವೆಲ್ವೆಟ್ ರುಮಾಲು, ಬೆಳ್ಳಿಯ ಜರಿಯ ರೇಷ್ಮೆ ವಸ್ತ್ರ ಧರಿಸಿದ್ದ ವ್ಯಕ್ತಿಯೊಬ್ಬ ಹೋಟೆಲಿಗೆ ಪ್ರವೇಶಿಸಿ ಅತಿ ಹೆಚ್ಚು ಬೆಲೆಯ ಅತ್ಯುತ್ತಮ ಆಹಾರವನ್ನು ತರಿಸಿಕೊಂಡು ತಿನ್ನತೊಡಗಿದ. ಆತನನ್ನು ಕಂಡು ನಸ್ರುದ್ದೀನ್ ಹೋಟೆಲಿನ ಮಾಲೀಕನನ್ನು ಕರೆದು ಆ ವ್ಯಕ್ತಿ ಯಾರೆಂದು ಕೇಳಿದ. 'ಹೋ, ಆ ವ್ಯಕ್ತಿಯೇ? ಆತ ಘೆಮಿ ಪಾಶಾನ ಗುಲಾಮ' ಎಂದ ಹೋಟೆಲಿನ ಮಾಲೀಕ.

ನಿಟ್ಟುಸಿರು ಬಿಟ್ಟ ನಸ್ರುದ್ದೀನ್ ಆಕಾಶದೆಡೆಗೆ ನೋಡುತ್ತಾ,'ಹೋ ದೇವರೇ! ಅಲ್ಲಿ ನೋಡು ಘೆಮಿ ಪಾಶಾನ ಗುಲಾಮ ಹೇಗಿದ್ದಾನೆ. ಇಲ್ಲಿ ನೋಡು ನಾನು ನಿನ್ನ ಗುಲಾಮ ಹೇಗಿದ್ದೇನೆ! ಇದು ನ್ಯಾಯವೇ?' ಎಂದು ಕೇಳಿದ.



ವ್ಯಾಪಾರ

ಒಂದು ದಿನ ಮುಲ್ಲಾ ನಸ್ರುದ್ದೀನ್ ಹೊಸ ಬಟ್ಟೆ ಕೊಳ್ಳೋಣವೆಂದು ಮಾರುಕಟ್ಟೆಯಲ್ಲಿನ ಅಂಗಡಿಯೊಂದಕ್ಕೆ ಹೋದ. ಅಲ್ಲಿ ಒಂದು ಜೊತೆ ಪೈಜಾಮ ತೊಟ್ಟು ನೋಡಿದ. ಅದು ಆತನಿಗೆ ಇಷ್ಟವಾಗಲಿಲ್ಲ. ಅದನ್ನು ಅಂಗಡಿಯಾತನಿಗೆ ಹಿಂದಿರುಗಿಸಿದ. ಅದೇ ಬೆಲೆಯ ಮತ್ತೊಂದು ಶೇರ್‌ವಾನಿ ಧರಿಸಿ ನೋಡಿದ. ಚೆನ್ನಾಗಿದೆ ಎನ್ನಿಸಿತು. ಇದೇ ಇರಲಿ ಎಂದು ಅಂಗಡಿಯಾತನಿಗೆ ಹೇಳಿ ಹೊರನಡೆದು ಮನೆಗೆ ಹೋಗಲು ತನ್ನ ಕತ್ತೆಯನ್ನೇರಿದ.

ಅಂಗಡಿಯ ಮಾಲೀಕ ನಸ್ರುದ್ದೀನ್‌ನ ಹಿಂದೆಯೇ ಓಡಿ ಬಂದು ಅತನನ್ನು ನಿಲ್ಲಿಸಿ, 'ನೀವು ಶೇರ್‌ವಾನಿಯ ಹಣವನ್ನೇ ಕೊಡಲಿಲ್ಲ' ಎಂದ.

'ಆದರೆ ಅದರ ಬದಲಿಗೆ ಅದೇ ಬೆಲೆಯ ಪೈಜಾಮ ಕೊಟ್ಟಿದ್ದೇನಲ್ಲ' ಎಂದ ನಸ್ರುದ್ದೀನ್.

'ಹೌದು, ಆದರೆ ನೀವು ಅದರ ಹಣವನ್ನೂ ಕೊಟ್ಟಿಲ್ಲ' ಎಂದ ಅಂಗಡಿಯ ಮಾಲೀಕ.

'ಅದಕ್ಕೆ ಹಣ ಏಕೆ ಕೊಡಲಿ? ಅದನ್ನು ನಾನು ಕೊಳ್ಳಲೇ ಇಲ್ಲವಲ್ಲ. ಕೊಳ್ಳದ ವಸ್ತುವಿಗೆ ಹಣ ಕೊಡಲು ನಾನೇನು ದಡ್ಡನೆ?' ಎಂದ ನಸ್ರುದ್ದೀನ್.

ಭೂಮಿಯ ಮಧ್ಯಬಿಂದು

ಮುಲ್ಲಾ ನಸ್ರುದ್ದೀನ್ ಎಂಥ ಪ್ರಶ್ನೆಗೂ ಉತ್ತರ ಕೊಡುತ್ತಾನೆ. ಅವನಿಗೆ ಉತ್ತರ ಕೊಡಲಿಕ್ಕಾಗದ ಕಷ್ಟಕರ ಪ್ರಶ್ನೆ ಕೇಳಿ ಅವನನ್ನು ಬೇಸ್ತು ಬೀಳಿಸಬೇಕೆಂದು ಒಂದು ದಿನ ಒಬ್ಬಾತ ಆತನ ಬಳಿಗೆ ಬಂದು, 'ನಮ್ಮ ಭೂಮಿಯ ಮಧ್ಯಬಿಂದು ಎಲ್ಲಿದೆ ಹೇಳಬಲ್ಲೆಯಾ?' ಎಂದು ಕೇಳಿದ.

ಆ ಪ್ರಶ್ನೆ ಕೇಳಿದಾತನ ಬಗ್ಗೆ ತಿಳಿದಿದ್ದ ನಸ್ರುದ್ದೀನ್ ಅವನಿಗೆ ತಕ್ಕ ಉತ್ತರವೇ ಕೊಡಬೇಕೆಂದು ಆಲೋಚಿಸಿ, 'ಭೂಮಿಯ ಮಧ್ಯಬಿಂದು ನನ್ನ ಕತ್ತೆಯ ಹಿಂಗಾಲಿನ ಗೊರಸಿನ ನಡುವೆ ಇದೆ' ಎಂದ.

'ಇರಬಹುದು. ಆದರೆ ಆ ಬಿಂದು ಅಲ್ಲಿಯೇ ಇದೆ ಎನ್ನಲು ಪುರಾವೆ ಏನಿದೆ?' ಎಂದ ಪ್ರಶ್ನೆ ಕೇಳಿದಾತ.

'ನನಗೆ ಸರಿಯಾಗಿ ತಿಳಿದಿದೆ, ಅದು ಅಲ್ಲಿಯೇ ಇದೆ ಎಂದು. ನಿನಗೆ ನನ್ನ ಮಾತಿನ ಬಗ್ಗೆ ಸಂಶಯವಿದ್ದರೆ ನೀನೇ ಪರೀಕ್ಷಿಸು. ನನ್ನ ಕತ್ತೆ ಅಲ್ಲಿಯೇ ನಿಂತಿದೆ ನೋಡು' ಎಂದ ನಸ್ರುದ್ದೀನ್.

ಕಳ್ಳನದೇನೂ ತಪ್ಪಿಲ್ಲವೆ?

ಒಂದು ದಿನ ಮುಲ್ಲಾ ನಸ್ರುದ್ದೀನ್ ಮತ್ತು ಆತನ ಪತ್ನಿ ಪಕ್ಕದ ಊರಿಗೆ ಹೋಗಿದ್ದವರು ತಮ್ಮ ಮನೆಗೆ ಹಿಂದಿರುಗಿದಾಗ ತಮ್ಮ ಮನೆಯಲ್ಲಿ ಕಳ್ಳತನವಾಗಿದ್ದದ್ದು ಕಂಡು ಗಾಬರಿಯಾದರು. ಮನೆಯಲ್ಲಿದ್ದುದನ್ನೆಲ್ಲವನ್ನೂ ಕೊಂಡೊಯ್ಯಲಾಗಿತ್ತು. ಆತನ ಪತ್ನಿ ಸಿಟ್ಟಿನಿಂದ, 'ಎಲ್ಲಾ ನಿನ್ನದೇ ತಪ್ಪು, ಮನೆಗೆ ಸರಿಯಾಗಿ ಬೀಗ ಹಾಕಿದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲ' ಎಂದು ಮುಲ್ಲಾನನ್ನು ನಿಂದಿಸಿದಳು. ಅಷ್ಟೊತ್ತಿಗಾಗಲೇ ನೆರೆಹೊರೆಯವರು ಮನೆಯ ಬಳಿ ಸೇರಿದ್ದರು. ಅವರಲ್ಲೊಬ್ಬಾತ, 'ಬಹುಶಃ ನೀನು ಕಿಟಕಿಗಳನ್ನು ಸರಿಯಾಗಿ ಬಂದೋಬಸ್ತ್ ಮಾಡಿರಲಿಲ್ಲವೆನ್ನಿಸುತ್ತದೆ' ಎಂದ. ಮತ್ತೊಬ್ಬಾತ, 'ನಿನ್ನ ಮನೆಯ ಬಾಗಿಲನ್ನು ನೀನು ಗಟ್ಟಿಮುಟ್ಟಾಗಿ ಮಾಡಿಸಿರಲಿಲ್ಲವೇನೋ' ಎಂದ.

ಎಲ್ಲರ ಮಾತನ್ನೂ ಕೇಳಿಸಿಕೊಂಡ ನಸ್ರುದ್ದೀನ್, 'ಇದೇನಿದು? ನನ್ನ ಮನೆಯ ಕಳ್ಳತನಕ್ಕೆ ಎಲ್ಲರೂ ನನ್ನದೇ ತಪ್ಪು ಎನ್ನುತ್ತಿದ್ದೀರಾ? ಹಾಗಾದರೆ ಈ ಕಳ್ಳತನ ಮಾಡಿದ ಕಳ್ಳನದೇನೂ ತಪ್ಪಿಲ್ಲವೆ?'

ಕದಿಯಲಿ ಬಿಡು

ಮುಲ್ಲಾ ನಸ್ರುದ್ದೀನ್ ಅತ್ಯಂತ ಬಡತನದಲ್ಲಿದ್ದು ಆತನ ಬದುಕೇ ದುಸ್ತರವಾಗಿತ್ತು. ಒಂದು ದಿನ ರಾತ್ರಿ ಆತನ ಪತ್ನಿ ನಿದ್ರೆಯಲ್ಲಿದ್ದ ಮುಲ್ಲಾನನ್ನು ಎಬ್ಬಿಸಿ, 'ಅಡುಗೆ ಮನೆಯಲ್ಲಿ ಯಾರೋ ಕಳ್ಳ ಬಂದಂತಿದೆ' ಎಂದು ಪಿಸುಗುಟ್ಟಿದಳು.

'ಶ್... ಶಬ್ದಮಾಡಬೇಡ ದಡ್ಡಿ! ಕಳ್ಳ ಬರಲಿಬಿಡು. ಬಹುಶಃ ಅವನಿಗೇನಾದರೂ ಸಿಗಬಹುದು. ಆಗ ಅವನನ್ನು ಹಿಡಿದು ಅದನ್ನು ಕಿತ್ತುಕೊಳ್ಳೋಣ!' ಎಂದ ಮುಲ್ಲಾ ನಸ್ರುದ್ದೀನ್.

■

ಕರ್ನಾಟಕ ನಾಗರಿಕರ ಸೇವೆಯಲ್ಲಿ ‘ಸಕಾಲ’

ಸಕಾಲ

ಕರ್ನಾಟಕ ನಾಗರಿಕರ ಸೇವಾ ಖಾತರಿ ಕಾಯ್ದೆ–2011
2ನೇ ಏಪ್ರಿಲ್ 2012ರಿಂದ ರಾಜ್ಯಾದ್ಯಂತ ಜಾರಿ



‘ಸಕಾಲ’ದಿಂದಾಗಿ ನಿಗದಿತ ಸಮಯಕ್ಕಿಂತ ಮೊದಲೇ ನನಗೆ ವಯೋ ಪ್ರಮಾಣ ಪತ್ರ ಸಿಕ್ಕಿತು. ಸರ್ಕಾರಿ ಕಚೇರಿಗೆ ಹಲವಾರು ಬಾರಿ ಅಲೆಯುವುದು ತಪ್ಪಿತು.



151

ನಾಗರಿಕ ಸೇವೆಗಳು

(ಜನನ/ಮರಣ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ವಯೋ ಪ್ರಮಾಣ ಪತ್ರ, ತೆರಿಗೆ ತೀರುವಳಿ ಪ್ರಮಾಣ ಪತ್ರ, ಹಿರಿಯ ನಾಗರಿಕರಿಗೆ ಗುರುತಿನ ಪತ್ರಗಳು, ಗೃಹ ನಕ್ಷೆ ಮಂಜೂರಾತಿ, ಎಫ್‌ಐಆರ್, ಬಸ್ ಪಾಸ್, ವಾಹನ ಪರವಾನಗಿ...)

11

ಸರ್ಕಾರಿ ಇಲಾಖೆಗಳು

ಸ್ಥಳೀಯ ಪ್ರಾಧಿಕಾರ, ಸಾರಿಗೆ ಇಲಾಖೆ, ಕಂದಾಯ ಇಲಾಖೆ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಒಳಾಡಳಿತ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಹಣಕಾಸು ಇಲಾಖೆ

1

ವಾಗ್ದಾನ

ಸಮಯಬದ್ಧ ಸೇವೆ

ಲಕ್ಷಾಂತರ ಸೇವೆ ಅರ್ಜಿಗಳು ಸಮಯಬದ್ಧವಾಗಿ ವಿಲೇವಾರಿಯಾಗಿವೆ

ನಿಮ್ಮ ಅರ್ಜಿಗೆ ಸ್ವೀಕೃತಿ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳಿ

ಪ್ರತಿ ಸೇವೆಗೆ ಪ್ರತಿ ದಿನದ ವಿಳಂಬಕ್ಕೆ ರೂ.20/–ರಂತೆ ಗರಿಷ್ಠ ರೂ.500/–ರವರೆಗೆ ನೌಕರರ ವೇತನದಿಂದ ನಾಗರಿಕರಿಗೆ ಪರಿಹಾರ ಧನ

ಮಾಹಿತಿ / ದೂರುಗಳಿಗಾಗಿ ಸಂಪರ್ಕಿಸಿ
080 - 4455 4455
Website : www.sakala.kar.nic.in
e-mail: sakala@kar.nic.in

ಇಂದು... ನಾಳೆ... ಇನ್ನಿಲ್ಲ – ಹೇಳಿದ ದಿನ ತಪ್ಪೊಲ್ಲ

ಬನ್ನಿ, ನಿಮ್ಮ ಹಕ್ಕು ಚಲಾಯಿಸಿ.

ಆಡಳಿತದಲ್ಲಿ ಹೊಸ ಕ್ರಾಂತಿಯ ಉದಯ

ಕರ್ನಾಟಕ ವಾರ್ತೆ

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab


Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

Students Selection through campus interview

556 STUDENTS PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, May 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)

UPKAR ESTATES
SINCE 1974
The most trusted property developers in Bangalore

A name of repute for over thirty years, Upkar Estates has always been an icon resembling the value of trust, quality and deliverance.

We inspire healthy living through each of our projects, where we ensure meticulous planning and flawless execution along with the personalised guidance and care taken to handle all the documentation procedures and hand them over to you with minimal hassles.

With thousands of happy customers, we have built and maintained relationships and bonds that have lasted for over three decades. Now, we invite you to be a part of this ongoing story of trust and confidence.

APPROVED BMRDA TOWNSHIPS

CREDAI BENGALURU

Our On-going Projects

UPKAR Spring Fields – Hosur Main Road
UPKAR Meadows – Near Electronic City
UPKAR Green Fields – Hosur Main Road
UPKAR Oakland – Hosur Main Road
UPKAR Royal Garden – Affordable villas at Hosur
UPKAR Green Valley – Nelamangala

Upkar Towers, No.28, 9th Cross, Off. R.V.Road, II Block, Jayanagar, Bangalore - 560 011
Tel: 080-40300900, Fax: 080-26572155, E-Mail: info@upkar.co.in www.upkar.co.in
LOANS AVAILABLE FROM LEADING FINANCIAL INSTITUTIONS